ಕನ್ನಡ ಭಾಷಾ ಪಠ್ಯ

# ನಿರ್ವಹಣಾ ಸೌರಭ

ಬಿ.ಬಿ.ಎ.

ಪ್ರಥಮ ಮತ್ತು ದ್ವಿತಿಯ ಸೆಮಿಸ್ಟರ್


ಪ್ರಧಾನ ಸಂಪಾದಕರು

ಡಾ. ಪ್ರಶಾಂತ ಜಿ. ನಾಯಕ

ಸಂಪಾದಕರು

ಡಾ. ಎಸ್. ಎಲ್. ಮಂಜುನಾಥ

ಡಾ. ಶೀಲವಂತ ಸಂಜೀವಕುಮಾರ್

ಭುವನೇಶ್ವರಿ



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

KANNADA BHASHA PATHYA - NIRVAHANA SOURABHA:
A Prescribed Text Book for B.B.A. Degree Course (First and Second Semester);

Chief Editor: Prof. Prashanth G. Nayak (Professor of Kannada & Director, Kannada Bharathi, Kuvempu University, Shankaraghatta, B.R. Project. Shimoga Dist.)
Edited By : Dr. S.L. Manjunath., Dr. Sheelwant Sanjeevkumar, Bhuvaneshwari

Publishd by : Bengaluru City University, BENGALURU

Pp : 000 + ix

© Bengaluru City University,

First print : 2021

ಪ್ರಧಾನ ಸಂಪಾದಕರು
**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ:
**ಡಾ. ಕೆ.ವೈ. ನಾರಾಯಣಸ್ವಾಮಿ**
**ಡಾ. ಎಂ.ಎಸ್. ಆಶಾದೇವಿ**

ಸಂಯೋಜಕರು:
**ಡಾ. ಬೆಳಕೆರೆ ಲಿಂಗರಾಜಯ್ಯ**

ಬೆಲೆ: ರೂ. 00/–

ಪ್ರಕಾಶಕರು:
ಬೆಂಗಳೂರು ನಗರ ವಿಶ್ವವಿದ್ಯಾಲಯ

## ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣೆಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–2021ರ ವರ್ಷವನ್ನು ಕನ್ನಡ ಕಾಯಕವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ

ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನು ತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಪ್ರೊ. ಲಿಂಗರಾಜಗಾಂಧಿ
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

## ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯ ವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಅತ್ಮೀಯರಾದ ಡಾ. ಲಿಂಗರಾಜಯ್ಯ ನವರ ಶ್ರಮವನ್ನು ಸ್ಮರಿಸಲೇ ಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಪ್ರಶಾಂತ ಜಿ. ನಾಯಕ

ಪ್ರಾಧ್ಯಾಪಕರು

## ಬೆಂಗಳೂರು ನಗರ ವಿಶ್ವವಿದ್ಯಾಲಯ
## ಪ್ರಥಮ ಸೆಮಿಸ್ಟರ್ ಬಿ.ಬಿ.ಎ.
# ಕನ್ನಡ ಭಾಷಾ ಪತ್ಯ


**ಘಟಕ I. ನಾಡು ನುಡಿ ಚಿಂತನೆ :**

| | | | |
|---|---|---|---|
| 1.1 | ಕನ್ನಡಾಂಬೆಯ ಹಿರಿಮೆ | – ಬೆನಗಲ್ ರಾಮರಾವ್ | 003 |
| 1.2 | ಎಚ್ಚಮನಾಯಕನ ಸ್ವಾಮಿನಿಷ್ಠೆ | – ಓ.ಎನ್. ಲಿಂಗಣ್ಣಯ್ಯ | 004 |
| 1.3 | ಭಾಷಾ ವೈವಿಧ್ಯವನ್ನೇಕೆ ಕಾಯ್ದುಕೊಳ್ಳಬೇಕು? | – ಡಾ. ಕೆ.ವಿ. ನಾರಾಯಣ | 021 |
| 1.4 | ಭಾಷೆ ಮತ್ತು ಅನುಭವ (ಓದುಪತ್ಯ) | – ಜಿ.ಎಸ್. ಜಯದೇವ | 024 |

**ಘಟಕ II. ಆಧುನಿಕತೆ :**

| | | | |
|---|---|---|---|
| 2.1 | ಹೊಸ ಜನುಮ | – ಉರ್ದು ಮೂಲ: ಖಲೀಲ್ ಮಾಮೂನ್ ಅನುವಾದ: ಮಾಹೆರ್ ಮನ್ಸೂರ್, ಬಿ.ಆರ್.ಲಕ್ಷ್ಮಣರಾವ್ | 033 |
| 2.2 | ಕಲ್ಲಲಾಂಬು | – ಅನು ಬೆಳ್ಳೆ | 036 |
| 2.3 | ಎಲ್ಲದಕ್ಕೂ ಮೂಲದಲ್ಲಿ ತಂತ್ರಜ್ಞಾನವಿದೆ | – ನಾಗರಾಜ ವಸ್ತಾರೆ | 045 |
| 2.4 | ಆಧುನಿಕತೆ : ಮಾತು ಮತ್ತು ತರ್ಕದ ಪಂಜರ (ಓದುಪತ್ಯ) | – ಎಂ. ಆರ್. ದತ್ತಾತ್ರೆ | 059 |

**ಘಟಕ III. ಕುಟುಂಬ :**

| | | | |
|---|---|---|---|
| 3.1 | ಗಂಡ–ಹೆಂಡಿರ ಜಗಳ ಗಂಧ ತೀಡಿದ್ಹಾಂಗ | – ಸೋಮಶೇಖರ ಇಮ್ರಾಪೂರ | 066 |
| 3.2 | ಸಖೀಗೀತ | – ಎಚ್. ನಾಗವೇಣಿ | 070 |
| 3.3 | ಕುಟುಂಬದಲ್ಲಿ ಪಾತ್ರ ನಿರೀಕ್ಷೆ ಮತ್ತು ಕೌಟುಂಬಿಕ ಹಿಂಸೆ | – ಡಾ. ರೇಣುಕಾ ಎಸ್. ಮಂದ್ರೂಪ | 081 |
| 3.4 | ನನ್ನ ತಾಯಿ (ಓದುಪತ್ಯ) | –ಇಂಗ್ಲಿಷ್ ಮೂಲ: ಎಪಿಜೆ ಅಬ್ದುಲ್ ಕಲಾಂ ಅನುವಾದ: ಜಿ.ಕೆ. ಮಧ್ಯಸ್ಥ | 089 |

**ಘಟಕ IV. ಸಂಕೀರ್ಣ / ಸೃಜನ :**

| | | | |
|---|---|---|---|
| 4.1 | ಹೂವಾದ ಹುಡುಗಿ | – ಜನಪದ ಕಥೆ | 096 |
| 4.2 | ಕೆ.ಕೆ. ಹೆಬ್ಬಾರ | – ಎಂ. ಮರಿಶಾಮಾಚಾರ್ | 106 |
| 4.3 | ನೀವು ಬರಹಗಾರರಾಗಬೇಕೇ? | – ವೈ.ಜಿ. ಮುರಳೀಧರ | 115 |
| 4.4 | ಚಟುವಟಿಕೆ | | 124 |

# 1. ನಾಡು ನುಡಿ ಚಿಂತನೆ :


| | | | |
|---|---|---|---|
| 1.1 | ಕನ್ನಡಾಂಬೆಯ ಹಿರಿಮೆ | – ಬೆನಗಲ್ ರಾಮರಾವ್ | 003 |
| 1.2 | ಎಚ್ಚಮನಾಯಕನ ಸ್ವಾಮಿನಿಷ್ಠೆ | – ಓ.ಎನ್. ಲಿಂಗಣ್ಣಯ್ಯ | 004 |
| 1.3 | ಭಾಷಾ ವೈವಿಧ್ಯವನ್ನೇಕೆ ಕಾಯ್ದುಕೊಳ್ಳಬೇಕು? | – ಡಾ. ಕೆ.ವಿ. ನಾರಾಯಣ | 021 |
| 1.4 | ಓದುಪಠ್ಯ: ಭಾಷೆ ಮತ್ತು ಅನುಭವ | – ಜಿ.ಎಸ್. ಜಯದೇವ | 024 |

## ಆಶಯ

**ಶ್ರೀವಿಜಯ : ಕವಿರಾಜಮಾರ್ಗ ಕ್ರಿ.ಶ. ೮೧೪–೮೭೭**

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾ ವಲಯ ವಿಲೀನ ವಿಶದ ವಿಶೇಷಂ

ಅದಱೊಳಗಂ ಕಿಸುವೊಳಲಾ
ವಿದಿತ ಮಹಾಕೊಪಣ ನಗರದಾ ಪುಲಿಗೆಱೆಯಾ
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್

**ಮಹಾಲಿಂಗರಂಗ : ಅನುಭವಾಮೃತ ಸುಮಾರು ಕ್ರಿ. ಶ. ೧೬೭೫**

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು?

## 1.1 ಕನ್ನಡಾಂಬೆಯ ಹಿರಿಮೆ

**– ಬೆನಗಲ್ ರಾಮರಾವ್**

ಕನ್ನಡವನುಳಿದೆನಗೆ । ಅನ್ಯ ಜೀವನವಿಲ್ಲ
ಕನ್ನಡವೆ ಎನ್ನುಸಿರು । ಪೆತ್ತೆನ್ನ ತಾಯಿ
ಕನ್ನಡವೆ ಧನಧಾನ್ಯ । ಕನ್ನಡವೆ ಮನೆಮಾನ್ಯ
ಕನ್ನಡವೆ ಯೆನಗಾಯ್ತು । ಕಣ್ಣು ಕಿವಿ ಬಾಯಿ

ಕನ್ನಡದ ಸವಿಮಾತು । ಮನ್ನಣೆಯ ಪಳಮಾತು
ಕನ್ನಡ ಸರಸ್ವತಿಯು । ನವ ಕಲ್ಪಲತೆಯು
ಕನ್ನಡದ ವರ ಚರಿತೆ । ವಿಮಲ ಗಂಗಾಸರಿತೆ
ಕನ್ನಡದ ಸಿರಿಪೆಂಪು । ಎನಗೆ ನರುಗಂಪು

ಕನ್ನಡದ ಸನ್ಮಾನ । ವೆನಗದುವೆ ವರಮಾನ
ಕನ್ನಡಿಗರ ಸ್ವತಂತ್ರ । ವದೆ ಪರಮಮಂತ್ರ
ಕನ್ನಡದ ಚಿರಕೀರ್ತಿ । ಎನ್ನ ಚಿತ್ತದ ಸ್ಫೂರ್ತಿ
ಕನ್ನಡದ ಒಗ್ಗೂಟ । ವೆನಗದೆ ಕಿರೀಟ

ಕನ್ನಡದ ಹೊಲ ಮಣ್ಣು । ಎನಗೆ ನವನಿಧಿ ಹೊನ್ನು
ಕನ್ನಡದ ತಿಳಿಜಲವು । ಸುಧೆಯ ಪಲ್ವಲವು
ಕನ್ನಡದ ಹೂಗಿಡವು । ಎನ್ನೊಡಲಿಗದೆ ತೊಡವು
ಕನ್ನಡದ ಪಶುಪಕ್ಷಿ । ಚೆಲುವಿಗದೆ ಸಾಕ್ಷಿ

ಕನ್ನಡಿಗರತಿಶಯವು । ಭುವನೇಶ್ವರಿಯ ದಯವು
ಕನ್ನಡಿಗರಿಗೆ ಜಯವು । ಕೃಷ್ಣನಾಶ್ರಯವು
ಕನ್ನಡದ ಜನಕುಲವು । ಎನ್ನ ತೋಳಿಗೆ ಬಲವು
ಕನ್ನಡಾಂಬೆಯ ಮುಕ್ತಿ । ರಾಮನುತೆ – ಶಕ್ತಿ

~ * ~ * ~ * ~

***ಆಕರ : 'ಕನ್ನಡ ಬಾವುಟ', ಸಂ: ಬಿ.ಎಂ.ಶ್ರೀ ಪ್ರ: ಕಸಾಪ ಬೆಂಗಳೂರು***

## 1.2 ಎಚ್ಚಮನಾಯಕನ ಸ್ವಾಮಿನಿಷ್ಠೆ

**– ಓ.ಎನ್. ಲಿಂಗಣ್ಣಯ್ಯ**

'ರಾಜಾ ಪ್ರತ್ಯಕ್ಷ ದೇವತಾ'; ಎಂಬ ಮಾತಿನಂತೆ, ರಾಜನು ಪ್ರಜೆಗಳ ಪಾಲಿಗೆ ದೇವರು. ಭಗವಂತನು ರಾಜನ ರೂಪದಲ್ಲಿ ಲೋಕವನ್ನು ಕಾಪಾಡುತ್ತಾನೆ. ರಾಜನಲ್ಲಿ ಭಕ್ತಿಯಿಂದ ನಡೆದುಕೊಳ್ಳುವುದೇ ಪ್ರಜೆಗಳ ಕರ್ತವ್ಯ, ರಾಜನ ಶ್ರೇಯಸ್ಸಿಗಾಗಿ ಪ್ರತಿಯೊಬ್ಬ ಪ್ರಜೆಯೂ ತನ್ನ ಪ್ರಾಣವನ್ನಾದರೂ ಕೊಡಲು ಸಿದ್ಧನಾಗಿರಬೇಕು, ಇದರಿಂದ ಆ ರಾಜ್ಯದ ಕೀರ್ತಿಯು ಸೂರ್ಯ ಚಂದ್ರರಿರುವ ಪರ್ಯಂತ ನಿಲ್ಲುತ್ತದೆ. ಕನ್ನಡಿಗರ ರಾಜ ಭಕ್ತಿಯು ಅಸಾಧಾರಣವಾದುದು. ಅವರು ತಮ್ಮ ರಾಜ, ರಾಜ್ಯ, ಸಿಂಹಾಸನಗಳಿಗಾಗಿ ಜೀವದ ಹಂಗು ತೊರೆದು ಹೋರಾಡಿರುವ ಸಂದರ್ಭಗಳುಂಟು. ಅಂಥ ದಿಟ್ಟ ಕನ್ನಡಿಗರಲ್ಲಿ ಎಚ್ಚಮನಾಯಕನೂ ಒಬ್ಬನು. ಅವನಿಗಿದ್ದ ರಾಜಭಕ್ತಿಯಿಂದಲೇ ಅವನು ಇಂದಿಗೂ ಕನ್ನಡಿಗರ ಗೌರವಕ್ಕೆ ಪಾತ್ರನಾಗಿದ್ದಾನೆ. ಕರ್ಣಾಟಕದ ಕೀರ್ತಿಲತೆಯಲ್ಲಿ ಅವನ ಹೆಸರು ಒಂದು ಹೂವಾಗಿ ಅರಳಿ ಕಂಗೊಳಿಸುತ್ತಿದೆ.

ವಿಜಯನಗರ ಸಾಮ್ರಾಜ್ಯ ಹಾಳಾಗಿ ಹೋದ ಮೇಲೆ, ಆ ರಾಜ ವಂಶದವರು ಕೆಲವು ಕಾಲ ಪೆನುಗೊಂಡೆಯಲ್ಲಿದ್ದುಕೊಂಡು ರಾಜ್ಯವಾಳುತ್ತಿದ್ದರು. ಅಲ್ಲಿಂದ ಮುಂದೆ ಕೆಲವು ಕಾಲದ ಮೇಲೆ ಚಂದ್ರಗಿರಿಗೆ ಹೋಗಿ ನಿಂತರು. ಈ ಅರಸು ಮನೆತನದವರಲ್ಲಿ ವೆಂಕಟಪತಿರಾಯನೆಂಬುವನೇ ಆಗ ಚಂದ್ರಗಿರಿಯಲ್ಲಿ ರಾಜನಾಗಿದ್ದನು. ಆವನ ಕಾಲದಲ್ಲಿ ರಾಜ್ಯ ಬಹಳ ಅಭಿವೃದ್ಧಿಗೆ ಬಂತು. ಎಚ್ಚಮನಾಯಕನೆಂಬ ಸರದಾರನು ದೊರೆಯ ಪ್ರೀತಿಗೆ ಪಾತ್ರನಾಗಿದ್ದನು. ಹನುಮಂತನು ಶ್ರೀರಾಮನ ನೆಚ್ಚಿನ ಸೇವಕನಾಗಿದ್ದಂತೆಯೇ, ಎಚ್ಚಮನಾಯಕನು ವೆಂಕಟಪತಿರಾಯನ ನಂಬುಗೆಯ ಭೃತ್ಯನಾಗಿದ್ದನು. ರಾಜನಿಗೆ ನಾಯಕನೆಂದರೆ ಪಂಚಪ್ರಾಣ; ನಾಯಕನಿಗೆ ರಾಜನೆಂದರೆ ಪರದೈವ, ಈ ಸ್ವಾಮಿ–ಭೃತ್ಯ ಸಂಬಂಧವನ್ನು ನೋಡಿ ಜನರು ಬೆರಗಾಗುತ್ತಿದ್ದರು. ನಾಯಕನು ರಾಜನ ಬಳಿಯಲ್ಲಿ ಸಾಮಾನ್ಯ ಸರದಾರನಾಗಿದ್ದರೂ ಅವನು ರಾಜಕಾರ್ಯಗಳಲ್ಲಿ ಆಪ್ತಸಚಿವನಂತಿದ್ದನು; ಅಂತರಂಗ ಮಿತ್ರನಾಗಿದ್ದನು.

ಎಚ್ಚಮನಾಯಕನು ಹುಟ್ಟು ಕನ್ನಡಿಗನು. ಅವನು ಬಾಲ್ಯದಿಂದಲೂ ಹಿಡಿದ ಕೆಲಸವನ್ನು ಸಾಧಿಸುವುದರಲ್ಲಿ ಹಿಂದೆಗೆಯುತ್ತಿರಲಿಲ್ಲ. ಇತರರಿಗೆ ಏನಾದರೂ ಕಷ್ಟಗಳು ಒದಗಿದಾಗ, ಅವನು ತನ್ನ ಕೈಲಾದ ಸಹಾಯವನ್ನು ಮಾಡುತ್ತಿದ್ದನು. ಯಾವಾಗಲೂ ಯುದ್ಧ ವಿಚಾರಗಳನ್ನು ಓದುವುದರಲ್ಲಿಯೂ, ಶೂರರ ಪರಾಕ್ರಮ

ಕಾರ್ಯಗಳನ್ನು ಕೇಳಿ ತಿಳಿಯುವುದರಲ್ಲಿಯೂ ಅವನಿಗೆ ಮೊದಲಿನಿಂದ ಆಸಕ್ತಿ ಹೆಚ್ಚು. ಮಹಾಭಾರತದ ಕಥೆಯನ್ನು ಓದುವಾಗ ಅವನು ಭೀಮಸೇನನ ಸಾಹಸ ಕಾರ್ಯಗಳನ್ನು ಕೇಳಿ ಮೈಯುಬ್ಬಿ ಹೋಗುತ್ತಿದ್ದನು. ರಾಮಾಯಣ ಕಥೆಯನ್ನು ಓದುವಾಗ ಕಲಿ ಹನುಮಂತನ ಪರಾಕ್ರಮಕ್ಕೆ ತಲೆದೂಗುತ್ತಿದ್ದನು. ತಾನೂ ಮುಂದೆ ಭೀಮನಂಥ ಬಲಶಾಲಿಯೂ, ಆಂಜನೇಯನಂಥ ಸ್ವಾಮಿಭಕ್ತನೂ ಆಗಬೇಕೆಂದು ಯೋಚಿಸುತ್ತಿದ್ದನು.

ವಿದ್ಯಾರಣ್ಯರು ತಮ್ಮ ತಪಸ್ಸಿನ ಬಲದಿಂದ ಕಟ್ಟಿದ್ದ ವಿಜಯನಗರ ರಾಜ್ಯವು ಹಾಳಾದ ರೀತಿಯನ್ನು ಅವನು ನೆನೆಸಿಕೊಂಡಾಗಲೆಲ್ಲ ಕಣ್ಣೀರು ಸುರಿಸುತ್ತಿದ್ದನು. ಕನ್ನಡಿಗರ ದುರ್ದೈವಕ್ಕಾಗಿ ಕೊರಗುತಿದ್ದನು. ಅವನು ಐದು ವರ್ಷದ ಹುಡುಗನಾಗಿದ್ದಾಗಲೆ ಅವನ ತಂದೆಯು ಕಾಲವಾಗಿದ್ದನು. ತಾಯಿಯೊಬ್ಬಳೇ ಅವನಿಗಿದ್ದ ಬಂಧು ಬಳಗ; ಸಕಲ ಸಂಪತ್ತು. ತಾಯಿಯ ಮಾತನ್ನು ಅವನು ಎಂದೂ ಮೀರಿ ನಡೆದವನಲ್ಲ. ಅವನ ವಂಶದವರು ವಿಜಯನಗರದ ರಾಜರ ಸೈನ್ಯದಲ್ಲಿ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರು. ಅವನ ತಂದೆಯೂ ಒಬ್ಬ ಸೈನ್ಯಾಧಿಕಾರಿಯಾಗಿದ್ದನು. ಇಂಥ ವೀರರ ಮನೆತನದಲ್ಲಿ ಹುಟ್ಟಿದ್ದ ಎಚ್ಚಮನಾಯಕನು ಸಹಜವಾಗಿಯೇ ಪರಾಕ್ರಮಿಯಾಗಿದ್ದನು. ಅವನು ಗರಡಿಯ ಸಾಧನೆಯನ್ನು ಮಾಡಿ, ಕಟ್ಟುಮುಟ್ಟಾಗಿ ಬೆಳೆದಿದ್ದನು. ಈಜುವುದರಲ್ಲಿಯೂ ಕುದುರೆ ಸವಾರಿ ಮಾಡುವುದರಲ್ಲಿಯೂ ಬಹಳ ನಿಪುಣನಾಗಿದ್ದನು. ತಾನು ಎಂದಾದರೊಂದುದಿನ ದಳಪತಿಯಾಗಿ ಸೇರಿ, ಶತ್ರುಗಳನ್ನು ಒಕ್ಕಲಿಕ್ಕಿ ಚಂದ್ರ ಗಿರಿಯ ರಾಜರ ಸೇವೆ ಸಲ್ಲಿಸಬೇಕೆಂದು ಹಂಬಲಿಸುತ್ತಿದ್ದನು.

ಅವನು ಸಂಗಡಿಗರೊಂದಿಗೆ ಆಗಾಗ ಗುಡ್ಡ ಕಾಡುಗಳಿಗೆ ಬೇಟೆಗೆ ಹೋಗುತ್ತಿದ್ದನು. ಅನ್ನ ನೀರಿಲ್ಲದೆ ಎಷ್ಟು ಹೊತ್ತಾದರೂ ಕಾಡಿನಲ್ಲಿ ಅಲೆಯುತ್ತ, ಸಿಕ್ಕಿದ ಹುಲಿ ಕರಡಿಗಳನ್ನು ಇನ್ನೊಬ್ಬರ ಸಹಾಯವಿಲ್ಲದೆ ಕೊಲ್ಲುತ್ತಿದ್ದನು. ಅವನು ಇಟ್ಟ ಗುರಿಯು ತಪ್ಪುತ್ತಿರಲಿಲ್ಲ, ತೊಟ್ಟ ಬಾಣ ವ್ಯರ್ಥವಾಗುತ್ತಿರಲಿಲ್ಲ. ಬೇಟೆಯೆಂದರೆ ಮೈಮರೆಯುತ್ತಿದ್ದನು. ಅವನಿಗೆ ಹದಿನಾರು ವರ್ಷ ವಯಸ್ಸಾಯಿತು. ಆ ವಯಸ್ಸಿಗೆ ತಕ್ಕ ಧೈರ್ಯ ಸ್ಥೈರ್ಯಗಳು ಅವನ ಹೃದಯದಲ್ಲಿ ತುಂಬಿದ್ದುವು. ಅವನು ಒಂದು ದಿನ ಪರಿವಾರದೊಂದಿಗೆ ಬೇಟೆಗಾಗಿ ತುಂಗಭದ್ರಾ ನದಿಯ ತೀರದ ಅರಣ್ಯಕ್ಕೆ ಹೊರಟನು. ಅಲ್ಲೆಲ್ಲ ಬೇಟೆಯಾಡುತ್ತ ಸಂಜೆಯ ವೇಳೆಗೆ, ಹಂಪೆಯ ಬಳಿಗೆ ಬಂದು ಸೇರಿದನು. ಆಗ ವಿರೂಪಾಕ್ಷಸ್ವಾಮಿಯ ಪೂಜೆಯು ಬಹಳ ವೈಭವದಿಂದ ನಡೆಯುತ್ತಿತ್ತು. ಅವರು ತಮ್ಮ ಕುದುರೆಗಳನ್ನು ಹೊರಗಡೆಯಲ್ಲಿ

ಬಿಟ್ಟು ವಿರೂಪಾಕ್ಷಸ್ವಾಮಿಯ ದರ್ಶನಕ್ಕಾಗಿ ದೇವಸ್ಥಾನದೊಳಕ್ಕೆ ಪ್ರವೇಶಿಸಿದರು. ಅರ್ಚಕರು ವೇದಮಂತ್ರಗಳನ್ನು ಉಚ್ಚರಿಸುತ್ತ ಶಿವನಿಗೆ ಅಭಿಷೇಕ ಮಾಡುತ್ತಿದ್ದರು. ನಾಯಕನು ಭಕ್ತಿಯಿಂದ ಕೈಮುಗಿದುಕೊಂಡು ಶಿವಲಿಂಗ ವನ್ನು ಎವೆಯಿಕ್ಕದೆ ನೋಡುತ್ತಿದ್ದನು. ಪೂಜೆಯಾದಮೇಲೆ, ಅರ್ಚಕರು ತೀರ್ಥ ಪ್ರಸಾದಗಳನ್ನು ಎಲ್ಲರಿಗೂ ಕೊಟ್ಟು ಕಳುಹಿಸಿದರು. ನಾಯಕನಿಗೆ ಅಲ್ಲಿ ಯಾರೂ ಪರಿಚಯಸ್ಥರು ಇಲ್ಲದ್ದರಿಂದ ಅವನು ಹೊರಗಡೆ ಅಂಗಣದಲ್ಲಿ ತನ್ನ ಜನರೊಂದಿಗೆ ಕುಳಿತಿದ್ದನು. ಅರ್ಚಕನು ದೇವಾಲಯದ ಬಾಗಿಲನ್ನು ಮುಚ್ಚಿ ಬೀಗಮುದ್ರೆ ಮಾಡಿಕೊಂಡು ಹೋಗುವಾಗ ನಾಯಕನನ್ನು ನೋಡಿ "ನೀವು ಹೊಸಬರಾಗಿ ಕಾಣುತ್ತೀರಿ. ಇಲ್ಲಿ ಯಾರಾದರೂ ಪರಿಚಯಸ್ಥರು ಇವರೇ! ಬಂಧುಗಳಿರುವರೇ!" ಎಂದು ನಾಯಕನನ್ನು ಕೇಳಿದನು.

ನಾಯಕ:– ಸ್ವಾಮಿ, ನಮಗೆ ಇಲ್ಲಿ ಪರಿಚಿತರು ಯಾರೂ ಇಲ್ಲ. ಸ್ವಾಮಿ ವಿರೂಪಾಕ್ಷನೇ ನಮಗೆಲ್ಲ ಬಂಧುವಾಗಿದ್ದಾನೆ.

ಅರ್ಚಕ:– ನೀವು ಎಲ್ಲಿಂದ ಬಂದಿರಿ?

ನಾಯಕ:– ನಾವು ಚಂದ್ರಗಿರಿಯಿಂದ ಹೊರಟು, ಈ ಪ್ರಾಂತದಲ್ಲಿ ಬೇಟೆಗಾಗಿ ಬಂದಿದ್ದೆವು. ಸಂಜೆಯಾದುದರಿಂದ, ಈ ರಾತ್ರಿಯನ್ನು ಸ್ವಾಮಿಯ ಸನ್ನಿಧಿಯಲ್ಲಿ ಕಳೆಯಬೇಕೆಂದಿರುವೆವು.

ಅರ್ಚಕ:– ವೆಂಕಟಪತಿರಾಯರು ಕ್ಷೇಮದಿಂದಿರುವರೆ?

ನಾಯಕ:– ಅವರು ದೇಹಾಲಸ್ಯದಿಂದ ಹಾಸಿಗೆ ಹಿಡಿದಿರುವರು ದೇವರ ಅನುಗ್ರಹದಿಂದ ಅವರು ಜಾಗ್ರತೆಯಾಗಿಯೇ ಚೇತರಿಸಿಕೊಳ್ಳುವರು.

ಅರ್ಚಕ:– ದೇವಿಯು ಮಹಾರಾಜರನ್ನು ಕಾಪಾಡಲಿ! ಚಂದ್ರಗಿರಿಯ ರಾಜ ಮನೆತನವು ಅಭಿವೃದ್ಧಿಯಾಗಲಿ!

ನಾಯಕ:– ಅರ್ಚಕರೇ ಅಲ್ಲಿ ಕಾಣುತ್ತಿರುವುದೇನು? ಅದೊಂದು ದೇವಾಲಯವೇ?

ಅರ್ಚಕ:– ಅದು ಶ್ರೀ ಭುವನೇಶ್ವರೀದೇವಿಯ ದೇವಸ್ಥಾನ, ಕರ್ನಾಟಕ ರಾಜ್ಯಾಭಿಮಾನ ದೇವತೆ! ವಿದ್ಯಾರಣ್ಯರು ಆ ದೇವಿಯ ಅನುಗ್ರಹದಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಲು ಶಕ್ತರಾದರು.

ನಾಯಕ:– ಮಹಾ ಮಾತೆಯ ಸಂದರ್ಶನ ಮಾಡಲು ನಮಗೆ ಅವಕಾಶವುಂಟೇ!

ಅರ್ಚಕ:– ಈಗಲೇ ಆಗಬಹುದು. ನೀವೆಲ್ಲರೂ ಆ ದೇವಿಯ ಸಂದರ್ಶನದಿಂದ ಧನ್ಯರಾಗಬಹುದು. ಬನ್ನಿ, ಹೋಗೋಣ.

ನಾಯಕ:– ಸ್ವಾಮಿ, ನಾಳೆಯ ದಿನ ನೀವು ನಮಗೆ ಈ ವಿಜಯನಗರದ

ಅವಶೇಷಗಳ ಪರಿಚಯವನ್ನು ತಿಳಿಸಿ ಉಪಕಾರ ಮಾಡಬೇಕಾಗಿ ಪ್ರಾರ್ಥನೆ.

ಅರ್ಚಕ:– ಆಗಬಹುದು. ವೀರ ಕನ್ನಡಿಗರಾದ ನೀವು ಈ ಮಹಾ ನಗರದ ವೈಭವವನ್ನು ಕೇಳಿದರೆ ಮರುಗಿ ಕಣ್ಣೀರು ಹಾಕುವಿರಿ,

ನಾಯಕ:– ಆ ವೈಭವವನ್ನು ಕನ್ನಡಿಗರಾದ ನಾವು ಮತ್ತೊಮ್ಮೆ ನೋಡಬಲ್ಲೆವೆ? ಅಂಥ ಅಭಿಮಾನವೇ ನನ್ನ ಜನರಲ್ಲಿಲ್ಲವಲ್ಲಾ! ಎಂದು ವ್ಯಥೆಯಾಗುತ್ತಿದೆ.

ಅರ್ಚಕ:– ಹೀಗೆ ಬನ್ನಿ! ಇದೇ ಆ ದೇವಿಯ ಮಂದಿರ, ಸರ್ವಮಂಗಳೆಯ ದರ್ಶನಭಾಗ್ಯವನ್ನು ಪಡೆಯಿರಿ.

ನಾಯಕ:– [ಅಡ್ಡ ಬಿದ್ದು] ದೇವಿ! ಜಗನ್ಮಾತೆ! ನಿನ್ನ ಪರಮಾನುಗ್ರಹದಿಂದ ಕನ್ನಡಿಗರ ಕೀರ್ತಿಲತೆಯು ಸೂರ್ಯಚಂದ್ರರಿರುವ ತನಕ ಬೆಳೆಯುತ್ತಿರಲಿ. ದೇಶಸೇವೆಗಾಗಿ ಕನ್ನಡಿಗರು ದುಡಿಯುವಂತೆ ಆಶೀರ್ವದಿಸು! ಚಂದ್ರಗಿರಿಯ ರಾಜವಂಶವು ಶಾಶ್ವತವಾಗಿ ಮೆರೆಯಲಿ! ದೇವಿ! ವೀರಜನನಿ! ನಿನ್ನ ಪುತ್ರರಾದ ಕನ್ನಡಿಗರು ಸಾಹಸವಂತರಲ್ಲವೆ! ಮತ್ತೊಮ್ಮೆ ಅವರು ವೈಭವದಿಂದ ಬಾಳಲಾರರೆ! ತಾಯಿ! ಸ್ವಾಮಿ ದ್ರೋಹಿಗಳನ್ನು ಸದೆ ಬಡಿದು, ಶತ್ರುಗಳನ್ನು ಮಣ್ಣು ಮುಕ್ಕಿಸಿ, ಕನ್ನಡನಾಡಿನ ಸೇವೆಗಾಗಿ ನನ್ನ ಪ್ರಾಣವನ್ನಾದರೂ ಕೊಡಲು ಸಿದ್ಧನಾಗಿರುತ್ತೇನೆ. ಇದು ನನ್ನ ಪ್ರತಿಜ್ಞೆ ಅಮ್ಮ! ನಿನ್ನ ಅನುಗ್ರಹವಿರಬೇಕು.

ಆ ರಾತ್ರಿ ಎಚ್ಚಮನಾಯಕನೂ, ಅವನ ಅನುಯಾಯಿಗಳೂ ಅರ್ಚಕನ ಮನೆಯಲ್ಲಿ ತಂಗಿದರು. ಬೆಳಗಾದಮೇಲೆ, ಅವರು ಹಿಂದೆ ವಿಜಯನಗರವಿದ್ದ ಸ್ಥಳವನ್ನೂ ಮತ್ತು ಇತರ ಅವಶೇಷಗಳನ್ನೂ ನೋಡಲು ಆ ವೃದ್ಧ ಪುರೋಹಿತರ ಸಂಗಡ ಹೊರಟರು. ಅವರು ಅಲ್ಲಲ್ಲಿ ನಿಂತು ಅನೇಕ ಸ್ಥಳಗಳನ್ನೂ, ದೇವಸ್ಥಾನಗಳನ್ನೂ ನೋಡುತ್ತ ಕನ್ನಡಿಗರ ಗತವೈಭವವನ್ನು ಮನಸ್ಸಿಗೆ ತಂದುಕೊಳ್ಳುತ್ತಿದ್ದರು. ಅರ್ಚಕನು ಆಯಾ ಸ್ಥಳಗಳಿಗೆ ಸಂಬಂಧಪಟ್ಟ ಇತಿಹಾಸ ಸಂಗತಿಗಳನ್ನು ಅವರಿಗೆ ಮನಮುಟ್ಟುವಂತೆ ತಿಳಿಸುತ್ತಿದ್ದನು. ಅವರು ಎಲ್ಲ ಸಂಗತಿಗಳನ್ನು ಕುತೂಹಲದಿಂದ ಕೇಳುತ್ತ ಮುಂದೆ ಮುಂದೆ ನಡೆಯುತ್ತ ಒಂದು ಹಾಳು ಮಂಟಪದ ಬಳಿಗೆ ಬಂದರು. ಆಗ ಅರ್ಚಕನು ನಾಯಕನಿಗೆ ಆ ಸ್ಥಳವನ್ನು ತೋರಿಸಿ, "ಶ್ರೀ ವಿದ್ಯಾರಣ್ಯರ ಪರ್ಣಕುಟೀರವಿದ್ದುದು ಇಲ್ಲೆ! ಅವರೂ ಮತ್ತು ಸಾಯಣಾಚಾರ್ಯರೂ ವೇದಾಂತ ಗ್ರಂಥಗಳನ್ನು ಬರೆದ ಸ್ಥಳವಿದು. ಇಂದು ಹಾಳು ಬಿದ್ದಿದೆ. ಅಲ್ಲಿ ಕಾಣುವುದೇ ಸಾರ್ವಭೌಮ ಕೃಷ್ಣದೇವರಾಯನ

ಅರಮನೆ. ಬಲಗಡೆಯಲ್ಲಿ ದಿಣ್ಣೆಯಂತೆ ಕಾಣುವ ಸ್ಥಳದ ಉದ್ದಕ್ಕೂ ವಾಣಿಜ್ಯ ವೀಧಿಯಿತ್ತು. ಅಲ್ಲಿ ಮುತ್ತು, ರತ್ನ, ವಜ್ರ, ವೈಡೂರ್ಯಗಳನ್ನು ರಾಶಿ ರಾಶಿ ಹಾಕಿಕೊಂಡು ವ್ಯಾಪಾರ ಮಾಡುತ್ತಿದ್ದರು. ಮುಂದೆ ಬನ್ನಿ, ಇದೋ ಕಲಾ ವೈಭವದ ಬೀಡಾಗಿದ್ದ ನಗರವಿಂದು ಕಾಡುಮೇಡಾಗಿದೆ. ನೋಡಿ!

ಎಚ್ಚಮನಾಯಕ:– ಸ್ವಾಮಿ, ಕನ್ನಡಿಗರ ವೈಭವ ಕಣ್ಮರೆಯಾಯಿತೆ? ನಮ್ಮ ಸಂಸ್ಕೃತಿ ಮಣ್ಣು ಪಾಲಾಯಿತೆ !

ಅರ್ಚಕ:– ನಾವು ಎದೆ ಗುಂದಬಾರದು. ಶ್ರೀ ವಿರೂಪಾಕ್ಷಸ್ವಾಮಿಯ ಅನುಗ್ರಹದಿಂದ ಮತ್ತೊಮ್ಮೆ ಕನ್ನಡಿಗರ ಅಭ್ಯುದಯ ಕಾಲ ಬಂದೇ ಬರುವುದು.

ನಾಯಕ:– ಹಾಳು ಬಿದ್ದಿರುವ ಈ ಗೋಡೆಗಳು ಎಷ್ಟು ಸುಭದ್ರವಾಗಿವೆ!

ಅರ್ಚಕ:– ಇವು ಅರಮನೆಯ ಸುತ್ತಲೂ ಇದ್ದ ಏಳುಸುತ್ತಿನ ಕೋಟೆಯ ಗೋಡೆಗಳು! ಇಂದು ಕಾಲವಶದಿಂದ ಹಾಳಾಗಿ ಹೋಗಿವೆ. ಆ ಕಡೆ ಎತ್ತರವಾಗಿ ಒಂದು ದಿಬ್ಬ ಕಾಣುತ್ತಿಲ್ಲವೆ?

ನಾಯಕ:– ಹೌದು, ಕಾಣುತ್ತಿದೆ?

ಅರ್ಚಕ:– ಅದೇ ವಿಜಯದಶಮಿಯ ದಿಬ್ಬ, ವಿಜಯನಗರಾಧೀಶ್ವರರು ವಿಜಯದಶಮಿ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ನಡೆಯಿಸುತ್ತಿದ್ದರು. ಇಲ್ಲಿ ಎಲ್ಲ ಜನರು ನಿಂತು ಆ ಉತ್ಸವ ವೈಭವಗಳನ್ನು ಕಂಡು ಆನಂದಿಸುತ್ತಿದ್ದರು. ಅದರ ಮುಂಭಾಗದಲ್ಲಿ ಕಾಣುವುದೇ ರಾಯರ ಓಲಗಶಾಲೆ. ಅದಕ್ಕೆ ಸ್ವಲ್ಪ ದೂರದಲ್ಲಿರುವ ಸ್ಥಳದಲ್ಲಿ ಟಂಕಸಾಲೆಯಿತ್ತು. ಓಲಗಶಾಲೆಯ ಉತ್ತರಕ್ಕೆ ಕಾಣುವುದೇ ಹಜಾರ ರಾಮಸ್ವಾಮಿಯ ದೇವಾಲಯ. ಅದರಲ್ಲಿಯೇ ಸೀತಾಮಾತೆಯ ದೇಗುಲವಿದೆ.

ನಾಯಕ:– ಶಿಲ್ಪಿಗಳು ಎಂಥ ಸೊಗಸಾದ ಕೆತ್ತನೆಯ ಕೆಲಸವನ್ನು ಮಾಡಿರುತ್ತಾರೆ! ಏನು ಕಲಾ ಪ್ರೌಢಿಮೆ! ಕನ್ನಡಿಗರ ಜಾಣ್ಮೆ ಎಷ್ಟೆಂಬುದನ್ನು ಕಲ್ಲುಗಳೂ ಮೂಕಭಾವದಿಂದ ಹೇಳುತ್ತಿವೆ.

ಅರ್ಚಕ:– ನಾಯಕರೇ ಇದೇ ನೋಡಿ, ವೀರಭದ್ರ ದೇವರ ಗುಡಿ. 16ಅಡಿ ಎತ್ತರವಾದ ವಿಗ್ರಹ. ಇಲ್ಲಿ ತುಂಗಭದ್ರಾ ನದಿಯ ಕಾಲುವೆ ಹರಿಯುತ್ತಿದೆ. ಇದನ್ನು ದಾಟಿ ಆಚೆಯ ದಡಕ್ಕೆ ಹೋಗೋಣ.

ನಾಯಕ:– ಈ ದಡದ ಮೇಲಿರುವ ದೇವಸ್ಥಾನ ಯಾವುದು?

ಅರ್ಚಕ:– ಇದು ಉಗ್ರ ನರಸಿಂಹಸ್ವಾಮಿಯ ಗುಡಿ, 22ಅಡಿ ಎತ್ತರವಾದ ವಿಗ್ರಹ. ಎಂಥ ಉಗ್ರರೂಪವಾಗಿದೆ, ನೋಡಿರಿ! ನಾವು ಮುಂದೆ

ಹೋಗಿ, ವಿಜಯ ವಿಠಲ ದೇವರ ಗುಡಿಯನ್ನು ನೋಡಿಕೊಂಡು; ಅಂಜನಾದ್ರಿಯ ಪರ್ವತ ಪ್ರಾಂತಕ್ಕೆ ಹೋಗೋಣ.

ನಾಯಕ:– ಆಗಬಹುದು.

ಅರ್ಚಕ:– ಅಲ್ಲಿ ಪಂಪಾ ಸರೋವರವಿದೆ. ಹಿಂದೆ, ಕಿಷ್ಕಿಂಧಾ ರಾಜ್ಯವಿದ್ದುದಿಲ್ಲೆ! ಶ್ರೀರಾಮನಿಗೆ ಸುಗ್ರೀವನ ಸಖ್ಯವಾದ ಸ್ಥಳ. ಸೀತಾವಿಯೋಗದಿಂದ ಪರಿತಪ್ತನಾದ ರಾಮಚಂದ್ರನು ತಮ್ಮನೊಂದಿಗೆ ಈ ಪ್ರಾಂತ್ಯದಲ್ಲಿ ಕೆಲವು ಕಾಲವಿದ್ದನಂತೆ!

ಹೀಗೆ, ಅವರು ವಿಜಯನಗರ ಪ್ರದೇಶವನ್ನೆಲ್ಲ ನೋಡಿ ರಾತ್ರಿಯ ವೇಳೆಗೆ ಮನೆಗೆ ಬಂದು ಸೇರಿದರು. ಆ ರಾತ್ರಿ ನಾಯಕನು ಅರ್ಚಕನ ಸಂಗಡ ಶ್ರೀ ಭುವನೇಶ್ವರೀ ದೇವಾಲಯಕ್ಕೆ ಹೋಗಿ, ಪುನಃ ದೇವಿಯ ದರ್ಶನ ಮಾಡಿದನು.

ಮರುದಿನ ಪ್ರಾತಃಕಾಲದಲ್ಲಿ, ನಾಯಕನು ತನ್ನ ಸಂಗಡಿಗರೊಂದಿಗೆ ಚಂದ್ರಗಿರಿಗೆ ಪ್ರಯಾಣ ಮಾಡಿದನು.

ಆ ದಿನ ಚಂದ್ರಗಿರಿಯ ಅರಮನೆಯಲ್ಲಿ ಮಹಾರಾಜರ ದರ್ಬಾರು ನಡೆಯಲು ಏರ್ಪಾಟಾಗಿತ್ತು. ಎಲ್ಲ ರಾಜ ಬಂಧುಗಳೂ, ಆಪ್ತೇಷ್ಟರೂ, ರಾಜ್ಯಾಧಿಕಾರಿಗಳೂ, ಸೇನಾಪತಿಗಳೂ, ರಾಜಧಾನಿಯ ಪ್ರಮುಖ ಜನಗಳೂ ಆಸ್ಥಾನಕ್ಕೆ ಬಂದಿದ್ದರು. ಸಕಾಲದಲ್ಲಿ ಎಚ್ಚಮನಾಯಕನೂ ಬಂದು ಸೇರಿದನು. ದರ್ಬಾರಿನಲ್ಲಿ ಆ ದಿನ ಯಾವುದೊಂದು ಆಡಂಬರವೇ ಇರಲಿಲ್ಲ. ಎಲ್ಲರೂ ಚಿಂತಾಕ್ರಾಂತರಾಗಿದ್ದಂತೆ ಕಾಣುತ್ತಿತ್ತು. ಮಹಾರಾಜರ ದೇಹಾರೋಗ್ಯ ವಿಚಾರವೇ ಎಲ್ಲರ ಮನಸ್ಸಿನಲ್ಲಿಯೂ ತುಂಬಿದ್ದಿತು. ಹೊತ್ತಿಗೆ ಸರಿಯಾಗಿ ವೆಂಕಟಪತಿರಾಯರು ಬಹಳ ಪ್ರಯಾಸದಿಂದ ದರ್ಬಾರಿಗೆ ಬಂದರು. ಅಂಗರಕ್ಷಕರು ಅವರನ್ನು ಕೈ ಹಿಡಿದು ಕರೆದುಕೊಂಡು ಬಂದು ಅಲ್ಲಿ ಸುಸಜ್ಜಿತವಾಗಿದ್ದ ಹಂಸತೂಲಿಕಾತಲ್ಪದ ಮೇಲೆ ಮಲಗಿಸಿದರು. ಅವರ ಶಕ್ತಿಯು ಕುಂದಿದ್ದಿತು. ಆಗಾಗ ನಿಶ್ಚೇಷ್ಟಿತರಾಗುತ್ತಿದ್ದರು. ಅರಮನೆಯ ರಾಣಿವಾಸದವರು ತೆರೆಮರೆಯಲ್ಲಿ ಕುಳಿತುಕೊಂಡು ಕಣ್ಣೀರು ಸುರಿಸುತ್ತಿದ್ದರು.

ಮಹಾರಾಜರ ಹಾಸಿಗೆಯ ಪಕ್ಕದಲ್ಲಿ ನಚ್ಚಿನ ಸೇವಕನಾದ ಎಚ್ಚಮ ನಾಯಕನು ಖಿನ್ನನಾಗಿ ನಿಂತಿದ್ದನು. ಮಾಂಡಲಿಕರ ಮುಖದಲ್ಲಿ ಕಳೆಯಿರಲಿಲ್ಲ. ರಾಜನ ಔರಸಪುತ್ರನೆಂದು ಜನರಾಡಿಕೊಳ್ಳುತ್ತಿದ್ದ ಚಿಕ್ಕರಾಯನೂ ದೊರೆಯ ಮಗ್ಗುಲಲ್ಲಿ ಕುಳಿತಿದ್ದನು. ರಾಜನ ಮಾವನಾದ ಜಗರಾಯನೂ, ಭಾವಮೈದುನನಾದ ಓಬಲರಾಯನೂ ಕುತೂಹಲದಿಂದ ನೋಡುತ್ತ ನಿಂತಿದ್ದರು.

ಆಗ ರಾಜನು ಸಾಮಾಜಿಕರನ್ನು ಕುರಿತು ಕ್ಷೀಣ ಸ್ವರದಿಂದ "ರಾಜನಿಷ್ಠೆಯುಳ್ಳ ಪ್ರಜೆಗಳೆ, ಮಾಂಡಲಿಕರೆ, ನನ್ನ ಆಯುಃಪರಿಮಿತಿಯು ಸಮೀಪಿಸಿತು. ಇದಕ್ಕಾಗಿ

ನಾನು ವ್ಯಥೆಪಡುವುದಿಲ್ಲ. ನಮ್ಮ ಹಿರಿಯರ ಕೀರ್ತಿ ಪ್ರತಿಷ್ಠೆಗಳು ಇನ್ನು ಮುಂದೆ ಉಳಿಯಬೇಕಾದರೆ ನಿಮ್ಮೆಲ್ಲರ ಸ್ವಾಮಿನಿಷ್ಠೆಯು ಮುಖ್ಯವಾದುದು. ನನ್ನ ತರುವಾಯ ಈ ರತ್ನಸಿಂಹಾಸನವನ್ನು ಅಲಂಕರಿಸಬಲ್ಲ ರಾಜಕುಮಾರನು ಇಲ್ಲಿಗೇಕೆ ಬಂದಿಲ್ಲ! ನಮ್ಮ ಅಣ್ಣನ ಮಗನಾದ ರಂಗರಾಯನನ್ನು ಕರೆದುಕೊಂಡು ಬನ್ನಿ. ಅವನೇ ನಿಮ್ಮೆಲ್ಲರಿಗೂ ಪ್ರಭುವಾಗಬಲ್ಲ ಸಮರ್ಥನು. ನಮ್ಮ ವಂಶದ ಪವಿತ್ರತೆಯನ್ನು ಉಳಿಸಬೇಕಾದುದು; ನನ್ನ ಮತ್ತು ನಿಮ್ಮ ಕರ್ತವ್ಯವಲ್ಲವೆ! ಹೆಚ್ಚು ಹೇಳಲು ನನಗೆ ಶಕ್ತಿಯಿಲ್ಲ. ನನ್ನ ಮಾತಿನಂತೆ ನೀವು ನನ್ನ ಅಣ್ಣನ ಮಗನಿಗೆ ಪಟ್ಟ ಕಟ್ಟಿ, ರಾಜನಿಷ್ಠೆಯಿಂದ ನಡೆದುಕೊಳ್ಳುವುದಾಗಿ ಭರವಸೆ ಕೊಟ್ಟರೆ, ನಾನು ಸಂತೋಷದಿಂದ ಸಾಯುವೆನು" ಎಂದು ಹೇಳಿ, ಒಮ್ಮೆ ಎಚ್ಚಮನಾಯಕನ ಕಡೆ ನೋಡಿದನು. ಇಂಗಿತಜ್ಞನಾದ ನಾಯಕನು ಪ್ರಭುವಿಗೆ ವಂದಿಸಿ, "ಸ್ವಾಮಿ, ಈ ಸೇವಕನು ರಾಜಾಜ್ಞೆಯನ್ನು ಪಾಲಿಸಲು ಬದ್ಧಕಂಕಣನಾಗಿರುವನು" ಎಂದು ವಿನಯದಿಂದ ಹೇಳಿ, ಉಕ್ಕುತ್ತಿದ್ದ ಕಣ್ಣೀರನ್ನು ಒರೆಸಿಕೊಂಡು, ಅರೆಗಳಿಗೆ ತಲೆತಗ್ಗಿಸಿ ನಿಂತು ಬಿಟ್ಟನು. ಅರಸನು ನಿಶ್ಶಕ್ತಿಯಿಂದ ಕಣ್ಣು ಮುಚ್ಚಿದನು. ಕೂಡಲೆ ರಾಜವೈದ್ಯರ ಔಷಧೋಪಚಾರದಿಂದ ಮತ್ತೆ ಕಣ್ಣು ಬಿಟ್ಟು ಸುತ್ತಲೂ ನೋಡಿದನು. ಅಷ್ಟು ಹೊತ್ತಿಗೆ ರಾಯನ ಅಣ್ಣನ ಮಗನಾದ, ರಂಗರಾಯನನ್ನು ಪ್ರಮುಖ ಜನಗಳು ರಾಜಾಜ್ಞೆಯ ಮೇರೆಗೆ ಹೋಗಿ ಕರೆದುಕೊಂಡು ಬಂದಿದ್ದರು. ದೊರೆಯು ಅವನನ್ನು ನೋಡಿ, ಮೈದಡವಿ, "ಕುಮಾರಾ! ನನ್ನ ವಂಶಲತೆಯ ಕುಡಿಯಿರುವುದು ನಿನ್ನಿಂದಲೇ! ನೀನೇ ಸಿಂಹಾಸನಕ್ಕೆ ಬಾಧ್ಯನು ನನಗೆ ಮಕ್ಕಳಿಲ್ಲ. ನನ್ನ ತರುವಾಯ ನೀನು ಸಿಂಹಾಸನವನ್ನು ಹತ್ತಿ ರಾಜ್ಯಪರಿಪಾಲನೆ ಮಾಡಬೇಕು. ವಿಜಯನಗರದ ರಾಯರ ಕೀರ್ತಿಗೆ ಕುಂದು ತರಬೇಡ!. ಸ್ವಾಮಿನಿಷ್ಟರಾದ ಪ್ರಜೆಗಳ ಸಹಾಯದಿಂದ ಸುಖವಾಗಿ ಬಾಳು" ಎಂದು ಹೇಳಿ ಪುನಃ ಜ್ಞಾನ ತಪ್ಪಿ ಮಾತನಾಡಲಾರದಾದನು. ವೈದ್ಯರು ಚಿಕಿತ್ಸೆ ಮಾಡತೊಡಗಿದರು.

ಸಭೆಯಲ್ಲಿದ್ದವರಿಗೆ ಮನೋವ್ಯಥೆಯಿದ್ದಿತಾದರೂ ಆಶ್ಚರ್ಯವೂ ಉಂಟಾಯಿತು. ಔರಸ ಪುತ್ರನೆಂದು ತಿಳಿದುಕೊಂಡಿದ್ದ ಚಿಕ್ಕರಾಯನು ಸಮೀಪದಲ್ಲಿಯೇ ಇದ್ದರೂ, ಮಹಾರಾಜನು ತನ್ನ ಅಣ್ಣನ ಮಗನಿಗೆ ರಾಜ್ಯಾಭಿಷೇಕ ಮಾಡಿಸುವಂತೆ ಆಜ್ಞೆ ಮಾಡಲು ಕಾರಣವೇನೆಂಬುದೇ ಎಲ್ಲರಿಗೂ ಸೋಜಿಗವಾಗಿದ್ದಿತು. ಅದರ ಗುಟ್ಟು ಯಾರಿಗೂ ತಿಳಿಯದು? ಅದನ್ನು ತಿಳಿದಿದ್ದ ಜಗರಾಯನು ವಂಚಕನಾಗಿದ್ದುದರಿಂದ ಮರೆಮಾಚಿಕೊಂಡಿದ್ದನು. ಓಬಲರಾಯನು ಸ್ವಾರ್ಥದೃಷ್ಟಿಯಿಂದ ಸುಮ್ಮನಿದ್ದನು. ತೆರೆಯ ಹಿಂದುಗಡೆಯಲ್ಲಿದ್ದ ರಾಜಪತ್ನಿಯೂ ಈ ಸನ್ನಿವೇಶವನ್ನು ನೋಡಿ ಬೆದರಿಹೋಗಿದ್ದಳು. ಚಿಕ್ಕರಾಯನು ಮಾತಿಲ್ಲದೆ ನಿಂತಿದ್ದನು! ಇದರ

ರಹಸ್ಯವನ್ನೆಲ್ಲಾ ತಿಳಿದಿದ್ದ ವೃದ್ಧ ಸೇವಕನೊಬ್ಬನು. ರಾಜನ ಪಾದದ ಬಳಿಯಲ್ಲಿ ಕುಳಿತು ಆಲೋಚನಾ ಮಗ್ನನಾಗಿದ್ದನು. ಇಷ್ಟರಲ್ಲಿಯೇ ದೊರೆಯು ಪುನಃ ಕಣ್ಣು ಬಿಟ್ಟು ನೋಡಿದನು. ಆಗ ಜಗರಾಯನು ದೊರೆಯನ್ನು ಕುರಿತು "ಮಹಾರಾಜಾ! ನಿನ್ನ ಪತ್ನಿಯಾದ ಬಾಯಮ್ಮನ ಹೊಟ್ಟೆಯಲ್ಲಿ ಹುಟ್ಟಿದ ಚಿಕ್ಕರಾಯನಿರುವಾಗ ನಿನ್ನ ಅಣ್ಣನ ಮಗನಾದ ರಂಗರಾಯನು ಪಟ್ಟಕ್ಕೆ ಬರಲು ಸಾಧ್ಯವೇ?" ಎಂದು ಕೇಳಿದನು. ರಾಜನು ಆ ಮಾತನ್ನು ಕೇಳಿದಾಗ, ಅವನ ಮುಖದಲ್ಲಿ ತಿರಸ್ಕಾರ ಭಾವವನ್ನು ಸೂಚಿಸುವ ನಗುವಿನ ತೆರೆಯೊಂದು ಸುಳಿಯಿತು. ಕೂಡಲೆ ಅವನು ತನ್ನ ಪರಮಾಪ್ತನಾದ ಸೇವಕನನ್ನು ಕರೆದು "ಗಿರಿಯಾ! ಇದರ ರಹಸ್ಯವನ್ನು ನಾನು ಹಿಂದೆಯೇ ನಿನಗೆ ಹೇಳಿದ್ದೆನಷ್ಟೆ! ಅದನ್ನು ಸಭೆಯವರಿಗೆ ತಿಳಿಸು" ಎಂದು ಆಜ್ಞಾಪಿಸಿದನು. ಗಿರಿಯನು ಎದ್ದು ನಿಂತು; "ಸಭಾಸದರೇ! ಮಹಾರಾಜರ ರಾಣಿವಾಸದಲ್ಲಿರುವ ಬಾಯಮ್ಮನ ಮೇಲೆ ಪ್ರಭುಗಳ ಪ್ರೀತಿಯು ಅಪಾರವಾಗಿದ್ದಿತು. ಆಕೆಯ ಹೊಟ್ಟೆಯಲ್ಲಿ ಬಹಳ ಕಾಲ ಮಕ್ಕಳಾಗಲಿಲ್ಲ. ಇದರಿಂದ ಆಕೆಯು ರಾಜನ ಪ್ರೀತಿಯಿಂದ ವಂಚಿತಳಾಗಬಹುದೆಂದು ಭಾವಿಸಿ, ಒಂದು ಸಂಚು ಮಾಡಿದಳಂತೆ! ಆಕೆಯ ಪರಿಚರ್ಯೆಯಲ್ಲಿದ್ದ ಒಬ್ಬ ದಾಸಿಯು ಗರ್ಭವತಿಯಾಗಲು ರಾಣಿಯು ಅವಳಿಗೆ ಬೇಕಾದಷ್ಟು ಧನವನ್ನು ಕೊಟ್ಟು, ತನ್ನ ಅಂತರಂಗಕ್ಕೆ ಒಳಪಡಿಸಿಕೊಂಡು ತಾನು ಗರ್ಭವತಿಯಾದೆನೆಂದು ಸುಳ್ಳು ಸುದ್ದಿಯನ್ನು ಅರಮನೆಯಲ್ಲಿ ಹುಟ್ಟಿಸಿದಳು.

ನವಮಾಸ ತುಂಬಿ ಆ ದಾದಿಯು ಗಂಡು ಮಗುವನ್ನು ಹೆತ್ತಳು. ಸುಳ್ಳು ಬಸುರಿಯಾಗಿದ್ದ ಬಾಯಮ್ಮನು ಗಂಡುಮಗುವನ್ನು ಪಡೆದಳೆಂದು ಹೇಳಿ, ಆ ದಾಸಿಯ ಮಗುವನ್ನು ರಹಸ್ಯವಾಗಿ ತರಿಸಿಕೊಂಡು ಪಾಲನೆ ಮಾಡಿದಳು, ನೀವೆಲ್ಲರೂ ರಾಜನ ಮಗನೆಂದು ತಿಳಿದುಕೊಂಡಿರುವ ಚಿಕ್ಕರಾಯನು ಆ ಬಡ ದಾಸಿಯ ಮಗ! ಈ ರಹಸ್ಯವನ್ನು ಅರಿತಿದ್ದ ಮಹಾರಾಜನು ಪ್ರೀತಿಪಾತ್ರಳಾಗಿದ್ದ ಬಾಯಮ್ಮನಿಗೆ ಒಂದು ದಿನವೂ ಅನುಮಾನ ಬರದಂತೆ ವರ್ತಿಸುತ್ತಿದ್ದರು! ಪ್ರಭುಗಳ ಸಂಪೂರ್ಣ ಕೃಪೆಗೂ, ಆಪ್ತಾಲೋಚನೆಗೂ ಒಳಗಾಗಿದ್ದ ನನ್ನಲ್ಲಿ ಪ್ರಭುಗಳು ಆಗಾಗ ಹೇಳಿಕೊಂಡು ನಗುತ್ತಿದ್ದರು, ಈ ದಿನ ರಾಯರ ಅಪ್ಪಣೆಯಾದಂತೆ, ನಾನು ಅದನ್ನು ತಮ್ಮಲ್ಲಿ ಅರಿಕೆ ಮಾಡಿಕೊಂಡಿರುತ್ತೇನೆ" ಎಂದು ಹೇಳಿ ಸುಮ್ಮನಾದನು. ಸಭೆಯವರು ಇದನ್ನು ಕೇಳಿ ಬೆಕ್ಕಸ ಬೆರಗಾದರು! ಜಗರಾಯನೂ ಓಬಲರಾಯನೂ ತಲೆ ತಗ್ಗಿಸಿದರು!

ಬಾಯಮ್ಮನು ಸರಿರಾಣಿಯರೆದುರಿನಲ್ಲಿ ಅವಮಾನಿತಳಾದಂತಾಯಿತು ದೊರೆಯ ಮಗನೆಂದು ತಿಳಿದಿದ್ದ ಚಿಕ್ಕರಾಯನ ತೇಜೋವಧೆಯಾಯಿತು. ಎಚ್ಚಮನಾಯಕನ ಸ್ವಾಮಿಭಕ್ತಿ ಕಳೆಗೂಡಿತು.

ಆಗ ಮಹಾರಾಜರು ರಂಗರಾಯನನ್ನು ಹತ್ತಿರಕ್ಕೆ ಕರೆದು "ವತ್ಸ! ನಿಮ್ಮ ತಂದೆಯು ಕಾಲವಾದಾಗ ನೀನಿನ್ನೂ ಎಳೆಯಮಗುವಾಗಿದ್ದುದರಿಂದ ನಾನೇ ಈ ರಾಜ್ಯವನ್ನು 28 ವರ್ಷಕಾಲ ಪರಿಪಾಲಿಸಿಕೊಂಡು ಬಂದೆನು. ಇಂದು ನೀನೇ ಈ ರಾಜ್ಯಕ್ಕೆ ಅಧಿಪತಿ! ಈ ಶಿಖಾ ಮೊಹರನ್ನು ಸ್ವೀಕರಿಸು" ಎಂದು ಹೇಳಿ, ರಾಜಮುದ್ರೆಯ ಉಂಗುರವನ್ನು ರಂಗರಾಯನ ಕೈಗೆ ಕೊಟ್ಟನು.

ರಂಗರಾಯನು ರಾಜಮುದ್ರೆಯ ಉಂಗುರವನ್ನು ಕಣ್ಣಿಗೊತ್ತಿಕೊಂಡು ಚಿಕ್ಕಪ್ಪನ ಪಾದಗಳಿಗೆ ನಮಸ್ಕಾರ ಮಾಡಿದನು. ಆಗ ಸರದಾರರೂ ಸೇನಾಪತಿಗಳೂ, ಅಧಿಕಾರಿಗಳೂ, ಮಾಂಡಲೀಕರೂ, ರಂಗರಾಯನಿಗೆ ತಲೆಬಾಗಿ ನಮಸ್ಕರಿಸಿದರು. ಎಚ್ಚಮನಾಯಕನು "ಸರದಾರರೇ! ಮಾಂಡಲಿಕರೇ! ಮಹಾಜನಗಳೇ! ಇಂದಿನಿಂದ ರಂಗರಾಯರೇ ಚಂದ್ರಗಿರಿಯ ರಾಜ್ಯದ ಪ್ರಭು! ನಾವೆಲ್ಲರೂ ಸ್ವಾಮಿ ಭಕ್ತಿಯಿಂದ ಅವರ ಸೇವೆ ಸಲ್ಲಿಸಿ ಕನ್ನಡ ನಾಡಿನ ಕೀರ್ತಿಯನ್ನು ಹೆಚ್ಚಿಸಬೇಕು. ನಾವು ಸ್ವಾಮಿದ್ರೋಹಿಗಳಾಗಬಾರದು. ಅಂಥಾ ಸ್ವಾಮಿದ್ರೋಹಿಗಳಿದ್ದರೆ ಅವರನ್ನು ದಂಡಿಸಿ ಕ್ರೂರ ಶಿಕ್ಷೆಗೆ ಗುರಿಪಡಿಸಬೇಕು!" ಎಂದು ಹೇಳಿ ಚಿಕ್ಕ ಮಹಾರಾಜರಿಗೆ ನಮಸ್ಕರಿಸಿ, ಅವರ ಕೈ ಹಿಡಿದುಕೊಂಡು ಬಂದು ಸಿಂಹಾಸನದಮೇಲೆ ಕುಳ್ಳಿರಿಸಿದನು. ಎಲ್ಲರೂ ನಿಂತ ಕಡೆಯಿಂದಲೆ ತಲೆಬಾಗಿ ನಮಸ್ಕರಿಸಿದರು. ಅಲ್ಲಿಗೆ ಅಂದಿನ ದರ್ಬಾರು ಮುಗಿಯಿತು. ಮಹಾರಾಜರು ಮೂರು ದಿನಗಳಲ್ಲಿ ಕಾಲವಾದರು.

ಎಚ್ಚಮನಾಯಕನು ಸ್ವಾಮಿಭಕ್ತನಾಗಿದ್ದುಕೊಂಡು ರಾಜಕಾರ್ಯಗಳಲ್ಲಿ ರಂಗರಾಯನಿಗೆ ಸಹಾಯಕನಾಗಿದ್ದನು. ರಾಜ್ಯಾಡಳಿತಗಳು ಸುಗಮವಾಗಿಯೇ ನಡೆಯುತ್ತಿದ್ದುವು. ಆದರೂ ಜಗರಾಯನು ಮಾತ್ರ ಒಳಗೊಳಗೆ ಕುದಿಯುತ್ತಿದ್ದನು. ಆ ದಿನ ರಾಜಸಭೆಯಲ್ಲಿ ತನಗಾದ ಅವಮಾನವನ್ನು ಮರೆಯಲಾರದೆ ರಂಗರಾಯನ ಮೇಲೆ ಕತ್ತಿ ಮಸೆಯುತ್ತಲೇ ಇದ್ದನು. ಇವನ ಪಿತೂರಿಯೂ ಎಚ್ಚಮನಾಯಕನಿಗೆ ತಿಳಿಯದೆ ಇರಲಿಲ್ಲ. ಅವನು ಅನೇಕ ಗೂಢಚಾರರನ್ನು ನೇಮಿಸಿ ಜಗರಾಯನ ಚಲನವಲನಗಳನ್ನು ಅರಿಯುತ್ತಿದ್ದನು. ಆದರೂ ಮಹಾ ವಂಚಕನಾದ ಜಗರಾಯನು ರಾಜನ ಮಂತ್ರಿಯನ್ನೂ, ಸೇನಾಪತಿಯನ್ನೂ ತನ್ನ ಕಡೆಗೆ ಮಾಡಿಕೊಂಡಿದ್ದನು. ಸೈನಿಕರಿಗೆ ಲಂಚ ಕೊಟ್ಟು ಸಮಯ ಬಂದಾಗ ರಾಜನ ಮೇಲೆಯೇ ತಿರುಗಿ ಬೀಳುವಂತೆ ಕಟ್ಟು ಮಾಡಿದ್ದನು. ಚಿಕ್ಕರಾಯನೇ ಚಂದ್ರಗಿರಿಯ ರಾಜ್ಯಕ್ಕೆ ಹಕ್ಕುದಾರನೆಂದೂ, ರಂಗರಾಯನು ದೊರೆಯಾಗಿರುವುದು ಸಮ್ಮತವಿಲ್ಲವೆಂದೂ ಹೇಳಿ ಸರದಾರರುಗಳಲ್ಲಿ ಅನೇಕರನ್ನು ಪಿತೂರಿಗೆ ಸೇರಿಸಿಕೊಂಡಿದ್ದನು. ಇದರಿಂದ ರಾಜಧಾನಿಯಲ್ಲಿ

ಎರಡು ಪಕ್ಷಗಳಿಗೂ ದ್ವೇಷಭಾವವೇ ಬೆಳೆಯುತ್ತಿತ್ತು. ಯಾವ ಸಮಯದಲ್ಲಿ ಏನಾಗುವುದೋ ಎಂದು ರಂಗರಾಯನು ಚಿಂತಿಸುತ್ತಿದ್ದನು.

ಎಚ್ಚಮನಾಯಕನು ರಾಜ್ಯದ ಗಡಿ ದುರ್ಗಗಳನ್ನು ಭದ್ರಪಡಿಸುತ್ತ, ಸೈನ್ಯವನ್ನು ಹೆಚ್ಚಿಸುತ್ತ, ಜಗರಾಯನಿಗೆ ಕಂಟಕ ಪ್ರಾಯನಾಗಿದ್ದನು. ಎಚ್ಚಮನಾಯಕ ನೊಬ್ಬನಿಲ್ಲದಿದ್ದರೆ ರಂಗರಾಯನನ್ನು ಸಿಂಹಾಸನದಿಂದ ತಳ್ಳಿ ಬಿಡಬಹುದೆಂದು ಜಗರಾಯನು ಬಗೆದಿದ್ದನು.

ಒಂದು ದಿನ ನಾಯಕನು ರಾಜಕಾರ್ಯದ ಮೇಲೆ ಪ್ರತಾಪದುರ್ಗಕ್ಕೆ ಹೋಗಿದ್ದನು. ಜಗರಾಯನಿಗೆ ಈ ಸಂಗತಿಯು ಗೊತ್ತಾಯಿತು. ಅದೇ ಸಮಯವೆಂದು ಯೋಚಿಸಿ, ತನ್ನ ಕಡೆಯವರನ್ನೆಲ್ಲ ಎತ್ತಿಕಟ್ಟಿ ಆರಮನೆಗೆ ಮುತ್ತಿಗೆ ಹಾಕಬೇಕೆಂದು ಹವಣಿಸಿದನು. ಮೊದಲೇ ಸಿದ್ಧವಾಗಿದ್ದಂತೆ ಆ ದ್ರೋಹಿಯು ಸೈನ್ಯವನ್ನು ಅಲ್ಲಲ್ಲಿ ನಿಲ್ಲಿಸಿ, ಮಧ್ಯಾಹ್ನ ಸಮಯದಲ್ಲಿ ತಾನು ಆರಿಸಿದ ಕಾಟ್ಪಾಳುಗಳ ಸೈನ್ಯದೊಂದಿಗೆ ಅರಮನೆಯ ಕಡೆಗೆ ನುಗ್ಗಿ ಬಂದನು. ಎಚ್ಚಮನಾಯಕನಿಗೆ ಈ ಸಮಾಚಾರವೇನಾದರೂ ತಿಳಿದು; ಅವನು ದಂಡೆತ್ತಿ ಬಂದಾನೆಂಬ ಭಯದಿಂದ, ಒಂದು ದೊಡ್ಡ ಸೈನ್ಯವನ್ನು ಪ್ರತಾಪದುರ್ಗದ ದಾರಿಯಲ್ಲಿಟ್ಟಿದ್ದನು. ರಂಗರಾಯನಿಗೆ ಇದೊಂದೂ ತಿಳಿಯದು. ಅವನ ಕಡೆಯ ಸರದಾರರೂ, ಸೈನಿಕರೂ ಮೋಸಹೋದರು. ಜಗರಾಯನ ಸೇನೆಯು ಅರಮನೆಯನ್ನು ಮುತ್ತಿತು. ದೊರೆಯು ಗಾಬರಿಯಾದನು. ಏನು ಮಾಡುವುದಕ್ಕೂ ಅವನಿಗೆ ದಿಕ್ಕೇ ತೋರಲಿಲ್ಲ. ಭಯದಿಂದ ಅಳುತ್ತಿದ್ದ ತನ್ನ ಹೆಂಡತಿ ಮಕ್ಕಳನ್ನು ಸಮಾಧಾನಪಡಿಸುತ್ತ, ದೈವೇಚ್ಛೆಯನ್ನು ಮೀರಲಾಗದೆಂದು ಅವರಿಗೆ ಧೈರ್ಯ ಹೇಳುತ್ತಿದ್ದನು.

ಇನ್ನೇನು! ಜಗರಾಯನ ದಂಡಾಳುಗಳು ಅರಮನೆಯನ್ನು ಮುತ್ತಿ ಹಾಕಿದರು. ರಾಜನ ಕಡೆಯ ಅಲ್ಪ ಸ್ವಲ್ಪ ಸೈನ್ಯವೂ ನಾಶವಾಯಿತು. ಈ ಸುದ್ದಿಯು ಪ್ರತಾಪದುರ್ಗದಲ್ಲಿದ್ದ ನಾಯಕನಿಗೆ ತಿಳಿದು, ಅವನು ಕೂಡಲೇ ತನ್ನ ಸೈನ್ಯದೊಂದಿಗೆ ಚಂದ್ರಗಿರಿಯ ಸಮೀಪಕ್ಕೆ ಬಂದು ನಿಂತನು ಇತ್ತ ಜಗರಾಯನು ರಂಗರಾಯನನ್ನೂ ಅವನ ಸಂಸಾರದವರನ್ನೂ ಕೈಸೆರೆ ಹಿಡಿದು ನಿರ್ಬಂಧದಲ್ಲಿರಿಸಿದನು. ಎಚ್ಚಮನಾಯಕನು ರಾಜಧಾನಿಯ ಬಳಿಗೆ ಬಂದಿರುವನೆಂಬ ಸಂಗತಿಯನ್ನು ಕೇಳಿ ಜಗರಾಯನು ಅವನನ್ನು ತನ್ನ ಕಡೆಗೆ ಒಲಿಸಿಕೊಳ್ಳಬೇಕೆಂದು ಯೋಚಿಸಿ, ಅವನಿಗೆ ಒಂದು ಪತ್ರವನ್ನು ಬರೆದು ಕಳಿಸಿದನು. "ರಂಗರಾಯನನ್ನೂ, ಅವನ ಕುಟುಂಬದವರನ್ನೂ ಸೆರೆ ಹಿಡಿದಿರುವೆನು, ಎಲ್ಲ ಸರದಾರರೂ ಈಗ ನನ್ನ ಕಡೆಗೆ ನಿಂತಿರುತ್ತಾರೆ.

ನೀನೂಸಹ ಚಿಕ್ಕರಾಯನ ಪಕ್ಷವನ್ನು ವಹಿಸಿ, ಶರಣಾಗತನಾಗಿ ಬಂದರೆ ಸಮ; ಇಲ್ಲವಾದರೆ ನಿನ್ನನ್ನು ರಾಜದ್ರೋಹಿಯೆಂದು ಪರಿಗಣಿಸಿ ಶಿಕ್ಷಿಸಬೇಕಾಗುತ್ತದೆ. ನೀನು ಸುಖವಾಗಿರಬೇಕೆಂಬ ಇಚ್ಛೆಯಿದ್ದರೆ ಮರುಮಾತನಾಡದೆ ನಮ್ಮ ಕಡೆಗೆ ಬರಬೇಕು" ಎಂಬ ಅರ್ಥ ಬರುವಂತೆ ಬರೆದಿದ್ದ ಕಾಗದವನ್ನು ಓದಿಕೊಂಡು ನಾಯಕನು ಕೋಪದಿಂದ ಕಿಡಿಕಿಡಿಯಾದನು. ಅವನ ಕಣ್ಣುಗಳು ಕೆಂಪೇರಿದುವು. ರಾಜದ್ರೋಹಿಯಾದ ಜಗರಾಯನನ್ನು ತುಂಡರಿಸಿ ಹಾಕಿ, ರಂಗರಾಯನನ್ನು ಪುನಃ ಸಿಂಹಾಸನದ ಮೇಲೆ ಕುಳ್ಳಿರಿಸುವೆನೆಂದು ಶಪಥಮಾಡಿದನು. ಆ ಕಾಗದವನ್ನು ಹರಿದು ಕಾಲಿನಿಂದ ಉಜ್ಜಿ ಹಾಕಿ "ಎಚ್ಚಮನಾಯಕನೇನು ಹೇಡಿಯಲ್ಲ! ರಣಗಳ್ಳನಲ್ಲ! ಸ್ವಾಮಿದ್ರೋಹಿಯಲ್ಲ! ಚಿಕ್ಕರಾಯನು ವೆಂಕಟಪತಿ ರಾಯರ ಮಗನಲ್ಲವೆಂಬುದನ್ನು ಅಂದು ತುಂಬಿದ ಸಭೆಯಲ್ಲಿ ಮಹಾರಾಜರೇ ತಿಳಿಸಿದ್ದಾರೆ. ಅಂಥ ಅನಾಮಧೇಯನನ್ನು ನಾನು ಚಂದ್ರಗಿರಿಯ ಪ್ರಭುವೆಂದು ಒಪ್ಪಲಾರೆನು, ರಂಗರಾಯನೇ ನಿಜವಾದ ದೊರೆ, ಅವನೇ ವಿಜಯನಗರ ವಂಶದ ಸಂತಾನವಲ್ಲದೆ, ಅನ್ಯ ಸಂಭವನಾದ ಚಿಕ್ಕರಾಯನಲ್ಲ. ಅವನನ್ನು ನೀನು ಬೇಕಾದರೆ ದೊರೆಯೆಂದು ಪೂಜೆಮಾಡು. ನನ್ನ ಆಕ್ಷೇಪಣೆಯೇನೂ ಇಲ್ಲ. ಆದರೆ ಶೂರನಾದ ನಾನು, ಹೇಡಿಯಾದ ನಿನ್ನ ಮೊಮ್ಮಗನ ಸೇವೆ ಮಾಡುವಂಥ ಷಂಡನಲ್ಲ ಜಗರಾಯಾ! ನಿನ್ನ ಮೃತ್ಯುವನ್ನು ನೀನೇ ಹತ್ತಿರಕ್ಕೆ ಕರೆಯುತ್ತಿರುವೆ! ಎಚ್ಚಮನಾಯಕನು ಬದುಕಿರುವವರೆಗೂ ನಿನ್ನ ಬಡ ಕುನ್ನಿ ಚಿಕ್ಕರಾಯನು ರಾಜನಾಗಲಾರನೆಂಬುದನ್ನು ಬರೆದಿಟ್ಟುಕೊಂಡಿರು. ರಂಗರಾಯನ ಸಂತತಿಯವರು ಚಂದ್ರಗಿರಿಯ ರಾಜರಾಗುವವರೆಗೂ ನಾನು ರಾಜಧಾನಿಗೆ ಪ್ರವೇಶಿಸುವುದಿಲ್ಲ" ಎಂಬುದಾಗಿ ಪ್ರತ್ಯುತ್ತರವನ್ನು ಬರೆದುದೂತನ ಕೈಲಿ ಕೊಟ್ಟು ಕಳುಹಿಸಿದನು.

ನಾಯಕನು ಬರೆದು ಕಳುಹಿಸಿದ ಕಾಗದವನ್ನು ಓದಿಕೊಂಡು ಜಗರಾಯನು ಸ್ಥಬ್ಧನಾದನು. ಅವನನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳಲು ಸಾಧ್ಯವಲ್ಲದಿದ್ದರೂ, ಉಪಾಯಾಂತರದಿಂದಲಾದರೂ ತನ್ನ ಕಡೆಗೆ ಸೇರಿಸಿಕೊಳ್ಳಬೇಕೆಂದು ನಿಶ್ಚಯಿಸಿದನು. ಸ್ವಾಮಿಭಕ್ತನಾದ ನಾಯಕನು ಅವನ ಮಾತಿಗೆ ಒಪ್ಪುತ್ತಾನೆಯೇ! ಇದರಿಂದ ಜಗರಾಯನ ಮನಸ್ಸಿಗೆ ನೆಮ್ಮದಿಯಿಲ್ಲದಂತಾಯಿತು. ನಾಯಕನಿಂದ ಯಾವಾಗ ಅಪಾಯ ಸಂಭವಿಸುವುದೋ ಎಂದು ಅವನು ಹೆದರುತ್ತಲೇ ಇದ್ದನು.

ಹೀಗಿರುವಲ್ಲಿ, ನಾಯಕನು ರಾಜನನ್ನು ಸೆರೆಯಿಂದ ಬಿಡಿಸಬೇಕಾದರೆ, ಮುಸಲ್ಮಾನರ ಸಹಾಯವನ್ನು ಕೇಳಬೇಕೆಂದು ಯೋಚಿಸಿದನು. ಆದರೆ ತಾನಾಗಿ

ಅವರನ್ನು ಆಹ್ವಾನಿಸಿದಂತಾಗುವುದೆಂದೂ, ಅದರಿಂದ ಮುಂದೆ ಅನರ್ಥಗಳು ಉಂಟಾಗಬಹುದು ಎಂದೂ, ತಿಳಿದು ಆ ಹಂಚಿಕೆಯು ಸರಿಯಲ್ಲವೆಂದು ಭಾವಿಸಿದನು. ಜಗರಾಯನ ಮೇಲೆ ದಂಡೆತ್ತಿ ಹೋಗಬೇಕಾದರೆ ಅವನಲ್ಲಿ ಸಾಕಾದಷ್ಟು ಸೈನ್ಯವಿರಲಿಲ್ಲ. ಇದನ್ನೆಲ್ಲಾ ಆಲೋಚಿಸಿ, ಏನಾದರೊಂದು ಉಪಾಯದಿಂದ ಮಾತ್ರವೇ ರಂಗರಾಯನನ್ನು ಸೆರೆಯಿಂದ ಬಿಡಿಸಬೇಕೆಂದು ನಿರ್ಧರಿಸಿದನು. ಈ ಯೋಚನೆಯನ್ನು ಅವನು ತನ್ನ ಹೆಂಡತಿಯಾದ ಪ್ರತಾಪಕುಮಾರಿಗೆ ತಿಳಿಸಿ, ಅವರ ಅಭಿಮತವನ್ನು ಕೇಳಿದರು. ಪತಿಯು ಕೈಗೊಂಡಿರುವ ಸ್ವಾಮಿಕಾರ್ಯದಲ್ಲಿ ತಾನು ನೆರವಾಗಿ ಸಮಯ ಬಂದರೆ ಪ್ರಾಣವನ್ನು ಬೇಕಾದರೂ ಕೊಡಲು ಸಿದ್ಧಳಾಗಿರುವೆನೆಂದು ಅವಳು ಹೇಳಿದಳು. ಅದನ್ನು ಕೇಳಿ ನಾಯಕನು ಉಬ್ಬಿಹೋದನು. ಆ ಇಬ್ಬರೂ ವೇಷಾಂತರದಿಂದ ಚಂದ್ರಗಿರಿಯಲ್ಲಿ ವಾಸಮಾಡುತ್ತ, ರಹಸ್ಯಗಳನ್ನು ಅರಿತುಕೊಂಡು, ಕಾಲವರಿತು ಕಾರ್ಯಸಾಧನೆ ಮಾಡಬೇಕೆಂದು ನಿರ್ಧರಿಸಿದರು. ಅದರಂತೆಯೇ ಅವರು ಚಂದ್ರಗಿರಿಯಲ್ಲಿ ಅರಮನೆಯ ಮಡಿವಾಳನ ಆಶ್ರಯದಲ್ಲಿ ನಿಂತರು. ನಾಯಕನು ಎಲ್ಲಿಯೋ ದೇಶಭ್ರಷ್ಟನಾಗಿ ಹೊರಟು ಹೋದನೆಂಬ ಸುಳ್ಳು ಸುದ್ದಿಯು ಎಲ್ಲೆಲ್ಲಿಯೂ ಹಬ್ಬಿತು, ಜಗರಾಯನಿಗೂ ಈ ಸಮಾಚಾರ ಗೊತ್ತಾಯಿತು. ಇದರಿಂದ ಅವನು ಸ್ವಲ್ಪ ಮಟ್ಟಿಗೆ ಸಂತೋಷ ಪಟ್ಟನಾದರೂ, ನಾಯಕನ ಭಯವಂತೂ ಅವನಿಗೆ ಇದ್ದೇ ಇದ್ದಿತು.

ನಾಯಕನೂ, ಅವನ ಪತ್ನಿಯೂ ಸಾಮಾನ್ಯರಂತೆ ಕೆಲಸಮಾಡುತ್ತ ಅಗಸನಿಗೆ ಸ್ವಲ್ಪವೂ ಸಂದೇಹ ಬರದಂತೆ ವರ್ತಿಸುತ್ತಿದ್ದರು. ಈ ಹೊಸಬರು ಬಂದು ಸೇರಿದುದರಿಂದ ಅಗಸನಿಗೂ ಕೆಲಸ ಹಗುರವಾಯಿತು. ಅವರಿಬ್ಬರೂ ಸ್ವಲ್ಪವೂ ಕಾಲ ಕಳೆಯದೆ, ಮೈಲಿಗೆ ಬಟ್ಟೆಗಳನ್ನು ತರುವುದು, ಉಬ್ಬೆ ಕಾಯಿಸುವುದು, ಬಟ್ಟೆಗಳಿಗೆ ಗುರುತು ಹಾಕುವುದು, ಚೌಳು ಮಣ್ಣನ್ನು ಶೇಖರಿಸಿ ಕೊಳ್ಳುವುದು, ಇವೇ ಮೊದಲಾದ ಕೆಲಸಗಳನ್ನು ಬಹಳ ನಾಜೂಕಾಗಿ ಮಾಡಿಕೊಳ್ಳುತ್ತಿದ್ದರು. ಸೆರೆಮನೆಯಲ್ಲಿದ್ದ ರಾಯನ ಕುಟುಂಬದವರ ಬಟ್ಟೆಗಳನ್ನು ತರುವುದಕ್ಕೆ ಈ ಹೊಸ ಅಗಸರೇ ಹೋಗಿ ಬರುವಂತಾಯಿತು. ಅವರು ಯಾರಿಗೂ ಅನುಮಾನ ಬರದಂತೆ, ಕಾರಾಗೃಹದಿಂದ ಮೈಲಿಗೆ ಬಟ್ಟೆಗಳನ್ನು ತರುತ್ತ, ಮಡಿಬಟ್ಟೆಗಳನ್ನು ಕೊಟ್ಟು ಬರುತ್ತ ಒಂದೆರಡು ತಿಂಗಳು ಕಾಲವನ್ನು ಕಳೆದರು. ಸೆರೆಮನೆಯ ಕಾವಲುಗಾರರು ಪ್ರತಾಪಕುಮಾರಿಯ ಸೌಂದರ್ಯವನ್ನು ನೋಡಿ ಬೆರಗಾಗುತ್ತಿದ್ದರು. ಅವಳು ತನ್ನ ಪತಿಯೊಂದಿಗೆ ಸೆರೆಮನೆಗೆ ಬಂದಾಗಲೆಲ್ಲ, ಅವಳ ರೂಪುರಾಶಿಯನ್ನು ನೋಡಿ ನೋಡಿ ತಣಿಯುತ್ತಿದ್ದರು. ಯಾವುದಾದರೊಂದು ನೆಪದಿಂದ ಅವಳನ್ನು ಮಾತನಾಡಿಸಿ ಸಂತೋಷ ಪಡುತ್ತಿದ್ದರು. ಸೆರೆಮನೆಯ

ಅಧಿಕಾರಿಯಂತೂ ಅವಳ ಮೇಲೆ ಕಣ್ಣಿಟ್ಟಿದ್ದನು. ಅವಳು ಒಂದೊಂದು ದಿನ ಒಬ್ಬೊಬ್ಬಳೇ ಬಂದು ಹೋಗುತ್ತಿದ್ದಳು, ಯಾರೂ ಅವಳನ್ನು ತಡೆಯುತ್ತಿರಲಿಲ್ಲ. ಸಲಿಗೆ ಯಿಂದ ಕೆಲವುಕಾಲ ಕಳೆಯಿತು. ಒಂದುದಿನ ನಾಯಕನೂ, ಪ್ರತಾಪಕುಮಾರಿಯೂ ರಂಗರಾಯನ ಕುಟುಂಬದವರಿದ್ದ ಕೋಣೆಯಲ್ಲಿ ಮೈಲಿಗೆ ಬಟ್ಟೆಗಳನ್ನು ಎಣಿಸುತ್ತ ಕುಳಿತಿದ್ದರು. ಆಗ ಅಲ್ಲಿ ಕಾವಲುಗಾರರು ಯಾರೂ ಇರಲಿಲ್ಲ. ನಾಯಕನು ರಂಗರಾಯನಿಗೆ ತನ್ನ ನಿಜವೃತ್ತಾಂತವನ್ನು ತಿಳಿಸಿ, ಜಾಗರೂಕತೆಯಿಂದ ವರ್ತಿಸುತ್ತ ಕಾಲ ಕಳೆಯುತ್ತಿರಬೇಕೆಂದು ಹೇಳಿ, ರಂಗರಾಯನ ಕಿರಿಯ ಮಗ ಚಿನ್ನವೆಂಕಟನನ್ನು ತನ್ನ ಜೊತೆಯಲ್ಲಿ ಕಳುಹಿಸಿ ಕೊಡಬೇಕೆಂದು ಕೇಳಿಕೊಂಡನು. ಇದನ್ನು ಸಮಯವರಿತು ಸಾಧಿಸುವುದಾಗಿ ಹೇಳಿ, ಆ ದಿನ ಮೈಲಿಗೆ ಬಟ್ಟೆಗಳನ್ನು ತೆಗೆದುಕೊಂಡು ಬಂದುಬಿಟ್ಟರು.

ಒಂದು ವಾರವಾಯಿತು. ಮಡಿವಾಳಗಿತ್ತಿ ಪ್ರತಾಪ ಕುಮಾರಿಯು ಚಲುವೆಮಾಡಿದ ಬಟ್ಟೆಗಳನ್ನು ತೆಗೆದುಕೊಂಡು ಎಂದಿನಂತೆ ಒಬ್ಬಳೇ ಬಂದಳು. ಮೊದಲೇ ಸಂಕೇತ ಮಾಡಿಕೊಂಡಿದ್ದಂತೆ, ಆ ದಿನ ಅವಳು ಚಿನ್ನವೆಂಕಟರಾಯನನ್ನು ಸಾಗಿಸಿಕೊಂಡು ಹೋಗಬೇಕಾಗಿತ್ತು. ಅವಳು ಮೈಲಿಗೆ ಬಟ್ಟೆಗಳನ್ನು ಮೂಟೆಕಟ್ಟಿ, ಅದರಲ್ಲಿ ಹತ್ತುವರ್ಷದ ಕುಮಾರನನ್ನು ಮಲಗಿಸಿಕೊಂಡು, ಬಟ್ಟೆಯ ಹೇರನ್ನು ಹೊತ್ತುಕೊಂಡು ವನಪು ವೈಯ್ಯಾರಗಳಿಂದ ನಡೆದುಬಂದಳು. ಕಾವಲುಗಾರರು ಅವಳನ್ನು ನೋಡುತ್ತ ಏನಾದರೊಂದು ನೆಪದಿಂದ ಅಣಕಮಾತಾಡುತ್ತ ನಿಂತಿದ್ದರು. ಅವಳೂ ಅವರ ಕಡೆಗೆ ಓರೆಗಣ್ಣಿನಿಂದ ನೋಡಿ, ಹುಸಿನಗು ಸೂಸುತ್ತ ಸಾಗಿ ಬಂದಳು. ರಾಜಕುಮಾರನನ್ನು ನಿರಾಯಾಸವಾಗಿ ಕರೆದುಕೊಂಡು ಬಂದಳು. ನಾಯಕನ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಅನುಮಾನಕ್ಕೆ ಆಸ್ಪದವಿಲ್ಲದಂತೆ ಅವಳು ಯಥಾರೀತಿಯಾಗಿ ಸೆರೆಮನೆಗೆ ಹೋಗಿಬರುತ್ತಿದ್ದಳು.

ಎಚ್ಚಮನಾಯಕನು ರಾಜಪುತ್ರನನ್ನು ಸುರಕ್ಷಿತವಾದ ಸ್ಥಳಕ್ಕೆ ಕರೆದು ಕೊಂಡು ಹೋಗಬೇಕೆಂದು ಯೋಚಿಸಿ, ತನ್ನ ಕಡೆಯ ಜನರೊಂದಿಗೆ ಒಂದು ದಿನರಾತ್ರಿ ಚಂದ್ರಗಿರಿಯನ್ನು ಬಿಟ್ಟು ಹೊರಟನು. ಅವರು ಕುಳಿತಿದ್ದ ಕುದುರೆಗಳು ನಾಗಾಲೋಟದಿಂದ ಓಡುತ್ತಿದ್ದುವು. ಬೆಳಗಾಗುವುದರೊಳಗಾಗಿ ಅವರು ಬಹುದೂರ ಬಂದುಬಿಟ್ಟಿದ್ದರು. ನಾಯಕನು ಚಿನ್ನ ವೆಂಕಟ ರಾಯನನ್ನು ಪ್ರತಾಪದುರ್ಗದಲ್ಲಿರಿಸಿ, ಅವನ ರಕ್ಷಣೆಗಾಗಿ ಪಟುಭಟರ ಸೇನೆ ಯೊಂದನ್ನು ನೇಮಿಸಿದನು. ಪ್ರತಾಪಕುಮಾರಿಯು ಕುಮಾರನನ್ನು ತಾಯಿಯಂತೆ ಪೋಷಿಸುತ್ತಿದ್ದಳು,

ರಾಜಕುಮಾರನನ್ನು ಸೆರೆಮನೆಯಿಂದ ಅಪಹರಿಸಿಕೊಂಡು ಹೋದ ಸಂಗತಿಯು ಆಗ ಜಗರಾಯನಿಗೆ ತಿಳಿಯಿತು. ಅವನು ನಾಯಕನ ಸಾಹಸಕ್ಕೆ

ತಲೆದೂಗಿ, ಮುಂದೆ ತನ್ನ ಮೊಮ್ಮಗನಿಗೆ ಒದಗಬಹುದಾದ ವಿಪತ್ತಿಗೆ ವ್ಯಥೆಪಟ್ಟನು. ಈ ವರ್ತಮಾನವು ಎಲ್ಲೆಲ್ಲಿಯೂ ಹಬ್ಬಿತು. ಇದುವರೆಗೂ ಸುಮ್ಮನಿದ್ದ ಅನೇಕ ಸರದಾರರೂ, ಮಾಂಡಲಿಕರೂ ನಾಯಕನ ಕಡೆಗೆ ಒಬ್ಬೊಬ್ಬರಾಗಿ ಸೇರುತ್ತಾ ಬಂದರು. ಇದರಿಂದ ಜಗರಾಯನ ಜಂಘಾ ಬಲವೇ ಬಿದ್ದು ಹೋದಂತಾಯಿತು. ಅಲ್ಲಿಂದ ಮುಂದೆ ಸೆರೆಮನೆಯ ಹತ್ತಿರ ಸರ್ಪಕಾವಲು ಹಾಕಿದನು. ಯಾರೊಬ್ಬರೂ ಅಪ್ಪಣೆಯಿಲ್ಲದೆ ಒಳಕ್ಕೆ ಹೋಗುವಂತಿರಲಿಲ್ಲ.

ಅತ್ತ ಎಚ್ಚಮನಾಯಕನು ಚಿನ್ನವೆಂಕಟರಾಯನಿಗೆ ಪ್ರತಾಪದುರ್ಗದಲ್ಲಿ ಪಟ್ಟಗಟ್ಟಿ, ಅವನನ್ನು ಚಂದ್ರಗಿರಿಯ ರಾಜನೆಂಬುದಾಗಿ ಉದ್ಘೋಷಿಸಿದನು. ದಿನದಿನಕ್ಕೆ ಅವನ ಪಕ್ಷದವರು ಪ್ರಬಲರಾಗುತ್ತ ಬಂದರು. ಜಗರಾಯನ ಕಡೆಯ ಬಲವೆಲ್ಲ ಕರಗುತ್ತ ಬಂತು. ನಾಯಕನು ಸೆರೆಮನೆಯಲ್ಲಿದ್ದ ರಂಗರಾಯನನ್ನೂ, ಅವನ ಕುಟುಂಬದವರನ್ನೂ, ಸೆರೆಯಿಂದ ತಪ್ಪಿಸುವ ಯೋಜನೆಯನ್ನು ಚಿಂತಿಸುತ್ತಿದ್ದನು. ನಾಯಕನನ್ನೂ, ಅವನ ಪತ್ನಿಯನ್ನೂ ಸೆರೆ ಹಿಡಿಸುವ ಹಂಚಿಕೆಯನ್ನು ಜಗರಾಯನು ಯೋಚಿಸುತ್ತಿದ್ದನು.

ನಾಯಕನ ಅಪ್ಪಣೆಯಂತೆ ಕೆಲವು ಮಂದಿ ಕಟ್ಟಾಳುಗಳು, ರಾತ್ರಿಯ ವೇಳೆಯಲ್ಲಿ ಕೆಲಸ ಮಾಡುತ್ತ, ಚಂದ್ರಗಿರಿಯ ಸೆರೆಮನೆಗೆ ಒಂದು ಹರಿದಾರಿ ದೂರವಿದ್ದ ಅರಣ್ಯ ಪ್ರದೇಶದಿಂದ ಒಂದು ಸುರಂಗ ಮಾರ್ಗವನ್ನು ತೋಡುತಿದ್ದರು. ಆ ಮಾರ್ಗವನ್ನು ರಂಗರಾಯನು ಸೆರೆಯಿದ್ದ ಕೋಣೆಯ ಒಳಕ್ಕೆ ಬರುವಂತೆ ತೋಡಿದರು. ಒಂದೆರಡು ತಿಂಗಳಲ್ಲಿಯೇ ಆ ದಾ–ರಿಯನ್ನು ಮಾಡಿ ಮುಗಿಸಿದರು. ನಾಯಕನು ಆಪ್ತರೂ, ಶೂರರೂ ಆದ ಕೆಲವು ಮಂದಿಯನ್ನು ಆ ಕಳ್ಳ ದಾರಿಯ ಮೂಲಕ ಕಳುಹಿಸಿ, ರಾತ್ರಿಯ ವೇಳೆಯಲ್ಲಿ ರಂಗರಾಯನನ್ನೂ ಅವನ ಕುಟುಂಬದವರನ್ನೂ ಬಿಡಿಸಿಕೊಂಡು ಬರುವಂತೆ ಏರ್ಪಾಟುಮಾಡಿದನು. ಆದರೇನು! 'ತಾನೊಂದು ಬಗೆದರೆ ದೈವವೊಂದನ್ನು ಬಗೆಯಿತು' ಎಂಬಂತೆ, ಇದರ ಸುಳುವು ಜಗರಾಯನಿಗೆ ಹೇಗೋ ಗೊತ್ತಾಯಿತು. ಅವನು ಕೂಡಲೇ ಸುರಂಗಮಾರ್ಗವನ್ನು ಹಾಳುಗೆಡವಿಸಿ ರಂಗರಾಯನನ್ನೂ, ಅವನ ಕುಟುಂಬದವರನ್ನೂ ಸುಭದ್ರವಾದ ಬೇರೊಂದು ಕೊಠಡಿಯಲ್ಲಿಟ್ಟನು. ಇದ–ರಿಂದ ನಾಯಕನ ಕಾರ್ಯ ವಿಫಲವಾಯಿತು! ರಂಗರಾಯನ ಮೇಲೆ ಜಗರಾಯನ ಕೋಪವು ಮಿತಿಮೀರಿತು. ಸೆರೆಮನೆಯಲ್ಲಿ ರಾಯನಿಗೆ ಅಂದಿನಿಂದ ಚಿತ್ರಹಿಂಸೆ, ನಿರ್ಬಂಧ ಜೀವನ! ಅವನು ದುಃಖದಿಂದ ಬಳಲಿ ಬೆಂಡಾಗುತ್ತ ಬಂದನು. ರಾಜಪತ್ನಿಗೂ ಮಕ್ಕಳಿಗೂ ಹೊಟ್ಟೆ ತುಂಬ ಅನ್ನವಿಲ್ಲ. ಮೈತುಂಬ ಬಟ್ಟೆಯಿಲ್ಲ.

ರಾಯನು ಸಂಕಟದಿಂದ ಹೆಂಡತಿ ಮಕ್ಕಳನ್ನು ನೋಡಿ ಕಣ್ಣೀರಿಡುತ್ತಿದ್ದನು.

ಎಚ್ಚಮನಾಯಕನು ಎದೆಗೆಡಲಿಲ್ಲ. ಕಳೆಗುಂದಲಿಲ್ಲ. ಏನಾದರೂ ಸರಿಯೆ, ರಂಗರಾಯನನ್ನು ನಿರ್ಬಂಧದಿಂದ ತಪ್ಪಿಸಿ, ಚಿಕ್ಕವೆಂಕಟರಾಯನಿಗೆ ಪಟ್ಟಾಭಿಷೇಕ ಮಾಡಬೇಕೆಂದು ಅವನು ಹಠತೊಟ್ಟನು. ಇದಕ್ಕಾಗಿ ಅವನು ಬೇಕಾದ ಸಿದ್ಧತೆಗಳನ್ನು ಜಾಗರೂಕತೆಯಿಂದ ಏರ್ಪಡಿಸಿಕೊಳ್ಳುತ್ತಿದ್ದನು. ಚಂದ್ರಗಿರಿಯನ್ನು ಮುತ್ತಿ, ಜಗರಾಯನನ್ನು ಯುದ್ಧದಲ್ಲಿ ಜಯಿಸಿ, ಚಿಕ್ಕರಾಯನನ್ನು ಪದಚ್ಯುತನನ್ನಾಗಿ ಮಾಡಬೇಕೆಂದು ನಿಶ್ಚಯಿಸಿದನು. ಈ ಪ್ರಯತ್ನದಲ್ಲಿ ಪ್ರತಾಪಕುಮಾರಿಯೂ ಗಂಡಸಿನಂತೆ ಉಡುಪನ್ನು ಧರಿಸಿ, ಅಶ್ವಸೈನ್ಯ ದಳದ ಸೇನೆಯನ್ನು ನಡೆಸುವುದಾಗಿ ಒಪ್ಪಿಕೊಂಡಳು. ನಾಯಕನು ತನ್ನ ಪತ್ನಿಯ ಸಾಹಸವನ್ನು ಚೆನ್ನಾಗಿ ಅರಿತಿದ್ದುದರಿಂದ ಅವನೂ ಅದಕ್ಕೆ ಸಮ್ಮತಿಸಿದನು. ಈ ಸುದ್ದಿಯನ್ನು ಗೂಢಾಚಾರರ ಮೂಲಕ ತಿಳಿದ ಜಗರಾಯನ ಕೋಪ ಮಿತಿಮೀರಿತು. "ರಂಗರಾಯನು ಜೀವಂತನಾಗಿದ್ದರೆ ನಾಯಕನು ಅವನಿಗಾಗಿ ಯುದ್ಧ ಹೂಡುತ್ತಾನೆ. ಅವನನ್ನೂ ಅವನ ಕುಟುಂಬದವರನ್ನೂ ಕೊಲ್ಲಿಸಿಬಿಟ್ಟರೆ ಅವನು ಮುಂದುಗಾಣದೆ ನನ್ನ ವಶವರ್ತಿಯಾಗುತ್ತಾನೆ, ಎಂಬ ದುರಾಲೋಚನೆಯು ಅವನಲ್ಲಿ ಅಂಕುರಿಸಿತು. ಆ ಪಾಪಿ ಜಗರಾಯನು ಈ ಕ್ರೂರಕೃತ್ಯವನ್ನು ಮಾಡಿಸಲು ಹಿಂದೆಗೆಯಲಿಲ್ಲ. ಈ ಪಾಪ ಕೃತ್ಯವನ್ನು ಮಾಡಲು ಓಬಲರಾಯನೂ ಒಪ್ಪಿದನು. ಆ ಕ್ರೂರಾತ್ಮನು ಒಂದು ದಿನ ರಾತ್ರಿ ಸೆರೆಮನೆಗೆ ಹೋಗಿ, ರಂಗರಾಯನನ್ನೂ ಅವನ ಕುಟುಂಬದವರನ್ನೂ ಕೊಲೆಮಾಡಿ ಬಂದನು. ಜಗರಾಯನಿಗೆ ಇದರಿಂದ ಅತ್ಯಾನಂದವಾಯಿತು.

ಈ ವರ್ತಮಾನವು ಬೆಳಗಾದಮೇಲೆ ಎಚ್ಚಮನಾಯಕನಿಗೆ ತಿಳಿಯಿತು. ಆಕಾಶವೇ ಅವನ ತಲೆಯಮೇಲೆ ಕಳಚಿ ಬಿದ್ದಂತಾಯಿತು. ವಿಧಿ ವಿಲಾಸವನ್ನು ಮೀರುವವರಾರು! ಪ್ರತಾಪಕುಮಾರಿಯಂತೂ, ಈ ಸಂಗತಿಯನ್ನು ಕೇಳಿ ಹತಾಶಳಾದಳು ಆ ಪತಿಪತ್ನಿಯರ ರಾಜಭಕ್ತಿಯು, ಅವರನ್ನು ಹುರಿದುಂಬಿಸಿತು. ಕೊಲೆಗಡುಕರಾದ ಜಗರಾಯನನ್ನೂ, ಓಬಲರಾಯನನ್ನೂ ಸಂಹರಿಸಿ, ಅವರ ರಕ್ತದಿಂದ ಚಿನ್ನವೆಂಕಟರಾಯನ ಪಾದಪ್ರಕ್ಷಾಳನ ಮಾಡಬೇಕೆಂದು ಅವರು ಶಪಥ ಮಾಡಿದರು.

ಕಾಲವಿಳಂಬ ಮಾಡಬಾರದೆಂದು ಎಚ್ಚಮನಾಯಕನು ಸೇನಾನಾಯಕ ರೊಂದಿಗೆ ಆಲೋಚಿಸಿ ರಣಭೇರಿ ಹೊಡೆಯಿಸಿದನು. ಸೈನ್ಯವೆಲ್ಲ ಯುದ್ಧಕ್ಕೆ ಸಿದ್ಧವಾಯಿತು. ಪ್ರತಾಪಕುಮಾರಿಯು ಸಾಕ್ಷಾತ್ ಭುವನೇಶ್ವರಿಯಂತೆ ವೀರಗಚ್ಚೆಯನ್ನು ಹಾಕಿ, ಕತ್ತಿ, ಕಠಾರಿ, ಗುರಾಣಿಗಳನ್ನು ಧರಿಸಿ, ಶ್ವೇತಾಶ್ವ ವನ್ನೇರಿ

ಅಶ್ವಸೈನ್ಯದ ಮುಂದೆ ಹೊರಟಳು. ರಣಕಹಳೆಗಳು ಪ್ರತಾಪಗಡದಲ್ಲಿ ಪ್ರತಿಧ್ವನಿ ಮಾಡಿದುವು, ನಾಯಕನು ಚಂದ್ರಗಿರಿಯ ಮೇಲೆ ದಂಡೆತ್ತಿ ಹೊರಟನು.

ಜಗರಾಯನೂ ಯುದ್ಧಕ್ಕೆ ಸಿದ್ಧನಾದನು. ನಾಯಕನ ಪರಾಕ್ರಮವನ್ನು ಮನಗಂಡಿದ್ದ. ಜಗರಾಯನಿಗೆ ಯುದ್ಧದಲ್ಲಿ ತನಗೆ ಸೋಲಾಗುವುದೆಂಬ ಅಂಜಿಕೆಯೇ ಮನಸ್ಸಿನಲ್ಲಿದ್ದಿತು. ಆದರೂ ಅವನು ಸೈನಿಕರನ್ನು ಹುರಿದುಂಬಿಸಿ ಓಬಲರಾಯನನ್ನು ರಾಜಧಾನಿಯ ರಕ್ಷಣೆಗೆ ನಿಲ್ಲಿಸಿ, ತಾನು ದೊಡ್ಡ ಸೈನ್ಯ ದೊಂದಿಗೆ ಚಂದ್ರಗಿರಿಯ ಹೊರವಲಯದಲ್ಲಿ ನಾಯಕನನ್ನು ಎದುರಿಸಲು ಅನುವಾದನು.

ಉಭಯ ಸೇನೆಗಳೂ, ರಣೋತ್ಸುಕತೆಯಿಂದ ಕೂಡಿ ನಿಂತಿದ್ದವು, ರಣಕಹಳೆಯ ಶಬ್ದವನ್ನು ಕೇಳಿದ ಕೂಡಲೇ ಯುದ್ಧವಾರಂಭವಾಯಿತು. ಜಗರಾಯನ ಕಡೆಯವರು, ವೀರಾವೇಶದಿಂದ ಕಾದುತ್ತ ನಾಯಕನ ಪಕ್ಷದ ಅನೇಕರನ್ನು ನೆಲಕ್ಕೆ ಕೆಡಹುತ್ತಿದ್ದರು. ಪ್ರತಾಪಕುಮಾರಿಯ ಏಟಿನಿಂದ ಸಾವಿರಾರು ಮಂದಿ ಯೋಧರು ಮಡಿದುಬಿದ್ದರು, ಅವಳು ಮಿಂಚಿನ ವೇಗದಲ್ಲಿ ರಣಭೂಮಿಯಲ್ಲಿ ಕುದುರೆಯನ್ನು ಓಡಿಸುತ್ತ ತನ್ನ ಸೈನಿಕರನ್ನು ಪ್ರೋತ್ಸಾಹಿಸುತ್ತ, ಮಹಾದೇವಿಯಂತೆ ಯುದ್ಧ ಮಾಡುತ್ತಿದ್ದಳು. ನಾಯಕನು ಸಿಂಹ ಧೈರ್ಯದಿಂದ ಮುನ್ನುಗ್ಗಿ ಶತ್ರು ಸೇನೆಯನ್ನು ಸದೆಬಡಿಯುತ್ತ ಯುದ್ಧ ಮಾಡುತ್ತಿದ್ದನು. ಜಗರಾಯನ ಕೈ ಸಾಗಲಿಲ್ಲ. ಅವನ ಸೈನಿಕರು ನಾಯಕನ ಏಟಿಗೆ ತಡೆಯಲಾರದೆ ಪಲಾಯನ ಮಾಡತೊಡಗಿದರು. ಇನ್ನೇನು! ವಿಜಯ ಲಕ್ಷ್ಮಿಯು ನಾಯಕನನ್ನು ವರಿಸಿದಳು! ಜಗರಾಯನು ಸೋತು ಕಾಲಿಗೆ ಬುದ್ಧಿ ಹೇಳಿದನು.

ಪ್ರತಾಪಕುಮಾರಿಯು ರಣರಂಗದಿಂದ ಓಡಿಹೋಗುತಿದ್ದ ಹೇಡಿ ಜಗರಾಯನನ್ನು ಹಿಂಬಾಲಿಸಿ ಹೋಗಿ ಅವನನ್ನು ಕೈಸೆರೆ ಹಿಡಿದು ತಂದು ನಾಯಕನಿಗೆ ಒಪ್ಪಿಸಿದಳು. ಇದನ್ನು ಕೇಳಿದ ಓಬಲ ರಾಯನೂ ಎದೆಗುಂದಿದನು. ನಾಯಕನ ದಂಡು ರಾಜಧಾನಿಯ ಕಡೆಗೆ ಧಾವಿಸಿ ಬಂದಿತು. ಓಬಲರಾಯನು ಜಗರಾಯನ ಗತಿಯನ್ನು ಕೇಳಿ, ಹೆದರಿದ್ದುದರಿಂದ, ಅವನು ಪ್ರಾಣದಾಸೆಯಿಂದ ಕೋಟೆಯ ಕಳ್ಳದಾರಿ ಮೂಲಕ ನುಸುಳಿ ಪಲಾಯನ ಮಾಡುತ್ತಿದ್ದಾಗ ಪ್ರತಾಪಕುಮಾರಿಯ ಖಡ್ಗಕ್ಕೆ ಆಹುತಿಯಾದನು. ಸೈನಿಕರೆಲ್ಲ ಶರಣಾಗತರಾದರು. ಅನಾಯಾಸವಾಗಿಯೇ ರಾಜಧಾನಿಯು ನಾಯಕನ ಕೈವಶವಾಯಿತು. ಸರದಾರರೆಲ್ಲರೂ ಒಬ್ಬೊಬ್ಬರಾಗಿ ಚಿನ್ನವೆಂಕಟರಾಯನ ಅಧೀನರಾದರು.

ಎಚ್ಚಮನಾಯಕನು ಅನ್ಯಾಕ್ರಾಂತವಾಗಿದ್ದ ಸಿಂಹಾಸನವನ್ನು ರಾಜವಂಶಕ್ಕೆ ಗಳಿಸಿಕೊಟ್ಟು, ಕೀರ್ತಿ ಪಡೆದನು. ಕನ್ನಡಿಗರ ಸ್ವಾಮಿ ನಿಷ್ಠೆ, ಸಾಹಸ ಪರತೆ, ಧೈರ್ಯ ಸ್ಥೈರ್ಯಗಳನ್ನು ಲೋಕಕ್ಕೆ ವ್ಯಕ್ತಪಡಿಸಿದನು. ರಾಜ ವೈಭವಕ್ಕೆ ಅನುಗುಣವಾಗಿ ಚಿನ್ನವೆಂಕಟರಾಯನಿಗೆ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿ, ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿದನು. ಜಗರಾಯನಿಗೂ ಮತ್ತು ಅವನ ಮೊಮ್ಮಗ ಚಿಕ್ಕರಾಯನಿಗೂ ಮರಣಪರ್ಯಂತ ಕಾರಾಗೃಹ ಶಿಕ್ಷೆಯನ್ನು ವಿಧಿಸಿ, ತುಂಟರ ಹಾವಳಿಯನ್ನು ತಪ್ಪಿಸಿ, ಕಾರ್ಯಗಳು ನಿರಾತಂಕವಾಗಿ ನಡೆಯುವಂತೆ ಏರ್ಪಡಿಸಿದನು. ಚಂದ್ರಗಿರಿಯ ರಾಜ್ಯವು ಬಹಳ ವೈಭವದಿಂದ ಮೆರೆಯುವಂತಾಯಿತು. ಎಚ್ಚಮನಾಯಕನಂಥ ವೀರನನ್ನು ಪಡೆದ ಕನ್ನಡ ನಾಡೇ ಧನ್ಯ! ಪ್ರತಾಪಕುಮಾರಿಯಂಥ ವೀರ ನಾರಿಯನ್ನು ಹೆತ್ತ ಕನ್ನಡ ತಾಯಿಯೇ ಧನ್ಯಳು! ಕನ್ನಡಿಗರಲ್ಲಿ ರಾಜಭಕ್ತಿಯು ನಿರಂತರವೂ ದೇದೀಪ್ಯಮಾನವಾಗಿ ಬೆಳಗುತ್ತಿರಲಿ.

ಕರ್ನಾಟಕ ರತ್ನ ಸಿಂಹಾಸನಾಧೀಶ್ವರರು ಯಶೋವಂತರಾಗಿ ಬಾಳಲಿ.

~ * ~ * ~ * ~

***ಆಕರ : 'ಕನ್ನಡ ನಾಡಿನ ಇತಿಹಾಸದ ಕಥೆಗಳು' – ಓ.ಎನ್. ಲಿಂಗಣ್ಣಯ್ಯ***

~ * ~ * ~ * ~

## 1.3 ಭಾಷಾ ವೈವಿಧ್ಯವನ್ನೇಕೆ ಕಾಯ್ದುಕೊಳ್ಳಬೇಕು?

**– ಡಾ. ಕೆ.ವಿ. ನಾರಾಯಣ**

"ಒಂದು ಜನಾಂಗವನ್ನು ನಾಶಮಾಡಬೇಕೆಂದರೆ ಆ ಜನಾಂಗದ ಭಾಷೆಯನ್ನು ನಾಶಮಾಡಿದರೆ ಸಾಕು' ಎನ್ನುವ ಮಾತನ್ನು ಪ್ರಚುರಗೊಳಿಸಿದವರು ಬೆಲ್ಜಿಯಂನ ಭಾಷಾತಜ್ಞೆ ತೊವ್ ಸ್ಕೂಟ್ ನಬ್ ಕಾಂಗಾಸ್, ಟೆರಲಿಂಗ್ವ ಎಂಬ ಸಂಸ್ಥೆಯೊಡನೆ ಸಂಪರ್ಕವಿರಿಸಿಕೊಂಡಿರುವ ಈಕೆ, ಮಾನವ ಹಕ್ಕುಗಳ ಪಟ್ಟಿಯಲ್ಲಿ 'ಪ್ರತಿ ವ್ಯಕ್ತಿಗೂ ಅವರವರ ಭಾಷೆಯನ್ನು ಉಳಿಸಿಕೊಳ್ಳುವ ಹಕ್ಕು' ಕೂಡ ಸೇರಬೇಕೆಂದು ಹೋರಾಡುತ್ತಿದ್ದಾರೆ. ಅವರ ಈಚಿನ ಒಂದು ಲೇಖನದಿಂದ ಆಯ್ದಭಾಗಗಳನ್ನು ಇಲ್ಲಿ ನೀಡಲಾಗಿದೆ.

ಜಾಗತಿಕವಾಗಿ ಈಗ ಜೀವವೈವಿಧ್ಯದ ವಿನಾಶದ ಬಗ್ಗೆ ಒಂದು ಪ್ರಮಾಣದ ಎಚ್ಚರಮೂಡಿದೆ. ಅಭಿವೃದ್ಧಿ ಮತ್ತು ಉಪಭೋಗಗಳು ಈ ವೈವಿಧ್ಯದ ಅಳಿವಿಗೆ ಕಾರಣವಾಗುತ್ತಿರುವುದನ್ನು ಗುರುತಿಸಲಾಗಿದೆ. ಜಗತ್ತಿನ ಜೀವವೈವಿಧ್ಯ ವಿಪುಲವಾಗಿರುವ ನಾಡುಗಳು ಆರ್ಥಿಕ ರಾಜಕೀಯ ನೆಲೆಗಳಲ್ಲಿ ದುರ್ಬಲವಾಗಿರುವುದರಿಂದ ತಮ್ಮಲ್ಲಿರುವ ಅಪಾರ ಸಂಪತ್ತು ಕಣ್ಮರೆಯಾಗುತ್ತಿರುವುದನ್ನು ತಡೆಯಲಾರದ ಸ್ಥಿತಿಯಲ್ಲಿವೆ. ಇದೊಂದು ಆತಂಕದ ಸ್ಥಿತಿ ಎಂಬುದೇನೋ ನಿಜ. ಆದರೆ ಇಷ್ಟೇ ಆತಂಕದ ಇನ್ನೊಂದು ಕ್ರಿಯಾವರ್ತ ನಡೆಯುತ್ತಿದೆ ಎಂಬುದು ಹಲವರಿಗೆ ಗೊತ್ತಿಲ್ಲ; ಜಗತ್ತು ತನ್ನ ಭಾಷಾ ವೈವಿಧ್ಯವನ್ನು ಅತಿ ತೀವ್ರಗತಿಯಲ್ಲಿ ಕಳೆದುಕೊಳ್ಳುತ್ತಿದೆ. ಜೀವವೈವಿಧ್ಯವನ್ನು ಕಾಯ್ದುಕೊಳ್ಳಲು ಸಾಧ್ಯ. ಪ್ರಯೋಗಗಳಿಂದ, ನಾಶವಾದ ಸ್ಥಿತಿಯನ್ನು ಮರಳಿ ರಚಿಸುವ ಯತ್ನವನ್ನಾದರೂ ಮಾಡಬಹುದು. ಆದರೆ ನಾಶವಾದ ಭಾಷೆಯ ಪುನರುತ್ಥಾನ ಅಸಾಧ್ಯ. ಅಲ್ಲದೆ ಮಾನವ ಜನಾಂಗದಲ್ಲಿ ಹಿಂದೆಂದೂ ನಡೆಯದಿದ್ದ ಪ್ರಮಾಣದಲ್ಲಿ ಭಾಷಾ ವಿನಾಶ ಈಗ ನಡೆಯುತ್ತಿದೆ. ಇನ್ನು ನೂರು ವರ್ಷಗಳಲ್ಲಿ ಈಗ ಇರುವ 6000–7000 ಭಾಷೆಗಳಲ್ಲಿ ಅರ್ಧದಷ್ಟು ವಿನಾಶಗೊಳ್ಳಲಿವೆ ಎಂದು ಅಂದಾಜು ಮಾಡಲಾಗಿದೆ.

ಜಗತ್ತಿನ ಈ ಭಾಷೆಗಳನ್ನಾಡುವ ಜನರು ಹಂಚಿಹೋಗಿರುವ ಪ್ರಮಾಣ ಗಮನಾರ್ಹ, ತಲಾ 10 ಲಕ್ಷಕ್ಕೂ ಹೆಚ್ಚಿನ ಭಾಷಿಕರನ್ನು ಹೊಂದಿರುವ ಭಾಷೆಗಳ ಸಂಖ್ಯೆ 200ಕ್ಕೂ ಕಡಿಮೆ ಅರ್ಧದಷ್ಟು ಸಂಖ್ಯೆಯ ಭಾಷೆಗಳಿಗೆ ತಲಾ 10,000 ಜನ ಭಾಷಿಕರೂ ಇಲ್ಲ, ಕಾಲುಭಾಗದಷ್ಟು ಸಂಖ್ಯೆಯ ಆಡುಭಾಷೆಗಳಿಗೆ ತಲಾ 1,000 ಜನರಿಗಿಂತ ಕಡಿಮೆ ಭಾಷಿಕರಿದ್ದಾರೆ. ಭೌಗೋಳಿಕ ಹಂಚಿಕೆಯನ್ನು ಗಮನಿಸಿದರೆ ಪ್ರತಿಶತ 80ರಷ್ಟು ಭಾಷೆಗಳು (ಸುಮಾರು 5000–5500

ಭಾಷೆಗಳು) ಯಾವುದೋ ಒಂದು ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ಮಿತಗೊಂಡಿವೆ. ಬರಲಿರುವ ದಶಕಗಳಲ್ಲಿ ಈ ಚಿತ್ರ ಬದಲಾಗಲಿದೆ, ಆಶಾವಾದಿ ಚಿಂತಕರು ಮುಂದಿನ ಶತಮಾನದಲ್ಲಿ ಶೇ. 50ರಷ್ಟು ಸಂಖ್ಯೆಗಳು ನಾಶವಾಗುತ್ತವೆಂದು ಅಂದಾಜು ಮಾಡಿದರೆ, ಹತಾಶೆಯ ನೆಲೆಯಲ್ಲಿ ಯೋಚಿಸುವವರು ಈ ಅವಧಿಯಲ್ಲಿ ಶೇ. 90ರಷ್ಟು ಸಂಖ್ಯೆಯ ಭಾಷೆಗಳ ವಿನಾಶದ ಚಿತ್ರವನ್ನು ಮುಂದಿಡುತ್ತಾರೆ.

ಇದಕ್ಕೇಕೆ ಆತಂಕ ಪಡಬೇಕು, ಭಾಷೆಗಳು ಕಡಿಮೆಯಾದರೆ ಜನರು ಸುಖಸಂತೋಷಗಳಿಂದ ಜೀವಿಸಲು ಸಾಧ್ಯವೆನ್ನುವವರೂ ಇದ್ದಾರೆ. ಜಾಗತಿಕ ಸಂಪರ್ಕಕ್ಕೆ ಒಂದೇ ಭಾಷೆ ಸಾಕೆನ್ನುವವರೂ ಇದ್ದಾರಷ್ಟೆ. ಆದರೆ ಪರಿಸ್ಥಿತಿ ಅಷ್ಟು ಸರಳವಲ್ಲ. ಈವರೆಗೆ ನಮಗೆ ತಿಳಿಯದಿದ್ದ ಕೆಲವು ಸಂಗತಿಗಳು ನಮಗೀಗ ಗೊತ್ತಾಗುತ್ತಿವೆ. ಜೀವವೈವಿಧ್ಯ ಮತ್ತು ಭಾಷಾವೈವಿಧ್ಯಗಳ ನಡುವೆ ಇರುವ ಸಂಬಂಧವೀಗ ಹೆಚ್ಚು ಸ್ಪಷ್ಟವಾಗತೊಡಗಿದೆ. ಎಲ್ಲಿ ಜೀವ ವೈವಿಧ್ಯವಿದೆಯೊ ಅಲ್ಲಿಯೇ ಭಾಷಾವೈವಿಧ್ಯವೂ ಇದೆ. ಅವರೆಡರ ನಡುವೆ ಕಾರ್ಯ ಕಾರಣ ಸಂಬಂಧವಿದೆ.

ವಿನಾಶದ ಅಂಚಿಗೆ ಬಂದು ನಿಂತಿರುವ ಭಾಷೆಗಳಲ್ಲಿ ಅಪಾರವಾದ ಸ್ಥಳೀಯ ತಿಳಿವಳಿಕೆಯಿದೆ, ಜೀವವೈವಿಧ್ಯದ ಬಗ್ಗೆ, ಅದರ ರಕ್ಷಣೆಯ ಬಗ್ಗೆ, ಪೋಷಣೆಯ ಬಗ್ಗೆ ಈ ಭಾಷೆಗಳಲ್ಲಿ ಅಡಗಿರುವ ಜ್ಞಾನದ ಬಗ್ಗೆ ವಿಶ್ವಸಂಸ್ಥೆಯ ಪರಿಸರ ಸಂಬಂಧದ ಈಚಿನ ವರದಿ ವಿವರಗಳನ್ನು ನೀಡುತ್ತದೆ. ಭಾಷಿಕರು ಸಾವಿರಾರು ವರ್ಷಗಳಿಂದ ತಮ್ಮ ಪರಿಸರವನ್ನು ಕುರಿತ ಅರಿವನ್ನು ತಮ್ಮ ನುಡಿಯಲ್ಲಿ ಬಿಂಬಿಸಿದ್ದಾರೆ. ಅವರ ಈ ಭಾಷೆಗಳು ನಾಶವಾದರೆ ಈ ಅಪಾರ ತಿಳುವಳಿಕೆಯೂ ನಾಶವಾದಂತೆಯೇ ಸರಿ, ಯಜಮಾನಿಕೆ ಮೆರೆಯುವ ಭಾಷೆಗಳಲ್ಲಿ ಇಂಥ ಅರಿವು ಅಂತಸ್ಥವಾಗಿಲ್ಲ. ಆದ್ದರಿಂದ ಈ ನಷ್ಟ ಇಡೀ ಮಾನವ ಜನಾಂಗಕ್ಕೆ ಆಗುವ ನಷ್ಟವಾಗಿದೆ.

ನಾಗರಿಕ ಜಗತ್ತು ಭಾಷಾವಿನಾಶ ಪ್ರಕ್ರಿಯೆಗೆ ಬಳಸುತ್ತಿರುವ ಎರಡು ಪ್ರಬಲ ಅಸ್ತ್ರಗಳೆಂದರೆ ಸಮೂಹ ಮಾಧ್ಯಮಗಳು ಮತ್ತು ಶಿಕ್ಷಣ ವ್ಯವಸ್ಥೆ, ಇದು ವಿಚಿತ್ರವೆನಿಸಿದರೂ ನಿಜ. ಯಜಮಾನಿಕೆಯ ಭಾಷೆಯ ಪರವಾಗಿ ಇವೆರಡೂ ವಲಯಗಳು ಕೆಲಸ ಮಾಡುತ್ತವೆ.

ವಲಸೆಗಾರರ ಮಕ್ಕಳನ್ನೇ ನೋಡೋಣ. ವಲಸೆ ಎಂಬುದು ಅತ್ಯಂತ ದೊಡ್ಡ ಜಾಗತಿಕ ಕ್ರಿಯೆ, ವಲಸೆ ಹೋದವರ ಮಕ್ಕಳಿಗೆ ಯುರೋಪಿನ ಹಲವು ದೇಶಗಳಲ್ಲಿ ಆಯಾ ದೇಶ ಭಾಷೆಗಳ ಮಾಧ್ಯಮದಲ್ಲಿ ಶಿಕ್ಷಣ ನೀಡುವ

ಕಾರ್ಯಕ್ರಮವಿದೆ. ಇದನ್ನು ಮುಳುಗಿಸುವ, ಬೆರೆಸುವ (ಇಮ್ಮರ್‌ಶನ್) ಕಾರ್ಯಕ್ರಮವೆನ್ನುತ್ತಾರೆ. ಅಂದರೆ ವಲಸೆಗಾರರ ಮಕ್ಕಳು ವಲಸೆ ಬಂದಿರುವ ನಾಡಿನ ಭಾಷಾ ಪರಿಸರದಲ್ಲಿ ಸೇರಿ ಹೋಗಬೇಕೆಂಬುದು ಉದ್ದೇಶ. ಆದರೆ ಈ ಮಕ್ಕಳು ತಮ್ಮ ತಂದೆತಾಯಿಗಳಾಡುವ ಭಾಷೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಿದ್ದಾರೆ. ಜಗತ್ತಿನಾದ್ಯಂತ ಹೀಗೆ ಒತ್ತಾಯ ಪೂರ್ವಕವಾಗಿ ಭಾಷಾ ಮರೆವನ್ನು ಪ್ರೇರೇಪಿಸಲಾಗುತ್ತಿದೆ. ಅಲ್ಪಸಂಖ್ಯಾತ ಭಾಷೆಗಳಲ್ಲಿ ಕಲಿಯುವ ಅವಕಾಶಗಳು ಇಲ್ಲವಾಗುತ್ತಿವೆ. ಇದರ ಪರಿಣಾಮವೇನೆಂಬುದನ್ನು ಯೋಚಿಸಲು ವಲಸೆಗಾರರಿಗೆ ಆಯ್ಕೆಗಳಾದರೂ ಎಲ್ಲಿವೆ?

ಈಗೇನಾಗಬೇಕು? ಭಾಷಾವೈವಿಧ್ಯದ ಬಳಕೆಗೆ ಕಾರ್ಯಕ್ರಮ ಯೋಜಿತವಾಗಬೇಕು, ದ್ವಿಭಾಷಿಕತೆ ಮತ್ತು ಬಹುಭಾಷಿಕತೆಗಳನ್ನು ಉತ್ತೇಜಿಸಬೇಕು. ಅಲ್ಲದೆ ಯಜಮಾನ ಭಾಷೆಯ ಕಲಿಕೆಯಿಂದ ಅಲ್ಪಸಂಖ್ಯಾತ ಭಾಷೆಗಳನ್ನು ಕಳೆದುಕೊಳ್ಳುವ ಸ್ಥಿತಿಯನ್ನು ಬದಲಾಯಿಸಬೇಕು, ಇಲ್ಲದಿದ್ದರೆ ಯಜಮಾನ ಭಾಷೆಗಳು ಕೊಲ್ಲುವ ಭಾಷೆಗಳಾಗುತ್ತವೆ. ಇದು ಆ ಭಾಷೆಗಳಿಗೂ ಆರೋಗ್ಯಕರ ಸ್ಥಿತಿಯಲ್ಲ, ಆದ್ದರಿಂದ ಯಜಮಾನ ಭಾಷೆಗಳೂ ತಾವು ವ್ಯಾಪಕವಾಗಿ ಬಳಕೆಯಾಗುವಾಗಲೇ ಜನರ ಸ್ವತ್ತಾದ ಇತರ ಭಾಷೆಗಳೂ ಉಳಿದುಕೊಳ್ಳುವಂತೆ ಪ್ರೇರೇಪಿಸಬೇಕು. ಶಿಕ್ಷಣ ಇದರಿಂದ ಕೂಡಿಸಿಕೊಳ್ಳುವ ಪ್ರಕ್ರಿಯೆಯಾಗುತ್ತದೆ. ಈಗಿರುವಂತೆ ಕಳೆದುಕೊಳ್ಳುವ ಪ್ರಕ್ರಿಯೆಯಾಗಬಾರದು. ಅಂದರೆ ಜೀವವೈವಿಧ್ಯಕ್ಕೆ ಪರ್ಯಾಯವಾಗಿ ರೂಪಗೊಳ್ಳುತ್ತಿರುವ ಏಕರೂಪಿ ಜೀವ ಪರಿಸರಕ್ಕೆ ತಾಳಿಕೆಯ ಗುಣವಿಲ್ಲದಿರುವುದು ಈಗ ನಮ್ಮೆಲ್ಲರ ಅನುಭವವಾಗಿದೆ. ಹಾಗೆಯೇ ಭಾಷಾವೈವಿಧ್ಯಕ್ಕೆ ಪರ್ಯಾಯವಾಗಿ ರೂಪಗೊಳ್ಳುವ ಏಕಭಾಷಾ ಪರಿಸರಕ್ಕೂ ಕೂಡ ತಾಳಿಕೆಯ ಗುಣವಿರಲಾರದೆಂಬುದು ನಮಗೆ ಗೊತ್ತಾಗಬೇಕು. ಆದ್ದರಿಂದ ಭಾಷಾ ಸಹಬಾಳ್ವೆಯೊಂದೇ ಇಂದಿನ ನಮ್ಮ ಆಯ್ಕೆಯಾಗಬೇಕಾಗಿದೆ.

~ * ~ * ~ * ~

***ಆಕರ : 'ನಮ್ಮೊಡನೆ ನಮ್ಮ ನುಡಿ' – ಡಾ. ಕೆ.ವಿ. ನಾರಯಣ***

~ * ~ * ~ * ~

## ಓದುಪತ್ಯ : 1.4 ಭಾಷೆ ಮತ್ತು ಅನುಭವ

**– ಜಿ.ಎಸ್. ಜಯದೇವ**

ಸುಮಾರು ಮೂರು ಸಾವಿರ ವರ್ಷಗಳ ಹಿಂದೆ ಮೂಲ ದ್ರಾವಿಡ ಭಾಷೆಯಿಂದ ಕವಲೊಡೆದು ಕನ್ನಡ ಭಾಷೆ ಹುಟ್ಟಿ ಬೆಳೆಯತೊಡಗಿತು. ಕನ್ನಡಕ್ಕೆ ಸುಮಾರು ಒಂದೂವರೆಯಿಂದ ಎರಡು ಸಾವಿರ ವರ್ಷಗಳ ಲಿಖಿತ ಇತಿಹಾಸವಿರುವುದನ್ನು ಪಂಡಿತರು ಖಚಿತಪಡಿಸುತ್ತಾರೆ. ಸಾಹಿತ್ಯ ಸಂಪನ್ನವಾದ ಈ ಭಾಷೆ 'ಕನ್ನಡ ಮನಸ್ಸು' ಎಂದು ಕರೆಯಬಹುದಾದ ಒಂದು ವಿಶಿಷ್ಟ ಸಂಸ್ಕೃತಿಯನ್ನು ರೂಪಿಸಿದ ಭಾಷೆ; ಎರಡನೇ ಶತಮಾನದಲ್ಲಿ ಭೌಗೋಳತಜ್ಞ ಟಾಲೆಮಿ ಹೆಸರಿಸುವ ಅನೇಕ ಊರುಗಳು ಕನ್ನಡ ನಾಡಿನ ಊರುಗಳೇ ಆಗಿವೆ. ಉದಾಹರಣೆಗೆ 'ಮೊದಗೌಲ್ಲ' ಎಂಬುದು ಈಗಿನ 'ಮುದ್ಗಲ' ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

'ಕನ್ನಡ ಮನಸ್ಸನ್ನು ರೂಪಿಸಿದ ಕನ್ನಡ ಭಾಷೆ ಕನ್ನಡಿಗರಿಗೇ ಬೇಡವಾಗುತ್ತಿರುವ ಈ ಸಂದರ್ಭದಲ್ಲಿ ಭಾಷೆಯ ಇತಿಹಾಸ ಕುರಿತು ಕನವರಿಕೆ ಏಕೆ? ಎಂಬ ಪ್ರಶ್ನೆ ಹುಟ್ಟಬಹುದು. ಒಂದು ನಿರ್ದಿಷ್ಟ ಪರಿಸರದಲ್ಲಿ ಬಹಳ ಕಾಲ ಬೆಳೆದು ಬಂದ ಭಾಷೆ ಕೇವಲ ಸಂವಹನ ಸಾಧನವಾಗಿ ಮಾತ್ರ ಉಳಿಯುವುದಿಲ್ಲ. ಅದು ಭೂತ ವರ್ತಮಾನಗಳನ್ನು ಒಂದು ಗೂಡಿಸುವ, ಒಂದು ಜನಾಂಗದ ಸಮಷ್ಟಿಯ ಅಸ್ಮಿತೆಯಾಗಿ ಎದುರು ನಿಲ್ಲುತ್ತದೆ. ಭಾಷೆ ಕೇವಲ ಸಂವಹನ ಸಾಧನ ಮಾತ್ರವಾಗಿದ್ದರೆ ಒಂದು ಭಾಷೆಯನ್ನು ಮತ್ತೊಂದು ಭಾಷೆಯಿಂದ ಸುಲಭವಾಗಿ ಸ್ಥಳಾಂತರಿಸಬಹುದು. ಆದರೆ ಕನ್ನಡದಂತಹ ಪ್ರಾಚೀನ ಭಾಷೆ ಕೇವಲ ಸಂವಹನ ಸಾಧನವಾಗಿ ಮಾತ್ರ ಬೆಳೆಯುವುದಿಲ್ಲ. ಮನುಷ್ಯ ಮತ್ತು ಅವನ ಪರಿಸರದ ಸಂಬಂಧವನ್ನು ಸಂವಹನ ಸಾಧ್ಯ ಅನುಭವವನ್ನಾಗಿ ಅದು ದಾಖಲಿಸುತ್ತದೆ. ಅಷ್ಟೇ ಅಲ್ಲ ಶಬ್ದಕ್ಕೆ ಹೊರತಾದ, ವಿಶಿಷ್ಟವಾದ ಸಂಕೀರ್ಣ ವಿವರಗಳನ್ನು ತನ್ನ ಅನೇಕ ನುಡಿಗಟ್ಟುಗಳಲ್ಲಿ ಅಡಗಿಸಿ ಸಂವಹನ ಸಾಧ್ಯವಾಗಿಸುತ್ತದೆ. ಒಂದು ನಿರ್ದಿಷ್ಟ ಸಾಂಸ್ಕೃತಿಕ ಪರಿಸರದಲ್ಲಿ ಮಾತ್ರ ಸಾಧ್ಯವಾಗುವ ಸಂಕೀರ್ಣ ಅನುಭವಗಳನ್ನು ಒಗಟುಗಳು ಮತ್ತು ಗಾದೆಗಳು ಕ್ಲುಪ್ತವಾಗಿ ಹೇಳಿಬಿಡುತ್ತವೆ. ಈ ಸಾಂಸ್ಕೃತಿಕ ಪರಿಸರಕ್ಕೆ ಆಗಂತುಕನಾದವನಿಗೆ ಇದೇ ಅನುಭವವನ್ನು ಪರಭಾಷೆಯಲ್ಲಿ ಮನವರಿಕೆ ಮಾಡಿಕೊಡಬೇಕೆಂದರೆ ಒಂದು ಥೀಸಿಸ್ ಅನ್ನೇ ಬರೆದಷ್ಟು ಕಷ್ಟವಾಗಬಹುದು. ಈ ಕಾರಣದಿಂದ ಭಾಷೆ ಕೇವಲ ಸಂವಹನ ಸಾಧನವಷ್ಟೇ ಅಲ್ಲ, ಅದು ವಿಶಿಷ್ಟ ಸಾಂಸ್ಕೃತಿಕ ಪರಿಸರದ ಭೂತ–ವರ್ತಮಾನಗಳನ್ನು ಒಂದು ಸಮಗ್ರತೆಯ ಹರಹಿನಲ್ಲಿ ಅನುಭವವಾಗಿ

ನಿವೇದಿಸುತ್ತದೆ. ಆದ್ದರಿಂದ ಒಂದು ಸಾಂಸ್ಕೃತಿಕ ಅನುಭವವನ್ನು ಕಟ್ಟಿಕೊಡುವ ಭಾಷೆಯನ್ನು ಸಂಬಂಧವಿಲ್ಲದ ಭಾಷೆಗೆ ತರ್ಜುಮೆ ಮಾಡಿ ಮೂಲಾರ್ಥವನ್ನು ಪಡೆಯುವುದು ಕಷ್ಟ.

ಇಂತಹ ಒಂದು ಅಸ್ಮಿತೆಯನ್ನು ಕಟ್ಟಿಕೊಡುವ ಭಾಷೆಯ ಬಗ್ಗೆ ಭಾವನಾತ್ಮಕತೆ ಇರುವುದು ಸಹಜ. ಆದರೆ ಎಲ್ಲ ಸಂಸ್ಕೃತಿಗಳ ಅಸ್ಮಿತೆಯನ್ನು ಅಳಿಸಿ ಹಾಕುತ್ತಿರುವ ಜಾಗತೀಕರಣದ ಸಂದರ್ಭದಲ್ಲಿ ನಾವು ನಮ್ಮ ಭಾಷೆಯ ಬಗ್ಗೆ ಇರುವ ಭಾವನಾತ್ಮಕತೆಯನ್ನು ಅಸಹಜವಾಗಿ ಕಳೆದುಕೊಳ್ಳುತ್ತಿದ್ದೇವೆ. ಯಂತ್ರ ಪ್ರಧಾನವಾದ ಯಾಂತ್ರಿಕ ಜೀವನದಲ್ಲಿ ಮನುಷ್ಯ ತನ್ನ ಭಾವುಕತೆಯನ್ನು ಬದಲಿಸಬಹುದಾದ ಬಿಡಿ ಭಾಗಗಳೋ ಎಂಬಂತೆ ಪರಿಗಣಿಸುತ್ತಿದ್ದಾನೆ. ಆದರೆ ಭಾಷೆಗೂ ಭಾವನೆಗಳಿಗೂ ಬಿಡಿಸಲಾರದ ಸಂಬಂಧವಿದೆ. ಒಬ್ಬ ಫಿನಿಷ್ ಲೇಖಕ ವಲಸೆಯ ಕಾರಣ ಅನಿವಾರ್ಯವಾಗಿ ಸ್ವೀಡಿಷ್ ಭಾಷೆಗೆ ತನ್ನನ್ನು ಬದಲಿಸಿಕೊಳ್ಳಬೇಕಾಯಿತು. ಆಗ ತನ್ನ ಪರಿಸ್ಥಿತಿಯನ್ನು ಹೀಗೆ ಹೇಳಿಕೊಳ್ಳುತ್ತಾನೆ. "ನಾನು ಪರಿಸ್ಥಿತಿಯ ಒತ್ತಡದಿಂದ ಸ್ವೀಡಿಷ್ ಭಾಷೆಯಲ್ಲಿ ಬರೆಯಬೇಕಾಯಿತು. ಆದರೆ ಫಿನಿಷ್ ನನ್ನ ಮಾತೃಭಾಷೆ, ಫಿನಿಷ್ ನನ್ನ ದೇಹದ ಚರ್ಮ, ನಾನು ಉಸಿರಾಡುವ ಗಾಳಿ, ನನ್ನ ನೆಲದಲ್ಲಿ ಬೀಳುವ ಹಿಮ; ನನ್ನ ಕೋಪ, ನನ್ನ ದುಃಖ, ನನ್ನ ಆಳವಾದ ಗಾಯಗಳು ಮಾಯುವುದು ಫಿನಿಷ್ ಭಾಷೆಯಲ್ಲಿ, ನನ್ನ ಆಳವಾದ ಭಾವನೆಗಳು ರೂಪ ಪಡೆಯುವುದು ಫಿನಿಷ್ ಭಾಷೆಯಲ್ಲಿ, ನನ್ನ ಫಿನಿಷ್ ಭಾಷೆ ನನ್ನ ವ್ಯಕ್ತಿತ್ವದ ಬುನಾದಿ". (ಸುವರ್ಣ ವಿಚಾರ ಸಾಹಿತ್ಯ, ಸಂ. ಡಾ. ಬಸವರಾಜ ಕಲ್ಗುಡಿ: ಓ.ಎಲ್.ಎನ್. ಅವರ ಅನುವಾದಿತ ಲೇಖನ)

ಫಿನಿಷ್ ಲೇಖಕ ಹೀಗೆ ಹೇಳಿಕೊಂಡಿರುವುದು ಸಹಜವಾಗಿದೆ. ಫಿನ್‌ಲ್ಯಾಂಡ್‌ನ 'ಕಲೈವಾಲ' ಜಾನಪದ ಪ್ರಪಂಚದಲ್ಲೇ ಅತ್ಯಂತ ಶ್ರೀಮಂತವಾದದ್ದು, ಅಲ್ಲವೇ ಅಲ್ಲಿನ ಕಾಡುಗಳು ಫಿನ್‌ಲ್ಯಾಂಡ್ ದೇಶದ ಜನಗಳ ಹೃದಯ, ಇವರೆಲ್ಲರೂ ಪ್ರಕೃತಿಯ ಆರಾಧಕರು. ಹಾಗಾಗಿ ತನ್ನ ಸ್ಥಳೀಯ ಸಂಸ್ಕೃತಿಗೆ ಹೊಂದಿಕೊಂಡಿದ್ದ ಅವನ ಫಿನಿಷ್ ಭಾಷೆಯನ್ನು ಬದಲಿಸಿಕೊಂಡಾಗ ಅದರ ಪರಿಣಾಮವನ್ನು ಖಿನ್ನತೆಯಿಂದ ಈ ಲೇಖಕ ವರ್ಣಿಸಿದ್ದಾನೆ.

ಒಂದು ಜನಾಂಗ ಪೀಳಿಗೆಗಳ ಪರ್ಯಂತ ಸಂಗ್ರಹಿಸುವ ತನ್ನ ಪರಿಸರದ ಅನುಭವ ಭಾಷೆಯಾಗಿ ಬೆಳೆಯುತ್ತವೆ. ಭಾಷಾ ವೈವಿಧ್ಯತೆಗೆ ಬಹುಶಃ ಇದೇ ಕಾರಣ, ಸಂಶೋಧನೆಗಳ ಪ್ರಕಾರ ಜೀವ ವೈವಿಧ್ಯತೆಯಿಂದ ತುಂಬಿ ತುಳುಕುವ ಮಳೆಯ ಕಾಡಿನ ಪ್ರದೇಶಗಳಲ್ಲಿ ಭಾಷಾ ವೈವಿಧ್ಯತೆಯೂ ಹೆಚ್ಚಾಗಿದೆ. ಜೊತೆಗೆ ಇವು ಪ್ರಾದೇಶಿಕವಾದ ಸಾಂಸ್ಕೃತಿಕ ವೈವಿಧ್ಯತೆಗೂ ಕಾರಣವಾಗಿದೆ. ಇವುಗಳನ್ನು

ethno-linguistic group ಎಂದು ಕರೆಯುತ್ತಾರೆ. ಜೀವ ವೈವಿಧ್ಯತೆ ಕಡಿಮೆ ಇರುವ ಭೌಗೋಳಿಕ ಪ್ರದೇಶಗಳಲ್ಲಿ ಭಾಷೆಯ ವೈವಿಧ್ಯತೆಯೂ ಕಡಿಮೆ ಇರುತ್ತದೆ. ತಾಂತ್ರಿಕವಾಗಿ ಬಲಿಷ್ಠರಾಗಿರುವ ಬಿಳಿ ಜನರು ಇಂದು ನಮ್ಮ ಯಂತ್ರ ತಂತ್ರಗಳಿಂದ ಇಡೀ ಜಗತ್ತನ್ನು ಆಳಿದರೂ ಅವರ ಮೂಲ ವಾಸಸ್ಥಾನ ಜೀವ ವೈವಿಧ್ಯತೆಯ ದೃಷ್ಟಿಯಿಂದ ಅತ್ಯಂತ ಬಡವಾಗಿದೆ. ಇಂಗ್ಲಿಷ್ ಭಾಷೆ ಹುಟ್ಟಿರುವುದು ಇಂತಹ ಒಂದು ಪ್ರದೇಶದಿಂದ. ಈ ಭಾಷೆ ಪಶ್ಚಿಮಘಟ್ಟಗಳ ಮಲೆನಾಡಿನ ಜನರಿಗೆ ತಮ್ಮ ಶ್ರೀಮಂತ ಜೀವ ವೈವಿಧ್ಯದ ಪರಿಸರದಲ್ಲಿ ಪರಸ್ಪರ ಮಾತನಾಡಲು ಹೇಗೆ ಸಹಾಯ ಮಾಡಬಲ್ಲದು? ಅಥವಾ ದಟ್ಟವಾದ ಮಳೆಯ ಕಾಡುಗಳಲ್ಲಿ ವಾಸಿಸುವ ಜನರಿಗೆ ಇದು ಹೇಗೆ ಸಹಾಯ ಮಾಡಬಲ್ಲುದು? ಸ್ಥಳೀಯ ಪರಿಸರದ ಅನುಭವನ್ನು ಕಟ್ಟಿಕೊಡುವ ವಿಶೇಷ ಶಕ್ತಿಯುಳ್ಳ ಒಂದು ಭಾಷೆ ಸತ್ತರೆ ಭಾಷೆಯನ್ನು ಮಾತನಾಡುತ್ತಿದ್ದ ಇಡೀ ಜನಾಂಗವೇ ಸತ್ತಂತೆ.

ಭಾಷೆಯನ್ನು ಕೊಲ್ಲುವ ಮೂಲಕ ಇಡೀ ಜನಾಂಗವನ್ನೇ ನಿರ್ವೀರ್ಯರನ್ನಾಗಿ ಮಾಡಲು ಪ್ರಯತ್ನಿಸಿದ ಮೆಕಾಲೆ ಮಹಾಶಯ ಸಲ್ಲಿಸಿದ ವರದಿಯ ಈ ಕೆಲವು ಮಾತುಗಳನ್ನು ಗಮನಿಸಿ, "ನಾವು ಈಗ ಇಂತಹ ಒಂದು ಜನಾಂಗವನ್ನು ರೂಪಿಸಲು ಪ್ರಯತ್ನಪಡಬೇಕು; ಆ ವರ್ಗಕ್ಕೆ ಸೇರಿದವರು ನಮಗೂ, ನಮ್ಮಿಂದ ಆಳಲ್ಪಡುತ್ತಿರುವ ಕೋಟಿಗಟ್ಟಲೆ ಜನರಿಗೂ ನಡುವಿನ ದುಬಾಷಿಗಳಂತೆ ಕೆಲಸ ಮಾಡಬೇಕು...... ಅವರು ಬಣ್ಣ ಮತ್ತು ರಕ್ತದಲ್ಲಿ ಮಾತ್ರ ಭಾರತೀಯರು. ಆದರೆ ತಮ್ಮ ಅಭಿರುಚಿಗಳು ಅಭಿಪ್ರಾಯಗಳು, ನೀತಿಗಳು ಹಾಗೂ ಬೌದ್ಧಿಕತೆಯಲ್ಲಿ ಅವರು ಇಂಗ್ಲಿಷ್ ಪರವಾಗಿರಬೇಕು." (ಭ. ಕೃಷ್ಣಮೂರ್ತಿ ಲೇಖನ)

ಈ ವರದಿಯ ಆಧಾರದಿಂದ ಲಾರ್ಡ್ ವಿಲಿಯಂ ಬೆಂಟಿಂಕ್ ಒಂದು ಸರ್ಕಾರಿ ಆದೇಶವನ್ನು ಹೊರಡಿಸಿ (1835) ಶಿಕ್ಷಣಕ್ಕೆ ಮೀಸಲಾದ ಎಲ್ಲಾ ಹಣವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ನೀಡಲಾಗುವ ಶಿಕ್ಷಣಕ್ಕೆ ಮಾತ್ರ ಖರ್ಚು ಮಾಡಬೇಕೆಂದು ತಾಕೀತು ಮಾಡಿದ, ಹೀಗೆ ಇಂಗ್ಲಿಷ್ ಭಾಷೆಯನ್ನು ಹೇರುವ ಮೂಲಕ ದೇಶಭಾಷೆಗಳನ್ನು ಕೊಲ್ಲುವ ಸಲಹೆಯನ್ನು ತದನಂತರ ಬಂದ ಲಾರ್ಡ್‌ಕರ್ಜನ್ ಒಪ್ಪಲಿಲ್ಲ. ಅವನ ಈ ಮಾತುಗಳನ್ನು ಗಮನಿಸಿ. (ಭ. ಕೃಷ್ಣಮೂರ್ತಿ) "ಇಂಗ್ಲಿಷನ್ನು ಕಲಿಯುವ ಅರ್ಹತೆ ಇರುವವರಿಗೆಲ್ಲಾ ಅದನ್ನು ಕಲಿಸೋಣ, ಆದರೆ ಪ್ರಾದೇಶಿಕ ಭಾಷೆಗಳಲ್ಲಿ ಭದ್ರವಾದ ಅಡಿಪಾಯ ಬಿದ್ದ ನಂತರವೇ ಇಂಗ್ಲಿಷ್ ಕಲಿಕೆ ಪ್ರಾರಂಭವಾಗಬೇಕು. ಏಕೆಂದರೆ ತನ್ನ ಭಾಷೆಯನ್ನು ಸಲೀಸಾಗಿ ಉಪಯೋಗಿಸಲಾರದ ಯಾವುದೇ ಜನ ಸಮುದಾಯವು ಇನ್ನೊಂದು ಭಾಷೆಯನ್ನು ಸಮರ್ಥವಾಗಿ ಉಪಯೋಗಿಸಲಾರದು.......

ಶಾಲೆಗಳಲ್ಲಿ ದೇಶ ಭಾಷೆಗಳ ಶಿಕ್ಷಣವನ್ನು ಬಹಳ ಚೆನ್ನಾಗಿ ಕೊಡಬೇಕು. ಹಾಗೆ ಮಾಡದೆ ಹೋದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಸುವ ಎಲ್ಲಾ ಪ್ರಯತ್ನಗಳು ವಿಫಲವಾಗುತ್ತವೆ."

1913 ರಲ್ಲಿ ಭಾರತ ಸರ್ಕಾರವು ಶಿಕ್ಷಣ ನೀತಿಗೆ ಸಂಬಂಧಪಟ್ಟಂತೆ ತೆಗೆದುಕೊಂಡ ನಿರ್ಧಾರ ಈ ರೀತಿ ಇದೆ. "ದೇಶ ಭಾಷೆಗಳಲ್ಲಿ ಸಮಗ್ರವಾದ ತರಬೇತಿಯನ್ನು ಪಡೆದಿರುವ ವಿದ್ವಾಂಸರು ಬೌದ್ಧಿಕವಾಗಿ ಅತ್ಯಂತ ಸಮರ್ಥರಾಗಿ ಇರುವರೆಂಬ ಸಂಗತಿಯನ್ನು ನಾವು ವಿಪುಲವಾದ ಅನುಭವದಿಂದ ತಿಳಿದುಕೊಂಡಿದ್ದೇವೆ."

ಮೇಲಿನ ಈ ಹೇಳಿಕೆಗಳಲ್ಲದೇ ಅನೇಕ ಸಂಶೋಧನೆಗಳು ಮಗುವಿನ ಆಡುಭಾಷೆಯಲ್ಲಿ ಕಲಿಕೆಯು ಪ್ರಾಥಮಿಕ ಹಂತಗಳಲ್ಲಿ ಎಷ್ಟು ಮುಖ್ಯ ಎಂದು ನಿರ್ವಿವಾದವಾಗಿ ತೋರಿಸುತ್ತವೆ. ಹಾಗೆಯೇ ಯುನೈಟೆಡ್ ನೇಷನ್ ಪ್ರಕಟಿಸಿರುವ ವರದಿಯಲ್ಲಿ ಲಾರಾ ಅಂದರ್ಸ್ ಬೇರ್ ಮತ್ತು ರಾಬರ್ಟ್ ಅವರು ಹೀಗೆ ಬರೆಯುತ್ತಾರೆ –"ದ್ವಿಭಾಷಾ ಪರಿಸರದಲ್ಲಿ ಓದಲೇಬೇಕಾದ ಮಕ್ಕಳ ಬಗ್ಗೆ ನಡೆದಿರುವ ಅಧ್ಯಯನಗಳು ನಮಗೆ ತಿಳಿಸುವುದೇನೆಂದರೆ ಮಾತೃಭಾಷೆಯಲ್ಲಿ ಮಗು ಕಲಿತ ಅವಧಿ ಹೆಚ್ಚಾದಷ್ಟು ಅದು ಆಯಾ ಮಕ್ಕಳ ಶೈಕ್ಷಣಿಕ ಯಶಸ್ಸಿಗೆ ಇತರೆಲ್ಲಾ ಅಂಶಗಳಿಗಿಂತಲೂ ಹೆಚ್ಚು ಕಾರಣವಾಗುತ್ತದೆ". ಹೀಗೆ ಪ್ರಾಥಮಿಕ ಹಂತದ ಕಲಿಕೆಯಲ್ಲಿ ಮಾತೃಭಾಷೆಯ ಪ್ರಾಮುಖ್ಯತೆ ಅಂಗೈ ಮೇಲಿನ ನೆಲ್ಲಿಕಾಯಿಯಷ್ಟು ಸ್ಪಷ್ಟವಾಗಿದ್ದರೂ ನಮ್ಮ ಪೋಷಕರು, ಕೋರ್ಟ್‌ಗಳು ಇಂಗ್ಲಿಷ್ ವ್ಯಾಮೋಹಕ್ಕೆ ಗುರಿಯಾಗಿರುವುದು ಏಕೆ? ಅಡ್ವಕೇಟ್ ಜನರಲ್ ರವಿವರ್ಮಕುಮಾರ್ ಅವರು ಸರ್ವೋಚ್ಚ ನ್ಯಾಯಾಲಯದಲ್ಲಿ ವಾದ ಮಂಡಿಸುತ್ತಿದ್ದ ವೇಳೆ ನ್ಯಾಯಾಧೀಶರೊಬ್ಬರು 'ಭಾರತವನ್ನು ಒಂದುಗೂಡಿಸುವ ಭಾಷೆ ಇಂಗ್ಲಿಷ್' ಎಂದು ಹೇಳಿದ್ದು ವರದಿಯಾಯಿತು. ಈ ಮಾತಿನ ಹಿಂದೆ ಈ ನ್ಯಾಯಾಧೀಶರ ಇಂಗ್ಲಿಷ್ ವ್ಯಾಮೋಹ ಎದ್ದು ಕಾಣುತ್ತಿದೆ. ಇಂಗ್ಲಿಷ್ ಭಾಷೆ ಭಾರತವನ್ನು ಒಂದುಗೂಡಿಸುತ್ತಿದೆ ಎಂಬ ನಂಬಿಕೆಯನ್ನು ಈ ಮಹಾಶಯರು ಏಕೆ, ಹೇಗೆ, ಎಲ್ಲಿಂದ ಪಡೆದುಕೊಂಡರು? ಭಾರತ ಎಂದರೆ ಬೆಂಗಳೂರು ಬಾಂಬೆಗಳಷ್ಟೇ ಎಂದು ಇವರು ಭಾವಿಸಿದ್ದಾರೆಯೇ? ಸ್ವಾಮಿ ವಿವೇಕಾನಂದರು, ಮಹಾತ್ಮಗಾಂಧೀಜಿಯವರು ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದನ್ನು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ. ರಾಜಾರಾಮ್ ಮೋಹನ್‌ರಾಯ್ ಅವರಂತಹ 'ಅಲಂಕಾರ ಸಮಾಜ ಸುಧಾರಕರು' ಮಾತ್ರ ಇಂಗ್ಲಿಷ್ ಭಾಷೆಯನ್ನು ಓಲೈಸಿದ್ದರು. ಆದರೆ ಗಾಂಧೀಜಿ ಮತ್ತು ಸ್ವಾಮಿ ವಿವೇಕಾನಂದರು ಮಾತೃಭಾಷೆಯಲ್ಲಿ ಶಿಕ್ಷಣ ಕೊಡಿ ಎಂದು ಒತ್ತಿಹೇಳಿದ್ದರು. ಗಾಂಧೀಜಿಯವರ ಮಾತುಗಳಲ್ಲೇ ಹೇಳಬೇಕೆಂದರೆ, "ಮಕ್ಕಳಿಗೆ ಇಂಗ್ಲಿಷ್

ಶಿಕ್ಷಣ ಕೊಡುವ ವಿಚಾರದ ಬಗ್ಗೆ ಪೋಲಾಕ್ ಹಾಗೂ ನಾನು ಆಗಾಗ ತೀವ್ರ ವಾಗ್ವಾದಕ್ಕಿಳಿಯುತ್ತಿದ್ದೆವು, ಶೈಶವದಿಂದಲೇ ಇಂಗ್ಲಿಷ್‌ನಲ್ಲಿ ಯೋಚಿಸಲು ಹಾಗೂ ಮಾತನಾಡಲು ತಮ್ಮ ಮಕ್ಕಳಿಗೆ ಕಲಿಸುವ ಭಾರತೀಯ ತಂದೆ ತಾಯಿಗಳು ತಮ್ಮ ಮಕ್ಕಳು ಹಾಗೂ ತಮ್ಮ ರಾಷ್ಟ್ರವನ್ನು ವಂಚಿಸುತ್ತಿರುತ್ತಾರೆ ಎಂಬುದೇ ಯಾವಾಗಲೂ ನನ್ನ ನಂಬಿಕೆಯಾಗಿತ್ತು. ರಾಷ್ಟ್ರದ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಪರಂಪರೆಗಳಿಂದ ದೂರವಾಗಿಸಿ ರಾಷ್ಟ್ರದ ಸೇವೆಗೆ ಅವರನ್ನು ಅನರ್ಹರನ್ನಾಗಿಸುವಂತಹದ್ದು ಇದು". (ಗುಹಾಂಕಣ–ರಾಮಚಂದ್ರಗುಪ್ತ)

ಇದೇ ಸಂದರ್ಭದಲ್ಲಿ ಗಾಂಧೀಜಿಯವರ ಮತ್ತೊಂದು ಮಾತು ಮನೋಜ್ಞವಾಗಿದೆ, ಮಗು ಶಿಶುವಾಗಿರುವಾಗ ಏನನ್ನು ಕಲಿಯುತ್ತದೋ ಅದನ್ನು ತದನಂತರದ ವರ್ಷಗಳಲ್ಲಿ ಕಲಿಯಲು ಅದಕ್ಕೆ ಸಾಧ್ಯವಾಗುವುದೇ ಇಲ್ಲ. ಈ ಸತ್ಯವನ್ನು ಗಾಂಧೀಜಿಯವರು ಹೀಗೆ ಹೇಳಿದರು– "ಮಗು ತನ್ನ ಬಾಲ್ಯದ ಮೊದಲ ಐದು ವರ್ಷಗಳಲ್ಲಿ ಏನನ್ನೂ ಕಲಿತಿರುವುದಿಲ್ಲವೆಂಬ ತಪ್ಪು ಕಲ್ಪನೆ ಪ್ರಚಾರದಲ್ಲಿದೆ. ವಾಸ್ತವವಾಗಿ ಬಾಲ್ಯದ ಮೊದಲ ಐದು ವರ್ಷಗಳಲ್ಲಿ ಕಲಿಯದೇ ಇದ್ದುದನ್ನು ಮಗು ಬಳಿಕ ಕಲಿಯುವುದೇ ಇಲ್ಲ ಎಂಬುದನ್ನು ಮರೆಯಬಾರದು. ಮಗುವಿನ ಶಿಕ್ಷಣ, ಗರ್ಭಾವಸ್ಥೆಯಿಂದಲೇ ಆರಂಭವಾಗುತ್ತದೆ ಎಂಬುದೇ ಸತ್ಯ ವಿಚಾರ."

ಇಂಗ್ಲಿಷ್–ಕನ್ನಡ ಮಾಧ್ಯಮ ಸಂಬಂಧವಾಗಿ ನಾವು ದೊಡ್ಡವರಷ್ಟೇ ಚರ್ಚೆಮಾಡಿ ನಿರ್ಧರಿಸಿಬಿಡುತ್ತೇವೆ. ಆದರೆ ಮಗುವಿಗೆ ಯಾವ ಭಾಷೆಯಲ್ಲಿ ಕಲಿಯಲು ಇಷ್ಟ ಎಂದು ಮಕ್ಕಳನ್ನು ಕೇಳಿದ್ದೇವೆಯೇ? ಮಕ್ಕಳನ್ನು ಸ್ವತಂತ್ರ ವ್ಯಕ್ತಿತ್ವವುಳ್ಳ ವ್ಯಕ್ತಿಗಳು ಎಂದು ನಾವು ಪರಿಗಣಿಸುವುದೇ ಇಲ್ಲ. ಹಾಗಾಗಿ ಮಗುವಿನ ಆಯ್ಕೆ, ಇಷ್ಟ ಅನಿಷ್ಟಗಳನ್ನು ಅದರ ನೋವು ಆತಂಕಗಳನ್ನು ನಾವು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. 'ಮಗುವಿಗೆ ಏನೂ ತಿಳಿಯುವುದಿಲ್ಲ' ಎಂದು ಹೇಳುತ್ತ ದೊಡ್ಡವರೇ ಮಗುವಿನ ಬಗ್ಗೆ ಎಲ್ಲ ಆಯ್ಕೆಗಳನ್ನು, ನಿರ್ಧಾರಗಳನ್ನು ಮಾಡಿಬಿಡುತ್ತೇವೆ. ಶಿಶುಕೇಂದ್ರಿತ ಶಿಕ್ಷಣ ಬಹಳ ಮುಖ್ಯ ಎಂದು ಗುರುತಿಸುತ್ತಿರುವ ಈ ದಿನಗಳಲ್ಲಿ ಭಾಷೆಯ ಬಗ್ಗೆ ಮಗುವಿನ ಆಯ್ಕೆಯನ್ನು ಗೌರವಿಸಬೇಡವೆ? ಭಾಷೆಯ ವಿಷಯದಲ್ಲಿ ಮಗುವಿನ ಆಯ್ಕೆ ಯಾವುದು ಯಾವ ಭಾಷೆ ಮಗುವಿಗೆ ಆತಂಕವನ್ನುಂಟು ಮಾಡದೆ ಸಹಜ ಕಲಿಕೆಗೆ ಸಹಾಯ ಮಾಡುತ್ತದೆ ಎಂದು ನಾವು ವಿಚಾರ ಮಾಡಬೇಕು. ಈ ವಿಚಾರವಾಗಿ ಮಗುವನ್ನು ಎಳ್ಳಷ್ಟೂ ಗಣನೆಗೆ ತೆಗೆದುಕೊಳ್ಳದೆ ಮಗುವಿನ ಪರವಾಗಿ ನಾವೇ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳಲು ನಮಗೇನು ಹಕ್ಕಿದೆ? ಬೆಳವಣಿಗೆಯ ಮೊದಲ ಹಂತಗಳಲ್ಲಿ ಮಗು ತನಗೆ ಅನಿಸಿದ್ದನ್ನು ನಿರರ್ಗಳವಾಗಿ

ಮಾತಿನಲ್ಲಿ ಹೇಳುವುದು ಸಾಧ್ಯವಾದರೆ ಅದರ ವ್ಯಕ್ತಿತ್ವ ವಿಕಾಸವಾಗುತ್ತದೆ. ಹೀಗೆ ಅನಿಸಿದ್ದನ್ನು ಮಗು ಹೇಳಬೇಕಾದರೆ ಮಾತೃಭಾಷೆಗಿಂತ ಸಹಜವಾದದ್ದು ಬೇರೆ ಯಾವುದಾದರೂ ಇರಲು ಸಾಧ್ಯವೇ? ಮಗು ತನಗೆ ಅನಿಸಿದ್ದನ್ನು ಸುಲಲಿತವಾಗಿ ಹೇಳಲು ವಿಫಲವಾದರೆ ಅದರ ಮನಸ್ಸಿನಲ್ಲಿ ಒಂದು ಕೊರಗು, ಒಂದು ಅತೃಪ್ತಿ ಹುಟ್ಟುತ್ತದೆ. ಈ ಅತೃಪ್ತಿಗೆ ತನ್ನದೇ ಅಸಮರ್ಪಕತೆ ಕಾರಣ ಎಂದು ತಿಳಿದು ಮಗು ತನ್ನ ಬಗೆಗೆ ತಾನೇ ಜಿಗುಪ್ಸೆ ಬೆಳೆಸಿಕೊಳ್ಳಬಹುದು. ಇದರಿಂದಾಗಿ ಮಗುವಿಗೆ ಇರಬಹುದಾದ ಇತರ ಸುಪ್ತ ಸಾಮರ್ಥ್ಯಗಳೂ ಕುಂದಿಹೋಗಬಹುದು.

ಮಾತೃಭಾಷೆಯ ಜೊತೆಗೆ ತರಗತಿಯಲ್ಲಿ ಅನಿವಾರ್ಯವಾಗಿ ಇರಬಹುದಾದ ಬಹುಭಾಷಾ ಪರಿಸರವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕೆಂದು ನಮ್ಮ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಹೇಳುತ್ತದೆ. ಈ ಬಹುಭಾಷಾ ಪರಿಸರದಲ್ಲಿ ಇಂಗ್ಲಿಷ್ ಒಂದು ಅಸಂಬದ್ಧತೆಯನ್ನು ತಂದಿಡುವುದರಲ್ಲಿ ಸಂದೇಹವೇ ಇಲ್ಲ. ಜೊತೆಗೆ ಇಂಗ್ಲಿಷ್ ಭಾರತದ ಯಾರ ಮಾತೃಭಾಷೆಯೂ ಅಲ್ಲ. ಅದರ ರಚನೆ ನಮ್ಮ ಸ್ಥಳೀಯ ಭಾಷೆಗಳನ್ನು ಹೋಲದಿರುವುದರಿಂದ ಅದು ಆಗಂತುಕ ಭಾಷೆಯಾಗಿಯೇ ಉಳಿಯುತ್ತದೆ.

ವಿಜ್ಞಾನ ಮತ್ತು ಗಣಿತಗಳಲ್ಲಿ ನಾವು ಹಿಂದುಳಿಯಲು ಇಂಗ್ಲಿಷ್ ಅಭಾವವೇ ಕಾರಣ, ಆದ್ದರಿಂದ ಇಂಗ್ಲಿಷ್ ಭಾಷೆಯನ್ನು ನಾವು ಮಕ್ಕಳಿಗೆ ಮೊದಲ ಹಂತದಿಂದಲೇ ಕೊಡಬೇಕೆಂಬುದು ಮತ್ತೊಂದು ವಾದ. ಆದರೆ ಅಂಕಿ ಅಂಶಗಳ ಪ್ರಕಾರ ಪ್ರಾಥಮಿಕ ಹಂತದಲ್ಲಿ ದಾಖಲಾದ ಸಾವಿರ ವಿದ್ಯಾರ್ಥಿಗಳಲ್ಲಿ 10ನೇ ತರಗತಿ ಪಾಸಾಗುವವರು ಕೇವಲ 300, ಇವರಲ್ಲಿ ಪಿ.ಯು.ಸಿ. ಮೆಟ್ಟಿಲು ಹತ್ತುವವರು ಕೇವಲ 15, ಮತ್ತು ವಿಜ್ಞಾನ ಆಯ್ಕೆ ಮಾಡಿಕೊಂಡು ಸಿ.ಇ.ಟಿ. ಬರೆಯುವವರು ಕೇವಲ ಮೂರು ಮಂದಿ ಮಾತ್ರ ಸಾವಿರ ವಿದ್ಯಾರ್ಥಿಗಳಲ್ಲಿ ಈ ಮೂರು ಮಕ್ಕಳಿಗೆ ಇಂಗ್ಲಿಷ್ ಭಾಷೆಯ ನಿಜವಾದ ಅವಶ್ಯಕತೆ ಇದೆ. ಈ ಮೂರು ಮಕ್ಕಳ ಅವಶ್ಯಕತೆಯನ್ನು ಸಾವಿರ ಮಕ್ಕಳ ಮೇಲೆ ಬಲವಂತವಾಗಿ ಹೇರುವುದಾದರೂ ಏಕೆ? ಮೇಲಾಗಿ ಹತ್ತನೇ ತರಗತಿಯ ನಂತರ ಇಂಗ್ಲಿಷ್ ಮೀಡಿಯಂಗೆ ಸೇರಿಕೊಂಡು ಯಾವ ಸಮಸ್ಯೆಯೂ ಇಲ್ಲದ ಮುಂದುವರಿದ ಅನೇಕರು ನಮ್ಮ ನಡುವೆ ಇದ್ದಾರೆ. ಸರಿಯಾದ ಮಾತೃಭಾಷಾ ಬುನಾದಿಯಿದ್ದರೆ ಇಂಗ್ಲಿಷ್ ಅಂತಹ ಕಷ್ಟಸಾಧ್ಯವಾದ ಭಾಷೆ ಏನಲ್ಲ.

ಪರಿಸ್ಥಿತಿ ಹೀಗಿರುವಾಗ ಇಂಗ್ಲಿಷ್ ಮಾಧ್ಯಮವನ್ನು ವಿಪರೀತ ವೈಭವೀಕರಿಸುವುದು ಉಪಯುಕ್ತವೂ ಅಲ್ಲ. ಅಥವಾ ವೈಜ್ಞಾನಿಕವೂ ಅಲ್ಲ. ಕನ್ನಡ

ಭಾಷೆಯ ಸಮಸ್ಯೆಗೆ ಮಾಧ್ಯಮದ ಪ್ರಶ್ನೆಯಷ್ಟೇ ಸವಾಲಾಗಿ ಎದುರಾಗಿಲ್ಲ, ಇಡೀ ಸಾಂಸ್ಕೃತಿಕ ಪರಿಸರ ಕನ್ನಡ ಭಾಷೆಯನ್ನು ಕಳೆದುಕೊಳ್ಳುತ್ತಿದೆ. ಸಾಂಸ್ಕೃತಿಕ ಗುಲಾಮಗಿರಿಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ, ಜಾಗತೀಕರಣದ ಕೈಗೊಂಬೆಗಳಾಗಿ ನಾವು ನಮ್ಮ ಸಾಂಸ್ಕೃತಿಕ ಪರಿಸರವನ್ನು 'ಸ್ವದೇಶಿ'ಗೆ ಬದಲಾಗಿ 'ವಿದೇಶಿ'ಯಾಗಿ ಮಾಡಿಟ್ಟಿದ್ದೇವೆ. ಇದು ಅನಿವಾರ್ಯ ಎಂಬ ಮಾತು ವಿಚಾರವಂತರ ಬಾಯಲ್ಲೂ ಮೂಡಿಬರುತ್ತಿದೆ. ಇದು ಅನಿವಾರ್ಯವಲ್ಲ ಎಂದು ಹೇಳುವ ಮಂದಿ ವಿರಳರಾಗುತ್ತಿದ್ದಾರೆ. ಇದೇ ನಿಜವಾದ ಸಮಸ್ಯೆ.

ಒಂದು ಭಾಷೆಯಾಗಿ ಇಂಗ್ಲಿಷ್ ಬೇಡ ಎಂದು ಯಾರೂ ಹೇಳುತ್ತಿಲ್ಲ. ಕಲಿಕೆಯ ಮೊದಲ ಹಂತಗಳಲ್ಲಿ ಸುಸಂಬದ್ಧವಾದ ಗ್ರಹಿಕೆ ಮತ್ತು ವ್ಯಕ್ತಿತ್ವ ನಿರ್ಮಾಣ ಆಗಬೇಕಾದರೆ ಮಗು ತನ್ನ ಆಡುಭಾಷೆಯಲ್ಲಿ ಕಲಿತರೆ ಒಳಿತು. ಕನ್ನಡದ ಬರಹಗಾರರು ವಿಶ್ವವಿದ್ಯಾಲಯಗಳು ನಮಗೆ ಅಗತ್ಯವಾದ ಎಲ್ಲಾ ವಿಷಯಗಳನ್ನೂ ಕನ್ನಡ ಭಾಷೆಯಲ್ಲಿ ತರಬಹುದಾಗಿತ್ತು. ಆದರೆ ಉತ್ತಮವಾದ ವಿಜ್ಞಾನ–ಗಣಿತಗಳು ಬೇಕೆಂದರೆ ನಾವು ಇಂಗ್ಲಿಷ್‌ನತ್ತ ಈಗ ನೋಡಬೇಕಾಗಿದೆ. ಸ್ವಾತಂತ್ರ್ಯ ಬಂದು ಆರೇಳು ದಶಕಗಳು ಕಳೆದರೂ ನಾವು ಈ ನಿಟ್ಟಿನಲ್ಲಿ ಏನೂ ಮಾಡಲಿಲ್ಲ.

ಇಂತಹ ಒಂದು ಸಂದರ್ಭದಲ್ಲಿ ನಿಂತ ನಮಗೆ ಬಿ.ಎಂ.ಶ್ರೀ ಯವರ ಮಾತು ನೆನಪಿಗೆ ಬರುತ್ತದೆ. "ನಮ್ಮ ಭಾಷೆಯನ್ನು ನಾವು ಎತ್ತದೇ ಹೋದರೆ, ಎತ್ತುವವರು ಯಾರು? ಎತ್ತುವುದಕ್ಕೆ ನಿಂತರೆ ತಡೆಯುವವರು ಯಾರು?"

ಈ ಸಂದರ್ಭದಲ್ಲಿ ಆಗ್‌ನಾನ್ ಎಂಬ ಹಿಬ್ರೂ ಲೇಖಕ ನೆನಪಿಗೆ ಬರುತ್ತಾನೆ. ಹಿಬ್ರೂಗಳು ಅನೇಕ ಚಾರಿತ್ರಿಕ ಕಾರಣಗಳಿಂದ ತಮ್ಮ ಭಾಷೆಯ ಬಳಕೆಯನ್ನು ಕಳೆದುಕೊಂಡಿದ್ದರು. ಎರಡು ಸಾವಿರ ವರ್ಷಗಳವರೆಗೆ ಅದೊಂದು ಸತ್ತಭಾಷೆಯಾಗಿತ್ತು. ಅದರೆ ಸುಮಾರು ಅರ್ಧ ಶತಮಾನದ ಹಿಂದೆ ಅದಕ್ಕೆ ಪುನರ್ಜೀವ ನೀಡಲಾಯಿತು. ಸತ್ತುಹೋದ ಈ ಭಾಷೆಯಲ್ಲಿ ಅಗನಾನ್ ಬರೆದ, ಅವನಿಗೆ ನೋಬೆಲ್ ಬಹುಮಾನವೂ ಬಂದಿತು. ನಮ್ಮ ಕನ್ನಡಕ್ಕೆ ಇಂತಹ ದುಸ್ಥಿತಿಯೇನೂ ಒದಗಿ ಬಂದಿಲ್ಲ. ಕನ್ನಡ ಜನ ತಮ್ಮ ಉಳಿವಿಗಾಗಿ ಕನ್ನಡವನ್ನು ಉಳಿಸಿಕೊಳ್ಳಬೇಕಾಗಿದೆ.

~ * ~ * ~ * ~

*ಆಕರ : 'ತಾಯ್ನುಡಿಯ ಸಂಕಟಕ್ಕೆ ದನಿಯಾಗಿ' – ಸಂ. ರೂಪಾ ಹಾಸನ, ಪ್ರಕಾಶನ : ಅಭಿರುಚಿ ಪ್ರಕಾಶನ, ಸರಸ್ವತೀಪುರ, ಮೈಸೂರು*

~ * ~ * ~ * ~

# 2. ಆಧುನಿಕತೆ :


| | | | |
|---|---|---|---|
| 2.1 | ಹೊಸ ಜನುಮ<br>– *ಉರ್ದು ಮೂಲ:* ಖಲೀಲ್ ಮಾಮೂನ್<br>*ಅನುವಾದ:* ಮಾಹೆರ್ ಮನ್ಸೂರ್, ಬಿ.ಆರ್. ಲಕ್ಷ್ಮಣರಾವ್ | | 033 |
| 2.2 | ಕಲ್ಲಲಾಂಬು | – ಅನು ಬೆಳ್ಳೆ | 036 |
| 2.3 | ಎಲ್ಲದಕ್ಕೂ ಮೂಲದಲ್ಲಿ ತಂತ್ರಜ್ಞಾನವಿದೆ | – ನಾಗರಾಜ ವಸ್ತಾರೆ | 045 |
| 2.4 | ಓದುಪಠ್ಯ: ಆಧುನಿಕತೆ: ಮಾತು ಮತ್ತು ತರ್ಕದ ಪಂಜರ | – ಎಂ. ಆರ್. ದತ್ತಾತ್ರಿ | 059 |

## ಆಶಯ :

ತಂತ್ರಜ್ಞಾನವೆನ್ನುವುದು ಆಯಾ ಕಾಲದ ಬದುಕಿನ ಶೋಧರೂಪ. ಆಧುನಿಕತೆಯೆನ್ನುವುದು ಆಯಾಕಾಲದ ಸಮಕಾಲೀನ ಸ್ವರೂಪ. ನಮ್ಮ ಬದುಕಿಗೆ ಪೂರಕವಾಗಿ ಎತ್ತಿನ ಬಂಡಿಯನ್ನು ಶೋಧಿಸಿದ್ದು ಒಂದು ಅದ್ಭುತ ತಂತ್ರಜ್ಞಾನವಲ್ಲವೆ? ಚಕ್ರದ ಶೋಧ ಮುಂದಿನ ಅನೇಕ ತಂತ್ರಜ್ಞಾನಗಳಿಗೆ ಆಧಾರವಲ್ಲವೆ? ನೇಗಿಲನ್ನು ಸಿದ್ಧಪಡಿಸುವ ಬಡಗಿ ಒಬ್ಬ ಕೃಷಿಕ ತಂತ್ರಜ್ಞಾನಿಯಲ್ಲವೆ? ನೇಗಿಲ ಕುಳವನ್ನು ತಯಾರಿಸುವ ಕಮ್ಮಾರನು ತಂತ್ರಜ್ಞಾನಿಯಲ್ಲವೆ? ಕಾರು, ಟ್ರ್ಯಾಕ್ಟರುಗಳಂತೆ ಎತ್ತಿನ ಬಂಡಿ, ನೇಗಿಲುಗಳೂ ತಂತ್ರಜ್ಞಾನದ ಫಲಿತ ರೂಪಗಳೇ ಆಗಿವೆ. ತಂತ್ರಜ್ಞಾನವು ಕೇವಲ ನಗರ ಕೇಂದ್ರಿತವಲ್ಲ; ಆಧುನಿಕತೆಯೂ ಅಷ್ಟೆ. ನಗರೀಕರಣವೇ ಆಧುನಿಕತೆಯಲ್ಲ; ಅಲ್ಲದೆ ಪಾಶ್ಚಾತೀಕರಣವಷ್ಟೇ ಆಧುನಿಕತೆಯಾಗುವುದಿಲ್ಲ. ತಂತ್ರಜ್ಞಾನ ಮತ್ತು ಆಧುನಿಕತೆಗಳು ಗ್ರಾಮ ಮತ್ತು ನಗರ–ಎರಡರಲ್ಲೂ ಹಾಸುಹೊಕ್ಕಾಗಿವೆ; ಇದಕ್ಕೊಂದು ಪರಂಪರೆಯಿದೆ. ಬಾವಿಯ ನೀರೆತ್ತಲು ಕಪಿಲೆಬಾನಿಯನ್ನು ಚರ್ಮದಲ್ಲಿ ನಿರ್ಮಿಸಿ ಬಳಸುವ ಪದ್ಧತಿಯ ಬದಲು ವಿದ್ಯುತ್ ಪಂಪ್‌ಸೆಟ್ಟುಗಳು ಬಂದ ಕೂಡಲೇ ಕಪಿಲೆಬಾನಿ 'ತಂತ್ರ'ವು ಜ್ಞಾನವೇ ಅಲ್ಲವೆನ್ನಲಾದೀತೆ? ಬಾವಿಯಿಂದ ನೀರೆತ್ತಲು ಯಾವುದೇ 'ತಂತ್ರ'ವಿಲ್ಲದಿದ್ದಾಗ ಕಂಡುಹಿಡಿದ 'ಕಪಿಲೆಬಾನಿ'ಯು ಅಂದಿನ ಆಧುನಿಕ ಉತ್ಪನ್ನ: ವಿದ್ಯುತ್ ಪಂಪಸೆಟ್ಟು ಅನಂತರದ ಆಧುನಿಕ ಉತ್ಪನ್ನ ಒಂದು ಕಾಲದ ಆಧುನಿಕರೂಪಗಳು ಇನ್ನೊಂದು ಕಾಲಕ್ಕೆ ಹಳೆಯವಾಗಬಹುದು. ಆದರೆ ಚಾರಿತ್ರಿಕ ಮತ್ತು ಪಾರಂಪರಿಕ ಮಹತ್ವವನ್ನು ಕಳೆದುಕೊಳ್ಳುವುದಿಲ್ಲ. ಕಳೆದುಕೊಳ್ಳಬಾರದು. ಹೀಗೆಂದ ಕೂಡಲೆ ಹಳೆಯದೆಲ್ಲ ಅತ್ಯುತ್ತಮವೆಂಬ ಭಾವನೆಯೂ ಸಲ್ಲದು. ಈ ಮಾತು ಆಧುನಿಕತೆಗೂ ಅನ್ವಯಿಸುತ್ತದೆ. ತಂತ್ರಜ್ಞಾನದ ವಿಷಯದಲ್ಲಂತೂ ಆಧುನಿಕವಾದದ್ದೆಲ್ಲ ಹಳೆಯದಾಗುವ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಹಳೆಯದು, ಮನುಷ್ಯನ ಬಾಲ್ಯದಂತೆ, ಆಧುನಿಕತೆಯನ್ನು ಕಾಡಿಸುವತ್ತಲೇ ಇರುತ್ತದೆ. ಹಳೆಯದರ ಅಂಚಿನಲ್ಲಿ ಆಧುನಿಕತೆಯು ಹೊಸ ಬಾಲ್ಯವಾಗಿ ಹುಟ್ಟುತ್ತದೆ; ಯೌವನವಾಗಿ ಬೆಳೆಯುತ್ತ ಕನಸುಗಳ ಲೋಕವನ್ನು ಕಾಣುತ್ತ, ಕಾಣಿಸುತ್ತ, ಮುಪ್ಪಾಗುತ್ತದೆ; ಮುಪ್ಪಾಗುತ್ತಲೇ ಹೊಸಬಾಲ್ಯಕ್ಕೆ ಹುಟ್ಟಾಗುತ್ತದೆ. ಇದೊಂದು ಪೂರಕ ಮತ್ತು ಪ್ರತಿರೋಧದ ಪ್ರಕ್ರಿಯೆ.

– ಡಾ. ಬರಗೂರು ರಾಮಚಂದ್ರಪ್ಪ

## 2.1 ಹೊಸ ಜನುಮ

**– ಉರ್ದು ಮೂಲ: ಖಲೀಲ್ ಮಾಮೂನ್**
**ಅನುವಾದ: ಮಾಹೆರ್ ಮನ್ಸೂರ್, ಬಿ.ಆರ್.ಲಕ್ಷ್ಮಣರಾವ್**

ಪ್ರಕಾಶದ ಕನ್ನಡಿ ಒಡೆದು ಹೋಯಿತು.
ಗರ್ಜಿಸುವ ಮೋಡಗಳಂತೆ ತನಗೆ ತಾನೇ ಡಿಕ್ಕಿ ಹೊಡೆದು
ಸುತ್ತಲೂ, ಗಾಜಿನ ಚೂರುಗಳು ಹರಡಿದ
ಭೂಕಂಪಗಳಲ್ಲಿ ಕಣ್ಮರೆಯಾಗುತ್ತಿರುವ ಬಂಡೆಗಳ ಮೇಲೆ
ಬೆಂಕಿಯ ಮಳೆ
ತೀವ್ರ ಕಾದಿರುವ ಮರುಭೂಮಿಗಳಲ್ಲಿ
ಸಾಗುತ್ತಿರುವ ಕಾರುವಾನಗಳು ನಿಂತು ಹೋದವು.
ಕೆಂಡದಂತಹ ಸುಡುತ್ತಿರುವ ಬಿಸಿಲಿನಿಂದ ಕಾಲುಗಳು ಗಾಯಗೊಂಡವು.
ಮೈಮುರಿಯುತ್ತಾ, ಬೆಳಕಲ್ಲಿ ಕಾಲುದಾರಿಗಳ ಮೇಲೆ ರಕ್ತ ಹರಿಯುವ
ವಾರೆಂಟಿನ ಕಸರತ್ತಿನಿಂದ, ಭಾರ ಹೊತ್ತಿದ ಪೊದೆಗಳ ತುಟಿ ಮೇಲೆ
ಮುಗುಳ್ನಗೆ, ಕಾಲು ದಾರಿಗಳು ಹೂದೋಟವಾದವು.
ತೆನೆಗಾಣುತ್ತಿರುವ ಹಸಿರು ಕತ್ತಲಿನ ಫಲವತ್ತು
ಹರಡಿತ್ತು. ಕಪ್ಪು ಕಾಡುಗಳು ಹಸಿರಾದವು.
ಬಾಯಾರಿದ ಸೃಷ್ಟಿ
ಒಂದು ಜೀವದಾನ ಮಾಡುವಂತಹ ಚಿಲುಮೆಯಲ್ಲಿ ಸ್ನಾನ ಮಾಡಿ
ಸುರಕ್ಷಿತವಾಗಿ ಇಟ್ಟಿರುವ ಕಾಗದ (ಲೌವ್‌ಹೇ ಮಹಪೂಜ್) ಮೇಲೆ,
ಒಂದು ಸಿಡಿಲು ಹೊಡೆಯಿತು.
ಆಕಾಶದಿಂದ ಭೂಮಿಯವರೆಗೆ
ನಕ್ಷತ್ರಗಳ ಸಮೂಹ ನಗುತ್ತಿತ್ತು.
ಆಕಸ್ಮಿಕ ಸಾವಿನ ಹೃದಯ ನೋಯಿಸುವ ಗಂಟಲಲ್ಲಿ
ಅಕ್ಷರ ಮತ್ತು ಅಕ್ಷರದ ಕಾರುವಾನಗಳು ಮರಳಿದವು.
ಹೊಗೆಯಂತೆ ಹರಡುತ್ತಾ ಮುಸುಕಿನಲ್ಲಿ
ಪರಿವರ್ತಿಸಿಕೊಂಡು ವ್ಯಾಕುಲಗೊಂಡವು, ಮೂಲಾಂಶಗಳು, ಆತ್ಮಗಳು,
ಕಲ್ಲಾಗಿದ್ದ ಕಣ್ಣುಗಳು, ಕಣ್ಣಿನ ರೆಪ್ಪೆಗಳು, ಕಣ್ಣು ಮುಚ್ಚಿ,
ಕನಸುಳ್ಳ ಕಿವಿಗಳ ಹೊಸ್ತಿಲಲ್ಲಿ ಗಾಳಿ ಕದ ತಟ್ಟುತ್ತೆ.
ಮನಗಳು ತೆರೆದವು, ಹುಚ್ಚು ಮನಸ್ಸಿನ ಮೇಲೆ ರೆಕ್ಕೆಗಳನ್ನು ಬಿಚ್ಚಿ
ಮರಣ ಸಂಕಟ ಜೇಡರ ಬಲೆಯಂತೆ ಸುರಂಗಗಳಿಂದ
ಹೊರಬಂದಿತ್ತು
ಅಂಗಾಂಗಗಳ ಸೆಳೆತದಲ್ಲಿ ಕಟ್ಟಿಸಿಕೊಂಡ

ಅಕ್ಷರಗಳ ಸರಪಳಿ ಸಡಿಲಿಸಿತು
ಆರ್ಶ್ ನಿಂದ ಪರ್ಶ್ ವರೆಗೆ...
ನಿದ್ರೆಯ ರೇಷ್ಮೆ ಉಯ್ಯಾಲೆ ತೊನೆದಾಡಿದವು. ಬಿಳಿಯ ಆಕಾಶದಲ್ಲಿ
ಗುಂಪು ಗುಂಪಾಗಿ ಹಾರುತ್ತಿರುವ ಅಬಾಬೀಲ್, ಪಕ್ಷಿಗಳಂತೆ
ಕ್ರಮೇಣ ತನ್ನನ್ನೇ ಹೀರಿಕೊಳ್ಳುತ್ತಿರುವ ನೀಲಿ ಬಣ್ಣದ ಕತ್ತಲೆ
ಉರಿಯುವ ಕಣ್ಣುಗಳ ಅಂಜನವಾಗಿ, ಅಕಾಶದ ಮೇಲೆ
ಕನಸಿನಂತೆ ಚಂದ್ರೋದಯ,
ಶೂನ್ಯ ಪ್ರದೇಶದ ಹಸಿರು ಕಣಿವೆಗಳಲ್ಲಿ ಅಂತಃಪುರದಂತೆ
ನಕ್ಷತ್ರಗಳು ಹೊಳೆಯಲು ಪ್ರಾರಂಭಿಸಿದವು.
ಇಬ್ಬನಿಯಲ್ಲಿ ಮುಳುಗಿದ ಹಸಿರಿನಲ್ಲಿ
ಕೊಚ್ಚೆ ನೆರಳು ತೊನೆದಾಡಿತು.
ಮರೆತು ಹೋಗಿದ್ದ ಎಷ್ಟೋ ಕನಸುಗಳು ಮರಳಿ ಬಂದವು.
ಕತ್ತಲೆಯುಳ್ಳ ಮನೆಗಳಲ್ಲಿ ಬೆಳಕು ಬಂತು
ಮುಚ್ಚಿದ ಎಲ್ಲಾ ಬಾಗಿಲುಗಳು, ತೆರೆಯಲ್ಪಟ್ಟವು.
ಜೋಳಿಗೆಗಳು ತುಂಬಿ ಹೋದವು.
ನಾಲ್ಕು ದಿಕ್ಕುಗಳಲ್ಲಿ ಅಜೀವ ಬಯಲುಗಳಂತೆ ಗುರಿ ಮತ್ತು ಕಾರವಾನಿನ
ಚಿರು ತಿಂಡಿಯಲ್ಲಿ ತಲ್ಲೀನಳಾಗಿ, ಕಾಮ ಕ್ರಿಯಾ ರಸ್ತೆಗಳ ಮೇಲೆ
ಜನ ಸಮೂಹ ಆಗುತ್ತಿದೆ. ಮೈಲುಗಲ್ಲುಗಳಿಂದ ವಂಚಿತ
ನಾನಾ ಕಡೆಗಳಿಂದ ಬರುತ್ತಾ ಹೋಗುತ್ತಾ
ಮರಗಳಿಲ್ಲದ ಹೆದ್ದಾರಿಗಳ ಮೇಲೆ ಹಗಲಿರುಳಿನ ಗದ್ದಲ ಕಡಿಮೆಯಾಯಿತು
ನಗರದ ಸುರಕ್ಷತೆ ಇಲ್ಲದ ರಸ್ತೆಗಳ ಮೇಲೆ
ಓಡುತ್ತಾ ಮತ್ತು ಧಾವಿಸುತ್ತಾ ಕಾಲುಗಳ ಭಯಭರಿತ ಪ್ರವಾಹ ಸಲ್ಲುವಿಲ್ಲದ
ಎಲ್ಲಾ ದಿನಗಳು ಕ್ರಮೇಣ ಒಂದೇ ನಾದದಲ್ಲಿ ಪರಿವರ್ತನೆಗೊಂಡಿವೆ.
ಹಾಡುಗಳು ಹೂವಾಗಿ ಪರಿವರ್ತಿಸಿಕೊಂಡವು ಮತ್ತು
ಹೂ ತುಂಬಿದ ರಸ್ತೆಗಳಲ್ಲಿ ಸ್ನೇಹ ಪರಿಮಳ ಬೀರುತ್ತವೆ.
ಪರಿಮಳ ನೋಡಿಲ್ಲದ ರಸ್ತೆಗಳ ಆಹ್ವಾನವಾಯಿತು
ಒಬ್ಬಂಟಿ ಪಯಣಿಗ ಹೂ ತುಂಬಿದ ರಸ್ತೆಗಳ ಮೇಲೆ ಗೊತ್ತಿಲ್ಲದ ಪದ
ರಹಸ್ಯಮಯ ಬೆಳಕಿನ ಕಿಡಿಗಳು ಆದಿ ಸ್ಪರ್ಶದಿಂದ ಸುಟ್ಟು ಹೋದವು
ಮನದ ಲೋಕ ಬೆಳಗಿತು,
ಪಯಣಗಳು ಸಾಮೀಪ್ಯದ ಉಲ್ಲಾಸದಿಂದ ನಗು ನಗುತ್ತಾ
ಒಬ್ಬೊಬ್ಬರ ಹತ್ತಿರ ಬಂದರೂ ಬಿಸಿ ಉಸಿರಾಟದ ಘರ್ಜನೆಯಿಂದ
ಗುಮಾನಿಗಳಿಂದ ತುಂಬಿ ಆದಾಯ ಲಕ್ಷಾನದ ಪಂಕ್ತಿಗಳಲ್ಲಿ
ಕೋಲಾಹಲ ಉಂಟು ಮಾಡಿದರು.

ಸುರಕ್ಷತೆಯ ಕಬ್ಬಿಣದ ಕವಚ ಸುಟ್ಟು ಹಾಕಿದರು.
ಮುಖದ ಮೇಲಿನ ಮುಸುಕು ಉಲ್ಟಾ ಮಾಡಿದರು,
ಚಹರೆಗಳು ಪ್ರಕಾಶಮಾನವಾದವು.
ಇದೇ ಪ್ರಪಂಚ, ಇಡೀ ಪ್ರಪಂಚವೇ, ಪ್ರಕಾಶಮಾನವಾಯಿತು.
ಏಳು ಆಕಾಶದ ಕನ್ನಡಿಗಳು ಜಳಜಳಿಸಿದವು.
ಬ್ರಹ್ಮಾಂಡ ಸರಹದ್ದುಗಳು ಒದ್ದೆ ದಾರದ ಹಾಗೆ ಮುರಿದು ಹೋದವು.
ಕ್ಷಣ ಕ್ಷಣ ಬದಲಾಗುತ್ತಿರುವ, ಸಮಯದ ಚಕ್ರ, ಹರಿದು ಹೋಯಿತು.
ತುಂಡು ತುಂಡಾಯಿತು, ಆದಿ ಮತ್ತು ಕೊನೆಯ ದಿನ, ನಿರಂತರ ಬದಲಾದವು.
ಒಂದೇ ಧಾರೆ ಆದವು.
ಕೊನೆಯಿಲ್ಲದ ಆಕಾಶದಿಂದ, ಭೂಮಿ ಮೇಲೆ ಇಳಿಯುವ
ಒಂದು ಮಿನುಗುತಾರೆ, ಆದವು.
ಜಡವಾದ ರಕ್ತದಲ್ಲಿ, ಕೆಂಡವಾದವು.
ಸುತ್ತಲೂ
ಬಣ್ಣ ಬಣ್ಣದ ಪ್ರಕಾಶದ ನದಿ, ಹರಿಯಲು ಆರಂಭಿಸಿತು.
ಪ್ರಕಾಶಗಳಲ್ಲಿ ಕನಸಿನ ದೋಣಿಗಳಲ್ಲಿ, ಪ್ರಚಲಿತ ಕಣ್ಣು
ನೋಡುತ್ತಿರುವ ಕಣ್ಣಲ್ಲಿ
ಕಣ್ಣೀರು ತುಂಬಿತು.
ರಾತ್ರಿಯ ಕೆಂಡದಿಂದ, ಹೂದೋಟ ಆಗುತ್ತಿರುವ ಭೂಮಿಯಲ್ಲಿ
ಕರೆದ ಮತ್ತು ಬರುವ ವಯಸಿನ, ದುಃಖದ ಪ್ರವಾಹ, ಇಂಗಲು
ಪ್ರಾರಂಭಿಸಿತು.
ಕ್ರಮೇಣ ಒದ್ದೆಯಾದ ಮಣ್ಣಿನಲ್ಲಿ, ಹೊಸ ಎಲೆಗಳು
ಕೋಮಲ ಅಂಗೈ ಮೇಲೆ, ಪ್ರಪಂಚ
ಇಬ್ಬನಿಯ ಚಿಕ್ಕ ಚೊಕ್ಕ ತೊಟ್ಟುಗಳ ತರಹ ಜಳ ಜಳಿಸಿ
ಹೊಸ ಬೆಳಕು ಬರಲು ಆರಂಭವಾಗಲಿ,
ಹೊಸ ಪ್ರಾತಃಕಾಲ ಬರಲು, ಆರಂಭವಾಯಿತು.

~ * ~ * ~ * ~

*ಆಕರ : 'ದಿಗಂತದ ಕಡೆಗೆ' – ಖಲೀಲ್ ಮಾಮೂನ್*
*(ಅಕಾಡೆಮಿ ಪುರಸ್ಕೃತ ಕವನ ಸಂಕಲನ)*

~ * ~ * ~ * ~

## 2.2 ಕಲ್ಲಲಾಂಬು

**– ಅನುಬೆಳ್ಳೆ**

ಆ ದಿನ ಗಡಗಡಾಂತ ಸಿಡಿಲು ಗುಡುಗಿನ ಅರ್ಭಟಕ್ಕೆ ರಾಯರು ಹೆದರಿ ಮರದ ಕುರ್ಚಿಯ ಮೇಲೆ ದೇಹದ ಭಾರವನ್ನು ಹಾಕಿ, ಕಾಲುಗಳೆರಡನ್ನು ಮೇಲಕ್ಕೆಳೆದು ಕುಕ್ಕರುಗಾಲಲ್ಲಿ ಕೂತಂತೆ, 'ರಾಮ ರಾಮ ರಾಮ ಕೃಷ್ಣ ಕೃಷ್ಣ ಕೃಷ್ಣ' ಅಂತ ನೂರಾರು ಸಲ ಬಡಬಡಿಸುತ್ತಲೇ ಇರುವಾಗ ಕಿವಿ ಪೊಟ್ಟಾಗುವ ಹಾಗೆ ಮತ್ತೆರಡು ಗುಡುಗುಗಳು ಕೀಳಿಸಿದ್ದೇ ಇನ್ನಷ್ಟು ಹಿಡಿಯಂತಾಗಿ ಅಲ್ಲೇ ಮುದುರಿ ಕುಳಿತರು.

ರಾಯರು ಈ ರೀತಿ ಗುಡುಗಿಗೆ ಹೆದರುವುದನ್ನು ಅಂಬಕ್ಕ ಕಳೆದ ನಲವತ್ತು ವರ್ಷಗಳಿಂದಲೂ ಬಲ್ಲರು. ಕಪ್ಪು ಮೋಡ ಬಾನನ್ನು ತುಂಬಿ ಕತ್ತಲು ಹಾಕಿದರೆ ಸಾಕು, ಹೊರಗೆ ಹೋಗಿದ್ದ ರಾಯರು ಅದು ಹೇಗೆ ಮಾಯಕದಲ್ಲಿ ಮನೆ ಸೇರುತ್ತಾರೋ ಅವರಿಗೆ ಗೊತ್ತು. ಅಂಬಕ್ಕನಿಗೆ ಗಂಡನ ಈ ಪುಕ್ಕಲುತನವನ್ನು ನೋಡಿ ಹೇಸಿಗೆ ಯಾಗುವುದುಂಟು. ಆಗ ಅವರನ್ನು ತರಾಟೆಗೆ ತೆಗೆದುಕೊಂಡಂತೆ, “ಎಂತ ಇದು. ಹೆಣ್ಮಕ್ಕಳ ಹಾಗೆ ನೀವು ಹೆದರುವುದು? ಗುಡುಗು ಬರುವುದನ್ನು ನಿಲ್ಲಿಸಲಿಕ್ಕೆ ಆಗುತ್ತದಾ? ಅದು ಪ್ರಕೃತಿ ನಿಯಮ. ಮಳೆಗಾಲ ಶುರುವಾಗುವ ಮೊದಲು ಮತ್ತು ಮಳೆ ನಿಲ್ಲುವ ಮೊದಲು ಗುಡುಗು ಬರುವುದು ಸಾಮಾನ್ಯ ಅಲ್ಲವಾ? ಅದಕ್ಕೆಲ್ಲ ಹೆದರಿದರೆ ಆಗುತ್ತದಾ?” ಅಂತ ಕೇಳಿದರೆ ರಾಯರು ಗುಡುಗು ಮಿಂಚು ನಿಲ್ಲುವವರೆಗೆ ಬಾಯಿ ತೆರೆಯದೆ ಮಂತ್ರ ಜಪಿಸುತ್ತಾ, ಅದು ನಿಂತ ಕೂಡಲೇ ಗುಡುಗುಡೂಂತ ಹೆಂಡತಿಯನ್ನು ಸರೀ ಬೈಯೋರು.

“ನಿನಗೆಂತ ಗೊತ್ತುಂಟೆ? ಪೇಪರಿನಲ್ಲಿ ಹಾಗಾಯ್ತು ಹೀಗಾಯ್ತೂಂತ ನೀನು ಓದುದಿಲ್ವಾ? ನಾನು ನನ್ನ ಕಣ್ಣಾರೆ ಸಹ ನೋಡಿದ್ದೇನೆ. ನಮ್ಮ ಮೇಲಿನ ಮನೆ ಕೇಶವಣ್ಣನಿಗೆ ಸಿಡಿಲು ಬಡಿದಲ್ವಾ ಅವರ ಕೈ ಸೊಟ್ಟಗಾದದ್ದು. ರಥೋಡ್ರಿಯ ಅಪ್ಪು ದೊಡ್ಡ ತೆಂಗಿನಮರ ಸಿಡಿಲಿಗಲ್ಲಾ ತಲೆಬಾಡಿಸಿಕೊಂಡು ಸುಟ್ಟು ಹೋದದ್ದು, ಸಿಡಿಲು ಅಂದ್ರೆ ಸುಮ್ಮನೆಯಾ? ನನಗೆ ಹೆದರಿಕೆ ಉಂಟು, ನೀನೊಬ್ಬಳು ಧೈರ್ಯವಂತೆ ಅಂತ ಕೊಚ್ಚಿಕೊಳ್ಳುವುದಾ? ಹೋಗು ಹೋಗು, ಗುಡುಗು ಬರುವಾಗ ನೀನು ಸುಮ್ಮೆ ಪಡಸಾಲೆಯಲ್ಲಿ ಕುಳಿತು ದೇವರ ಧ್ಯಾನ ಮಾಡುವುದು ನನಗೆ ಗೊತ್ತಿಲ್ವಾ?”

ರಾಯರು ಹಾಗಂದಾಗ ಅಂಬಕ್ಕ ಮಾತನಾಡುವುದಿಲ್ಲ. ಯಾಕಂದರೆ ಜಗಳ ಮಾಡಿಕೊಳ್ಳಲು ಮನೆಯಲ್ಲಿ ಇರುವುದು ಅವರಿಬ್ಬರೇ. ಇಬ್ಬರು ಗಂಡು ಮಕ್ಕಳು ಮದುವೆಯಾಗಿ ಸಂಸಾರ ಸಮೇತ ದುಬೈನಲ್ಲಿಯೇ ಇರುವುದು ನೋಡಿದರೆ ಕೊನೆಗಾಲ ಕಾದರೂ ಹತ್ತಿರ ಬರುತ್ತಾರೋ ಇಲ್ಲವೋ ಅನ್ನುವ

ಅನುಮಾನ ಅವರಿಬ್ಬರಿಗೂ, ಆದರೂ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಕಾಲವನ್ನು ಸುಮಧುರವಾಗಿ ಕಳೆಯುವ ಬಗೆ ಅವರಿಗೆ ಗೊತ್ತು. ಹಾಗಾಗಿ ಗಂಡನ ಈ ಪುಕ್ಕಲುತನ ಆಂಬಕ್ಕನಿಗೆ ಹೊಸತೇನಲ್ಲವಾದರೂ ಸುಮ್ಮನೆ ಮಾತನಾಡಿಸುತ್ತಾರೆ. ಜೊತೆಗೆ ಲೆಕ್ಕ ಮಾಡಿ ಗುಜ್ಜೆಯದ್ದು ಹತ್ತು, ಗೆಣಸಿನದ್ದು ಹತ್ತು ಹಪ್ಪಳ ತೆಂಗಿನೆಣ್ಣೆಯಲ್ಲಿ ಕರಿದು ತಂದು ಆ ಗುಡುಗು ಮಳೆಯ ಮೇಳಕ್ಕೆ ಕುರುಕುರೂಂತ ಮೆಲ್ಲುತ್ತಾ ಕುಳಿತರೆ ಅವರಿಗೆ ಗುಡುಗು ಇಲ್ಲ ಪಡುಗು ಇಲ್ಲದಂತೆ ಸಮಯ ಕಳೆದದ್ದೇ ಗೊತ್ತಾಗುವುದಿಲ್ಲ.

ಮಳೆಗಾಲ ಬಂತೆಂದರೆ ಸಾಕು ತೊಡುವಾಗುವುದು ಹೆಚ್ಚು. ಅದಕ್ಕಾಗಿಯೇ ಅಂಬಕ್ಕ ತಾವೇ ದರ ಹಾಕಿ ನೆಟ್ಟ ಗೆಣಸಿನ ಬಳ್ಳಿಯಲ್ಲಾದ ಗೆಣಸನ್ನು ಮತ್ತು ಹಣ್ಣಾದರೂ ತಿನ್ನಲಿಕ್ಕಾಗದೆ ಗಂಟಲಿನಲ್ಲಿಯೇ ಸಿಕ್ಕಿಕೊಳ್ಳುವ ತುಳುವೆ ಗುಜ್ಜೆಯ ಹಪ್ಪಳ ಮಾಡಿ ಮಳೆಗಾಲಕ್ಕೆಂತ ಡಬರಿಯಲ್ಲಿ ತುಂಬಿಸಿ ಗಚ್ಚಂತ ಮುಚ್ಚಿಡುವುದು. ಅಷ್ಟು ಮಾತ್ರವಲ್ಲ, ಗುಡ್ಡೆಯ ಬೀಜವನ್ನು ಉಪ್ಪು ಹಾಕಿ ಬೇಯಿಸಿ ಸಾಂತಣೆ ಮಾಡಿದರೆ, ಕಾಟು ಕುಕ್ಕಿನ ಮಾಂಬಳ ಮಾಡಿ ಪ್ಲಾಸ್ಟಿಕ್ ಹಾಳೆಯಲ್ಲಿ ಸುರುಳಿ ಸುತ್ತಿಟ್ಟರೆ, 'ಧೋ' ಅಂತ ಒಂದೇ ಸಮನೆ ಹೀಗೆ ಮಳೆ ಹೊಯ್ದು, ಅಂಗಳದಲ್ಲೆಲ್ಲಾ ಕಾಡಿನ ಒಡ್ಡನೀರು ತುಂಬಿ ಮೆಟ್ಟಲಿನ ವರೆಗೂ ಮೇಲೆ ಬಂದಾಗ, ಅವೆಲ್ಲಾ ಡಬ್ಬಿಯಿಂದ ಹೊರಗೆ ಅಂಬಕ್ಕೆ ತಂದಿಟ್ಟರೆ ರಾಯರು, ದನ ಕಾಯಿಕಡೆಯುವ ಹಾಗೆ ಬಾಯಿಯಲ್ಲಿ ಹಾಕಿಕೊಂಡು ಮಳೆಯ ವೈಭವವನ್ನು ಮಡಲಿನ ತಟ್ಟೆಯ ಮೂಲಕ ನೋಡುತ್ತಾ ಸಮಯ ಕಳೆಯುವುದೂ ಅವರಿಗೆ ಗೊತ್ತಾಗುವುದಿಲ್ಲ. ಆದರೆ ಮಳೆಯ ಜೊತೆಗೆ ರಣಕಹಳೆಯ ಸದ್ದಿನಂತಹ ಗುಡುಗು ಸಿಡಿಲು ಬಂದರೆ ಸಾಂತಣಿ ಬಾಯಿಯಲ್ಲಿ ಹಾಕಿದ ಹಾಗೆ ಅಲ್ಲೇ ಬಾಕಿ. ಹನ ಹಾಗೆ ನಾಲಗೆಯೂ ತಟಸ್ಥವಾಗುವುದುಂಟು.

ಇಷ್ಟೆಲ್ಲಾ ಆಗಿ ಮಳೆ ಸಂಪೂರ್ಣ ನಿಂತು, ಮಳೆಯ ನೀರು ಮಾತ್ರ ಹರಿಯುವ ಸದ್ದು ಕೇಳುತ್ತಾ ನೀರು ಇಳಿದ ಅಂಗಳಕ್ಕೆ ಕಾಲಿಟ್ಟರೆ ಖುಷಿಯೋ ಖುಷಿ. ಕೊಡೆ ಬೇಕಾ, ಕೊರಂಬು ಬೇಕಾ? ಯಾವುದೂ ಬೇಡ. ಹಾಗೆ ಗದ್ದೆ ಪುಣಿಯಲ್ಲಿ ಸ್ವಲ್ಪ ದೂರ ಹೋಗಿ ಬಂದರೆ ಸಾಕು, ಸಮಾರಂಭಕ್ಕೆ ಅಡುಗೆ ಮಾಡಿ ರಾಡಿಯಾಗಿದ್ದ ಪಾತ್ರೆಗಳೆಲ್ಲವನ್ನು ಸಬೀನ ಹಾಕಿ ತೊಳೆದು ಜಗುಲಿಯಲ್ಲಿ ಕವುಚಿಟ್ಟಂತೆ ನೆಲ ಶುಭ್ರ ಮರಗಳೆಲ್ಲ ಮಳೆ ಹನಿಯ ಭಾರಕ್ಕೆ ಒದ್ದೆಯಾಗಿ ಬಾಗಿಹೋಗಿರುವುದನ್ನು ನೋಡುವುದೇ ಚೆಂದ.

ಆ ದಿನವೂ ಹಾಗೆ ಮಳೆಯ ಆರ್ಭಟವೇನೋ ಕಡಿಮೆಯಾಗಿ ಮಳೆಹನಿ ಕಡಿಯದಿದ್ದರೂ ಪಿರಿ ಪಿರಿ ಅಂತ ಸುರಿಯುತ್ತಲೇ ಇತ್ತು. ರಾಯರು ಅಂಟಿ ಕುಳಿತಿದ್ದ ಕುರ್ಚಿಯನ್ನು ನೂಕಿ, ಎದ್ದು ಹೊರಗೆ ಬಂದು ಮಳೆಗಾಲದ ಆ

ಸಂಜೆಯನ್ನು ಕಣ್ಣಲ್ಲಿ ತುಂಬಿಕೊಂಡು ನಿಧಾನಕ್ಕೆ ಆಸ್ವಾದಿಸುತ್ತಾ ಕಟ್ಟಪುಣಿ ಹಿಡಿದದ್ದೇ, ಎಲೆಗಳಿಂದ ಎಲೆಗಳಿಗೆ ಬೀಳುವ ನೀರ ಹನಿಗಳ ಟಪಟಪ ಸದ್ದನ್ನು ಮೀರಿ, 'ಉಪ್ಪು, ಪೋಪೆ, ಮೆಗ್ಗೆ ಪಾಪ' ಅಂತ ಹಕ್ಕಿಯೊಂದು ಕೂಗುತ್ತಾ ಕಣ್ಣಿಗೆ ಕಾಣದಷ್ಟು ಎತ್ತರದಲ್ಲಿ ಹಾರಿ ಹೋಗುವುದು ತಿಳಿಯಿತು.

ಊರಿಗೆ ಬಂದ ಹೊಸದರಲ್ಲಿ ಆ ಹಕ್ಕಿಯ ಕೂಗಿಗೆ ಕುತೂಹಲವೂ, ಅದರ ಕಥೆ ಕೇಳಿದ ಮೇಲೆ ಆಶ್ಚರ್ಯವೂ ಅವರಿಗಾಗಿ, ಕಳೆದ ನಲವತ್ತು ವರ್ಷಗಳಿಂದಲೂ ಅದನ್ನು ನೋಡುವ ಹಂಬಲವಿದ್ದು, ಅದು ಕಾಣಿಸದೇ ನಿರಾಶೆಯಾಗಿತ್ತು. ಇವತ್ತಿಗೂ ಅವರು ಆ ಪಕ್ಷಿಯನ್ನು ನೋಡಿಲ್ಲ. ಆದರೂ ಅದರ ನೋವಿನ ಕೂಗು ಅವರನ್ನ ಅದೆಷ್ಟೋ ಬಾರಿ ಕಾಡಿದ್ದುಂಟು.

ಆ ಹಕ್ಕಿಯ ವೈಜ್ಞಾನಿಕ ಹೆಸರು ಅವರಿಗೆ ಗೊತ್ತಿಲ್ಲ ಮತ್ತು ಅದರ ಅಗತ್ಯವೂ ಅವರಿಗಿಲ್ಲ. ಆದರೆ ಮಳೆಗಾಲದಲ್ಲಿ ಕಲ್ಲಲಾಂಬು ದೊರಕುವ ಸಮಯದಲ್ಲಿ ಆ ಹಕ್ಕಿಗೆ ಹೇಗೆ ತಿಳಿಯುತ್ತದೆಯೋ, ಎಂದಿನಂತೆ ತನ್ನ ವಿಶಾದರಾಗದಲ್ಲಿ ಹಾಡುತ್ತ ಯಾರಿಗೂ ಕಾಣದಹಾಗೆ ಬಾನಿನಲ್ಲಿ ಹಾರಿ ಹೋಗುವುದು ಆಶ್ಚರ್ಯವೆ.

***

ಮಳೆಗಾಲವಾಗಲಿ, ಚಳಿಗಾಲವಾಗಲಿ ಯಾವ ಕಾಲದ ಪರಿವೆಯೂ ಇಲ್ಲದೆ ಪಮ್ಮಟ್ಟು, ಕಿಸೆಯಿರುವ ಚೌಕಳಿಯ ಉದ್ದನೆಯ ನಿಲುವಂಗಿಯನ್ನು ಹಾಕಿಕೊಂಡು, ತಲೆಗೆ ಮುಟ್ಟಾಳಿಯ ಟೋಪಿಯನ್ನು ಧರಿಸಿ, ಪರ್ಕತ್ತಿಯೊಂದಿಗೆ ರಾಯರ ಮನೆಗೆ ಜಂಬರ ಮಾತಾಡಲು ಬರುವುದು ಅವನ ಚಂಚಿಯಲ್ಲಿದ್ದ ವೀಳ್ಯದೆಲೆ ಖಾಲಿಯಾದಾಗ ಮಾತ್ರ, ದುಡ್ಡು ಕೊಟ್ಟು ವೀಳ್ಯದೆಲೆ ತಿಂದರೆ ಅವನ ಬಾಯಿ ಸುಟ್ಟು ಹೋಗುವುದಂತೆ, ಅದಕ್ಕಾಗಿ ಅವನು ರಾಯರ ತೆಂಗಿನ ತೋಟದಲ್ಲಿದ್ದ ವೀಳ್ಯದೆಲೆಯ ಬಳ್ಳಿಯ ಹಸುರು ಎಲೆಗಳನ್ನು ಕಂಡಾಗ; ದನ ಹಸುರು ಹುಲ್ಲನ್ನು ಕಂಡು ಖುಷಿ ಪಡುವ ಹಾಗೆ ಲಾಲಾರಸವನ್ನು ಸುರಿಸಿಕೊಂಡು ಮೆಟ್ಟಿಲ್ಲದ ಕಾಲಿನಲ್ಲಿ ಮೆಟ್ಟಿಲು ಏರಿ "ಓಯ್ ಅಣ್ಣರೆ" ಅಂತ ಕೂಗು ಹಾಕುವುದು ವೀಳ್ಯದೆಲೆಯ ಬೇಡಿಕೆಯಲ್ಲಿ,

"ಪಮ್ಮು, ಬಾ ಒಳಗೆ. ನೀನೆಂತ ಬಿನ್ನನ್ನ ನಾವು ಒಳಗೆ ಕರೆಯುವುದಕ್ಕೆ?" ರಾಯರು ಪಮ್ಮಟ್ಟು ಹೇಳುವ ಹಳೇಯ ಕತೆಗಳನ್ನು ಕೇಳುವುದಕ್ಕಾಗಿಯೇ ಒಳಗೆ ಕರೆಸುವುದು. ಹೇಗೂ ಅವರಿಗೂ ಸಮಯ ಸಾಗಬೇಕಲ್ಲ, ಪಮ್ಮಟ್ಟು ಒಳಗೆ ಬಂದು ಕುಳಿತು ಸುಮ್ಮನೆ ಚಂಚಿಯನ್ನು ತಡಕಾಡಿ ಎಲೆಯೆಲ್ಲ ಖಾಲಿಯೆನ್ನುವಂತೆ ಸಂಜ್ಞೆ ಮಾಡುವುದಕ್ಕಿಂತ ಮೊದಲೇ ಅಂಬಕ್ಕ ಎಲೆಯಡಿಕೆಯ ತಾಟನ್ನು ತಂದು ಅವನ ಮುಂದಿಟ್ಟು "ತಕ ಮಾರಾಯ, ಎಲೆ ತುಂಬಾ ಖಾರವುಂಟು" ಅನ್ನುವರು.

ಅವನು ನಕ್ಕು "ಎಲೆಯ?.... ಖಾರವಾ? ಅದೂ ನಿಮ್ಮ ತೋಟದ್ದಾ? ಇಲ್ಲ ಅಕ್ಕೆರೆ. ಎಂತಹ ಸಿಹಿ ಅಂತೀರಿ. ನಾನು ಒಂಚೂರು ರಸ ಕೂಡ ತಪ್ಪುವುದಿಲ್ಲ, ನುಂಗಿ ಬಿಡ್ತೇನೆ. ತಿಂದದ್ದೆಲ್ಲ ಒಳ್ಳೆ ಜೀರ್ಣ ಆಗ್ತದೆ ನೋಡಿ" ಅನ್ನುತ್ತಾ ತಾಟಿನಲ್ಲಿಟ್ಟಿದ್ದ ಎಲೆಯೆಲ್ಲ ತನಗೇ ಸೇರಿದ್ದು ಅನ್ನುವಂತೆ ಅವುಗಳನ್ನೆಲ್ಲಾ ತೆಗೆದು ತನ್ನ ಬಣ್ಣಗೆಟ್ಟ ಖಾಕಿಯಂತಹ ಬಣ್ಣದ ಚಂಚಿಗೆ ಸೇರಿಸಿ ಬಿಡುತ್ತಾನೆ. ರಾಯರು ಅದನ್ನು ನೋಡುತ್ತ ಒಳಗೊಳಗೆ ನಗುತ್ತ "ಅಲ್ಲನ ಪಮ್ಮು, ಆ ಹಕ್ಕಿಯುಂಟಲ್ಲ. ಅದು ಎಂತಕ್ಕೆ ಹಾಗೆ ಕೂಗುವುದಾ?" ಎಂದು ಕಲ್ಲಲಾಂಬುವಿನ ಹಕ್ಕಿ ಕೂಗುವುದನ್ನು ಕೇಳಿ ಪ್ರಶ್ನಿಸಿದರು.

"ಅದು ಕಥೆ ಉಂಟು ಕೇಳಿ" ಬಾಯಿ ತುಂಬಾ ಎಲೆಯಡಿಕೆಯನ್ನು ತುರುಕಿಸಿ ರಸ ಸೋರದಂತೆ ಕೆಳದವಡೆಯನ್ನು ಮುಂದು ಮಾಡಿ ಕಥೆ ಆರಂಭಿಸುವಾಗ ಅವನ ಕಥೆ ಕೇಳುವುದಕ್ಕೆ ಅಂಬಕ್ಕ ಕೂಡ ಹಾಜರ್!

"ಅದು, ಒಮ್ಮೆ ಅಣ್ಣ ಮತ್ತು ತಮ್ಮ ಹಕ್ಕಿಗಳಿದ್ದವಂತೆ, ಅವುಗಳಿಗೆ ಮಳೆಗಾಲದಲ್ಲಿ ತಿನ್ನಲು ಏನೂ ಸಿಗದೆ ಮಳೆಗೆ ಒದ್ದೆಯಾಗುತ್ತಾ ಮರದ ಮೇಲೆ ಕುಳಿತಿರುವಾಗ ಭೂಮಿಯ ಮೇಲೆ ಅದೇನೋ ಸಣ್ಣ ಸಣ್ಣ ಮುತ್ತುಗಳಂತಹ ವಸ್ತು ಕಂಡಿತಂತೆ, ಅದೇ ಕಲ್ಲಲಾಂಬು. ಅದನ್ನು ಕಂಡು ಖುಷಿಯಾದ ಹಕ್ಕಿಗಳು, ಈ ಜಡಿ ಮಳೆಗೆ ತಮಗೆ ಮೀನು, ಕಪ್ಪೆ ಸಿಗದಿದ್ದರೂ ಪರವಾಗಿಲ್ಲ, ಇದನ್ನೇ ತಿನ್ನೋಣವೆನ್ನುವ ನಿರ್ಧಾರಕ್ಕೆ ಬಂದವಂತೆ. ಮಳೆಗಾಲದಲ್ಲಿ ನಂಜು, ವಿಷವೆಲ್ಲಾ ಹೆಚ್ಚು ಅಲ್ವಾ. ಅದಕ್ಕೆ ಆ ಲಾಂಬನ್ನು ಬೇಯಿಸಿ ತಿನ್ನಬೇಕೆಂದು, ಅವು ಕಲ್ಲಲಾಂಬುಗಳನ್ನು ಹೆಕ್ಕಿ, ತೊಳೆದು ಒಂದು ಬಿಸಲೆಯಲ್ಲಿ ಹಾಕಿ ಬೇಯಿಸತೊಡಗಿದವಂತೆ, ಅಷ್ಟರಲ್ಲಿ ಉಪ್ಪು ಖಾಲಿಯಾಗಿದ್ದರಿಂದ ಅಣ್ಣ ಹಕ್ಕಿ ತಮ್ಮನಿಗೆ ಒಲೆಯ ಮೇಲಿರುವುದನ್ನು ಜೋಪಾನ ಮಾಡುವಂತೆ ಹೇಳಿ, ತಾನು ಉಪ್ಪು ತರಲು ಹೋಯಿತಂತೆ, ಕಪ್ಪು ಮೋಡಗಳು ಆಕಾಶವನ್ನು ತುಂಬಿ ಇನ್ನೇನು ಮಳೆ ಸುರಿಯುತ್ತದೆ ಯೆನ್ನುವಾಗ ಅಣ್ಣ ಹಕ್ಕಿ ಕಡಲಿನ ಬಳಿಗೆ ಬಂದು ಉಪ್ಪು ತೆಗೆದುಕೊಂಡು ಮತ್ತೆ ಹಾರಿ ಹಿಂದಿರುಗಿತಂತೆ.

ಮನೆಗೆ ಬರುವಾಗ ಬಿಸಲೆಯಲ್ಲಿ ಕಲ್ಲಲಾಂಬುವಿನ ಪದಾರ್ಥ ಅರ್ಧಕ್ಕರ್ಧವಾಗಿದ್ದು ನೋಡಿ ಅಣ್ಣ ಹಕ್ಕಿ, ತಮ್ಮನ ಮೇಲೆ, ತಾನು ಉಪ್ಪು ತರಲು ಹೋದಾಗ ಒಂದೊಂದೆ ಲಾಂಬನ್ನು ನೀನು ಹೆಕ್ಕಿ ಹೆಕ್ಕಿ ತಿಂದಿದ್ದೀ ಎಂದು ಆರೋಪಿಸಿತಂತೆ. ಇಲ್ಲದಿದ್ದರೆ ಒಂದು ಬಿಸಲೆ ತುಂಬಾ ಇದ್ದ ಕಲ್ಲಲಾಂಬುಗಳು ಎಲ್ಲಿಗೆ ಹೋಯಿತು? ಎಂದು ತರ್ಕಿಸುತ್ತಾ ತಮ್ಮನ ಜೊತೆಗೆ ಜಗಳ ಕಾಯಿತಂತೆ, ತಮ್ಮ ಎಷ್ಟು ಹೇಳಿಕೊಂಡರೂ ಅಣ್ಣ ವಾದ ಬಿಡಲೇ ಇಲ್ಲ. ಕೊನೆಗೆ ಕೋಪದಿಂದ ತಮ್ಮನನ್ನು ಕಲ್ಲಿನಿಂದ ಸಾಯಿಸಿಬಿಟ್ಟಿತಂತೆ.

ಮುಂದೊಂದು ದಿನ ಇದೇ ರೀತಿ ಕಲ್ಲಲಾಂಬು ತಂದು ಅಣ್ಣ ಹಕ್ಕಿ ಪದಾರ್ಥ ಮಾಡಿತು. ಆಗಲೂ ಪದಾರ್ಥ ಅರ್ಧ ಪಾತ್ರೆಯೆ! ಆಗ ಅದಕ್ಕೆ ತನ್ನ ತಪ್ಪಿನ ಅರಿವಾಗಿ ಪಶ್ಚಾತಾಪದಿಂದ ಕಲ್ಲಲಾಂಬು ಆಗುವ ಸಮಯದಲ್ಲಿ ಕುಳಿತಲ್ಲಿ ಕುಳಿತಿರಲಾರದೆ ಹಾರಾಡುತ್ತಾ, 'ಉಪ್ಪು ಪೋಪೆ, ಮಗ್ಗೆ ಪಾಪ' (ಉಪ್ಪು ತರಲು ಹೋಗುತ್ತೇನೆ, ತಮ್ಮ ಪಾಪ) ಅಂತ ಕೂಗುತ್ತಾ ಊರಿನವರಿಗೆಲ್ಲಾ ಹೇಳುವುದಂತೆ."

ಪಮ್ಮಟ್ಟು ಕಥೆ ಮುಗಿಸಿದ. ಈ ಕಥೆ ಅವನು ಪ್ರತೀ ಮಳೆಗಾಲಕ್ಕೂ ಹೇಳುತ್ತಿದ್ದನೇನೊ. ಆದರೆ ಈಗ ರಾಯರು ಪಮ್ಮಟ್ಟುವಿನ ಬಾಯಿಯಿಂದ ಅದನ್ನು ಕೇಳುವುದು, ಒಮ್ಮೆಯಾದರೂ ಆ ಕಲ್ಲಲಾಂಬುವನ್ನು ತಿನ್ನಬೇಕೆನ್ನುವ ಉದ್ದೇಶದಿಂದ, ಕಥೆ ಮುಗಿದ ಮೇಲೆ ಅಂಬಕ್ಕ ಎದ್ದು ಒಳಗೆ ಹೋದರೆ ರಾಯರು ಮೆಲ್ಲಗೆ ಪಮ್ಮಟ್ಟುವಿನ ಕಿವಿಯ ಬಳಿ, "ಹೌದನಾ ಪಮ್ಮು, ನಿಮ್ಮ ಮನೆಯಲ್ಲಿ ಕಲ್ಲಲಾಂಬುವಿನ ಪದಾರ್ಥ ಮಾಡ್ತಾರನಾ?" ಎಂದು ಕುತೂಹಲದಿಂದ ಕೇಳಿದರು.

ಪಮ್ಮಟ್ಟುವಿಗೆ ಆಶ್ಚರ್ಯವಾಗಿ ಅವನು ರಾಯರ ಮುಖ ನೋಡಿದ, ಅವರ ಮುಖದಲ್ಲಿಯೂ ಗೊಂದಲವುಂಟಾಗಿತ್ತು. ಅವರನ್ನು ಓದಿಕೊಂಡವರಂತೆ ಪಮ್ಮಟ್ಟುವೆ, "ಅಣ್ಣರೆ ಎಂತಕ್ಕೆ? ಈ ಮಳೆಗಾಲದಲ್ಲಿ ನಮಗೆ ಮೀನು ಸಿಗುವುದಿಲ್ಲ. ಅದಕ್ಕೆ ನಾವು ಅದನ್ನು ಹೆಕ್ಕಿಕೊಂಡು ಬಂದು ಪದಾರ್ಥ ಮಾಡುತ್ತೇವೆ." ಅಂದರೆ, ರಾಯರ ಬಾಯಿಯಲ್ಲಿ ನೀರೂರಿತು. ಒಮ್ಮೆಯಾದರೂ ಅದರ ಪದಾರ್ಥದ ರುಚಿಯನ್ನು ನೋಡಬೇಕೆನಿಸಿತು.

"ಹೌದನಾ, ಅದು ತಿನ್ನುವುದಕ್ಕೆ ಹೇಗಿರ್ತದೆ ಮಾರಾಯಾ?" ಅದರ ರುಚಿಯನ್ನು ತಮಗೆ ಇಷ್ಟವಾದ ಪದಾರ್ಥಕ್ಕೆ ಹೋಲಿಸಿಕೊಂಡು ನಾಲಗೆಯ ತುದಿಯವರೆಗೂ ಜಾರಿದ ರಸವನ್ನು ನುಂಗಿಕೊಂಡು ಕೇಳಿದರು.

"ಅದಾ, ವ್ಹಾ! ಏನು ರುಚಿ, ಮಾಂಸದ ಅಡುಗೆಯ ಹಾಗೆ ಬಾಳ ಚೆಂದ ಆಗ್ತದೆ ನಮ್ಮ ಮನೆಯಾಕೆ ಮಾಡ್ತಾಳೆ, ಅದರ ರುಚಿಯೋ ರುಚಿ, ಅದೂ ಸಂಜೆಯ ಹೊತ್ತು ಮಾಡಬೇಕು. ಬಿಸಿ ಬಿಸಿ ಕುಚ್ಚಲಕ್ಕಿಯ ಅನ್ನಕ್ಕೆ ಒಳ್ಳೆಯ ಬೆರಕೆ"

ರಾಯರಿಗೆ ಇನ್ನು ತಡೆದುಕೊಳ್ಳುವುದಕ್ಕಾಗಲಿಲ್ಲ. ಮಾತನಾಡಲು ನಾಲಗೆಯಲ್ಲಿ ಸುರಿಯುವ ರಸ ಬಿಡುವುದಿಲ್ಲ. ಹಾಗೆ ವೀಳ್ಯದೆಲೆಯ ತಾಟನ್ನು ಎಳೆದು ಅಡಿಕೆಯ ಹೋಳನ್ನು ಬಾಯಿಗೆ ಎಸೆದರು.

"ಅಲ್ಲನಾ, ನೀನು ಯಾರಿಗೂ ಹೇಳಬೇಡ. ಒಮ್ಮೆ ನನಗೂ ಆದರ ರುಚಿ ನೋಡಬೇಕಲ್ಲಾ? ತಂದು ಕೊಡ್ತೀಯಾ?" ಆಸೆ ತಡೆಯಲಾರದೆ ಕೇಳಿಯೇ ಬಿಟ್ಟರು.

ಪಮ್ಮಟ್ಟು ಕುಳಿತಲ್ಲಿಂದಲೇ ನೆಗೆದು ಬಿದ್ದವರಂತೆ, “ಅಣ್ಣರೆ, ನೀವು ಎಂತ ಹೇಳುವುದು? ನಾನು ನಿಮಗೆ ಅದರ ಪದಾರ್ಥ ತಿನಿಸಿ ನರಕಕ್ಕೆ ಹೋಗಬೇಕಾ? ಊಹೂಂಹೂಂ, ನನ್ನಿಂದ ಸಾಧ್ಯವಿಲ್ಲ. ಮುಂದಿನ ವಾರ ನಿಮ್ಮ ಮಗಂದಿರು ದುಬೈನಿಂದ ಬರ್ತಾರಂತ ನೀವು ಹೇಳ್ತಾ ಇದ್ದೀರಿ, ಆಗ ನೀವು ಬಾಯಿತಪ್ಪಿ ನಾನು ಪದಾರ್ಥ ಕೊಟ್ಟ ವಿಷಯ ಹೇಳಿದರೆ ನನ್ನ ಗತಿ, ಗೋವಿಂದ. ಬೇಡವೇ ಬೇಡ” ಬಹಳ ಸಂಕೋಚದಿಂದಲೇ ಹೇಳಿದವನು, ಮೆಲ್ಲನೆ ಅಂಡನ್ನು ನೆಲದಿಂದ ಎತ್ತಿ ಕಾಲು ಸರೂತ ಮಾಡಿ ಎದ್ದು ನಿಂತ.

ಅಷ್ಟರಲ್ಲಿಯೇ ಅಂಬಕ್ಕ ಹೊರಗೆ ಬಂದವರೆ, “ಪಮ್ಮು ಹೊರಟದ್ದಾ... ಚಾಕ್ಕ ಇಟ್ಟಿದ್ದೇನೆ ಮಾರಾಯಾ. ಬಿಸಿ ಬಿಸಿ ಚಾ ಕುಡಿದು ಹೋಗು” ಎಂದು ಕರೆದರೆ ಅವನ್ನು ಅಲ್ಲಿಯೆ ನಿಂತ, ಆದರೆ ರಾಯರನ್ನು ನೋಡುವ ಧೈರ್ಯ ಮಾಡಲಿಲ್ಲ. ಅವರೂ ಅಂಬಕ್ಕನ ಎದುರಿಗೆ ಆ ವಿಷಯ ಪ್ರಸ್ತಾಪಿಸುವುದಿಲ್ಲ.

***

ಆದರೆ ರಾಯರಿಗೆ ಆ ಕಲ್ಲಲಾಂಬುವನ್ನು ತಿನ್ನುವ ಆಸೆ ಬಿಡಲಿಲ್ಲ. ಹೇಗಾದರೂ ಮಾಡಿ ಅದನ್ನು ಈ ಮಳೆಗಾಲಕ್ಕೆ ತಿನ್ನಲೇಬೇಕೆಂದುಕೊಂಡರು. ಅದಕ್ಕೆ ಸರಿಯಾಗಿ ಗುಡ್ಡಕ್ಕೆ ಬಿಟ್ಟ ಅವರ ಮನೆಯ ದನ ಹಿಂತಿರುಗಿ ಬಾರದೆ, ಅದನ್ನು ಹುಡುಕಿಕೊಂಡು ಹೋಗುವ ಪ್ರಮೇಯ ಎದುರಾಯಿತು. ಇಷ್ಟಕ್ಕೂ ಅದು ಸಣ್ಣ ಕರುವಿದ್ದ ದನ, ಎಲ್ಲಿ ಹಸುರಿನ ಆಸೆಗೆ ನಾಯ್ಕರ ಬತ್ತದ ಗದ್ದೆಗೆ ಇಳಿದಿದೆಯೋ ಏನೋ ಅನ್ನುವ ಆತಂಕದಿಂದ ಕೈಯಲ್ಲಿ ಮಣಿಪು ಹಗ್ಗ ಹಿಡಿದುಕೊಂಡು ದನವನ್ನು ಹುಡುಕಲು ಹೊರಟರು.

ಗುಡ್ಡೆಯಲ್ಲಿ ದನಗಳಿಗಿಂತ ಹೆಚ್ಚಾಗಿ ಜನರೇ ಬಗ್ಗಿ ಏನನ್ನೋ ಹೆಕ್ಕುವುದು ಕಂಡಿತು. ಇದೆಂತ ಇವರೆಲ್ಲ ಹೆಕ್ಕುವುದು? ಕೇಪಳ ಹಣ್ಣ ಹೇಗೆ? ಎಂದು ಆಲೋಚಿಸುತ್ತಾ ಮುಂದೆ ನಡೆದರೆ ಎದುರು ಮನೆಯ ಕೈಯಾದು ಒಂದು ಸಣ್ಣ ಮೊನೆಯ ಕತ್ತಿಯಿಂದ ಕಲ್ಲಲಾಂಬು ಹೆಕ್ಕುವುದು ಕಂಡಿತು. ಹಿಂದಿನ ದಿನ ಜೋರು ಗುಡುಗು ಮಳೆಯಾಗಿರುವುದರಿಂದ ಭೂಮಿಯ ಒಳಗಿನಿಂದ ಲಾಂಬು ಹೊರಗೆ ಬಿದ್ದಿದೆಯೇನೋ ಅಂದುಕೊಂಡು ಅವರು ದನವನ್ನು ಮರೆತು, ಜನರನ್ನು ನೋಡುತ್ತಾ ನಿಂತರು.

“ಏನು, ಅಣ್ಣೆರೆ, ಹಗ್ಗ ಹಿಡಿದುಕೊಂಡು ಮರ ಹುಡುಕುತ್ತಿದ್ದೀರಾ, ಹೇಗೆ?” ಎಂದು ಕೈಯಾದು ಕೇಳಿದ್ದೆ ಅವರಿಗೆ ಏನೇನೋ ಅನಿಸಿ, “ಎಂತ ಕೈಯಾದು ನೀನು, ನನಗೆ ಜೀವದಲ್ಲಿ ಆಸೆ ಉಂಟು ಮಾರಾಯ್ತಿ. ಅದು ಮಾತ್ರವಲ್ಲ. ಒಮ್ಮೆ ಕಲ್ಲಲಾಂಬುವಿನ ಪದಾರ್ಥ ಮಾಡಿ ತಿನ್ನಬೇಕೂಂತ ಉಂಟು” ಅಂತ ಮನದಾಸೆಯನ್ನು ಕಕ್ಕಿಕೊಂಡರು.

ಕೈಯಾದುವಿಗೆ ಆಶ್ಚರ್ಯ, ಅವರು ಅದನ್ನು ತಿನ್ನುವುದಿಲ್ಲವೆಂದು ಅವಳಿಗೆ ಗೊತ್ತು "ಓ! ಅದಕ್ಕೇನು, ನೀವು ತಿನ್ನುವುದು ಹೆಚ್ಚಾ, ನಾನು ಮಾಡಿ ಹಾಕುವುದು ಹೆಚ್ಚಾ? ನಮ್ಮ ಅಡುಗೆ ನಿಮಗೆ ಆಗುವುದಾದರೆ ಬನ್ನಿ, ಇವತ್ತು ಸಂಜೆ ಪದಾರ್ಥ ಮಾಡುತ್ತೇನೆ." ತಮಾಷೆಗಾಗಿ ಎಂದಳು, ಕೈಯಾದು.

ರಾಯರಿಗೆ ಖುಷಿಯಾಯಿತು. ಅವತ್ತು ಸಂಜೆ 'ದನ ಬರದಿದ್ದರೆ ಪರವಾಗಿಲ್ಲ' ಅಂದುಕೊಂಡು; ಗುಡ್ಡೆಯನ್ನು ಕತ್ತಲೆಯವರೆಗೂ ಅಲೆದು ಮೆಲ್ಲನೆ ಕೈಯಾದುವಿನ ಮನೆಯತ್ತ ಕಾಲುಗಳನ್ನು ಹರಿಯಬಿಟ್ಟರು.

ನೇರವಾಗಿ ಅವಳ ಮನೆಯನ್ನು ಹೊಕ್ಕಲು ಸಾಧ್ಯವಾಗದೆ, ಕೊಟ್ಟಿಗೆಯ ಬಳಿ ನಿಂತು ಅವಳ ಹೆಸರು ಕರೆದರು. ಅವರ ಸ್ವರ ಕೇಳುತ್ತಲೇ ಅವಳ ಮನೆಯ ನಾಯಿ ಬೊಗ್ರ ಬೌ ಬೌ ಅನ್ನುವುದಕ್ಕೆ ಶುರು ಮಾಡಿತು. ಕೆಲಸ ಕೆಟ್ಟಿತು ಅಂದುಕೊಂಡ ರಾಯರು ಹೆಜ್ಜೆ ಹಿಂದಕ್ಕೆ ಇಡುತ್ತಿದ್ದರೆ, ಅಂಬಕ್ಕ ಅವರ ಮನೆಯ ಹತ್ತಿರದ ಪಾದೆ ಏರಿ ಗಂಡನ ದಾರಿ ಕಾಯುವಂತೆ ಬ್ಯಾಟರಿಯ ಬೆಳಕನ್ನು ಗುಡ್ಡೆಯ ಉದ್ದಕ್ಕೂ ಹರಿಯ ಬಿಟ್ಟರು. ಆದರೆ ಕೈಯಾದು ಸುಮ್ಮನೆ ತಮಾಷೆಗೆ ಕರೆದರೆ ರಾಯರು ಬಂದೇ ಬಿಟ್ಟದ್ದ ಎಂದು ಆಶ್ಚರ್ಯವಾಗಿ, "ಅಣ್ಣರೆ ಬನ್ನಿ ಒಳಗೆ" ಎಂದು ಅವರನ್ನು ಪಿಸುದನಿಯಲ್ಲಿ ಕರೆದಳು. ರಾಯರು ತಿನ್ನುವ ಆಸೆಯಿಂದ ಮೆಲ್ಲನೆ ಚೆರಂಟೆ ತೆವಳಿಕೊಂಡು ಹೋಗುವಂತೆ ಕೈಯಾದುವಿನ ಮನೆಯನ್ನು ಹೊಕ್ಕರು. ಏನೋ ಹೆದರಿಕೆ. ಯಾರಾದರೂ ನೋಡಿಯಾರೆಂಬ ಭಯ. ಅಂತು ಕೈಯಾದು ಪದಾರ್ಥವನ್ನು ಕಲಸಿದ ಅನ್ನವನ್ನು ತಂದು ಕೊಟ್ಟಾಗ ತಿಂದು ಬಾಯಿ ಚಪ್ಪರಿಸಿಕೊಂಡರು. ಅವರು ಹೇಗೆ ಬಂದರೋ ಹೇಗೆ ಹಿಂತಿರುಗಿದರೋ ಯಾರಿಗೂ ಗೊತ್ತಾಗಲಿಲ್ಲ. ಅಂತು ಕಲ್ಲಲಾಂಬುವಿನ ರುಚಿ ಅವರಿಗೆ ಹಿಡಿಯಿತು, ಬೀಸ ಬೀಸ ಹೆಜ್ಜೆ ಹಾಕುತ್ತಾ ತೊಡಮೆ ದಾಟಿ, "ಅಂಬಾ... ಗೌರಿ.. ಅಂಬಾ" ಎಂದು ತಪ್ಪಿಸಿಕೊಂಡ ತಮ್ಮ ದನವನ್ನು ಕೂಗುವ ಕಣ್ಣುಕಟ್ಟು ಮಾಡಿದಾಗ ಪಾದೆಯ ಬಳಿ ನಿಂತಿದ್ದ ಅಂಬಕ್ಕ, "ನೀವು ಬನ್ನಿ, ಕರುವಿನ ನೆನಪಾದರೆ ಬರುತ್ತಾಳೇ. ಕತ್ತಲೆಗೆ ಎಂತಕ್ಕೆ ಹುಡುಕುವುದು?" ಅಂದಾಗ ರಾಯರು ಡರ್ರಂತ ಎರಡು ತೇಗು ತೆಗೆದಾಗ ಪದಾರ್ಥದ ರುಚಿ ಮತ್ತೆ ನಾಲಗೆಯವರೆಗೆ ಬಂದು ನಿಂತಿತು.

***

ಮಕ್ಕಳಿಬ್ಬರೂ ಸಂಸಾರ ಸಮೇತರಾಗಿ ದುಬೈಯಿಂದ ಬಂದಾಗ ರಾಯರ ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಮನೆಯೆಲ್ಲಾ ಮಳೆಯಿಂದ ಕಿರಂಚುಕಟ್ಟಿ ಸೊಸೆ ಮೊಮ್ಮಕ್ಕಳೆಲ್ಲ ಅಸಹ್ಯ ಪಟ್ಟುಕೊಂಡಾಗ ಅಂಬಕ್ಕ ಗಳಿಗೆಗೊಮ್ಮೆ ಮನೆಯನ್ನು ಗುಡಿಸುವುದು ಒರೆಸುವುದೇ ಕೆಲಸವಾಯಿತು.

ರಾಯರ ದೊಡ್ಡ ಮಗ ವಸುಧೇಂದ್ರನ ಮಗನಿಗೆ ಎಂಟು ವರ್ಷ ಪೂರ್ತಿಯಾಗಿ ಒಂಬತ್ತು ಹಿಡಿಯಿತು. ಅಂಬಕ್ಕ ಅದನ್ನು ಲೆಕ್ಕ ಹಾಕಿ, “ಹೇಗೂ ಊರಿಗೆ ಬಂದಿದ್ದೀರಿ. ಆಟ ಮುಗಿದ ಕೂಡಲೆ ಅವನಿಗೆ ಗುರುಬಲ ನೋಡಿ ಉಪನಯನ ಮಾಡಿಬಿಡುವ” ಅಂತ ಹೇಳಿದ್ದೆ ವಸುಧೇಂದ್ರ ಉದಾಸೀನತೆಯಿಂದ, “ಇಷ್ಟು ಸಣ್ಣ ವಯಸ್ಸಿಗೆ ಎಂತಕ್ಕೆ ಅಲ್ಲೇನು ಅವನು ಪೂಜೆ ಪುನಸ್ಕಾರ ಮಾಡ್ಲಿಕ್ಕುಂಟ? ದೊಡ್ಡವನಾದ ಮೇಲೆ ಮದುವೆಯ ದಿವಸ ಉಪನಯನದ ಶಾಸ್ತ್ರ ಮಾಡಿದ್ರೆ ಸಾಕು” ಅಂದ. ಅಲ್ಲಿಯೇ ಇದ್ದ ರಾಯರಿಗೂ ಇದು ಸರಿ ಅನಿಸಲಿಲ್ಲ. ಅವರು ಮಾತಾಡಿದರೆ ಇನ್ನು ಸಣ್ಣ ಮಗ ರಾಘವೇಂದ್ರ ಜಗಳಕ್ಕೆ ನಿಲ್ಲುತ್ತಾನೆ. ಅವನಿಗೂ ದೇವರು ದಿಂಡರೆಂದರೆ ಅಷ್ಟಕಷ್ಟೆ ಹಾಗಾಗಿ ಸುಮ್ಮನಾದರು.

ಅಷ್ಟರಲ್ಲಿಯೇ ರಾಘವೇಂದ್ರನ ಮಗಳು ಓಡಿ ಬಂದು ತಂದೆಯ ಕೊರಳಿಗೆ ನೇತು ಬಿದ್ದು “ಡ್ಯಾಡಿ, ನಾಳೆ ನನ್ನ ಬರ್ತ್ ಡೇ ಅಲ್ವಾ? ನಾವು ದುಬೈಯಲ್ಲಿಯೇ ಇದ್ದಿದ್ರೆ ಹೊಟೇಲ್‌ನಲ್ಲಿಯೇ ಆಚರಿಸಬಹುದಿತ್ತಲ್ವಾ? ಇಲ್ಲಿ ಬೋರು...” ಅಂದಾಗ ರಾಘವೇಂದ್ರ ಅವಳನ್ನು ಸಮಾಧಾನಿಸುವಂತೆ, “ಇಲ್ಲೂ ಒಳ್ಳೊಳ್ಳೆ ಹೊಟೇಲುಗಳಿದ್ದಾವೆ ಪುಟ್ಟಿ.... ನಾಳೆ ತಾನೆ, ನಾನು ಕರೆದುಕೊಂಡು ಹೋಗುತ್ತೇನೆ. ಅಮ್ಮನಿಗೂ ಹೇಳು,” ಅಂದರೆ ಪುಟ್ಟಿ ಖುಷಿಯಿಂದ ಓಡಿ ಹೋಗಿ ಅಮ್ಮನಿಗೆ ವಿಷಯ ತಿಳಿಸಿಯಾಯಿತು.

ಸೊಸೆಯೊಂದಿರ ಜೊತೆಗೆ ಮಾತಿನಲ್ಲಿ ತೊಡಗಿದ್ದ ಅಂಬಕ್ಕ, “ಹೊಟೇಲಿಗೆ ಎಂತಕ್ಕೆ, ಸುಮ್ಮನೆ ದುಡ್ಡು ದಂಡ, ನಾಳೆ ನಾನೇ ಸಾಬಕ್ಕಿ ಹಾಕಿ ಹೆಸರುಬೇಳೆ ಪಾಯಸ ಮಾಡುತ್ತೇನೆ. ಬೇಕಾದ್ರೆ, ಕಡಲೆಬೇಳೆ ಮಡ್ಡಿ ಕೂಡ ಮಾಡುತ್ತೇನೆ. ಆಗದಾ ಪುಟ್ಟಿ” ಅಂತ ಮೊಮ್ಮಗಳನ್ನು ಕೇಳಿದರು. ಅವಳು ಮುಖ ಸೊಟ್ಟಗೆ ಮಾಡಿ, “ನಂಗೆ ಬಟರ್ ನಾನ್ ಮತ್ತು ಮಶ್ರೂಮ್ ಮಸಾಲ ಬೇಕು. ಡ್ಯಾಡಿ ನಾಳೆ ತೆಗೆಸಿಕೊಡುತ್ತಾರಂತೆ” ಅಂದಾಗ ಅಂಬಕ್ಕ ಆಶ್ಚರ್ಯದಿಂದ “ಅದೇನೆ ಅದು ನಾನು, ಮಶರೂಮ ಅಂದ್ರೆ” ಎಂದು ಕೇಳಿದರು.

“ಅದಾ, ಅಜ್ಜೀ, ತುಂಬಾ ಚೆನ್ನಾಗಿರುತ್ತೆ. ನಾಳೆ ನೀನೇ ಟೇಸ್ಟ್ ನೋಡು” ಅಂತ ಅಲ್ಲಿಂದ ಓಡಿ ಹೊರಗೆ ಬಂದಳು.

ಮರುದಿನ ಅವರೆಲ್ಲಾ ಪುಟ್ಟಿಯ ಬರ್ತ್ ಡೇ ಪಾರ್ಟಿಯನ್ನು ಹೊಟೇಲ್‌ನಲ್ಲಿ ಆಚರಿಸುವುದಕ್ಕೆ ಹೊರಟಾಗ ಅಂಬಕ್ಕನಿಗೆ ನಿರಾಶೆಯಾದರೂ ಅಪರೂಪಕ್ಕೆ ಬರುವ ಮಕ್ಕಳ ಮನಸ್ಸು ನೋಯಿಸಬಾರದೆಂದು ಅವರೂ ರಾಯರ ಜೊತೆಗೆ ಹೊರಟರು. ಸುಮ್ಮನೆ ಹೊಟೇಲ್‌ನ ಮೇಜಿನ ಮುಂದೆ ಅರ್ಧಗಂಟೆ ಕುಳಿತರೂ ಏನೂ ಬರುವ ಹಾಗೆ ಕಾಣುವುದಿಲ್ಲ, ಹೊಟೇಲ್‌ನಲ್ಲಿ ದುಡ್ಡು

ಕೊಟ್ಟು ತಿನ್ನುವುದಕ್ಕೂ ಮನುಷ್ಯ ಈ ರೀತಿಯಾಗಿ ತಾಳ್ಮೆಯಿಂದ ಕಾಯುವುದು ಅಂಬಕ್ಕನಿಗೆ ಆಶ್ಚರ್ಯವೆ.

"ಎಂತಂತೆ ಮಾರಾಯ್ರೆ, ತಿನ್ನಲಿಕ್ಕೆ ಬರುತ್ತದಾ ಇಲ್ವಾ?" ಎಂದು ಮೆಲ್ಲನೆ ರಾಯರನ್ನು ತಿವಿದು ಕೇಳಿದಳು. ರಾಯರು ಕುಶಾಲಿನ ಮನುಷ್ಯ.

"ಬರುತ್ತದೆ ಬರುತ್ತದೆ... ಹೀಗೆ ಕಾದು ಕಾದು ಹೊಟ್ಟೆಯ ಹುಳು ಸಾಯುತ್ತದೆ ಅನ್ನುವಾಗ ತರುತ್ತಾರೆ. ಹಸಿವಿನಿಂದ ಕಂಗಾಲಾದ ಆ ಸಮಯಕ್ಕೆ ತಂದದ್ದೆಲ್ಲಾ ರುಚಿಯಾಗಿ, ನೀನು ಹೊಗಳಬೇಕಲ್ಲವಾ... ಹೊಟೇಲಿದ್ದು ಬಹಳ ರುಚಿಯಿತ್ತೂಂತ, ಅದಕ್ಕೆ" ರಾಯರು ಅಂದು ಗಡದ್ದಾಗಿ ನಕ್ಕರು.

ಆಗಲೇ ಬೆಣ್ಣೆ ಸವರಿದ ನಾನ್ ಮತ್ತು ಮಶ್ರೂಮ್ ಮಸಾಲಗಳು ಮೇಜನ್ನು ಅಲಂಕರಿಸಿದವು. ರಾಯರು ಮೊದಲಿಗೆ ಕೈಯಿಕ್ಕಿದ್ದು ಮಶ್ರೂಮ್ ಮಸಾಲಕ್ಕೆ. ಹೋಳು ತೆಗೆದು ತಿಂದವರಿಗೆ; 'ಇದು ಕಲ್ಲಲಾಂಬುವಿನ ರುಚಿಯೇ ಉಂಟಲ್ಲಾ' ಅನಿಸಿ, "ಇದೆಂತ ಕಲ್ಲಲಾಂಬುವ" ಎಂದು ಎತ್ತಿ ತೋರಿಸಿದರು.

ರಾಘವೇಂದ್ರ, "ಕಲ್ಲಲಾಂಬು ಅಲ್ಲ. ಅದರ ಹಾಗೆಯ... ಇದು ಬಟನ್ ಮಶ್ರೂಮ್ ಅಂತ" ಅಂದಾಗ ರಾಯರಿಗೆ ನಗು ಬಂತು. ಅಲ್ಲಿ ಕದ್ದು ಮುಚ್ಚಿ ತಿಂದ ಕಲ್ಲಲಾಂಬು ಇಲ್ಲಿ ಎಲ್ಲರ ಎದುರಿಗೆ ರಾಜಾರೋಷವಾಗಿ ತಿನ್ನುವಾಗ ಉಕ್ಕಿ ಉಕ್ಕಿ ನಗು ಬಂದು ಅಂಬಕ್ಕನಿಗೆ ಸಂಜ್ಞೆ ಮಾಡಿ, "ಕಲ್ಲಲಾಂಬು" ಅಂದರು, ಅಂಬಕ್ಕ ಮುಖ ಸಿಂಡರಿಸಿಕೊಂಡು, "ನನ್ನ ಹಲ್ಲು ಗಟ್ಟಿಯಿಲ್ಲ. ನಂಗೆಂತ ಬೇಡ" ಅಂತ ತಟ್ಟೆಯನ್ನು ದೂರ ಸರಿಸಿದರು. ರಾಯರು, "ಇದೆಂತ ಗಟ್ಟಿ? ಮೆದು ಅಂದ್ರೆ ಮೆದು, ಬಾರಿ ಲಾಯಕ್ಕುಂಟು ಮಾರಾಯ್ತಿ, ಒಮ್ಮೆ ತಿಂದು ನೋಡು" ಅನ್ನುತ್ತಾ ಮಶ್ರೂಮ್‌ನ ಹೋಳುಗಳನ್ನು ಹೆಕ್ಕಿ ಹೆಕ್ಕಿ ಮೆಲ್ಲುತ್ತಿದ್ದರು.

~ * ~ * ~ * ~

*ಆಕರ : ಅರುಹು ಕುರುಹು, ಸಂಚಿಕೆ–14, ಕನ್ನಡ ತ್ರೈಮಾಸಿಕ,*
*ಸಂ: ಎಚ್.ಎಸ್. ಉಮೇಶ*
*ರಾಘವೇಂದ್ರ ಬಿ. ರಾವ್ ಅವರ ಕಾವ್ಯನಾಮ ಅನುಬೆಳ್ಳೆ*
*ಲಾಂಬು = ಅಣಬೆ, ಬಿಸಲೆ = ಮಣ್ಣಿನ ಪಾತ್ರೆ,*

~ * ~ * ~ * ~

## 2.3 ಎಲ್ಲದಕ್ಕೂ ಮೂಲದಲ್ಲಿ ತಂತ್ರಜ್ಞಾನವಿದೆ

**– ನಾಗರಾಜ ವಸ್ತಾರೆ**

ಕಟ್ಟಡ ವೃತ್ತಿಯವನಾದ್ದರಿಂದ ಆರ್ಕಿಟೆಕ್ಚರಿನಿಂದಲೇ ಸುರುಮಾಡುವುದು ಸಾಧುವೆನಿಸುತ್ತದೆ. ಇಂಡಿಯಾ ಅಂತೆಂಬ ನಾವಿರುವ ಈ ನಾಡಿನಲ್ಲಿನ ಸ್ವಾತಂತ್ರ್ಯ ಪೂರ್ವದಲ್ಲಿನ ಕೆಲವು ಕಟ್ಟಡಗಳನ್ನು ಕಣ್ಣಿಗೆ ತಂದುಕೊಳ್ಳಿ. ತಕ್ಕುದಾಗಿ, ಇಪ್ಪತ್ತನೇ ಶತಮಾನದ ಶುರುಶುರುವಿನಲ್ಲಿದ್ದ ಜಗತ್ತಿನ ಇತರೆ ಜಾಗಗಳಲ್ಲಿನವನ್ನೂ ನೂರು ವರ್ಷಕ್ಕೂ ಹಳತಾಗಿರುವ ಯಾವುದೇ ಇಮಾರತಿನ 'ಎದುರು' ನಿಂತು ನೋಡಿದರೂ, ಕಟ್ಟಾ 'ಸಿಮಿಟ್ರಿತ'ವಾಗಿದೆ, ಅಂದರೆ ಸಿಮಿಟ್ರಿಗೆ ಬದ್ಧವಾಗಿದೆ ಎಂದನಿಸುತ್ತದಷ್ಟೆ? ಕಟ್ಟಡದ 'ಎದುರು' ನೋಟದ ನಟ್ಟನಡುವೆ ಬಾಗಿಲಿರುತ್ತದೆ, ಮತ್ತು, ಈ ಮುಂಬಾಗಿಲಿನ ನಡುವೆ ನೆಲಕ್ಕೆ ಲಂಬವಾಗೊಂದು ಊಹಾರೇಖೆಯನ್ನೆಳೆದರೆ, ಈ ರೇಖೆಯ ಪರಿವಿಡಿಯಲ್ಲಿ ಇಡೀ ಕಟ್ಟಡವು ಎಡಕ್ಕೂ ಬಲಕ್ಕೂ ಸಮಸಮವೆನಿಸುತ್ತದೆ. ಬಾಗಿಲಿನ ಈ ಕಡೆಗೊಂದು ಕಿಟಕಿಯಿದ್ದಲ್ಲಿ, ಆ ಕಡೆಗೂ ಅಂಥದೇ ಇನ್ನೊಂದಿದೆ. ಇತ್ತ ಮೂರು ಕಂಬಗಳಿದ್ದರೆ ಅತ್ತವೂ ಅಂಥವೇ ಮೂರು ಕಂಬಗಳಿವೆ. ಎಡದ ಮೂಲೆಯಲ್ಲಿರುವ ಛಾವಣಿಯ ವಿವರವೇ ಬಲಗಡೆಯ ಕೊನೆಯಲ್ಲು ಮರುಕಳಿಸಿದೆ. ಅಂದರೆ, ಕಟ್ಟಡದ ಬಲದ ಪಕ್ಕ–ಪಕ್ಕೆಗಳಷ್ಟೂ ಕನ್ನಡಿಯಲ್ಲಿ ತೋರ್ಪಟ್ಟಿವೆಯೆಂಬಂತೆ ಎಡದಲ್ಲೂ ಥೇಟು ಥೇಟು ತೋರಿಬರುತ್ತವೆ. ಇನ್ನು, ಸಿಮಿಟ್ರಿಯೆಂಬುದೇನೆಂದು ನಿಮಗೆ ಗೊತ್ತೇ ಇದೆ. ದೇವರ ಮುಂದೆ ಬೆಳಕಿಡುವಾಗ ಎಡಕ್ಕೂ ಬಲಕ್ಕೂ ಒಂದೇ ರೀತಿಯ ಸೊಡರಿಡುವಷ್ಟೇ ಸಹಜವಾಗಿ ಅದು ನಮ್ಮೊಳಗೆ ಅಂತಃಸ್ಥವಾಗಿಬಿಟ್ಟಿದೆ!

ಗೊತ್ತಿರುವ ವಿಚಾರವೇ ಆದ್ದರಿಂದ, ಇದನ್ನು ಹೆಚ್ಚು ವಿಸ್ತರಿಸುವುದಿಲ್ಲ, ನೇರ ವಿಷಯಕ್ಕೆ ಬರುತ್ತೇನೆ.

ಕಟ್ಟಡಗಾರಿಕೆಯು ಸುರುಗೊಂಡ ಸುಮಾರಿನಿಂದ ರೂಢಿಯಲ್ಲಿದ್ದ ಈ 'ಸಿಮಿಟ್ರಿತ ಸಂಗತಿಯು ಕಳೆದ ಶತಮಾನವು ಮೈದಳೆದಿದ್ದೇ ಹೇಳಹೆಸರಿಲ್ಲದೆ ಕಾಣೆಯಾಯಿತಲ್ಲ, ಹೇಗೆ ಮತ್ತು ಏಕೆ? ಇದು ನನ್ನ ಸದ್ಯದ ಜಿಜ್ಞಾಸೆ, ಸಾವಿರಾರು ಕಾಲದ ಪ್ರತೀತಿಯನ್ನು ಒಂದೇ ಬೀಸಿನಲ್ಲಿ ಗುಡಿಸಿ ಕಸವಾಗಿಸಿ ಎಸೆಯಿತಲ್ಲ, ಆ ಕೈವಾಡವಾದರೂ ಯಾರದು ಮತ್ತು ಎಂಥದು?

ನಿಮಗೆ ಗೊತ್ತಿರಬಹುದು: ಕಟ್ಟಡಗಾರಿಕೆಯು ಸಿಮಿಟ್ರಿ–ಮತ್ತಿತರೆ ಸಂಪ್ರದಾಯವನ್ನು ಕೈಬಿಟ್ಟ ಹೊತ್ತಿನಲ್ಲೇ ಪದ್ಯವು ಆವರೆಗೆ ತನ್ನ ಹುಟ್ಟಿನೊಟ್ಟಿಗೇ ಕಡೆದಿಟ್ಟುಕೊಂಡಿದ್ದ ತನ್ನ ಪ್ರಾಸಾಸಕ್ತಿಯನ್ನು

ನಿಗ್ರಹಿಸಿಕೊಂಡಿತು. ನೀಗಿಕೊಂಡಿತು. ವಿಚಿತ್ರವೆಂದರೆ ಜಗದಾದ್ಯಂತದ ಕಾವ್ಯದಲ್ಲಿದು ಏಕತ್ರವಾಗಿ ಜರುಗಿತು. ಪದ್ಯವೆಂಬ ಪದ್ಯವು ಹೀಗೆ 'ರೈಮು' ಕೆಡವಿ ಕೊಡವಿಕೊಂಡಿದ್ದು ಸಾಮಾನ್ಯವೇನಲ್ಲ! ಚಾರಿತ್ರಿಕವಾದದ್ದು. ಸಾವಿರಾರು ಕಾಲಕ್ಕೂ ನೇಮನಿಷ್ಠೆಯೆನ್ನುವ ಹಾಗೆ, ಕಟ್ಟಳೆಗೊಳಪಟ್ಟಿದ್ದನ್ನು ತಂತಾನು ನಿವಾರಿಸಿಕೊಳ್ಳುವುದೇನು ಅನತಿಶಯವೇ? ಒಮ್ಮೆಂದೊಮ್ಮೆ ತೊಡಿಕೆ ಕಳಚಿ ನಿರಾಭರಣಗೊಂಡಂತೆ ತಾನೆ?! ಹೊತ್ತೆನ್ನುವ ಹೊತ್ತಿನ ಮಹತ್ತೇ ಹಾಗಿತ್ತೆನ್ನಬೇಕು! ಇಲ್ಲದಿದ್ದಲ್ಲಿ, ನಮ್ಮ ಕನ್ನಡದಲ್ಲೇ ವೃತ್ತ-ಗಿತ್ತ ಚೌಪದಿ ಷಟ್ಪದಿಯಾದಿ ಛಂದೋಬದ್ಧತೆಯನ್ನು ದಾಟಿ ಆಗಿಬಂದ – ಸುಗಮವಾಗಿ ಓದಲೂ ಹಾಡಲೂಬಹುದಿದ್ದ ಪ್ರಾಸನಿಷ್ಠ ಪದ್ಯಗಳೆಲ್ಲ ಇದ್ದಕ್ಕಿದ್ದಂತೆ "ಅಲಂಕಾರ' ಕಳಚಿ, ಅಡಿಗಡಿಗೂ 'ಅಡಿಗೋದ್ದೀಪ'ಗೊಂಡು ನವ್ಯವಾಗಿದ್ದು ಹೇಗೆ ಮತ್ತು ಯಾಕೆ?

ತೊಡಿಕೆ ಕಳಚಿ ನಿರಾಭರಣ-ಗೊಳ್ಳುವುದೆಂದೆನಲ್ಲ, ಇದೇ ಮಾತನ್ನು ಮನುಷ್ಯದೇಹಗಳ ಮೇಲೂ ಒಮ್ಮೆ ಆರೋಪಿಸಿ ನೋಡಿ. ಅದೇ ಕಾಲಕ್ಕೆ, ಫ್ಯಾಷನೆನ್ನುವ ಫ್ಯಾಷನ್ನೂ ಹಳತು ಕಳಚಿ ಹೊಸತುಟ್ಟು-ತೊಟ್ಟಿದ್ದು ಕಂಡುಬರುತ್ತದೆ! ಸದಾ ಸೆರಗು ಹೊದ್ದು ಮಂಡಿಗಿಂತ ತುಸು ಕೆಳಗಿಳಿಯುವಂತೆ ಕಟ್ಟಲಾಗುತ್ತಿದ್ದ ಹದಿನಾರು ಗಜದ ನೇಯ್ದ ಕಚ್ಚೆಸೀರೆಗಳು ಕಾಣೆಯಾಗಿ ಒಳಗೆ ಪೆಟ್ಟಿಕೋಟಿಟ್ಟು ಹೊರಗೆ ತೆಳ್ಳಗಿದ್ದು ಮೈದೋರಿಕೊಂಡಿಳಿವ ನೈಲಾನ್ನೈಲೆಕ್ಸುಗಳು ಕಾಣತೊಡಗುತ್ತವೆ. ಡಾಬು, ವಂಕಿ, ನತ್ತು, ಜುಮಕಿ, ಬೆಂಡೋಲೆಗಳ ಐದೆಯರು – ಇವನ್ನಲ್ಲದೆ ಕರಿಮಣಿಯೊಡನೆ ಗುಂಡುಕೋವಿಗಳನಿಟ್ಟು ಕೋದ ತಾಳಿಬಟ್ಟುಗಳನ್ನೂ ಬದಿಗಿರಿಸಿ ಬಂಗಾರದ ತೆಳ್ಳಂತೆಳು ಸರಿಗೆಯ ಮಾಂಗಲ್ಯವನ್ನು ತೊಡತೊಡಗುತ್ತಾರೆ! ಗಂಡುಗುಹ್ಯವನ್ನು ಒಳಬಳಸಿ ಬಿಗಿಯುತ್ತಿದ್ದ ಚೋಟುದ್ದದ ಲಂಗೋಟಿಗಳನ್ನು – ಗತ್ತೇ ಗತ್ತಿನ ಡ್ರಾಯರುಗಳೂ ಅಂಡರ್ವೇರುಗಳೂ ಬಿಚ್ಚಿಬಿಸುಟುತ್ತವೆ. ಪಂಚೆಮುಂಡುಗಳು ಪ್ಯಾಂಟಾಗುತ್ತವೆ. ಜುಬ್ಬದಂಗಿಗಳು ಬುಷ್ಕೋಟಾಗುತ್ತವೆ. ಹೊಲಿದ ಮೆಟ್ಟುಗಳೆಲ್ಲ ಫ್ಯಾಕ್ಟರಿಮೇಡ್ ಬೂಟಾಗುತ್ತವೆ. ನಾಮ-ವಿಭೂತಿಗಳಿಲ್ಲದೆ ನೊಸಲು ಬೋಳಾಗುತ್ತವೆ. ಪೇಟ-ಮುಂಡಾಸುಗಳು ಮರೆಯಾಗುತ್ತವೆ. ಗಾಂಧೀಟೊಪ್ಪಿಗೆಗಳು ಬರೇ ಕಾಂಗ್ರೆಸಿಗರ ತೋರಿಕೆಯ ಮೊಹರಾಗುತ್ತವೆ! ಹೀಗೆಲ್ಲ ಟ್ರೇಂಡು ಬದಲಿ(ಸಿ)ದ ಮಹಾತ್ಮೆಯನ್ನೇನನ್ನುವುದು?!

ಹಾಗೇ, ಆ ಕಾಲದ ಚಿತ್ರಕಲೆಯನ್ನು ಗಮನಿಸಿ, ಅದು ಅರ್ಥವನ್ನು ದಾಟಿ 'ಅನರ್ಥ'ವಾಗುತ್ತದೆ! ಕೆಲವೊಮ್ಮೆ 'ಅಪಾರ್ಥ'ವನ್ನೂ ಸಾಧಿಸಿಬಿಡುತ್ತದೆ.

ಪುರಾಣಗಳನ್ನು ಕಥಿಸುವಂತಿದ್ದ ಕಲೆಯು ಒಮ್ಮೆಲೇ ಮತ್ತು ಇದ್ದಕ್ಕಿದ್ದಂತೆ– 'ಅರ್ಥ'ಗಾಣದ, ಅಥವಾ ತಿಣಿಕದೆ ಕಾಣಸಿಗದ ಸ್ಟ್ರೋಕುಗಳ ಮೊರೆಹೊಕ್ಕು, ಕುಂಚದ ಗೀಚುತೋಚುಗಳ ಸಮಾ 'ಅಮೂರ್ತ'ಗೊಳ್ಳುತ್ತದೆ. ಆರ್ಟೆಂಬ ಆರ್ಟು ಅಬ್‌ಸ್ಟ್ರಾಕ್ಟಾಗಿಬಿಡುತ್ತದೆ! ರಾಜ ರವಿವರ್ಮನಿಗೂ ಎಮ್ಮೆಫ್ ಹುಸೇನಿಗೂ ನಡುವಿರುವ ಅಂತರದಲ್ಲಿ ಚಿತ್ರ(ಕತೆ)ಯು ಬದಲಿದ ಚಿತ್ರಣವಿದೆ ಅನಿಸುತ್ತದೆ. ಇಷ್ಟಿದ್ದೂ ಪ್ರಶ್ನೆ ಮಿಕ್ಕೇಬಿಡುತ್ತದೆ: ಇವೆಲ್ಲ ಯಾವ ಮಹಿಮೆಯ ಮೇರೆಗೆ?!

ಇನ್ನು ವಾಗ್ಗೇಯಾದಿ ಸಂಗೀತವೂ ಹೊರತಲ್ಲ. ಅದನ್ನೂ ಹೊರತಿಡಲಾಗುವುದಿಲ್ಲ! ಸಣ್ಣ ಸಣ್ಣ ಖಾಸಗೀ ಸಭೆಗಳಲ್ಲಿ ಪರಮಾಪ್ತವಾಗಿ ಹಾಡಿಕೊಳ್ಳುತ್ತಿದ್ದ ಆಲಾಪ(ನೆ)ವು(ಯು) ಮೈಕು ಗಿಟ್ಟಿಸಿಕೊಂಡಿದ್ದೇ, ದೊಡ್ಡ ಸಭಾಂಗಣವನ್ನು ಹೊಕ್ಕುಬಿಡುತ್ತದೆ. ಬೃಹದ್ವೇದಿಕೆಗಳನ್ನೇರುತ್ತದೆ. ಶ್ರೋತೃಸಮೂಹವು ಬಹುಸಂಖ್ಯಾತಗೊಳ್ಳುತ್ತದೆ. ಈ ನಡುವೆ, ಹಾಡೆನ್ನುವ ಹಾಡಿನಲ್ಲೂ ಅಲಂಕಾರವು ವರ್ಜ್ಯವೆನ್ನಿಸಿ ಲಘುಗೊಳ್ಳುತ್ತದೆ! ಹ್ರಸ್ವಗೊಳ್ಳುತ್ತದೆ! ಗಾಯನವೆನ್ನುವ ಗಂಟೆಗಟ್ಟಲೆ ಘಟನೆ ಏಳೆಂಟು ಮಿನಿಟಿಗಿಳಿಯುತ್ತದೆ! ತ್ವರೆಯೇ ತತ್ವವೆನಿಸಿಬಿಡುತ್ತದೆ! ಇನ್ನು, ಈ ಪವಾಡವೆಂಬುದರ ಒಲವೇನು? ಸಲುವೇನು?

ಹಾಗೇ ನಾಟಕದತ್ತ ಸರಿದುಬನ್ನಿ, ಒಡನೆ ನೃತ್ಯವನ್ನೂ ಕರೆತರಿಸಿ ಆಡಿಸಿ ಕಾಣಿ. ಇವುಗಳಲ್ಲೂ ಅಷ್ಟೆ, ಪೌರಾಣಿಕತೆ ಕಣ್ಮರೆಯಾಗುತ್ತದೆ. ಸಂಪ್ರದಾಯದ ತೂಕವಿಳಿಯುತ್ತದೆ. ಸಮಾಜಗ್ರಾಹೀ ಕಥನಗಳುಂಟಾಗುತ್ತವೆ. ದೇವರುಗಳ ಮೂಲಕ ತನ್ನನ್ನು ತಾನು ಕಾಣುತ್ತಿದ್ದ ಮನುಷ್ಯನು ತನ್ನ ರೂಪಕವಾಗಿ ತನ್ನನ್ನೇ ಕಥಿಸಿ ಕಾಣುತ್ತಾನೆ! ನಡುಮಧ್ಯೆ ಸಿನೆಮಾವೆಂಬ ಮಾಯಾಪರದೆಯೂ ಆಗಿಬಂದು, ಕಥನವೆಂಬುದರ ಸ್ಥಿತಿಗತಿಯೇ ಬದಲಿಸಿಬಿಡುತ್ತದೆ! ಸದ್ಯವೆಂಬ ಸದ್ಯವು ಎಲ್ಲೆಲ್ಲೂ ಮೈದಳೆದು ಮೂಡುತ್ತದೆ! ಹೌದಲ್ಲ, ಇದಕ್ಕು ಮಿಗಿಲಾದ ಒಂದು 'ಮಿರಾಕಲು' ನಿಜಕ್ಕು ನಮ್ಮ ನಡುವಿದೆಯೆ?

ಹೀಗೆ, ನನಗೆ ಹೆಚ್ಚು ಅರ್ಥವಾಗುವ ಕಟ್ಟಡಗಳಿಂದ ಸುರುಗೊಂಡು ತಕ್ಕುದಾಗಿ, ಜಗತ್ತಿನ ಎಲ್ಲ ಮನುಷ್ಯಕ್ಷೇತ್ರಗಳಲ್ಲೂ, ಇವಿವೇ ದಾವೆಗಳನ್ನು ಹಚ್ಚಿ, ಆ ಕಾಲವನ್ನು ಕಾಣಬಹುದು. ಕಾಣಿಸಬಹುದು. ಮೇಲೆ ಕೇಳಿದ ಪ್ರಶ್ನೆಗಳನ್ನು, ಮತ್ತೆ ಮತ್ತೆ ಕೇಳಿಕೊಳ್ಳಲೂಬಹುದು. ಈ ಪ್ರಶ್ನೆಗಳಿಗೆ 'ಇವಿವೇ' ಎಂಬ ಪಾಯಿಂಟುಗಳ ಉತ್ತರ ನಿಜಕ್ಕೂ ಸಾಧ್ಯವಿಲ್ಲ. ಜವಾಬು ಅಂದುಕೊಂಡಷ್ಟು ಸುಲಭಸಾಧ್ಯವಿಲ್ಲ. ಹೇಳಿದಷ್ಟೂ ಆಡಿಮುಗಿಯದ ವಿಚಾರವೇನಾದರೂ ನಮ್ಮ

ನಡುವಿನ ಸದ್ಯಾತಿಸದ್ಯದಲ್ಲಿದ್ದರೆ, ಅದು ಈ ಆಧುನಿಕತೆಯೇ ಇದ್ದೀತು. ಅವಶ್ಯವಾಗಿ, ಅದರ ಮೀಮಾಂಸೆಯ ಕುರಿತೇ ಆಗಿದ್ದೀತು!

***

ಇಪ್ಪತ್ತೊಂದನೇ ಶತಮಾನದ ಹದಿನಾರನೇ ಇಸವಿಯಲ್ಲಿನ ನಟ್ಟನಡುವಿರುವ ನಮಗೆ 'ಆಧುನಿಕ'ವೆಂದರೇನೆಂಬ ಪ್ರಶ್ನೆ ಇನ್ನಿಲ್ಲದೆ ಕಾಡುತ್ತದೆ. ಬಲ್ಲ ಅರ್ಥಗಳ ಒಳಗೂ, ಅಷ್ಟೇ ಆಚೆಗೂ–ಬಲ್ಲದ್ದೂ ಸಲ್ಲದ್ದೂ ಹೊಳೆದು, ಮನಸ್ಸು ತಿಣಿಕಿಸುತ್ತದೆ. ಸಂದಿಗ್ಧವೇ ತಾನಾಗುತ್ತದೆ!

ಪ್ರಶ್ನೆಯಿಷ್ಟೆ: ಕಳೆದ ನೂರು–ನೂರೈವತ್ತು ಕಾಲವನ್ನು 'ಆಧುನಿಕ'ವೆಂದು ಬಗೆವುದಾದರೆ, ನನ್ನ ಸದ್ಯದ ಸದ್ಯವನ್ನೇನು ಕರೆಯುವುದು? ಇನ್ನೇನು ಹೊಸ ಹೆಸರಿಡುವುದು? ಜಗದ್ಚರಿತೆಯಾದರೂ, ಕಳೆದ ಶತಮಾನದ ಮೊದಲಿನ ಎಪ್ಪತ್ತೂ–ಕೊಸರು ಕಾಲವನ್ನು ಆಧುನಿಕತೆಯೆಂದೂ, ಆ ಬಳಿಕದ್ದನ್ನು ಉತ್ತರಾಧುನಿಕವೆಂದೂ ಕರೆದುಬಿಟ್ಟಿದೆ. ಅಂದರೆ ಮಾಡರ್ನ್ ಮತ್ತು ಪೋಸ್ಟ್–ಮಾಡರ್ನ್! ಅರ್ಥಾತ್, 1970ರಿಂದೀಚೆಗಿನ ಕಾಲವನ್ನು ಆಧುನಿಕೋತ್ತರವೆಂದು ಕೂಗುವ ವಾಡಿಕೆ ಸುರುಗೊಂಡೇ, ಹತ್ತಿರ ಹತ್ತಿರ ನಲವತ್ತೈದು ವರ್ಷಗಳಾಗಿಹೋಗಿವೆ! ಅಂದರೆ ತಕ್ಕಮಟ್ಟಿಗೆ ಅರ್ಧ ಶತಮಾನ! ಹೀಗಿರುವಾಗ, ಈ ಮುಂದೆ ಬರಲಿಕ್ಕಿರುವುದಿರಲಿ, ಈ ಕ್ಷಣದ ಹೊಸತರ ಬಗ್ಗೆ ಏನನ್ನುವುದು? ನಿಜಕ್ಕೂ ತಿಳಿಯುತ್ತಿಲ್ಲ!

ಹಾಗೆ ನೋಡಿದರೆ, ಆಧುನಿಕವೆಂಬುದು ಕಾಲಮಾನವಷ್ಟೇ ಅಲ್ಲ. ಹಾಗೇ ಆಧುನಿಕವಾದವನ್ನೆಲ್ಲ. ಒತ್ತಟ್ಟಿಗೆ ಉಡಿಕಟ್ಟಿಕೊಂಡಿರುವ– 'ಆಧುನಿಕತೆ' ಅಂತೆಂಬ ನಾಮವಿಶೇಷ(ಣ)ವೂ ಸಹ– ಬರೇ ಕಾಲಸೂಚಕವಲ್ಲ! ಆಧುನಿಕತೆ ಎಂಬುದನ್ನು, ಅದನ್ನು ಮೊದಲು ಹುಟ್ಟಿಸಿದ ಯುರೋಪು– ಕಲೆಯ ನಿಟ್ಟಿನಲ್ಲಿ ಮತ್ತು ಸಲುವಾಗಿ ಕಟೆದ ನುಡಿಗಟ್ಟೆಂದು ವಿವರಿಸುತ್ತದೆ. ಮನುಷ್ಯ ಸಂಬಂಧಿತ ಸಮಾಜವಿಜ್ಞಾನವು, ಆಧುನಿಕತೆಯೆಂದರೆ ಆಧುನಿಕವೆನ್ನುವ ಚಾರಿತ್ರಿಕ ಕಾಲಘಟ್ಟವಲ್ಲದೆ, ಮಧ್ಯಕಾಲಾನಂತರದ ಯುರೋಪು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಸೈದ್ಧಾಂತಿಕವಾಗಿ ಮತ್ತು ರಾಜ ಕೀಯವಾಗಿ, ರೂಢಿಸಿಕೊಂಡ ರೀತಿನೀತಿ–ರಿವಾಜುಗಳ ಸಮಷ್ಟಿಯೆಂಬಂತೆ ಬಣ್ಣಿಸುತ್ತದೆ. ಯುರೋಪಿನೊಳಗೇ, ಬೇರೆಬೇರೆ ನಾಡುಗಳಲ್ಲಿ ಪರಸ್ಪರ ಅಂತರ್ಸಂಬಂಧಗಳೊಡನೆ ಜರುಗಿದ ರಾಜಕಾರಣದ ಚಾರಿತ್ರಿಕ ಪ್ರಕ್ರಿಯೆಗಳನ್ನೂ, ಅನ್ನ–ವಸತಿ–ಬಟ್ಟೆಗಳಿಂದ ಸುರುಗೊಂಡು ಫ್ಯಾಶನಿನವರೆಗೂ– ಫ್ಯಾಶನಿನಿಂದ ಮೊದಲಾಗಿ ಯುದ್ಧಾದಿ ವಿದ್ಯಮಾನದವರೆಗೂ ಹಬ್ಬಿ

ಹರಡಿರುವ ಸಾಂಸ್ಕೃತಿಕ ಚಿಂತನೆಗಳನ್ನೂ, ಇವುಗಳು–ಮನುಷ್ಯಾಸ್ತಿತ್ವ ಮತ್ತು ಅನುಭವಗಳ ಮೇಲುಂಟುಮಾಡಿರುವ ಪರಿಣಾಮಗಳ ಪರಿವಿಡಿಯಲ್ಲಿ ಒಟ್ಟಾರೆಯಾಗಿ ಆಧುನಿಕತೆಯನ್ನು ಚರ್ಚಿಸಲಾಗುತ್ತದೆ.

ಕಾಲಮಾನದ ಮೇರೆಯಲ್ಲಿ ನೋಡುವಾಗ, ಆಧುನಿಕತೆಯನ್ನು–

01 ಸಾಂಪ್ರದಾಯಿಕತೆಯನ್ನು ಪ್ರಶ್ನಿಸುವ, ತನಿಖಿಸುವ ಮತ್ತು ಅಲ್ಲಗಳೆಯುವ

02 ವ್ಯಕ್ತಿಗತ ನೆಲೆಯಲ್ಲಿ ಮನುಷ್ಯನ ಅಸ್ಮಿತೆಯನ್ನೂ, ಸಮಾನತೆಯನ್ನೂ, ಸ್ವಾತಂತ್ರ್ಯವನ್ನೂ ಮೆರೆಸುವ

03 ರಾಜಸತ್ತೆಯನ್ನು ನಿವಾರಿಸಿ ಪ್ರಜಾತಂತ್ರವನ್ನು ಕೈಕೊಂಡ–

04 ವ್ಯವಸಾಯಕ್ಕಿಂತ ಉದ್ಯೋಗವೇ ನೇರ್ಪೆಂದು ಬಗೆಯತೊಡಗಿದ ಮತ್ತು ಉದ್ಯೋಗಾವಕಾಶಕ್ಕಾಗಿ ಕೈಗಾರಿಕೀಕರಣವನ್ನು ನೆಚ್ಚಿದ

05 ಹಳ್ಳಿಗಳಲ್ಲಿನ ಸಣ್ಣ ಸಣ್ಣ ಸಮುದಾಯಗಳಿಗಿಂತ ಬೃಹತ್–ನಗರೀಯ ಸಮಾಜದಿಂದಲೇ ಏಳಿಗೆಯೆಂದು ಬಗೆದ–

06 ಕೃಷಿಗಿಂತಲೂ ಉದ್ದಿಮೆಯೇ ಅರ್ಥವ್ಯವಸ್ಥೆಗೆ ಲೇಸೆಂದು ಗಣಿಸತೊಡಗಿದ

07 ನಾಡುಗಳನ್ನು ಒಗ್ಗೂಡಿಸಿ ರಾಷ್ಟ್ರಗಳನ್ನಾಗಿ ಪರಿಕಲ್ಪಿಸಿ, ಸರ್ವತಂತ್ರ ಸ್ವತಂತ್ರ ಗಣತಂತ್ರಗಳನ್ನು ರೂಢಿಸಿದ–

08 ಧರ್ಮಕ್ಕು ಮಿಗಿಲು ಮತ್ತು ಮೊದಲು ದೇಶವೆಂದು ಮೊಳಗಿ, ಡೆಮಾಕ್ರೆಸಿಯೊಡನೆ 'ಸೆಕ್ಯುಲರಿಕೆ' ಎಂಬಿನ್ನೊಂದನ್ನೂ ಕೈಕೊಂಡ– 'ಕಾಲ'ವಲ್ಲದೆ, ಈ ಎಲ್ಲ ಗಣನೆಗಳೂ ಹೌದೆಂದು ಹೇಳಲಾಗುತ್ತದೆ.

ಇಂಗ್ಲಿಷಿನಲ್ಲಿ, ಅದರಲ್ಲೂ ಬಹುತೇಕ ಯುರೋಪಿನಲ್ಲಿ ಆಧುನಿಕತೆಯನ್ನು 'ಮಾಡರ್ನಿಟಿ' ಅನ್ನಲಾಗುತ್ತದೆ. (ಅಥವಾ, ಮಾಡರ್ನಿಟಿಯನ್ನೇ ಕನ್ನಡದಲ್ಲಿ ಆಧುನಿಕತೆ ಅಂದಿದ್ದೇವೆ!) ಚಾರ್ಲ್ಸ್ ಬಾಡಿಲೇರ್, 1864ರಲ್ಲಿ ಬರೆದ– 'The Painter of Modern Life' ಎಂಬ ಪ್ರಬಂಧದಲ್ಲಿ ನಗರದೊಳಗಿನ 'ಎಫಿಮೆರಲ್' ಅಂದರೆ ಕ್ಷಣಿಕವಾದ ಅನುಭವವನ್ನು ವಿವರಿಸುತ್ತ, ಕಲೆಗೆ ಈ 'ಭಂಗುರತ್ವ'ವನ್ನು ಸೆರೆಹಿಡಿಯುವ ತಾತ್ವಿಕ ಹೊಣೆಯಿರುತ್ತದೆಂದು ಬಗೆಯುತ್ತ– ಸದರಿ ಭಂಗುರಾನುಭವ–ವನ್ನೂ, ಅದರ ಅಭಿವ್ಯಕ್ತಿಯನ್ನೂ ಏಕತ್ರವಾಗಿ 'ಮಾಡರ್ನಿಟಿ'ಯೆಂದು ಕಡೆದಿಟ್ಟನಂತೆ! ಈ ಅರ್ಥದಲ್ಲಿ ಆಧುನಿಕತೆಯನ್ನು ಕಾಣಬಹುದಾದರೆ, ಬಾಡಿಲೇರನ 'ಟಂಕ' ಒಪ್ಪತಕ್ಕ ಮಾತೇ ಸರಿ!

ಈಗಿರುವ ಶತಮಾನದ ಈ ಹದಿನಾರನೇ ಇಸವಿಯಲ್ಲಿ ನಮ್ಮ ಸುತ್ತಲೂ ಇರುವ ಕಾಲ ಸದ್ಯವನ್ನು ಆಧುನಿಕವೆನ್ನುವುದೋ,

ಉತ್ತರಾಧುನಿಕವೆನ್ನುವುದೋ ಎಂಬ ಸಂದೇಹ, ನನ್ನನ್ನು ಕಾಡುತ್ತಲೇ ಇದೆ. ಬಹುಶಃ ಕಾಡುತ್ತಲೇ ಇರುತ್ತದೆ! ಹಾಗಿದ್ದರೆ, ನನ್ನ ಸದ್ಯದ ಸುತ್ತಲಿನ 'ಸದ್ಯಾಧುನಿಕ'ವನ್ನು ಏನನ್ನುವುದೆಂಬಲ್ಲಿ ಶಂಕೆ ಗಾಢಯಿಸುತ್ತಲೂ ಇದೆ!

ಉತ್ತರ ಸಿಕ್ಕಂದು– ಕೋಳಿ ಮೊದಲೋ, ಮೊಟ್ಟೆ ಮೊದಲೋ ಎಂಬ ಒಗಟು ಪರಿಹರಿಯುತ್ತದೆ!

***

ಇವೇನೇ ಇದ್ದರೂ, ಹಳತನ್ನು ಬದಿಗೊತ್ತಿ ಹೊಸತರ ಕೈ ಹಿಡಿಯುವುದು ಮನುಷ್ಯನ ಸಹಜ ಜಾಯಮಾನವೇ ಹೌದೆನಿಸುತ್ತದೆ. ಹೊಸ ನೀರು ಬಂದು ಹಳೆಯದೆಲ್ಲ ಕೊಚ್ಚಿಹೋಯಿತೆಂದು ಭಾಷೆಯೇ ಈ ಜಾಯಮಾನವನ್ನು ಹಿಡಿದಿಡುತ್ತದಲ್ಲ, ಎಂತಲೇ– ಇದು ಸ್ವಾಭಾವಿಕ ಸತ್ಯವೇ ಅಂತನ್ನಿಸುತ್ತದೆ! ಇನ್ನು ಬದಲಾವಣೆಯಾದರೂ ಆಧುನಿಕತೆಯ ಒಡಲೊಡಬೆಸಕೊಂಡ ಧರ್ಮವೇ ಆಗಿದೆ. ಮತ್ತು ಈ ಬದಲಾವಣೆಗೆ ಕುಮ್ಮಕ್ಕೆನ್ನುವ ಹಾಗೆ, ಎಲ್ಲದಕ್ಕೂ ಮೂಲದಲ್ಲಿ ತಂತ್ರಜ್ಞಾನವಿದೆ.

ಹೌದು, ಹೊಸತಾಗಿ ಕಂಡುಕೊಂಡ ತಂತ್ರಜ್ಞಾನವೇ– ಎಲ್ಲ ಕಾಲಕ್ಕು ಮನುಷ್ಯ ನಾಗರಿಕತೆಯನ್ನು ಬಗೆಬಗೆಯಾಗಿ ಊರ್ಜಿಸುತ್ತ ಬಂದಿದೆ. ಹೊಸತೊಂದು ತಂತ್ರಾನ್ವೇಷಣೆಯಾಗಿದ್ದೇ ಮನುಷ್ಯನ ಅಸ್ತಿತ್ವಕ್ಕೆ ಅಸ್ತಿತ್ವವೇ ಸಾರಾಸಗಟಾಗಿ ಮಾರ್ಪಟ್ಟು ಹೋಗುವುದನ್ನು, ನಾವು ನುಷ್ಯೇತಿಹಾಸದುದ್ದಕ್ಕೂ ಕಂಡಿದ್ದೇವೆ! ಬೆಂಕಿಯುತ್ಪಾದಿಸುವುದರಿಂದ ಮೊದಲುಗೊಂಡು, ಆ ಬಳಿಕದ ಚಕ್ರದ ಬಳಕೆಯನ್ನೂ ಒಳಗೊಂಡು, ಕೆಲವೆಂಟು ಲೋಹಯುಗಗಳನ್ನೂ ಕ್ರಮಿಸಿ, ವ್ಯವಸಾಯಕ್ಕೆಂದು ನೆಲೆನಿಂತ ಮಾನವನ ಈವರೆಗಿನ ಆಗುಹೋಗುಗಳನ್ನು ಗಮನಿಸಿದರೆ– ಚರಿತ್ರೆಯಲ್ಲಿನ ಒಂದೊಂದು ಪರ್ವಾವಸ್ಥೆಯೂ ಒಂದಲ್ಲೊಂದು ಆವಿಷ್ಕಾರದ ಉತ್ಕರ್ಷದೊಡನೆ ತಾಳೆಯಾಗಿರುವುದು ಮನದಟ್ಟಾಗುತ್ತದೆ!

ಬೆಂಕಿ ಮತ್ತು ಚಕ್ರಗಳಾದರೂ ಒಂದಾನೊಮ್ಮೆ, ಇಡೀ ಮನುಕುಲದ ಇತಿಹಾಸವನ್ನೇ ಬದಲಿಸಿಬಿಟ್ಟವೆಂದು ನಮಗೆ ಗೊತ್ತು. ಅಲೆಮಾರಿಯಾಗಿದ್ದ ಮನುಷ್ಯನನ್ನು ಒಂದೆಡೆ ನೆಲೆಯೂರುವಂತೆ ಮಾಡಿದ್ದೇ– ಇವುಗಳೆಂದೂ ನಮಗೆ ಗೊತ್ತು. ಆದರೆ, ಇವಿವೇ 'ಚಕ್ರಾಗ್ನಿ'ಗಳು ಮುಂದಾನೊಮ್ಮೆ, ಜಗಚ್ಚರಿತ್ರೆಯಲ್ಲಿ ಪ್ರವರ್ತಕವಾಗುತ್ತವೆಂದು ಅವನ್ನು ಮೊದಮೊದಲು ಕಂಡುಕೊಂಡವರಿಗೆ ನಿಜಕ್ಕೂ ಗೊತ್ತಿದ್ದಿರಲಿಕ್ಕಿಲ್ಲ! ಯಾಕೆಂದರೆ, ಇಂದು ನಾವು ಆಧುನಿಕತೆಯೆಂದು ಕರೆಯುವ ಹೊಸಕಾಲದ ಧಾತುವಿರುವುದೇ, ಬೆಂಕಿ

ಮತ್ತು ಗಾಲಿಗಳು ಒಡಗೂಡಿ– ಕಾಲವೆಂಬ ಕಾಲವನ್ನೇ ಬದಲಿಸಿಬಿಟ್ಟಾಗ! ಎರಡೂ, ಅಷ್ಟೇನೂ ಪುರಾತನವಲ್ಲದ ಹೊತ್ತಿನಲ್ಲಿ ಒಂದನ್ನಿನ್ನೊಂದು ಪೈಪೋಟಿಯಲ್ಲಿ ಉದ್ದೀಪಿಸಿಕೊಂಡವು ನೋಡಿ, ಕಾಲದ ಮಹಾತ್ಮೆಯೇ ಬದಲಿಹೋಯಿತು!

ಅಸಲಿನಲ್ಲಿ, ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಸುರುಗೊಂಡು, ಇಪ್ಪತ್ತನೇ ಶತಮಾನದಿಂದೀಚೆಗೆ ಅತ್ಯುಚ್ಛ್ರಾಯಗೊಂಡ– ಆಧುನಿಕತೆಯ ಮೂಲಸೆಲೆಯಿರುವುದು ಅಥವಾ ಸಿಗುವುದು– ಈಗಿಗೆ ಇನ್ನೂರು–ಮುನ್ನೂರು ವರ್ಷಗಳ ಹಿಂದೆ! ಸ್ಟೀಮ್–ಎಂಜಿನ್ನೆಂಬ ಮಾಯಾಯಂತ್ರದ ಆವಿಷ್ಕಾರವಾದಾಗ! ಸ್ಟೀಮ್–ಎಂಜಿನನ್ನು 'ಉಗಿಗಿರಣಿ'ಯೆಂದು ಕನ್ನಡಿಸಬಹುದು. ಈ ಉಗಿಗಿರಣಿಯೆಂಬುದು ನಿಜಕ್ಕೂ ಏನು? ಇದು ನಿಮಗೆ ಗೊತ್ತಿದೆಯಾದರೂ, ನನ್ನದೇ ಮನನೋದ್ದೇಶದಲ್ಲಿ ಹೇಳಿಬಿಡುತ್ತೇನೆ. ಚಕ್ರವೆಂಬ ಚಕ್ರ ತಿರುಗಿಸುವ ಕೆಲಸವು– ಅದರ ಆವಿಷ್ಕಾರವಾದಾಗಿನಿಂದಲೂ ಸದಾಸರ್ವದಾ ನಡೆಯುತ್ತಿತ್ತಾದರೂ, ಈ ತಿರುಗುಗೆಲಸಕ್ಕಾಗಿ ಮನುಷ್ಯಬಲವನ್ನು ಹೂಡಬೇಕಾಗುತ್ತಿತ್ತು. ಚಕ್ರದೊಳಕ್ಕೆ ಮನುಷ್ಯನ ರಟ್ಟೆಯ ಕಸುವೊಡಬೇಕಾಗುತ್ತಿತ್ತು. ಸರಳವಾಗಿ, ಮನುಷ್ಯನೊಬ್ಬನು ನಿರಂತರವಾಗಿ ಕೈಯಿಕ್ಕಿ ಗಾಲಿಯನ್ನು ತಿರುಗಿಸುವುದಾಗುತ್ತಿತ್ತು. ಇಲ್ಲಾ, ಯಾವುದಾದರೂ ಪಳಗಿಸಿದ ಪ್ರಾಣಿಯನ್ನು (ಗಾಣಕ್ಕೆ ಎತ್ತನ್ನೂ, ರಥಕ್ಕೆ ಕುದುರೆಯನ್ನೂ ಹೂಡುವ ಹಾಗೆ) ಬಳಸಬೇಕಾಗುತ್ತಿತ್ತು. ಒಟ್ಟಿನಲ್ಲಿ ಇದು ತ್ರಾಸಿನ ಕೆಲಸವೇ ತಾನೆ?! ಹೀಗಿರುವಾಗ, ಹದಿನೇಳನೇ ಶತಮಾನದ ಯುರೋಪಿನಲ್ಲಿ, ಯಾರೋ ಒಬ್ಬನಿಗೊಮ್ಮೆ, ಚಕ್ರವನ್ನು ತಿರುಪಿನಲ್ಲಿರಿಸಿ 'ಫ್ರೀಯಾಗಿ ತಿರುಗುವ ಹಾಗೆ, ಅದರ ಮೇಲೆ ಉಗಿಯುಗ್ಗಿದರೆಂತೆಂಬ ಯೋಚನೆ ಬಂತು, ನೋಡಿ– ಹೊಸ ಚರಿತ್ರೆಯೇ ಉಂಟಾಗಿಬಿಟ್ಟಿತು! ತನ್ನಿಂತಾನೆ ಕ್ರಾಂತಿಯೇ ಐತಂದುಬಿಟ್ಟಿತು!

ಸರಿ, ಕುದಿನೀರಿನ ಹಬೆಯನ್ನು ಚಕ್ರದ ಮೇಲುಗ್ಗಿ, ಅದರ ಗರಗರನೆ ತಿರುಗು ಸಾಧಿಸಿದ್ದೇ– ಜಗತ್ತಿನಷ್ಟೂ 'ನಾಗರಿಕತೆಯ ನಿಟ್ಟೇ ಮಾರ್ಪಟ್ಟುಹೋಯಿತು! ಹಬೆ ಬಳಸಿ ತಿರುಗುವ ಈ ಚಕ್ರಾಧರಿತ–(ಪ್ರ)ಕ್ರಿಯೆಯನ್ನು 'ಉಗಿ–ಗಿರಣಿ'ಯೆಂದು ಕರೆಯಲಾಯಿತು. ಇದೇ ಸ್ಟೀಮ್–ಎಂಜಿನ್ನು! ಈ ಗಿರಣಿಯಲ್ಲಿ ಉಗಿಯೆನ್ನುವುದು ನಿಮಿತ್ತ ಮಾತ್ರ; ಹಾಗೇ ನೀರೆಂಬ ನೀರು ಸಹ ಮಾಧ್ಯಮ ಮಾತ್ರ ಉಗಿಗಿರಣಿಯಲ್ಲಿ ದಿಟದ ಕರಾಮತ್ತಿರುವುದು ಚಕ್ರದ್ದು ಮತ್ತು ನೀರು ಕಾಯಿಸಲಿಕ್ಕಿರುವ ಬೆಂಕಿಯದ್ದು, ಅಂದರೆ, ಇದು ಈ ಮೊದಲಿದ್ದ, ಚಕ್ರಾಗ್ನಿ ಪರಿಕರದ್ದೇ ಚಮತ್ಕಾರ! ಆದರೆ ಚಕ್ರ ಮತ್ತು ಅಗ್ನಿಗಳು,

ಈವರೆಗೆ ಹೀಗೊಂದು ಮಾಯೆಯನ್ನು ಕೈಕೊಂಡಿದ್ದಿರಲಿಲ್ಲ. ಅಷ್ಟೇ! ಹೀಗೆ 'ಉಗಿಗಿರಣಿ'ಯೆಂದೊಂದು ಆಗಿಬಂದಿದ್ದೇ, ಆವರೆಗೆ ಚಾಲ್ತಿಯಲ್ಲಿದ್ದ 'ಕೆಲಸ'ದ ರೂಢಿಗಳಷ್ಟೂ ಏಕಾಏಕಿ ಬದಲಿಹೋದವು. ಮನುಷ್ಯಕ್ರಮವನ್ನು ಯಂತ್ರಗಳು ನಿವಾಳಿಸಿಬಿಟ್ಟವು. ಮನುಷ್ಯತಾಳ್ಮೆಯನ್ನೂ ನಿವಾರಿಸಿಬಿಟ್ಟವು! ಹಿಂದೆಯೇ ಒಮ್ಮಿಂದೊಮ್ಮೆಗೇ ಕಾರ್ಖಾನೆಗಳು ಹುಟ್ಟಿಕೊಂಡವು!

ಉಗಿಗಿರಣಿಯ ಯಶೋಗಾಥೆಯಲ್ಲಿ ಬೆಂಕಿಯಷ್ಟೇ ನೀರಿನ ಪಾತ್ರವೂ ಹಿರಿದೇ, ಉಗಿಗೆ ನೀರು ಬೇಕಾಗುವ ಹಾಗೇ, ಬೆಂಕಿಗೆ ಉರುವಲು ಕೂಡ ಬೇಕು, ಎಂತಲೇ ಮೊದಮೊದಲಿನ ಕಾರ್ಖಾನೆಗಳು ಯಥೇಚ್ಛ ನೀರೂ, ಅಷ್ಟೇ ಕಾಡೂ ಇರುವಲ್ಲಿ ಹುಟ್ಟಿಕೊಂಡವು. ಮರಗಳನ್ನು ಉರುವಲಾಗಿಯೂ, ಹೊಳೆಗಳನ್ನು ನೀರಿಗಾಗಿಯೂ ಬಳಸಲಾಯಿತು. ಬಳಿಕ ಕಲ್ಲಿದ್ದಲಿನ ನಿಕ್ಷೇಪವಿದ್ದಲ್ಲಿ ಫ್ಯಾಕ್ಟರಿಗಳನ್ನು ಕಟ್ಟಲಾಯಿತು. ಯಾವಾಗ, 'ಉಗಿಗಾಲಿ'ಯನ್ನು ಹಳಿಗಳ ಮೇಲೆ ಎಲ್ಲೆಂದರಲ್ಲಿ ಕೊಂಡೊಯ್ಯುವ ಹಾಗೆ ಮಾಡಲಾಯಿತೋ, ಮನುಷ್ಯನ ಹಮ್ಮು ನೂರಾರು ಪಟ್ಟು ಹೆಚ್ಚಿಯೇಬಿಟ್ಟಿತು. ಇದನ್ನು 'ಲೋಕೋಮೋಟಿವ್ ಸ್ಟೀಮ್ ಎಂಜಿನ್' ಎಂದು ಕರೆಯಲಾಯಿತು. ಅಂದರೆ ನಾವು ಕನ್ನಡದಲ್ಲಿ ಝೋಕಾಗಿ ಹೇಳುವ "ಉಗಿಬಂಡಿ, ನಮ್ಮ ರೈಲುಗಳ ಉಗಮವಿರುವುದೇ ಇದರಲ್ಲಿ! ಇದು ಸುರುವಾಗಿದ್ದೆ. ಉರುವಲನ್ನೂ ನೀರನ್ನೂ ಎಲ್ಲೆಂದರಲ್ಲೂ ಒಯ್ಯಬಲ್ಲ ಇನ್ನೊಂದೇ ವ್ಯವಸ್ಥೆಯುಂಟಾಗಿ, ಎಲ್ಲೆಂದರಲ್ಲಿ ಕಾರ್ಖಾನೆಗಳು ಸುರುಹಚ್ಚಿಕೊಂಡವು! ಇದನ್ನು ಕೈಗಾರಿಕಾ ಕ್ರಾಂತಿಯೆಂತಲೇ ಬಗೆಯಲಾಯಿತು.

ಇನ್ನು, ಕಾರ್ಖಾನೆಗಳಾದ ಮೇಲೆ ಜನವಸತಿಯೂ ಆಗಬೇಕಷ್ಟೆ?' ಎಂತಲೇ, ಕೈಗಾರಿಕೆಗಳಿರುವಲ್ಲೆಲ್ಲ ಜನವೊತ್ತರಿಸಿ, ಜನದ ಸಲುವಾಗಿ ಮನೆಗಳೊತ್ತರಿಸಿ ಊರು ಬೆಳೆಯಿತು. ಹಳ್ಳಿಗಳು ಪಟ್ಟಣವಾದವು. ಹೊಸ ಹೊಸ ನಗರಗಳು ಹುಟ್ಟಿಕೊಂಡವು. ಮನೆಗಳಿರುವಲ್ಲಿಗೆ ನೀರು ಸರಬರಾಜಾಯಿತು. ಹೊಲಸು ಹರಿಯಲಿಕ್ಕೆಂದು ಒಳಚರಂಡಿಗಳಾದವು. ಕಡಿಮೆ ಗಳಿಕೆಯೂ, ಹೆಚ್ಚು ಪರಿಶ್ರಮವೂ ಇರುವ ಬೇಸಾಯಕ್ಕೆ ವಿಮುಖವಾದ ಮಂದಿ ನಗರಾಸಕ್ತರಾಗಿ, ದಂಡಿದಂಡಿ ವಲಸೆಬಂದರು. ಶಹರಗಳು ಬಹುಸಂಖ್ಯಾತಗೊಂಡು ಕೊಬ್ಬಿದವು. ಹೀಗೆ ಪಲ್ಲಟಗೊಂಡ ಮನುಷ್ಯ–ಸಮೂಹವನ್ನೂ, ಸಂಪನ್ಮೂಲವನ್ನೂ ನಿಭಾಯಿಸುವ ಸಲುವಾಗಿ ಹೊಸಬಗೆಯ ಆಳ್ವಿಕೆಗಳುಂಟಾದವು. ಹೊಸ ಹೊಸ ಯೋಜನೆಗಳಾದವು. ಇದ್ದಕ್ಕಿದ್ದಂತೆ, ಜಗತ್ತು ಆಕಾರದಲ್ಲೆಲ್ಲೋ ಇರುವ ದೇವರನ್ನೂ, ಸ್ವರ್ಗವನ್ನೂ ಬದಿಗೊತ್ತಿ ಎರಡೂ, ಇರುವುದಾದರೂ ಇಲ್ಲೇ; ತನ್ನಲ್ಲೇ;

ತನ್ನ ಸುತ್ತಮುತ್ತಲೇ– ಎಂದು ಬಗೆಬಗೆದು. ಮನುಷ್ಯನನ್ನೇ ತನ್ನೊಳಗಿನ ಕಣ್ಣಿನಲ್ಲೂ, ಗಿಣ್ಣಿನಲ್ಲೂ ಇಟ್ಟುಕೊಂಡುಬಿಟ್ಟಿತು!

ಈ ನಡುವೆ ಅಮೆರಿಕೆಯಲ್ಲಿ ಪೆಟ್ರೋಲುದಿಸಿ ಬಂತು! ಮೊದಮೊದಲು ಸೀಮೆಯೆಣ್ಣೆಯ ಬಳಕೆ ಸುರುವಾಯಿತು. ಪೆಟ್ರೋಲಿಯಮು ಕುರಿತಾದ ಸಂಶೋಧನೆಗಳಾಗಿ, ಭಟ್ಟಿಯಿಳಿಸಿದ್ದಾದರೆ ಹತ್ತಾರು ಶ್ರೇಣಿಗಳಲ್ಲಿ ವಿಂಗಡಿಸಬಹುದಾದ ಎಣ್ಣೆಗಳನ್ನು ತೆಗೆಯಬಹುದೆಂದು ಗೊತ್ತಾಗಿದ್ದೇ– ಜಗತ್ತು ಆ ತನಕ ಕಂಡಿರದ ವಸ್ತುಗಳೆಲ್ಲ ಕಣ್ಣೆದುರು ಮೈದಳೆದುಬಿಟ್ಟವು. ಪೆಟ್ರೋಲು, ಡೀಸಲು, ಕೆರೋಸಿನು, ಥರಾವರಿ ದಹ್ಯಾನಿಲಗಳು, ಬಿಟುಮಿನ್ನು, ಪ್ಲಾಸ್ಟಿಕ್ಕು? ಹೀಗೆ ಒಂದೇ ಎರಡೆ? ಇದೇ ಪ್ರಯುಕ್ತ ಕಾಂಕ್ರೀಟೆಂಬ ಸಂಯುಕ್ತವಸ್ತುವೂ ಹುಟ್ಟಿಬಂತು, ಜೊತೆಗೇ, ಒಳಗೆ ಉಕ್ಕಿನ ತಡಿಕೆಯಿಟ್ಟು ಕಾಂಕ್ರೀಟೆರೆದರೆ ಬೇಕಾದ ಆಕಾರವೆಲ್ಲ ಆಗುತ್ತದೆಂಬ ಟೆಕ್ನಾಲಜಿ ಕೂಡ! ಇನ್ನು, ಮನುಷ್ಯನ ಊಹಾಕಾರಕ್ಕೆ ಎಣೆಯೇ ಉಳಿಯಲಿಲ್ಲ. ಎಣಿಸಿದ್ದೆಲ್ಲ ಆಕಾರವೇ ತಾನೆ?

ಒಟ್ಟಿನಲ್ಲಿ ಮನುಷ್ಯನ ಅಸ್ತಿತ್ವದ ದಿಕ್ಕೇ ಬದಲಾಯಿತು. ಅವನು ಕಂಡುಕೊಂಡ ಹೊಸದಿಶೆಗಳಲ್ಲಿ ದೇವರ ದಿಕ್ಕೇ ದಿಕ್ಕುತಪ್ಪಿತು!

ಹೀಗೆ ಲೋಕದ ಕೇಂದ್ರವನ್ನು ಮನುಷ್ಯನೇ ತಲುಪಿದನೋ, ಲೋಕವೇ ಮನುಷ್ಯಕೇಂದ್ರಿತಗೊಂಡಿತೋ– ಒಟ್ಟಾರೆ, ಜಗಚ್ಚಿತ್ರಣವೇ ಸಂಪೂರ್ಣವಾಗಿ ಹೊಸತಾಗಿಹೋಯಿತು!

ಎಲ್ಲೆಲ್ಲೂ ನಗರ– ಸಮಾಜಗಳುಂಟಾದ ಬಳಿಕ, ಅವುಗಳೊಳಗಿನ ಮಂದಿಯೆಲ್ಲ ತಲೆಗೊಂದು ತಲಾ 'ನಾಗರಿಕ'ರಾದರು. ಹಿಂದೆಯೇ– ತಮ್ಮನ್ನು ಆಳಲಿಕ್ಕೆ ಅರಸೊತ್ತಿಗೆಯೇತಕ್ಕೆ, ತಮ್ಮ ತಾವೇ ಆಳಿಕೊಳ್ಳಬಹುದೆಂಬ ಉಮೇದುಗಳಾದವು. ಗಣತಂತ್ರಗಳುದಿಸಿಬಂದವು. ಕ್ರಾಂತಿಗಳಾದವು. ರಾಜಕೀಯ ವಿಪ್ಲವಗಳು ಘಟಿಸಿದವು. ಪ್ರಜಾಸತ್ತೆಗಳು ಮೈದಳೆದಿದ್ದೇ, ಈವರೆಗಿನ ತಂತಮ್ಮ ಆಳರಸರ ತಲೆ ಕೂಡ ಕಡಿಯಲಾಯಿತು. ಇಲ್ಲಾ, ದೊರೆಗಳೆಲ್ಲ ಪದಚ್ಯುತಗೊಂಡರು!

ತಮ್ಮಿಂತಾವೇ ಆಳಬಹುದೆಂಬ ಉದ್ದೇಶದಲ್ಲಿ ಡೆಮಾಕ್ರೆಸಿಯು ಹುಟ್ಟಿತಾಗಿ, ದೊರೆಗಳೆಲ್ಲ ಇಲ್ಲವಾದರು. ಜನಸಾಮಾನ್ಯರಾಗಿಬಿಟ್ಟರು. ಅರಸುಗಳೇ ಇಲ್ಲವಾದ ಮೇಲೆ– ಕಾಲಾನುಕಾಲಕ್ಕೆ ಅರಸುಕುಲವನ್ನು ಉಪದೇಶಿಸಿ, ನಿರ್ದೇಶಿಸುತ್ತಿದ್ದ ಪುರೋಹಿತರು ತಾನೇ ಯಾತಕ್ಕೆ ಬೇಕು? ಕಿಂಗೆಂಬ ಕಿಂಗೇ ಇಲ್ಲದಿರುವಾಗ ಪಾದ್ರಿಗೇನು ಕೆಲಸ? ಸರಿ. ಅವನನ್ನೂ

ಅವಗಣಿಸಲಾಯಿತು. ಹೀಗೆ ಪಾದ್ರಿ'ತನ'ವನ್ನೇ ಅಲ್ಲಗಳೆಯಲಾಗಿ, ದೇವರೇನು ತಾನೇ ಮಾಡಿಯಾನು? ಮುನಿದಾನೆ? ಹಳಿದಾನೆ? ಕುಣಿದಾನೆ? ಅತ್ತಾನೆ? ಕರೆದಾನೆ? ಇಷ್ಟಕ್ಕೂ, ಪುರೋಹಿತನಷ್ಟೇ ಜನಕ್ಕು ದೈವಕ್ಕು ನಡುವಿನ 'ಮೂಲಕ' ಮತ್ತು 'ವಾಹಕ'?! ಹೀಗಾಗಿ ಹೊಸಕಾಲದ 'ನಾಗರಿಕ'ರು ದೇವರೆಂಬ ದೇವರನ್ನೂ ಪ್ರಶ್ನಿಸತೊಡಗಿದರು. ತನಿಖೆಗೊಡ್ಡಿದರು. ಕಡೆಗೆ– ದೇವರೂ, ದಿಂಡರೂ, ನಡುವಿನ ಮಧ್ಯವರ್ತಿಗಳೂ ಇಲ್ಲದ, ಅಲಿಪ್ತ ಸಮಾಜವನ್ನು ಸೃಜಿಸುವ ಮೇರೆಗೆ 'ಸೆಕ್ಯುಲರ್' ವ್ಯವಸ್ಥೆಯೆಂದೊಂದನ್ನು ರೂಢಿಸಲಾಯಿತು. ಹಳತೆಂಬ ಯಾತಕ್ಕೂ ಜೋತದ ಹೊಸತೇ ಹೊಸತಾದ– ಮನುಷ್ಯಾಸ್ಮಿತೆಯಷ್ಟೇ ಪರಮವೆನ್ನುವ ರೂಢಿಯುಂಟಾಯಿತು!

***

ಮುನ್ನೂರು ವರ್ಷಗಳಿಂದೀಚೆಗೆ– ಮನುಷ್ಯನು ತನ್ನೊಳಗೆ ತಾನೇ ಜಗತ್ತಿದೆಯೆಂದು ವಾಚಾಮನಸಾ ಬಗೆಯತೊಡಗಿದ್ದೇ, ಸ್ಟೀಮ್–ಎಂಜಿನಿನಾಚೆಗೂ ಹೊಸ ಹೊಸ ಆವಿಷ್ಕಾರಗಳಾದವು! ಹೊಸ ಆವಿಷ್ಕಾರವು ಹೊಸ ಅರಿವನ್ನು ಹುಟ್ಟಿಸಿತು. ಹೊಸತಾಗಿ ಹುಟ್ಟಿದ ಅರಿವು ಮರಳಿ ಹೊಸತನ್ನು ಆವಿಷ್ಕರಿಸಿತು. ಹೀಗೆ, ಇದರಿಂದ ಅದೆಂದೂ ಅದರಿಂದ ಇದೆಂದೂ– ಸರಣಿಯೋಪಾದಿ ಸರಪಳಿಯೇರ್ಪಟ್ಟಿತು. ಆವರೆಗಿನ ಅರಿವನ್ನೆಲ್ಲ ಹೊಸತಾಗಿ ಪರಿಷ್ಕರಿಸಲಾಯಿತು. ಪರಿಣಾಮವಾಗಿ ಅರಿವೆಂಬುದರ ಅರಿವೂ' ಮರಮರಳಿ ಹೆಚ್ಚಿ ಹೆಚ್ಚಿ ಹೆಚ್ಚುವರಿಯಾಗಿ ಮೂಡಿಬಂತು. ಫಿಸಿಕ್ಸು ಹೊಸತಾಯಿತು. ಜೀವವಿಜ್ಞಾನದಲ್ಲಿ ಹೊಸ ಹೊಸ ದಾವೆಗಳೆದ್ದವು. ಜಗದ್ರಸಾಯನಕ್ಕೂ ಹೊಸ ಕೆಮಿಸ್ಟ್ರಿ ಹೇಳಲಾಯಿತು. ಅದಾಯಿತೆಂದು ಇದಾಯಿತು. ಇದಾಯಿತೆಂದು ಇನ್ನೊಂದಾಯಿತು. ಹೀಗೆ ಆಗಿ ಆಗಿ ಆಗುವುದರ ನಡುವೆ, ಈವರೆಗೆ ಮನುಷ್ಯನು 'ಆಗಿದ್ದ' ರೀತಿಯೇ ರೀತಿ ಅಲ್ಲವೆಂದು, ಹಳೆಯ ಹೇಳಿಕೆಗಳನ್ನು ಅಲ್ಲಗಳೆಯಲಾಯಿತು. ಪುರಾವೆಗಳಿಲ್ಲದ ಪುರಾಣವೇ ಬೊಗಳೆಯೆನ್ನಲಾಯಿತು. ಕಡೆಗೆ, ಮನುಷ್ಯನ ಆಗುಹೋಗನ್ನೇ ಬದಲಿಸಲಾಯಿತು! ಸೈನ್ಸಿನೊಡನೆ ಮನಸ್ಸು ಬದಲಿತು. ಫಿಸಿಕ್ಸೊಡಗೂಡಿ ಫಿಲಾಸಫಿ ಬದಲಿತು! ಮನುಷ್ಯವಂತಿಕೆಯ ಮನಸ್ಸೂ ಸ್ವಚ್ಛಂದಿಸಿತು. ತನ್ನಿಮಿತ್ತದಲ್ಲಾಗುವ ಕಲಾವಂತಿಕೆಯೂ ಹೊಸತಾಗಿಬಿಟ್ಟಿತು!

'ಮನುಷ್ಯ'ತ್ವದ ಕುರುಹೇ ಮಾರ್ಪಟ್ಟ ಮೇಲೆ, ಅಸ್ತಿತ್ವದ ಚಿಹ್ನೆಗಳೂ ಬದಲುವುದೇ ತಾನೆ? ಹೀಗಾಗಿ, 'ಮಾಡರ್ನಿಸಂ' ಅಂತೆಂಬ ಹೊಸ ಇಸಂಮನ್ನೇ ಕಟೆಯಲಾಯಿತು! 'ಮಾಡರ್ನಿಸಂ'ಗೆ ಸರಿಸಮವಾದ

'ಕನ್ನಡ'ವಿದೆಯೋ ಇಲ್ಲವೋ ಕಾಣೆ; ಒಟ್ಟಾಗಿ ಇದನ್ನೂ "ಆಧುನಿಕತೆ' ಅಂತನ್ನಬಹುದು. ಅಥವಾ, ಹಾಗನ್ನುವ ರೂಢಿಯೂ ಇಲ್ಲದಿಲ್ಲ. ನನ್ನ ಸದ್ಯದ ಸಂದಿಗ್ಧವೇನೆಂದರೆ, 'ಮಾಡರ್ನಿಟಿ'ಯನ್ನೂ ಆಧುನಿಕತೆಯೆನ್ನುವುದಾದರೆ, ಮಾಡರ್ನಿಟಿಯ ಸೈದ್ಧಾಂತಿಕತೆ ಅನ್ನಬಹುದಾದ ಮಾಡರ್ನಿಸಂ– ಅನ್ನು ಏನನ್ನುವುದು? ಇದನ್ನೂ ಆಧುನಿಕತೆ ಅನ್ನುವುದಾದರೆ ಆ ಆಧುನಿಕತೆಯನ್ನು ಇದರಿಂದ ಹೇಗೆ ಬೇರ್ಪಡಿಸುವುದು? ಎಂತಲೇ, ಮಾಡರ್ನ್–ಇಸಂ ಅನ್ನು ನಾನು ಆಧುನಿಕ(ತ)ತ್ವ (ಸರಳವಾಗಿ ಆಧುನಿಕತ್ವ) ಎಂದು ಬಳಸಿದ್ದೇನೆ. ಕಲೆಯನ್ನೂ ಒಳಗೊಂಡಂತೆ ಎಲ್ಲ ಬಗೆಯ ಮನುಷ್ಯಾಭಿವ್ಯಕ್ತಿಯನ್ನು ಬಿಂಬಿಸುವ ಸಲುವಾಗಿ 'ಆಧುನಿಕತ್ವ'ವೆಂಬ ಹೊಸ ಸಿದ್ಧಾಂತವನ್ನೇ ಹೇಳಲಾಯಿತು.

ಆಧುನಿಕತ್ವ (ಮಾಡರ್ನಿಸಂ)ವನ್ನು ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನಗಳು ರೂಢಿಸಿದ ಸೈದ್ಧಾಂತಿಕ ಪ್ರಕ್ರಿಯೆಯೊಂದಾಗಿ ಕಾಣುವ ಪ್ರತೀತಿಯೇ ಇದೆ. ಕೈಗಾರಿಕೀಕರಣದ ಮೇರೆಗೆ ಬದಲಿದ ಸಾಮಾಜಿಕ ವ್ಯವಸ್ಥೆ ಮತ್ತು ತನ್ಮೂಲಕವುಂಟಾದ ಸಾಂಸ್ಕೃತಿಕ ಪಲ್ಲಟ ಕಥನಗಳನ್ನು ಸೂಚಿಸುವ ಸಲುವಾಗಿ 'ಆಧುನಿಕತ್ವ'ವನ್ನು ಬಳಸಲಾಗುತ್ತದೆ. ಈ ಆಧುನಿಕತ್ವವನ್ನು ರೂಪಿಸಿದ ಹತ್ತುಹಲವು ಅಂಶಗಳಲ್ಲಿ ಮುಖ್ಯ ಪರಿವಿಡಿಯಾಗಿ ಕೈಗಾರಿಕೀಕೃತ ಸಮಾಜಗಳ ಹುಟ್ಟು ಮತ್ತು ಬೆಳವಣಿಗೆಗಳನ್ನೂ, ಆ ಮೇರೆಯಲ್ಲುಂಟಾದ ಔದ್ಯೋಗಿಕ ನಾಗರಿಕತೆಯನ್ನೂ, ನಗರೀಕರಣ ಮತ್ತು ನಗರಾಭಿವೃದ್ಧಿಯನ್ನೂ– ನೋಡಲಾಗುತ್ತದೆ. ಆಧುನಿಕತ್ವವು ಆಧುನಿಕಪೂರ್ವದ ಯುರೋಪಿಯನ್ 'ಎನ್ಲೈಟನ್ಮೆಂಟ್' – ಅನ್ನೂ, ಧರ್ಮದೊಟ್ಟಿಗಿನ ಲೇವಾದೇವಿಯನ್ನೂ ಸಾರಾಸಗಟಾಗಿ ಧಿಕ್ಕರಿಸುತ್ತದೆ. ಹಾಗೇ, ಕಲೆ ಸಾಹಿತ್ಯ ವಾಸ್ತುಶಿಲ್ಪ ತತ್ವಜ್ಞಾನ ಸಂಗೀತ ಶಿಲ್ಪ? ಒಟ್ಟಾರೆ ಈ ಎಲ್ಲವುಗಳಲ್ಲಿನ ಸಾಂಪ್ರದಾಯಿಕತೆಯನ್ನೂ, ಆಧುನಿಕತೆಯು ಉಂಟಾಗಿಬಂದ ಕಾಲದೇಶಗಳ ವ್ಯಾಪ್ತಿಯಿಂದ ಹೊರತಿಟ್ಟು ಕಾಣುತ್ತದೆ. ಹೊಸಕಾಲದ ರಾಜಕಾರಣ, ಅರ್ಥವ್ಯವಸ್ಥೆ ಮತ್ತು ಸಮಾಜ–ಸಂಸ್ಕೃತಿಗಳ ಸ್ಥಿತ್ಯಂತರವನ್ನು 'ವ್ಯಾವಸಾಯಿಕ'– ಮೂಲವುಳ್ಳ ಸಂಪ್ರದಾಯಗಳು ತಕ್ಕುದಲ್ಲವೆಂದು ಮೊಳಗುತ್ತದೆ. ನಗರಗಳೊಳಗಿನ ಮನುಷ್ಯ ಬವಣೆಯನ್ನು ದೇವಾನುದೇವರುಗಳ ಮಹಿಮೆಯಾಗಲೀ, ಪ್ರಕೃತಿ ಸೌಂದರ್ಯದ ರಮ್ಯಚಿತ್ರಣವಾಗಲೀ– ಬಗೆಹರಿಸವು ಎಂಬ ಕಟುಸತ್ಯವನ್ನು ಅಷ್ಟೇ ಬಿತ್ತರಿಸುತ್ತದೆ. ಇಪ್ಪತ್ತನೇ ಶತಮಾನದ ಮೊದಲರ್ಧದಲ್ಲಿ ಜರುಗಿದ ಜಗದ್ಯುದ್ಧಗಳ ಮತ್ತು ಯುದ್ಧೋತ್ತರ ಪರಿಣಾಮಗಳ ಮೇರೆಗೆ– ಮಾಡರ್ನಿಸ್ಟ್ ಮನುಷ್ಯನ ಪಾತ್ರಗಾತ್ರಗಳನ್ನು ಪುನರಚಿಸಬೇಕೆಂದು

ಬಗೆಯುತ್ತದೆ. ಒಟ್ಟಿನಲ್ಲಿ, ಮನುಷ್ಯಸೌಖ್ಯ ಮತ್ತು ಸದನುಭವಗಳ ಸಲುವಾಗಿ ಜಗತ್ತಿನ ಪುನರ್ನಿರ್ಮಿತಿಯನ್ನು ಕನಸುತ್ತದೆ.

***

ಸದರಿ ಚರ್ಚೆಯ ಸುರುವಿನಲ್ಲಿ, ನಮ್ಮ ನಡುವಿನ ಆರ್ಕಿಟೆಕ್ಚರು, ಸಾಹಿತ್ಯ, ಫ್ಯಾಶನು, ಚಿತ್ರಕಲೆ, ಸಂಗೀತ, ನಾಟಕ, ನೃತ್ಯ? ಈ ಪ್ರಕಾರಗಳು ಬದಲಿದ ಪುರಾವೆಗಳನ್ನಿಟ್ಟು, ನಾನು ಕೇಳಿದ ಕೆಲವಾರು ಪ್ರಶ್ನೆಗಳಿಗೆ ತಕ್ಕ ಮಟ್ಟಿಗಿನ ಉತ್ತರವೂ, ಹಿನ್ನೆಲೆಯೂ ಈಗ ಸಿಕ್ಕಿದೆಯೆಂದುಕೊಂಡಿದ್ದೇನೆ. ವಿಚಿತ್ರವೆನಿಸಿದರೂ ಒಂದು ಸತ್ಯಾತ್ಮಕ ಸತ್ಯವೇನೆಂದರೆ, ಕನ್ನಡದಲ್ಲಿನ ಪದ್ಯವೆಂಬ ಪದ್ಯವಾದರೂ– ತನ್ನ ಛಂದೋಬಂಧ ಹಗುರಾಗಿಸಿಕೊಂಡು– 'ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೆ ಎಲ್ಲಿಗೆ ಹೋಗಿದ್ದೆ?' ಎಂಬ 'ರೈಮು'ಗಳಾಗಿ, 'ನಾಗರ ಹಾವೇ ಹಾವೊಳು ಹೂವೇ ಬಾಗಿಲ ಬಿಲದಲಿ ನಿನ್ನಯ ಠಾವೇ?' ಎಂದು 'ಸ'ಪ್ರಾಸ ಸರಳವಾಗಿ, 'ಸ್ವರಸಪ್ತವಿದ್ದ ಪ್ರತಿಬಿಂಬ ಬಿದ್ದ ಉದ್ದುದ್ದ ಶುದ್ಧ ನೀರೇ?' ಎಂದೆಲ್ಲ ಪ್ರಬುದ್ಧವಾಗಿ, 'ಬರಿಗೊಡಗಳಿಗೆ ಸಮಾಧಾನ ಹೇಳುತ್ತಿದೆ. ನೀರಿಲ್ಲದ ನಲ್ಲಿ?' ಎಂದು ಪ್ರಸಕ್ತವಾಗಿ, 'ಹುತ್ತಗಟ್ಟದೆ ಚಿತ್ತ ಕೆತ್ತಿತೇನು ಪುರುಷೋತ್ತಮನ ಆ ಅಂಥ ರೂಪರೇಖೆ?' ಎಂದು ಮೈಕೊಡವಿಕೊಂಡೆದ್ದು ಹೊಸತಾಗಿ, 'ಬಚ್ಚಲುಮನೆ ಗಂಗಾಳದಲ್ಲಿ ಅಪ್ಪ ಮರೆತ ಹೊಸ ಹಲ್ಲು ಸ್ವತಂತ್ರವಾಗಿ ಹಲ್ಲು ಕಿರಿಯಿತು; ನಾನು ನೋಡಿದೆ' ಎಂದು ನವೀನವಾಗಿ, ಅವರು ಹೇಳಿದರು. ನಾನು ಹೆಂಗಸರಿಗೆ ಬೆನ್ನುಡಿ ಬರೆಯುವುದಿಲ್ಲ?' ಎಂದು ತೀರಾ ತೀರಾ 'ಇವೊತ್ತಾಗಿ'– ಮೆರೆಯುತ್ತಿರುವುದು– ಅಲ್ಲೆಲ್ಲೋ ಖಂಡಾಂತರದ ಯುರೋಪಿನಲ್ಲಿ, ನಿಜಕ್ಕು ಉಂಟಾದ ಆ 'ಆಧುನಿಕತೆ'ಯ ಮೇರೆಗೆ! ಅಲ್ಲಿನ ಮಂದಿ ಕಟೆದ 'ಆಧುನಿಕತ್ವ'ದಿಂದಲೇ! ಪದ್ಯದ ಮಾತಿರಲಿ, ನಾವು ಇಂಡಿಯಾವೆಂದು ನಂಬುವ ಇಂಡಿಯಾ ಕೂಡ– 'ಅಲ್ಲಿನವರು' ಹಾಗೆ ಪರಿಭಾವಿಸಿ, ಬಿಡಿ ಬಿಡಿ ನಾಡುಗಳನ್ನು ಇಡಿಯಾಗಿ ಒಗ್ಗೂಡಿಸಿ ಕೊಟ್ಟಿದ್ದರಿಂದಲೇ! ನಾವು ನಾವೇ ಆಳಿಕೊಳ್ಳುತ್ತಿದ್ದೇವೆಂಬ ಪ್ರಜಾಸತ್ತೆಯ ಭ್ರಮೆಯಾದರೂ ಇಲ್ಲುಂಟಾಗಿದ್ದು, ಇಲ್ಲಿಗೂ ಎಷ್ಟೋ ಮೊದಲು ಅಲ್ಲುಂಟಾಗಿತ್ತೆನ್ನುವ ಕಾರಣಕ್ಕೆ! ಡೆಮಾಕ್ರೆಸಿಯಿರಲಿ, ಜಾತ್ಯತೀತ, ಧರ್ಮಾಲಿಪ್ತ– ವಿತರ ಮೊಹರಿರುವ 'ಸೆಕ್ಯುಲರಿಕೆ'ಯನ್ನು ಕೂಡ– ಆವಾಹಿಸಿಕೊಂಡಿದ್ದು, ಅದೇ– ಅದದೇ – ಯುರೋಪಿನ ದೆಸೆಯಿಂದಲೇ!

ಹೇಗಿದೆ ನೋಡಿ ವರಸೆ!

"ನೇಶನ್–ಸ್ಟೇಟ್" ಅಂತೆಂಬ ರಾಷ್ಟ್ರದ ಪರಿಕಲ್ಪನೆಯಾಗಲೀ, ಭಾರತ

ಮಾತೆ'ಯೆಂಬ ತಾಯ್ದೇವಿಯ ಚಿತ್ರಿಕೆಯಿರಲಿ, ರಾಷ್ಟ್ರಗೀತೆ – ಲಾಂಛನವಿತ್ಯಾದಿ ಹತ್ತಿನ್ನೊಂದಿರಲಿ? ಸಂವಿಧಾನವೆಂಬ ಬರೆದಿಟ್ಟ ಸಂಹಿತಾತ್ಮಕ ಕಡತವಿರಲಿ? ಇವೆಲ್ಲವುಗಳ ಮೂಲದ್ರವ್ಯವು ಸಿಗುವುದು – ಐದಾರು ಸಾವಿರ ವರ್ಷಗಳ ಪರಂಪರೆ ನಮ್ಮದೆಂದು ಕರೆದುಕೊಳ್ಳುವ 'ನಮ್ಮಲ್ಲಲ್ಲ'! ಯಾರನ್ನು ಪರಕೀಯರೆಂದು ವಿರೋಧಿಸಿ ಕಾದೆವೋ, ಯಾವುದು ಪರತಂತ್ರವೆಂದು ಧಿಕ್ಕರಿಸಿದೆವೋ– ಅಲ್ಲಿ! ಅವರಲ್ಲಿ!!

ಇನ್ನು, ದೇಶ–ರಾಷ್ಟ್ರವೆಂದು ಸ್ವಾತಂತ್ರ್ಯೋತ್ತರದ ಪರಮ–ಪ್ರತಂತ್ರ ಗಣತಂತ್ರದ ಹುರುಪಿನಲ್ಲಿ ಬೀಗಿದೆವಲ್ಲ. ನಾವು ಮೊಗೆಮೊಗೆದು ತಂದೆರೆದುಕೊಂಡಿದ್ದು– 'ಯುರೋಪಿಯನ್' ಆಧುನಿಕತೆಯನ್ನೇ! ಅದೇ ಮಾಡರ್ನಿಸ್ಟ್ ಮಾಡರ್ನಿಟಿಯನ್ನು ನೇರ ಸಶರೀರ ತರ್ಜುಮೆಗೈದುಕೊಂಡೇ! ಇಲ್ಲಿನದನ್ನು ಅಲ್ಲಿ, ಅಲ್ಲಿನದನ್ನು ಇಲ್ಲಿ– ಐತರಿಸಿ ಕಲೆಸಿ, ಜಗತ್ತಿನ ಚಹರೆಯನ್ನೇ ಬದಲಿಸಿದವರ ತಾಳಕ್ಕೆ ಮೇಳವಾಗಿಯೇ! ಅವರು ಹೇಳಿಕೊಟ್ಟ ಆಮದು ರಫ್ತುಗಳೆಂಬ ನೆಪದಲ್ಲಿ ಕೊಟ್ಟಿದ್ದಕ್ಕು ಹೆಚ್ಚು ಅವರಿಂದ ತಂದುಕೊಂಡೇ! 'ಅವಳದನ್ನಿವಳಿಗೆ ತೊಡಿಸಿ ಸುಖಿಸಿಯೇ!

ಆಹಾ! ಇದ್ದಿದ್ದು ಕೊಡುವುದುದೆಂದರೆ ಏನುತ್ಸಾಹ! ಏನು ಕತೆ! ಏನೇನು ಅಂಗಾಂಗ ಪುಳಕ!!

ಈ ಪುಳಕೋತ್ಸಾಹದ ಮೇರೆಗೇ– 'ಕಟ್ಟುವೆವು ನಾವು ಹೊಸ ನಾಡೊಂದನು? ರಸದ ಬೀಡೊಂದನು?' ಎಂದೆಲ್ಲ ಹೊಸ ನಾಡು ಕುರಿತಾಗಿ ಹೊಸ ಹಾಡು ಕಟ್ಟಿ ಹಾಡಿಪಾಡಿ ಕೊಂಡಾಡಿ ಮೆರೆದೆವಲ್ಲವೆ? ಕೈಗಾರಿಕೆಯೇ ಕಾಯಕಲ್ಪವೆಂದು ಬೀಗಿದೆವಲ್ಲವೆ? ಅಮೆರಿಕೆಯೆಂತಾಗುವುದೇ ಏಳಿಗೆ ಅಂತಂದೆವಲ್ಲವೆ? ಎಷ್ಟು ದುಡ್ಡಿಗೆಷ್ಟು ಡಾಲರಂತ ದಿನಕ್ಕೊಂದು ಕೋಷ್ಟಕ ಬರೆದೆವಲ್ಲವೆ? ದುಡ್ಡನ್ನುವ ಮಹೋದ್ರೇಕವನ್ನು ಸದಾ ಕಾಪಾಡಿದ್ದೇವಲ್ಲವೆ? ಇದೇ ಸಲುವಾಗಿ ಓದಿ ಓದಿ ಓದಿ ಜಗತ್ತನ್ನೇ ಕಡೆದೆವಲ್ಲವೆ?

ಯಾವ ಸಲುವಾಗಿ?

ಹೌದು! ಅವರ ನೇರಕ್ಕೂ ಆಧುನಿಕಗೊಳ್ಳುವ ಸಲುವಾಗಿ!

ಎಂತಲೇ, ದೇಶಮಟ್ಟದಲ್ಲಿರಲಿ, ದೇಶದ 'ತನುಜಾತೆ'ಯೇ ಆದ ಕನ್ನಡದಲ್ಲೂ ಸಾಕಷ್ಟು 'ನವ್ಯ'ಗಳಿವೆ. 'ನವ್ಯ'ಗಳಾಗಿಬಂದಿವೆ. 'ಮಾಡರ್ನ್' ಎಂಬುದಕ್ಕೆ ಪರ್ಯಾಯವಾಗಿ ಹೇಳುವ ಸದರಿ 'ನವ್ಯ'ವು ಕಲೆಯಲ್ಲಿದೆ. ಕಥೆಯಲ್ಲಿದೆ. ನಾಟಕಗಳಲ್ಲಿದೆ. ಕಾವ್ಯದಲ್ಲಿದೆ. ಹೊಸಗನ್ನಡದ ಎಲ್ಲ ಹೊರಳು – ಬಳುಕುಗಳಲ್ಲೂ ಇದೆ. ಆಡಳಿತದಲ್ಲೂ ಇದೆ! ನಮ್ಮ

ಸಮಕಾಲೀನ ಶಹರಗಳ 'ಕಟ್ಟೋಣ'ಗಳಿಂದ ಮೊದಲುಗೊಂಡು, ಸಕಲಕಲೆಗಳಲ್ಲಿನ ಎಲ್ಲದರಲ್ಲೂ 'ನವ್ಯ'ನಾವೀನ್ಯವಿದೆ. ಈ ಎಲ್ಲ ಬಿಡಿ ಬಿಡಿ 'ನವ'ಗಳ ಮೂಲವರಸಿಕೊಂಡು ಹೋದರೆ, ಇವಿವೇ 'ನವ್ಯ'ಗಳ ಮಹಾತಾಯಿಯೆಂಬಂತೆ ಯುರೋಪಿಗೇ ಹೋಗಿ ಸಂದುವುದಾಗುತ್ತದೆ! ಯಾಕೆಂದರೆ, ಇಡೀ ಜಗತ್ತನ್ನು ಆವರಿಸಿ ಪೊರೆದ 'ಮಹಾ'ನವ್ಯವೊಂದು ತನ್ನ ಉಗಮಾಗಮಗಳ ಸಹಿತ ನಮ್ಮೆದುರು ತೆರೆದುಕೊಳ್ಳುತ್ತದೆ.

ಇದನ್ನರಿಯದ ಮರುಳರು ಮಾತ್ರ– ಇದೇ ನವಭಾರತದ ನವನವೋನ್ಮೇಷವೆಂದು ಬೀಗುತ್ತಾರೆ. ಬೀಗಿ ನಡೆಯುತ್ತಾರೆ!

ಇಲ್ಲಿ 'ಎಲ್ಲ' ಬಲ್ಲ ಬಲು ಮಂದಿ ಹಿರಿಯರಿದ್ದೀರಿ, ನನ್ನ ಸುತ್ತಮುತ್ತ; ನಿಮಗೊಂದು ಪ್ರಶ್ನೆಯಿದೆ. ಸಾವಾಕಾಶ ಓದಿ ಮತ್ತು ಕೇಳಿ.

ಚಾರಿತ್ರಿಕವಾಗಿ, ಅಷ್ಟೇ ಸಾಂಸ್ಕೃತಿಕವಾಗಿ ಯುರೋಪಿಗಿಂತ ಬಲುಭಿನ್ನವಿದ್ದ ಏಷಿಯಾ ಮತ್ತು ಅಫ್ರಿಕಾಗಳು ಆಧುನಿಕಗೊಳ್ಳಲಿಕ್ಕೆ ಅಲ್ಲಿನ ಮಾಡರ್ನಿಸಮನ್ನೇ ತಂದೆರೆದು ಕಟ್ಟಬೇಕಿತ್ತೆ? ಅದೇ ಮಾಡರ್ನಿಟಿಯನ್ನು ಮೂರ್ತಯಿಸಿಕೊಳ್ಳಬೇಕಿತ್ತೆ? ಪಶ್ಚಿಮದ ಶೇಡುಟೋನಿಲ್ಲದ ಮೂರ್ತೈಕೆಗಳೆಂದೂ ಆಧುನಿಕವಲ್ಲವೆ? ನಾಲ್ಕಾರು ಸಾವಿರ ಕಾಲದ ಸಂಸ್ಕೃತಿ ಸಂಪ್ರದಾಯಗಳಿವೆಯೆಂದು ಬೀಗಿಕೊಳ್ಳುವ ಭಾರತವು ತನ್ನದೇ ಆದ ಆಧುನಿಕತೆಯನ್ನು ಕಂಡುಕೊಳ್ಳಲಿಲ್ಲವೇಕೆ?

ಇಷ್ಟಾಗಿ ಭಾರತ ಅಂತಂದರೇನು? ನಿಜಕ್ಕು ಭಾರತೀಯತೆ ಅಂತೊಂದು ಇದೆಯೆ? ಇದ್ದಲ್ಲಿ, ಭಾರತೀಯ ಆಧುನಿಕತೆ ಅಂತೊಂದೂ ಇದೆಯೆ? ಹಾಗೊಂದಿದ್ದರೆ ತಿಳಿಹೇಳಿ.

~ * ~ * ~ * ~

*ಆಕರ : 'ಸಮಾಹಿತ' ಸಾಹಿತ್ಯ ಸಾಂಸ್ಕೃತಿಕ ದ್ವೈಮಾಸಿಕ, ಪುಟ–1, ಸಂಚಿಕೆ–4*
*ಪ್ರಧಾನ ಸಂಪಾದಕರು : ಗಿರಡ್ಡಿ ಗೋವಿಂದರಾಜ,*
*ಪ್ರಕಾಶನ : ಸಮಾಹಿತ ಟ್ರಸ್ಟ್, ಧಾರವಾಡ– 01*

~ * ~ * ~ * ~

## ಓದುಪತ್ರ : 2.4 ಆಧುನಿಕತೆ : ಮಾತು ಮತ್ತು ತರ್ಕದ ಪಂಜರ

**– ಎಂ. ಆರ್. ದತ್ತಾತ್ರೆ**

ಆಧುನಿಕತೆ ಎನ್ನುವುದು ಕಾಲಕ್ಕೆ ಸಂಬಂಧ ಪಡುವಂತದ್ದು. ಯಾವ ಕಾಲ ಆಧುನಿಕ ಕಾಲ? ಪಶ್ಚಿಮದಲ್ಲಿ ಸಾಮಾನ್ಯವಾಗಿ ಹದಿನೆಂಟನೇ ಶತಮಾನದಲ್ಲಿ ಪ್ರಾರಂಭವಾದ ಕೈಗಾರಿಕಾ ಕ್ರಾಂತಿಯ ಸಮಯದಿಂದ ಆಚೆಗಿನ ಕಾಲವನ್ನು ಆಧುನಿಕಕಾಲವೆಂದು ಗುರುತಿಸಲಾಗುತ್ತದೆ. ಆದರೆ ಸಾಮಾನ್ಯ ಅರ್ಥದಲ್ಲಿ ಆಧುನಿಕವೆಂದರೆ "ಮುಂದುವರೆದ ಅಥವಾ ಸಮಕಾಲೀನವಾದ" ಎನ್ನುವ ರೀತಿಯಲ್ಲಿ ಉಪಯೋಗಿಸಲಾಗುತ್ತದೆ. ಗಮನಾರ್ಹವಾಗಿ, ನಾವು ನಮ್ಮ ಕಾಲವನ್ನು ಆಧುನಿಕ ಕಾಲವೆಂದು ಕರೆದುಕೊಳ್ಳುತ್ತೇವೆ. ಗಮನಿಸಬೇಕಾದ್ದೆಂದರೆ ಇತಿಹಾಸದಲ್ಲಿ ಯಾವ ಕಾಲವೂ ತನ್ನನ್ನು ತಾನು ಆಧುನಿಕವಲ್ಲದ ಕಾಲವೆಂದು ಕರೆದುಕೊಳ್ಳುವುದಿಲ್ಲ. ಕೈಯಲ್ಲಿ ಬಗೆದು ಪ್ರಾಣಿಗಳನ್ನು ಕೊಲ್ಲುತ್ತಿದ್ದ ಮಾನವ ಚೂಪು ಕಲ್ಲು ಹಿಡಿದು ಅದೇ ಕೆಲಸವನ್ನು ನೈಪುಣ್ಯತೆಯಿಂದ ಮಾಡಿದ್ದು ಅವತ್ತಿಗೆ ಆಧುನಿಕವೇ. ಕಾಡಿನಲ್ಲಿ ಅಲೆಮಾರಿ ಅಲೆದು ಆಯ್ದು ತಿನ್ನುತ್ತಿದ್ದವನು ಒಂದು ಕಡೆ ನೆಲೆ ನಿಂತು ಕೃಷಿ ಮಾಡಲು ಕಲಿತದ್ದು ಆಧುನಿಕವೇ. ಪರಿಣಾಮವೇನೇ ಇರಲಿ, ಆಯುಧ ಹಿಡಿದು ಹೊಡೆದಾಡಲು ಕಲಿತದ್ದೂ ತಂತ್ರಜ್ಞಾನದ ದೃಷ್ಟಿಯಿಂದ ಆಧುನಿಕವೇ, ಆಯಾ ಕಾಲಗಳು ಆವತ್ತಿಗೆ ಆಧುನಿಕ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅತಿ ಆಧುನಿಕವೆಂದು ಬೀಗುವ ನಾವು ಹಲವು ಶತಮಾನಗಳ ಆಚೆಗಿನ ಮುಂದಿನ ತಲೆಮಾರುಗಳಿಗೆ ಅಷ್ಟೇನೂ ಆಧುನಿಕವಲ್ಲದ ಮತ್ತು ಹೆಚ್ಚುಕಡಿಮೆ ಅನಾಗರೀಕವಾಗಿಯೇ ಉಳಿದಂತೆ ಕಾಣುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಮನುಷ್ಯನಿಗೆ ಕಾಲದ ಮುನ್ನೋಟ ಸಾಧ್ಯವಿಲ್ಲವಾಗಿ ಸದ್ಯದ ಕಾಲ ಆಧುನಿಕವಾಗುತ್ತದೆ.

ನಮ್ಮ ತಲೆಮಾರಿನಲ್ಲಿ ಆಧುನಿಕತೆಯ ಬಾಹ್ಯಾರ್ಥವು ತಂತ್ರಜ್ಞಾನ ಮತ್ತು ನಗರೀಕರಣಗಳ ಜೊತೆ ತಳಕು ಹಾಕಿಕೊಂಡಷ್ಟು ರಭಸದಲ್ಲಿ ಬಹುಶಃ ಮತ್ತೆ ಯಾವುದರ ಜೊತೆಗೂ ಹಾಕಿಕೊಳ್ಳಲಿಲ್ಲ. ಜನ ಸಾಮಾನ್ಯ ಅರ್ಥದಲ್ಲಿ 'ನಗರದ ಮನುಷ್ಯ ಹಳ್ಳಿಯವನಿಗಿಂತ ಆಧುನಿಕ', ಇಂದಿನ ತಂತ್ರಜ್ಞಾನವು ನೀಡುವ ವಸ್ತು ಪ್ರಪಂಚಕ್ಕೆ ಹತ್ತಿರವಾದವನು ಹೆಚ್ಚು ಆಧುನಿಕ, ನೇರಾನೇರಾ ಅರ್ಥದಲ್ಲಿ ಇದನ್ನು ಹೇಳುವುದು ಸಾಧ್ಯವಾದ್ದರಿಂದ ಜನಸಾಮಾನ್ಯರಲ್ಲಿ ಈ ಬಗೆಯ ಅರ್ಥ ಹೆಚ್ಚು ಪ್ರಚಲಿತ ಮತ್ತು ಸುಲಭ, ಜನರ ಕಣ್ಣಿಗೆ ಕಾಣುವಂತೆ ಕೈಗಾರಿಕೀಕರಣದ ನೇರ ಮತ್ತು ತೀಕ್ಷ್ಣ ಪರಿಣಾಮವು ನಗರೀಕರಣ ಮತ್ತು ವಿಜ್ಞಾನ ತಂತ್ರಜ್ಞಾನಗಳ ಮೇಲೆ ಆಗಿದ್ದರಿಂದ ಈ ಬಗೆಯ ಗ್ರಹಿಕೆ ಸಾಮಾನ್ಯ. ಆದರೆ ಕೈಗಾರಿಕೀಕರಣವು

ನಮ್ಮನ್ನು ಮುಟ್ಟದ ಮತ್ತು ಗಣನೀಯವಾಗಿ ಬದಲಿಸದ ಯಾವ ಕ್ಷೇತ್ರವೂ ಇಲ್ಲವಾಗಿ ಯಾವ ಅರ್ಥದ ಅಡಿಯಲ್ಲಿಯೂ ಆಧುನಿಕತೆಯ ಸೋಂಕಿಲ್ಲವೆಂದು ಕರೆಯಬಹುದಾದ ಯಾವ ಕ್ಷೇತ್ರವೂ ನಮ್ಮಲ್ಲಿ ಉಳಿದಿಲ್ಲ. ಕೈಗಾರಿಕೆಗಳ ಕ್ರಾಂತಿಯಲ್ಲಿ ನಮ್ಮ ಚಿಂತನಾಶಕ್ತಿಯ ಅಡಿ ಸ್ವರೂಪಗಳೇ ಬದಲಾದವು. ನಮ್ಮ ಸಾಮಾಜಿಕ, ರಾಜಕೀಯ ಮತ್ತು ವ್ಯವಹಾರ ಕ್ಷೇತ್ರಗಳು ಸಂಪೂರ್ಣವೆನ್ನುವಂತೆ ಹಿಂದಿಗಿಂತ ಭಿನ್ನವಾದವು. ಕೇವಲ ಇನ್ನೂರು ವರ್ಷಗಳಲ್ಲಿ, ಸುಮಾರು ನಾಲ್ಕೈದು ತಲೆಮಾರುಗಳಲ್ಲಿ ಹೇಳಬಹುದಾದ ಕಾಲಘಟ್ಟದಲ್ಲಿ, ನಮ್ಮ ಬದುಕು ಬದಲಾದ ರೀತಿಗೆ ಅದನ್ನು ಪೂರ್ವದ ಮತ್ಯಾವ ಕಾಲಘಟ್ಟದೊಂದಿಗೂ ಹೋಲಿಸುವುದು ಅಸಾಧ್ಯವೆನ್ನಿಸುವಂತಾಯಿತು. ಬದುಕು ಇಷ್ಟು ಗಣನೀಯವಾಗಿ ಬದಲಾದಾಗ ಸಹಜವಾಗಿ ಚಿಂತನಕ್ರಮಗಳು ಬದುಕಿನೊಂದಿಗೆ ಬದಲಾವಣೆ ಕಂಡವು. ಈ ಅರ್ಥದಲ್ಲಿ ನಮ್ಮನ್ನು ಮುಟ್ಟುವ ಪ್ರತಿ ಕ್ಷೇತ್ರವೂ ಆಧುನಿಕವಾಯಿತು.

ಕೈಗಾರಿಕೀಕರಣವು ಅರ್ಥವ್ಯವಸ್ಥೆಯನ್ನು ನಮ್ಮ ಜೀವನದ ಕೇಂದ್ರವಾಗಿಸಿತು. ಕ್ಯಾಪಿಟಲಿಸಂ ಎನ್ನುವುದು ನಮ್ಮ ಜೀವನದ ಪ್ರಮುಖ ನಿರ್ಧಾರಗಳಲ್ಲಿ ಮುಖ್ಯವಾಹಿನಿಯಾಯಿತು. ಹಾಗೆಂದರೆ ಆವರೆಗಿನ ಸಮಾಜದಲ್ಲಿ ವ್ಯಕ್ತಿ ಮತ್ತು ಸಮಾಜದ ದೃಷ್ಟಿಯಲ್ಲಿ ಹಣಕ್ಕೆ ದೊಡ್ಡ ಪ್ರಾಮುಖ್ಯತೆ ಇರಲಿಲ್ಲ ಎಂದಲ್ಲ. ರಾಜ ಮಹಾರಾಜರ ಕಾಲದಿಂದಲೂ ರಾಜ್ಯ ವಿಸ್ತರಣೆ ಮತ್ತು ಯುದ್ಧಗಳು ನಡೆಯುತ್ತಿದ್ದುದು ಆ ಕಾರಣಕ್ಕೇನೇ. ಮೊಘಲರು ಪದೇಪದೇ ಹೊಯ್ಸಳರ ಮೇಲೆ ದಾಳಿ ಮಾಡುತ್ತಿದ್ದುದರಲ್ಲಿ ತಮ್ಮ ರಾಜ್ಯ ಸ್ಥಾಪನೆಯ ಅಥವ ಧರ್ಮ ಸ್ಥಾಪನೆಯ ಉದ್ದೇಶಕ್ಕಿಂತಲೂ ಲೂಟಿಯ ಉದ್ದೇಶ ಹೆಚ್ಚಿದ್ದೀತು. ಬ್ರಿಟಿಷರ ವಸಾಹತುಶಾಹಿ ದಿನಗಳಲ್ಲಿ ಅದು ಸುಸ್ಪಷ್ಟ. ಆದರೂ, ಅಂದಿನ ಬದಲಾವಣೆಗಳು ಸಾಮಾನ್ಯ ಜನರ ಮಟ್ಟಿಗೆ 'ರಾಮ ರಾಜ್ಯ ಬಂದರೂ ರಾಗಿ ಬೀಸೋದು ತಪ್ಪೋದಿಲ್ಲ' ಎನ್ನುವಷ್ಟಕ್ಕೆ ನಿಂತು ದಿಢೀರ್ ಮಿಲಿಯನೇರ್ ಆಗುವ ಕನಸುಗಳನ್ನು ಸಾಮೂಹಿಕವಾಗಿ ಹುಟ್ಟು ಹಾಕಿದಂತೆ ಕಾಣಲಿಲ್ಲ. ಕೃಷಿಯೇ ಪ್ರಮುಖ ಉದ್ಯಮವಾದ್ದರಿಂದ ಮತ್ತು ನೂರರಲ್ಲಿ ತೊಂಬತ್ತು ಜನ ಕೃಷಿಯನ್ನು ನಂಬಿ ಬದುಕುವವರಾದ್ದರಿಂದ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳು ತೀರಾ ದೊಡ್ಡ ಮಟ್ಟದಲ್ಲಿ ಸಾಮಾನ್ಯ ಜನರ ಬದುಕುವ ವಿಧಾನವನ್ನು ಬದಲಿಸಿದಂತಿಲ್ಲ. ಬಹುಶಃ, ಆಕ್ರಮಣಗಳು ತರುವ ಅಸಾಧ್ಯ ಹಿಂಸೆ ಅವರ ದೈನಂದಿಕವನ್ನು ಕಂಗೆಡಿಸಿರಬಹುದು, ಆದರೆ ಅವರಿಗೆ ಗೊತ್ತಿದ್ದ ಬದುಕುವ ರೀತಿ ಒಂದೇ ಬಗೆಯದು, ನಮ್ಮ ಇಂದಿನ ಬಗೆಯ ಬೃಹತ್ ಡ್ಯಾಮುಗಳಿಲ್ಲದ ಕಾಲದಲ್ಲಿ ಬೇಕಾದಷ್ಟು ಮಳೆ ಆಯಿತೋ ಇಲ್ಲವೋ ಎನ್ನುವ ಅಂಶವಷ್ಟೇ ಪ್ರಾದೇಶಿಕ ಮಟ್ಟದಲ್ಲಿ ಅವತ್ತಿನ ಅರ್ಥವ್ಯವಸ್ಥೆಯನ್ನು

ನಿಯಂತ್ರಿಸುವ ಅಂಶವಾಗಿತ್ತು. 'ಪ್ರಕೃತಿಗೆ ಹತ್ತಿರವಾಗಿ ಬದುಕುವುದು' ಎಂದು ನಾವು ಇಂದು ಏನನ್ನು ವಿಶೇಷ ಅರ್ಥದಲ್ಲಿ ಹೇಳುತ್ತೇವೆಯೋ ಅದು ಅಂದಿನ ದಿನಗಳಲ್ಲಿ ಅನಿವಾರ್ಯವಾಗಿತ್ತು ಮತ್ತು ಗೊತ್ತಿದ್ದ ಒಂದೇ ವಿಧಾನವಾಗಿತ್ತು. ಜನರ ಚಿಂತನೆಯಲ್ಲೂ ಇದು ಸ್ಪಷ್ಟವಾಗಿ ವ್ಯಕ್ತವಾದೀತು. ದೈನಂದಿನ ಬದುಕಿಗಾಗಿ ಪ್ರಕೃತಿಯನ್ನೇ ನಂಬಿ ಬದುಕಿರುವಾಗ ಮತ್ತು ಭಾರತೀಯ ಸಮಾಜದಲ್ಲಿ ಪ್ರಕೃತಿಯೇ ಆರಾಧಿಸುವ ದೇವರ ವಿವಿಧ ಅಂಶಗಳಾಗಿರುವಾಗ 'ನಾಸ್ತಿಕನಾಗುವುದು' ಎಂದರೆ ದೇವರನ್ನು ನಂಬದವನು ಎನ್ನುವ ಅರ್ಥದ ಜೊತೆಗೆ 'ಪ್ರಕೃತಿಗೆ ವಿರೋಧವಾಗಿ ಬದುಕುವವನು' ಎನ್ನುವ ಅರ್ಥವನ್ನೂ ಸ್ಫುರಿಸಿದರೆ ಆ ಬಗೆಯ ಚಿಂತನೆಯನ್ನು ಸಮಾಜವು ಹೇಗೆ ತಾನೇ ನೇರವಾಗಿ ಸ್ವೀಕರಿಸೀತು? ಬದುಕುವ ಮತ್ತು ಚಿಂತಿಸುವ ಹಾದಿಗಳು ಇಂದಿನ ಬಗೆಯ ಕವಲುಗಳಿಲ್ಲದೆ ನೇರಾನೇರವಾದ್ದರಿಂದ ಬದುಕುವ ಮತ್ತು ಯೋಚಿಸುವ ಬಗೆಗಳು ನೇರ ಮತ್ತು ಅಂದಿನ ದಿನಕ್ಕೆ ಸ್ಪಷ್ಟ. ಯಾವ ಹಾದಿಯನ್ನು ಆಯ್ದುಕೊಳ್ಳಬೇಕೆಂಬ ಉಭಯ ಸಂಕಟ (ಡೈಲೆಮ) ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಬರೆದ ದಾರಿಯಲ್ಲಷ್ಟೇ ಬದುಕುವುದು ಅನಿವಾರ್ಯ.

ಕೈಗಾರಿಕೀಕರಣ ಪ್ರೇರಿತ ಆಧುನಿಕತೆ ಆ ಅನಿವಾರ್ಯವನ್ನು ನಿವಾರಿಸಿತು. ಬಂಡವಾಳಶಾಹಿ ಉದ್ಯಮ ತನ್ನ ಎಲ್ಲ ಸಾಧ್ಯತೆಗಳನ್ನು ತೆರೆದಿಟ್ಟಿತು. ಭೂಮಿಯ ಮೂಲಧಾತುಗಳು ಲೋಹ ಖನಿಜಗಳನ್ನು ನಮ್ಮ ಉಪಯೋಗಕ್ಕಾಗಿ ರಾಶಿ ಪ್ರಮಾಣದಲ್ಲಿ ವಸ್ತು ಸಂಯುಕ್ತಗಳಾಗಿ ಬದಲಿಸುವ ಮತ್ತು ಅಸಾಮಾನ್ಯ ಪ್ರಮಾಣದಲ್ಲಿ ಉತ್ಪನ್ನಗಳನ್ನು ಸೃಷ್ಟಿಸುವ ಕಾರ್ಯವು ಕೃಷಿಗೆ ಸವಾಲಾಗಿ ನಿಂತು ಇಂದು ಕೃಷಿ ಎನ್ನುವುದು ಒಂದು ಉದ್ಯಮಕ್ಕಿಂತಲೂ ಧರ್ಮಕಾರ್ಯ ಎಂದು ಹೇಳುವಷ್ಟರ ಮಟ್ಟಿಗೆ ನಮ್ಮ ಸಮಾಜವನ್ನು ಬದಲಿಸಿತು. ಕೈಗಾರಿಕೆಗಳು ನಗರಗಳನ್ನು ಸೃಷ್ಟಿಸಿದವು ಮತ್ತು ಬೆಳೆಸಿದವು, ನಾವು ಬದುಕುವ ವಿಧಾನ ಸಂಪೂರ್ಣವಾಗಿ ಬದಲಾಯಿತು. ಕೇವಲ ನೂರೈವತ್ತು ವರ್ಷಗಳ ಹಿಂದೆ ಬದುಕಿದ್ದ ನಮ್ಮ ಮುತ್ತಾತನೋ ಆಥವ ಮರಿತಾತನೋ ಬದುಕಲು ಅಗತ್ಯವೆಂದು ವಸ್ತುಗಳ ಪಟ್ಟಿ ಮಾಡಿದ್ದಿದ್ದೇ ಆಗಿದ್ದರೆ ಅದನ್ನು ನಮ್ಮ ಇಂದಿನ ಅಗತ್ಯಗಳ ಪಟ್ಟಿಯ ಜೊತೆಗೆ ಹೋಲಿಸಲೂ ಸಾಧ್ಯವಿಲ್ಲ. ಹಾಗೆಯೇ, ಬದುಕುವ ರೀತಿಯೂ, ಯಾವುದೋ ತಲೆಮಾರಿಗೆ ಹೋಗುವುದು ಬೇಡ, ಹಳ್ಳಿಯಿಂದ ಬಂದು ಬೆಂಗಳೂರಿನಂತಹ ನಗರದಲ್ಲಿ ತಮ್ಮ ಮಕ್ಕಳ ಜೀವನವನ್ನು ನೋಡುವ ನಮ್ಮ ಕಾಲದ ವೃದ್ಧರಿಗೇ ತಮ್ಮ ಮತ್ತು ತಮ್ಮ ಸಂತತಿಗಳ ನಡುವಿನ ಬದುಕುವ ರೀತಿ ಗ್ರಹಿಸಲು ಕಷ್ಟವಾಗುವಂತಹ ದೊಡ್ಡ ಕಂದರವಾಗಿ ಕಾಣುವಾಗ ಚರ್ಚೆಗಾಗಿ ಶತಮಾನಗಳ ಆಚೆಗೆ ಹೋಗುವ ಅಗತ್ಯವೇ ಇಲ್ಲ.

ಇವೆಲ್ಲವುಗಳ ಪರಿಣಾಮವಾಗಿ ನಮ್ಮ ಚಿಂತನೆ ಮತ್ತು ಗ್ರಹಿಕೆಗಳು ಬದಲಾದವು. ಜೀವನ ಮೌಲ್ಯಗಳು ಬದಲಾದವು. ಜೀವನದ ನೀತಿತತ್ವಗಳು (ethic) ಬದಲಾದವು. ಹಿಂದಿನ ಸಾವಿರಾರು ವರ್ಷಗಳಿಂದ ಆಚರಣೆಯಲ್ಲಿದ್ದ ಅನೇಕ ಮೌಲ್ಯಗಳು ಮತ್ತು ನೀತಿತತ್ವಗಳು ಹೊಸಕಾಲದಲ್ಲಿ ಶಾಖಕ್ಕೆ ಸಿಕ್ಕ ಮಂಜುಗಡ್ಡೆಯಂತೆ ಕರಗಿದವು. ಸಮಾಜಕ್ಕೆ ಅಗತ್ಯವೆನ್ನುವಂತೆ ಹೊಸ ಮೌಲ್ಯಗಳು ಮತ್ತು ನೀತಿಗಳು ಹುಟ್ಟಿಕೊಂಡವು. ಹಿಂದಿನಂತೆ ದೀರ್ಘಾವಧಿಯಲ್ಲದೆ ಒಂದು ಮೌಲ್ಯವು ಹುಟ್ಟಿ ಬೆಳೆದು ಹಾಗೆಯೇ ಕ್ಷೀಣಿಸಲು ಆಧುನಿಕ ಕಾಲದಲ್ಲಿ ಏನೇನೂ ಸಮಯ ಬೇಡವಾಯಿತು. ಕೆಲವು ಆಚರಣೆ ಮತ್ತು ನಂಬಿಕೆಗಳ ಕುರಿತಾಗಿ ನಮ್ಮ ಸಮಾಜಗಳಲ್ಲಿ ಮತ್ತೆ ಮತ್ತೆ ನಡೆಯುವ ಚರ್ಚೆಗಳು ಇದಕ್ಕೆ ಉದಾಹರಣೆ, ಬೆತ್ತಲೆ ಸೇವೆ ಬೇಕೇ ಬೇಡವೇ, ಮಡೆಸ್ನಾನ ಬೇಕೇ ಬೇಡವೇ ಎನ್ನುವ ಪ್ರಶ್ನೆಗಳೆಲ್ಲ ಬದಲಾದ ಕಾಲದಲ್ಲಿ ಬದಲಾದ ನೀತಿತತ್ವಗಳ ಬೆಳಕಿನಲ್ಲಿ ಹುಟ್ಟಿದ್ದು, ಒಂದು ಕಾಲದ ಆಚರಣೆ ಮತ್ತೊಂದು ಕಾಲಕ್ಕೆ ಅವೈಜ್ಞಾನಿಕ, ಕ್ರೂರ ಮತ್ತು ನೀತಿಬಾಹಿರವೆನ್ನಿಸಿದರೆ ಅದಕ್ಕೆ ಬದಲಾದ ಕಾಲವಷ್ಟೇ ಕಾರಣ.

ವಿಪರೀತ ಬದಲಾವಣೆಗಳ ಜಗತ್ತಿನಲ್ಲಿ ನಾವು ಒಂದು ಬಗೆಯ ಗೋಜಲಿನಲ್ಲಿದ್ದೇವೆ. ಹಳೆಯದನ್ನು ಪೂರ್ತಿ ಬಿಟ್ಟಿಲ್ಲ ಮತ್ತು ಹೊಸದನ್ನು ಪೂರ್ತಿ ಹಿಡಿದಿಲ್ಲ ಎನ್ನುವಂತಹ ಪರಿಸ್ಥಿತಿ, ನಮ್ಮ ಹಿಂದಿನ ತಲೆಮಾರುಗಳಿಗಾದಂತೆ ಧರ್ಮವೆನ್ನುವುದು ನಮ್ಮ ಜೀವನಕ್ಕೆ ತೀರಾ ಅನಿವಾರ್ಯವೆನ್ನಿಸಲಿಲ್ಲ, ಹಾಗೆಯೇ ಅದನ್ನು ಪೂರ್ತಿಯೂ ಬಿಡಲಿಲ್ಲ. ಹಿಂದೆ ಎಂದೂ ಪ್ರಶ್ನೆಗೊಳ್ಳದ ಅನೇಕ ಧಾರ್ಮಿಕ ಆಚರಣೆಗಳು ನಮ್ಮ ಅನುಮಾನ, ತಗಾದೆಗಳನ್ನು ಎದುರಿಸಿವೆ, ಆದರೂ ನಮ್ಮಿಂದ ಪೂರ್ತಿ ಕಣ್ಮರೆಯಾಗಿಲ್ಲ. ಹಳೆಯದನ್ನು ಬಿಡಬಹುದೇ ಎನ್ನುವಲ್ಲಿ ನಮ್ಮದೇ ಧೃಢ ನಿಲುವಿಲ್ಲ. ಹಳೆಯದನ್ನು ನಾವು ಪ್ರೀತಿಸದಿದ್ದರೂ, ಹೊಸದಿಕ್ಕಿಗಿನ್ನೂ ನಮ್ಮನ್ನು ಹಿಡಿಯುವ ಶಕ್ತಿ ಇಲ್ಲವೇನೋ ಎನ್ನುವ ಅನುಮಾನ ಬಲವಾಗಿದೆ. ಹೊಸತೆನ್ನುವುದು ದಿನಕ್ಕೊಂದು ರೂಪ ತಾಳುತ್ತ ಛದ್ಮವೇಷಗಳಲ್ಲಿ ಕುಣಿಯುವಾಗ ಸಾವಿರಾರು ವರ್ಷಗಳಿಂದ ಬೇರುಬಿಟ್ಟಿದ್ದೆಂದು ನಂಬುವ ಹಳೆಯದನ್ನು ಸಂಪೂರ್ಣವಾಗಿ ಬದಲಿಸುವಷ್ಟು ಪ್ರೌಢತ್ವವನ್ನು ಹೊಸದು ಗಳಿಸಿಯೇ ಇಲ್ಲವೇನೋ ಎನ್ನುವ ಅನುಮಾನ ನಮ್ಮನ್ನು ಬಲವಾಗಿ ಕಾಡುತ್ತದೆ.

ಆಧುನಿಕ ಚಿಂತನೆಯಲ್ಲಿ ನಮ್ಮನ್ನು ಕಾಡುವ ಸಮಸ್ಯೆ ಇದೇನೇ; ಹಳೆಯದನ್ನು ಪೂರ್ತಿ ಬಿಡಲಾಗದ ಮತ್ತು ಹೊಸದನ್ನು ಪೂರ್ತಿ ಹಿಡಿಯಲಾಗದ ಸ್ಥಿತಿ. ಉದಾಹರಣೆಗೆ ಭಾರತದ ಜಾತಿ ಸಮಸ್ಯೆಯನ್ನೇ ತೆಗೆದುಕೊಳ್ಳಿ. ಯಾವ ಕಾರಣಕ್ಕೆ ಸಮಾಜ ಎಂದೋ ಹಾಗೆ ವರ್ಗೀಕೃತವಾಗಿತ್ತೋ ಎನ್ನುವುದು; ಅದು ಬೇರೆ ವಿಚಾರ. ಆದರೆ ಇಂದು, ಅದನ್ನು ರಿಪೇರಿ ಮಾಡುವ ಭರದಲ್ಲಿ

ಜಾತಿಯಿಂದ ದೂರ ಸರಿಯುವ ಬದಲು ಆಧುನಿಕ ಸಮಾಜ ಜಾತಿಗೆ ಮತ್ತಷ್ಟು ಆತುಕೊಳ್ಳುತ್ತಿದೆ. ಹಿಂದೆ ಇತ್ತೋ ಇಲ್ಲವೋ ಆದರೆ ಇಂದು ಪ್ರತಿ ಜಾತಿ ಉಪಜಾತಿಗಳು ತಮ್ಮ ಮಠ ಮತ್ತು ಗುರುಗಳನ್ನು ಸ್ಥಾಪನೆ ಮಾಡಿಕೊಳ್ಳುತ್ತಿವೆ. ಸಾಮಾಜಿಕ ಸಮಾನತೆಯ ಹೆಸರಿನಲ್ಲಿ ಮತ್ತೆ ಮತ್ತೆ ನಿಮ್ಮ ಜಾತಿಯನ್ನು ಕೇಳಲಾಗುತ್ತದೆ. ಹಿಂದೆಂದೂ ಕಾಣದಂತೆ ಜಾತಿಯು ರಾಜಕೀಯವನ್ನು ಆಳುತ್ತಿದೆ. ಈ ಕ್ಷೇತ್ರದಲ್ಲಿ ನನ್ನ ಜಾತಿ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ನನ್ನ ಗೆಲುವು ಗ್ಯಾರಂಟಿ' ಎಂದು ರಾಜಕಾರಣಿಯೊಬ್ಬ ಹೇಳಿದರೆ ಅವನನ್ನು ಸಮಾಜ ವಿಘಟಕನೆಂದು ಕರೆಯಲಾಗುವುದಿಲ್ಲ, ಬದಲಾಗಿ ಅದೊಂದು ಸಹಜ ವಾಸ್ತವವೆನ್ನುವಂತೆ ಸ್ವೀಕರಿಸಲಾಗುತ್ತಿದೆ. ಜಾತಿ ಕೇಳಿ ಜಾತಿಯನ್ನು ನಿರ್ಮೂಲ ಮಾಡಬಹುದೆನ್ನುವ ದ್ವಂದ್ವವನ್ನು (ಸರಿಯಾದ ಪದ – Oxymoron) ನಾವು ನಂಬಿದಂತಿದೆ. ಆಧುನಿಕ ಚಿಂತನೆಯ ದೊಡ್ಡ ತೊಡಕು ಇಲ್ಲಿಯೇ. ನಾವು ಮಾತಿನಲ್ಲಿ ಬಲು ಜಾಣರಾಗುತ್ತಿದ್ದೇವೆ. ತರ್ಕದ ಕೋಟೆಯನ್ನೇ ಕಟ್ಟುತ್ತೇವೆ. ಆಯಸ್ಸುಪೂರ್ಣ ಚರ್ಚೆ ಮಾಡಿದರೂ ಒಂದಿಂಚೂ ಕದಲದಂತೆ ನಮ್ಮ ನಿಲುವುಗಳಿಗೆ ಬದ್ಧರಾಗುತ್ತೇವೆ. ಚರ್ಚೆಯ ಪರಕ್ಕೂ ವಿರುದ್ಧಕ್ಕೂ ಎಂತಹ ಬಲವಾದ ಸಾಕ್ಷಾಧಾರಗಳನ್ನು ಒದಗಿಸುತ್ತೇವೆಂದರೆ ಸಮಾಜವನ್ನು ಮಾತಿನ ಪಂಜರದಲ್ಲಿ ಬಂಧಿಸುತ್ತೇವೆ. ರೇ ಬಿಲ್ಲಿಂಗ್‌ಟನ್‌ರ 'ಲಿವಿಂಗ್ ಫಿಲಾಸಫಿ' ಪುಸ್ತಕದಲ್ಲಿ ಇಬ್ಬರು ವಾದ ಮಾಡುತ್ತಾರೆ. ಮಾರಣಾಂತಿಕ ರೋಗದಿಂದ ಬಳಲುತ್ತಿರುವ ಮಗುವೊಂದಕ್ಕೆ ಒಬ್ಬ ದಯಾಮರಣವನ್ನು ಕೊಡಬೇಕು ಎಂದರೆ ಮತ್ತೊಬ್ಬ; ಅದು ಹೇಗಿದ್ದರೂ ಸರಿಯೆ, ಆದರೆ ಬದುಕಿಸಿಕೊಳ್ಳಬೇಕು ಎನ್ನುತ್ತಾನೆ. ಇಬ್ಬರೂ ಮಗುವಿನ ಪರವಾಗಿಯೇ ಯೋಚಿಸುತ್ತಿರುತ್ತಾರೆ; ಅಥವ ಹಾಗೆ ತಿಳಿದಿರುತ್ತಾರೆ. ಇಬ್ಬರೂ ತಮ್ಮ ತಮ್ಮ ನಿಲುವುಗಳಿಗೆ ತರ್ಕ, ಧರ್ಮಶಾಸ್ತ್ರ ಇತಿಹಾಸ, ಪುರಾಣಗಳ ಆಧಾರಗಳನ್ನು ಕೊಡುವಷ್ಟು ಜಾಣರಾಗಿರುತ್ತಾರೆ. ಸಮಾಜ ನೀತಿಯ ಕುರಿತಾದ ನಮ್ಮ ಆಧುನಿಕ ಜಗತ್ತಿನ ಪ್ರತಿ ಚಿಂತನೆಯೂ, ಪ್ರತಿ ವ್ಯಾಖ್ಯಾನವೂ, ಬಿಲ್ಲಿಂಗ್‌ಟನ್‌ರ ಇಬ್ಬರು ಚರ್ಚಾಪಟುಗಳ ಹಾದಿಯನ್ನು ಹಿಡಿಯುತ್ತವೆ. ಎಂದೂ ಸೋಲದ ಇಬ್ಬರು ಕುಸ್ತಿಪಟುಗಳ ದ್ವಂದ್ವಯುದ್ಧದ ಫಲಿತಾಂಶಕ್ಕೆ ಸಮಾಜ ನಿರಂತರವಾಗಿ ಕಾಯುತ್ತದೆ. ಚರ್ಚೆಯಿಂದ ಯಾರೂ ಗೆಲ್ಲಲಾಗುವುದಿಲ್ಲ. ಪ್ರತಿದಿನ ರಾತ್ರಿ ಒಂಬತ್ತಕ್ಕೆ ರಾಷ್ಟ್ರವ್ಯಾಪಿ ಪ್ರಸಾರವಾಗುವ ಅರ್ನಬ್ ಗೋಸ್ವಾಮಿಯ ನ್ಯೂಸ್ ಹಾವರ್ ಚರ್ಚೆಯಲ್ಲಿ ಭಾಗವಹಿಸಿದವರು ಎಂದೂ ಒಮ್ಮತದಲ್ಲಿ ಎದ್ದು ಹೋದದ್ದಿಲ್ಲ. ಆ ಚರ್ಚೆಗಳು ನನಗೆ ಆಧುನಿಕ ಬದುಕಿನಲ್ಲಿ ನಾವು ಬಲವಾಗಿ ನಂಬಿರುವ ಮಾತು ಮತ್ತು ತರ್ಕಗಳ ಮಿತಿಯ ಪ್ರತಿದಿನದ ಪ್ರದರ್ಶನದಂತೆ ಕಾಣುತ್ತದೆ.

ನಮ್ಮ ಈವತ್ತಿನ ಪ್ರತಿ ಚಿಂತನೆಯೂ ಹಿಡಿಯುವ ಹಾದಿ ಇದೇ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಬೆಳೆದ ಅಗಾಧ ಗಾತ್ರ ನಮ್ಮನ್ನು ಮಂಗಳನೆಡೆಗೆ ಕೊಂಡೊಯ್ದ ವೇಗದಲ್ಲಿಯೇ ಭೂಮಿಯನ್ನು ಸಾವಿರ ಬಾರಿ ನಾಶ ಮಾಡುವಷ್ಟು ನ್ಯೂಕ್ಲಿಯರ್ ಆಯುಧಗಳನ್ನು ಸೃಷ್ಟಿಸುತ್ತವೆ. ನಮ್ಮ ನಾಶಕ್ಕೂ ನಾವು ನಮ್ಮದೇ ಸ್ಪಷ್ಟೀಕರಣ ಮತ್ತು ತರ್ಕಗಳನ್ನು ಸೃಷ್ಟಿಸುತ್ತೇವೆ. ಎಂದೂ ಮುಗಿಯದ ಚರ್ಚೆಯಲ್ಲಿ ಮುಳುಗುತ್ತೇವೆ. ಒಂದು ವಿಲಕ್ಷಣ ವಿಡಂಬನೆಯೆಂದರೆ, ನಮ್ಮ ಈ ಆಧುನಿಕ ಯುಗದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಬೆಳಕಿನ ವೇಗದಲ್ಲಿ ನಮ್ಮದಾಗುತ್ತವೆ. ಆದರೆ ದಕ್ಕಿಸಿಕೊಂಡ ತಂತ್ರವು ನಮ್ಮ ಪರಿಸರ ಮತ್ತು ಪ್ರಜ್ಞೆಯನ್ನು ಧಕ್ಕೆಗೊಳಿಸದೆ ಇರುವಂತೆ, ನಿಜಕ್ಕೂ ಅದನ್ನು ಧನಾತ್ಮಕವಾಗಿ ಉಪಯೋಗಿಸಲು ಬೇಕಾದ, ಸಾಮಾಜಿಕ ಪ್ರೌಢತೆ ಮತ್ತು ಸಾಮೂಹಿಕ ಜವಾಬ್ದಾರಿಗಳು ಮಾತ್ರ ನಮಗೆ ದಕ್ಕುತ್ತಿಲ್ಲ. ನಮ್ಮ ಇಡೀ ಕಾಲ ಒಂದು ರೀತಿಯಲ್ಲಿ ಪುಟ್ಟ ಮಗುವಿನ ಕೈಲಿ ಆಡಲು ನಿಜದ ಬಂದೂಕನ್ನು ಕೊಟ್ಟಂತೆ ಕಾಣುತ್ತದೆ. ಇದೊಂದು ಕೇವಲ ಕಾಲ್ಪನಿಕ ಚಿತ್ರವಲ್ಲ, ಇದು ನಮ್ಮ ಆಧುನಿಕ ಕಾಲವನ್ನು ವಿಕಟಹಾಸ್ಯವನ್ನಾಗಿಸಿಬಿಡುವ ವಾಸ್ತವ!

~ * ~ * ~ * ~

*ಆಕರ : 'ಸಮಾಹಿತ' ಸಾಹಿತ್ಯ ಸಾಂಸ್ಕೃತಿಕ ದ್ವೈಮಾಸಿಕ, ಶರತ್ ಸಂಚಿಕೆ*
*ಪ್ರಧಾನ ಸಂಪಾದಕರು : ಗಿರಡ್ಡಿ ಗೋವಿಂದರಾಜ,*
*ಪ್ರಕಾಶನ : ಸಮಾಹಿತ ಟ್ರಸ್ಟ್, ಧಾರವಾಡ– 01*

~ * ~ * ~ * ~

# 3. ಕುಟುಂಬ :


| | | | |
|---|---|---|---|
| 3.1 | ಗಂಡ–ಹೆಂಡಿರ ಜಗಳ ಗಂಧ ತೀಡಿದ್ಹಾಂಗ | – ಸೋಮಶೇಖರ ಇಮ್ರಾಪೂರ | 066 |
| 3.2 | ಸಖೀಗೀತ | – ಎಚ್. ನಾಗವೇಣಿ | 070 |
| 3.3 | ಕುಟುಂಬದಲ್ಲಿ ಪಾತ್ರ ನಿರೀಕ್ಷೆ ಮತ್ತು ಕೌಟುಂಬಿಕ ಹಿಂಸೆ | – ಡಾ. ರೇಣುಕಾ ಎಸ್. ಮಂದ್ರೂಪ | 081 |
| 3.4 | ಓದುಪತ್ಯ: ನನ್ನ ತಾಯಿ | – ಎಪಿಜೆ ಅಬ್ದುಲ್ ಕಲಾಂ ಅನುವಾದ: ಜಿ.ಕೆ. ಮಧ್ಯಸ್ಥ | 089 |


## ಆಶಯ :

### ಗೃಹಲಕ್ಷ್ಮಿ

ನನ್ನವಳು ನನ್ನೆದೆಯ ಹೊನ್ನಾಡನಾಳುವಳು
ಬೆಳಗುಗೆನ್ನೆಯ ಚೆನ್ನೆ ನನ್ನ ಮಡದಿ :
ಹೊಳೆಯ ಸುಳಿಗಳಿಗಿಂತ ಆಳ ಕಣ್ಣಿನ ಚೆಲುವ
ಅವಳೊಮ್ಮೆ ಹೆರಳ ಕೆದರಿ
ಕಪ್ಪುಗುರುಳನು ಬೆನ್ನ ಮೇಲೆಲ್ಲ ಹರಡಿದರೆ
ದೂರದಲ್ಲಿ ಗಿರಿಯ ಮೇಲೆ
ಇಳಿದಂತೆ ಇರುಳ ಮಾಲೆ.

ಕರೆದಾಗ ತೌರುಮನೆ, ನೆನೆದಾಗ ನನ್ನ ಮನೆ
ಹಳ್ಳಿಯೆರಡರ ಮುದ್ದು ಬಳ್ಳಿಯವಳು.
ಮುಚ್ಚುಮರೆಯಿಲ್ಲದೆಯೆ ಅಚ್ಚಮಲ್ಲಿಗೆಯಂತೆ
ಅರಳುತಿಹುದವಳ ಬದುಕು.
ಬಂಗಾರದೊಡವೆಗಳ ಬಯಸಿಲ ಮನಸಿನಲಿ
ಬಂಗಾರದಂಥ ಹುಡುಗಿ
ನನ್ನೊಡವೆ, ನನ್ನ ಬೆಡಗಿ.

ಹಸುರುಸೀರೆಯನುಟ್ಟು, ಕೆಂಪುಬಳೆಗಳ ತೊಟ್ಟು
ತುಂಬುದನಿಯಲಿ ಕರೆವಳೆನ್ನ ಚೆಲುವೆ:
ಹಣೆಯನಾಳುವುದವಳ ಕುಂಕುಮದ ನಿಡುಬಟ್ಟು
ಲಕ್ಷ್ಮಿಯವಳೆನ್ನ ಮನೆಗೆ.
ನಮಗಿದುವೆ ಸೊಗಸು ಬದುಕಿನ ಬಣ್ಣಗಳ ಸಂತೆ
ನಮಗಿಲ್ಲ ನೂರು ಚಿಂತೆ:
ನಾವು ಗಂಧರ್ವರಂತೆ.

ತೆಂಗುಗರಿಗಳ ಮೇಲೆ ತುಂಬುಚಂದಿರ ಬಂದು
ಬೆಳ್ಳಿ ಹಸುಗಳ ಹಾಲ ಕರೆಯುವಂದು
ಅಂಗಳದ ನಡುವೆ ಬೃಂದಾವನದ ಬಳಿ ನಿಂದು
ಹಾಡುವೆವು ಸಿರಿಯ ಕಂಡು,
ತಾರೆಗಳ ಮೀಟುವೆವು, ಚಂದಿರನ ದಾಟುವೆವು
ಒಲುಮೆಯೊಳಗೊಂದು ನಾವು:
ನಮಗಿಲ್ಲ ನೋವು, ಸಾವು,

**– ಕೆ.ಎಸ್. ನರಸಿಂಹಸ್ವಾಮಿ**

## 1.1 ಗಂಡ–ಹೆಂಡಿರ ಜಗಳ ಗಂಧ ತೀಡಿದ್ಹಾಂಗ

**– ಸೋಮಶೇಖರ ಇಮ್ರಾಪೂರ**

"ಏಳ ಹೊತ್ತು ಹೊಡಮರಳಿ ಬಂತು
ಕಸ ಹೊತ್ತು ಹಾಕು ಹೊರಗ
ದೊಡ್ಡೆಮ್ಮಿ ಎಲ್ಲಿ ಹೋಗ್ಯೆತಿ ಹ್ಯಾಂಗ
ಕರ ಕಟ್ಟು ಹಿತ್ತಲೊಳಗ"

"ಕಟ್ಟಾರ ಕಟ್ಟು ಬಿಟ್ಟಾರ ಬಿಟಗೊ
ಒಟ್ಟೈತಿ ಕೆಲಸ ನನಗ
ಕುಟ್ಟಾಕ ಮತ್ತ ಬೀಸಾಕ ಇದಕ
ಕೊಟ್ಟಿಲ್ಲ ನನ್ನ ನಿನಗ"

"ಏಳೇಳ ಊರ ಎತ್ತೆಲ್ಲಾ ಹೊಲಕ
ಹೊಂಟಾವ ತಿಳಿಯಿತೇನ?
ಮಾರೀಯ ಗಂಟು ಹಾಕೀದಿ ಯಾಕ
ನಿಟ್ಟೆಲುವು ಮುರಿಯಲೇನ?"

"ಹೆಣ್ಣಾಗಿ ಯಾಕ ಬಂದೇನ ಎವ್ವಾ
ಈ ಜೀವ ಸಾಕು ಸಾಕ
ನಮ್ಮಪ್ಪ ಅವ್ವ ಕೊಟ್ಟಾರ ಇಲ್ಲಿ
ಇನ್ನೇಟು ಬದುಕಬೇಕ"

"ನಿಮಪ್ಪ ಸತ್ತು ಪಾರಾದ ಇದ್ರ
ಅವನೆದೆಯ ಸೀಳುತಿದ್ದ್ಯಾ
ನಿಮ್ಮವ್ವ ಅಂದ್ರೆ ನಮ್ಮಕ್ಕ ಅಂತ
ಬಿಟ್ಟೇನಿ ಹುಗಿಯುತಿದ್ದ್ಯಾ"

"ನಮ್ಮಪ್ಪ ಅವ್ವ ಮಾಡ್ಯಾರ ಏನ
ಸುಮ್ ಸುಮಕ ಬಯ್ಯಬ್ಯಾಡಾ
ಉಟ್ಟರವಿಮ್ಯಾಗ ಬದುಕಿದ್ದ ನಿನ್ನ
ಸಲುಹಿದ್ದು ಮರಿಯಬ್ಯಾಡಾ"

"ಎಲ್ಲಿದ್ದಿ ಏನೋ ಛೀಮಾರಿ ನಿನ್ನ
ಕಟ್ಯಾರ ಗುದ್ದಿಹಾಂಗ
ಸೊಸಿ ಅಂತ ಕೈಯ ತಡದೀನಿ ಜ್ವಾಕಿ
ಹೀಂಗಾದ್ರ ಮುಂದ ಹ್ಯಾಂಗ?"

"ಮುಂದೇನು ಏನ ಹೋಗ್ತಿನಿ ಇಂದ
ನಾ ಬೆಳೆದ ತವರಿಗೀಗ
ಹೊಗಿ ಬಡದು ಬುದ್ಧಿ ಮಟ್ಟಾದ ಮ್ಯಾಗ
ಬರತೀನಿ ಇಲ್ಲಿಗಾಗ"

"ಎಂಥ ಚಂಡಿ ನೀ ಗಂಟುಬಿದ್ದಿ
ಹೇಳಿದ್ದು ಕೇಳಲೊಲ್ಲಿ
ಶಾರಾ ಬಿಟ್ಟು ಹಳ್ಳ್ಯಾಗ ಬಂದಿ
ಆಯ್ತೇನ ಹೇಳಲೊಲ್ಲಿ"

"ಮದುವೀಯ ಸೀರಿ ಹರಿದೋಗಿ ಮತ್ತ
ಹೊಲಿದದ್ದು ಪಿಸಿದು ಹೋಯ್ತು
ನಿನ ಕೈಯ ಹಿಡಿದು ಮೂಗುತಿಗೆ ಹೊರತು
ನನ ಜೀವ ಕಾಣದಾಯ್ತು"

"ನೈಲಾನ ಸೀರಿ ಬಂದೈತಿ ಅಂತ
ಒಂದೆಮ್ಮಿ ಮಾರಿ ತರಲೆ?
ಧಾರಾಡದಾಗ ಹುಡಿ ಬಾಳ
ಅಂತ ಪೌಡರಕ ಹೇಳಿ ಬರಲೆ"

"ಫುಂಡೀಯ ಪಲ್ಲೆಗೊಂದಿಷ್ಟು ನುಚ್ಚು
ಐತೇನ ನೋಡ ಒಳಗ
ಒಣ ಟೆಬರು ಯಾಕ ತೆಲಿಗಿಲ್ಲ ಎಣ್ಣೆ
ನಾನಾದೆ ಮನೆಗೆ ಸೊಣಗ"

"ಪ್ಯಾಟೀಯ ನೀರಿಗಿಳಿಬ್ಯಾಡ ನಿಲ್ಲ
ಸ್ವಾಟೀಯ ತಿರುವಬ್ಯಾಡಾ
ಒಂದೊಂದ ಹಲ್ಲು ಉದುರಾವು ನೋಡ
ನನಗ್ವಾದ ಮಾಡಬ್ಯಾಡಾ"

"ಮನಿ ತುಂಬಾ ಎಲ್ಲ ಮಣ್ಣಿನ ಗಡಿಗಿ
ಒಂದಾದ್ರು ಗಟ್ಟಿ ಇಲ್ಲಾ
ನನ ತವರುಮನೆಯ ಕೊಡ ನೆಗ್ಗಿದ್ದನ್ನ
ಮಾಡ್ಸೂದು ಆಗಲಿಲ್ಲಾ"

"ನಿಮ್ಮಪ್ಪನ್ಹಾಂಗ ನಾ ಸೋಗು ಮಾಡಿ
ಜೋಗಪ್ಪನಾಗಲೇನ
ಹಾಸಿದಷ್ಟರಲೆ ಕಾಲು ಚಾಚಿ ನೀ
ಬಾಳಲಾರಿಯೇನ"

"ಎಲ್ಕೈತಿ ಬಾಳು ಸುಡುಗಾಡಿಗಿಟ್ಟು ಬಾ
ಹಾಳು ಜಲುಮ ಹೊತ್ತು
ನಮ್ಮಪ್ಪ ಅವ್ವ ಕೊಟ್ಟಾರ ನಿನಗ
ಕೈತುಂಬ ರೊಕ್ಕ ತೆತ್ತು"

"ಜನ ತುಂಬಿನಿಂತ ಹಂದರದ ಒಳಗೆ
ನಿಮ್ಮಪ್ಪ ಕೈಯ ಕೊಟ್ಟಾ
ಕಡೆಗೆ ಎಲ್ಲಾ ಕೊಡತೀನಿ ಅಂತ
ಕೊಡಲಿಲ್ಲ ಒಂದು ಚುಟ್ಟಾ"

"ಸಾಕಪ್ಪಾ ಸಾಕು ಕೆರೆ ಭಾವಿ ಪಾಲು
ನಾನಾಗಿ ಹೋಗಲೇನ
ದಿನ ಗಳಿಗೆಗೂನು ಕಟಪಿಟಿಯ ತಿಂದು
ಉಪವಾಸ ಸಾಯಲೇನ"

"ಹ್ಯಾಂಗಾರ ಮಾಡಿ ಆ ಭಾವಿಗ್ಹೋಗು
ಇದರಾಗ ಇಲ್ಲ ನೀರ
ಹೊಟ್ಟೆ ತುಂಬ ನೀ ನೀರು ಹಿಗ್ಗಿ
ನನ ಮ್ಯಾಲ ಕರುಣ ತೋರ"

"ನನಗೆಂಥ ಗಂಡ ಜತಿಯಾದ ಇಸಾ
ಕುಡಿಲಾಕ ಇಲ್ಲ ಕಾಸು
ಸುಡುಗಾಡಿನ್ಯಾಗ ಸುಖ ಐತಿ ಅಂತ
ಹೋಗೂದು ನನಗೆ ಲೇಸು"

"ಹೋಗ್ತಿದ್ದೆ ಅಂದ್ರ ವಿಮಾ ಇಳಿಸತಿದ್ದ್ಯಾ
ಮೊದಲೇನೆ ತಿಳಿಸಬಾರ್ದ
ಸುಡುಗಾಡಿಗ್ಯಾಕ ಬೇಕೇನು ಇಲ್ಲಿ
ತರತೀನಿ ಸಾಯಬಾರ್ದ"

"ಹೊಟ್ಟ್ಯಾನ ಕಿಚ್ಚು ಎಷ್ಟಂತ ಹಿಡಿದು
ಕಟ್ಟೇನ ಕಳ್ಳಿನೊಳಗ
ಕಳ್ಳೀಯ ಹಾಲು ಕುಡಿದ್ಹಾಂಗ ಆತು
ಸೊಗಸಿಲ್ಲ ಮನಸಿನೊಳಗ"

"ನಿನ ಕೈಯ ಹಿಡಿದು ಮುಳಜಾಲಿ ಗಿಡವ–
ಏರೀದ ಹಾಂಗ ಆಯ್ತು
ತಲಿ ಕೆಡಿಸಬ್ಯಾಡ ನಾ ಹೊಂಟೆ ಹೊರಗ
ಈ ಜೀವ ಬ್ಯಾಸರಾಯ್ತು"

"ಮಾರಾಯ ನಿನ್ನ ಕಾಲ್ಮುಗಿಯತೀನಿ
ಸಾಕೇಳ ಸೆಟಗೊಬ್ಯಾಡಾ
ಕಸಮುಸುರಿ ತೊಳೆದು ಬಿಸಿ ಬುತ್ತಿ ಕಟ್ಟಿ
ಕಳುಸ್ತೀನಿ ನಿನ್ನ ಕೂಡ"

"ಅಳಬ್ಯಾಡ ಮಳ್ಳಿ ಬಾ ಬಾರ ಇಲ್ಲಿ
ಆಳತಾರ ಏನ ಹೀಂಗ
ಗಂಡ ಹೆಂಡ್ರ ಜಗಳಂದ್ರ ನೋಡ ಏ
ಗಂಧ ತೀಡಿದ್ಹಾಂಗ"

~ * ~ * ~ * ~

## 3.2 ಸಖೀಗೀತ

**– ಎಚ್. ನಾಗವೇಣಿ**

ಹಗಲು ಇರುಳಿನ ಸಂಧಿಕಾಲವದು. ಬೈಗುಗೆಂಪು ನಸುಗಪ್ಪಿಗೆ ವಾಲುತ್ತಿತ್ತು. ಸಿರಿದೇವಿ ಆಗಲೇ ಕಡಲ ದಂಡೆಯ ಮೇಲೆ ಬಂದು ಕೂತಾಗಿತ್ತು. ಗಂಡ ಮಾದೇಗೌಡನೂ ಪಕ್ಕದಲ್ಲಿದ್ದ. ಎಂದಿನಂತೆ ಇಂದೂ ಮಡದಿಗೊಂದು ಕತೆ ಹೇಳುವ ಆತುರ ಆತನಿಗೆ ಆತ ಹೇಳುವ ಕತೆ ಅಂತಿಂಥದ್ದಲ್ಲ. ಸಿರಿದೇವಿಯ ಒಡಲು ಕರಗುವಂತಹದ್ದು. ತಾನು ಕೇಳಿದ್ದ ನೋಡಿದ್ದ ಘಟನೆಗಳಿಗೆ ರಕ್ತ ಮಾಂಸ ತುಂಬಿ, ಜೀವಕೊಟ್ಟು, ಕಣ್ಣಿಗೆ ಕಟ್ಟುವಂತಹ ಕತೆ ಹೆಣೆಯುತ್ತಾನವ.

ಇಂತಹ ಎದೆ ಕಲಕುವಂತಹ ಕತೆಗಳನ್ನೂ ಹೇಳಿ ಹೇಳಿಯೇ ಈ ಗಟ್ಟದ ಮಾಸ್ಟ ಮಾದೇಗೌಡ, ಗುತ್ತಿನ ಶೆಟ್ಟರ ಹುಡುಗಿ ಸಿರಿದೇವಿಯನ್ನು ತನ್ನ ಬಗಲಿಗೆ ಸೇರಿಸಿಕೊಂಡಿದ್ದಲ್ಲವೇ? ಶಾಲೆ ಕಲಿಯಲು ಹೋದ ಶೆಟ್ಟರ ಮಗಳು ಗೌಡಮಾಸ್ಟನ ಕತಾ ಪಿಂಡಿಯೊಳಗೆ ಸಿಲುಕಿ, ಆತನ ಬೆಚ್ಚನೆಯ ಪ್ರೀತಿಗೆ ಕರಗಿ, ಮನದರಸಿಯಾಗಿ ಆತನೊಳಗೇ ನೆಲೆ ನಿಂತಿದ್ದು ಮತ್ತೊಂದು ಕತೆ!

ತನ್ನೊಳಗಿರುವ ಅಷ್ಟೊಂದು ಕತಾ ಸರಕಿನಲ್ಲಿ ಯಾವುದನ್ನು ಆರಿಸಲಿ ಎಂಬ ದ್ವಂದ್ವ ಯೋಚನೆ ಗೌಡಮಾಸ್ಟನನ್ನು ಕಾಡುತ್ತಿರುವಾಗಲೇ ತಿಂಗಳು ಮೂಡಿತ್ತು. ಕತೆಗಾಗಿ ಕಾದು ಕಾದು ಸುಸ್ತಾದ ಸಿರಿದೇವಿ ಗಂಡನ ತೊಡೆ ಮೇಲೆ ತಲೆಯಿರಿಸಿ ಬಾನು ದಿಟ್ಟಿಸಲಾರಂಭಿಸಿದ್ದಳು. ಬಾನು ತುಂಬಾ ಬೆಳಕಿನ ಹೊಳಪು ದೀವಟಿಗೆಗಳು ಹುಟ್ಟಿಕೊಂಡಿದ್ದವು.ಕತೆಯನ್ನಲ್ಲೇ ಮರೆತಳು ಸಿರಿದೇವಿ, ಚುಕ್ಕೆಯ ಲೆಕ್ಕಾಚಾರಕ್ಕಿಳಿದಿತ್ತು ಆಕೆಯ ಮನಸ್ಸು.

ಗೌಡ ಮಾಸ್ಟ ಕೊನೆಗೂ ಕತೆ ಆಯ್ಕೆ ಮಾಡಿದ್ದ. ಅದೇ ಕತೆ. ಮೊನ್ನೆ ಮೊನ್ನೆ ಕೆಂಜಾರುವಿನಲ್ಲಿ ನಡೆದ ಕವಿಗೋಷ್ಠಿಯಂದು ಪೆರ್ಮುದೆಯ ಗೋವಿಂದ ಭಟ್ಟರು ಹೇಳಿದ ಬಯಲುಸೀಮೆಯ ಬಡಕವಿಯ ಬದುಕಿನ ಘಟನೆಯದು. ಕೇಳುಗರೆಲ್ಲರ ಅಂತಃಕರಣ ಕಲಕುವ ಆ ಘಟನೆ ಗೌಡಮಾಸ್ಟನ ಚಿಂತನೆಯ ಕುಲುಮೆಯೊಳಗೆ ಕಾದು ಕನಲಿ ಕತೆಯಾಗಿ ರೂಪುಗೊಂಡಿತ್ತು.

ಎಂದಿನಂತೆ ಕತಾಪೀಠಿಕೆ ಶುರುವಾಯ್ತು. ಸಿರಿದೇವಿ ಮುನಿಸಿಕೊಂಡಳು. ಮೂಗಿಗಿಂತ ಮೂಗುತಿ ಭಾರ,ಯಾಕೆ ಇಷ್ಟೊಂದು ಪೀಠಿಕೆ ಎಂದು ಗೊಣಗಿಕೊಂಡಳು.ಗಂಡ ಮುಗುಳ್ನಕ್ಕ. ಪೀಠಿಕೆ ಮುಂದರಿಸಿದ್ದ. ಅಡಿಕೆಯ ಮಾತನ್ನು ತಮ್ಮ ಕಾವ್ಯದಲ್ಲಿ ಎಳೆತಂದು ವಾಡಿಕೆಗಿಂತ ಮಿಗಿಲಾದ ಅರ್ಥತುಂಬಿ

ಜನಮನವನ್ನು ಸೆಳೆದ ಈ ಕವಿ ಹುಟ್ಟಿ ಬೆಳೆದಿದ್ದು ಬಯಲು ಸೀಮೆಯಲ್ಲಿ, ಜನಪದ ಗೀತೆಯ ಶೃಂಗಾರ, ಪ್ರಾಸ ಸಂಪತ್ತನ್ನು ಹೀರಿಕೊಂಡು, ಕಾವ್ಯದಾಳಕ್ಕೆ ಇಳಿಸಿ ಮೋಡಿ ಮಾಡುವಂತಹ ಪದಗಳನ್ನೇ ಹೊಸೆದು ಪದ್ಯ ಕಟ್ಟುವ ಗಾರುಡಿಗ ಕವಿಯವರು. ತೆರವಿಲ್ಲದ ಬಡತನದಲ್ಲಿ ಬೆಂದು ನುಂಗಲಾಗದಂತಹ ನೋವಲ್ಲಿ ನೊಂದ ಅವರ ಜೀವನದಷ್ಟೇ ಪರಿಪಕ್ವವಾದುವು ಅವರ ಕಾವ್ಯಗಳು.

ಸಿರಿದೇವಿ ಗಂಡನ ಈ ಪರಿಯ ಮೈಲುದ್ದದ ಕತಾ ಪೀಠಿಕೆ ಕೇಳಿ ಅಸಹನೆಯಿಂದ ಕುದಿಯ ತೊಡಗಿದಳು. ಆದರೂ ಒಂದಷ್ಟು ತಾಳ್ಮೆ ತುಂಬಿಕೊಂಡು ಮುಂದಿನ ಕತಾತಿರುಳಿಗಾಗಿ ಗಂಡನ ಮುಖವನ್ನೇ ದಿಟ್ಟಿಸುತ್ತಿದ್ದಂತೆ ಆತ ಕತೆ ಮುಂದುವರೆಸಿದ್ದ.

ಗಟ್ಟದ ಮೇಲಿನ ಆ ಕವಿಗಳಿಗೆ ನಿಮ್ಮ ಕನ್ನಡ ಜಿಲ್ಲೆಯೆಂದರೆ ಪ್ರಾಣ. ಪ್ರಾಣ ಇಲ್ಲಿಯ ಜನರಿಗಾಗಿ ಅಲ್ಲ, ಇಲ್ಲಿಯ ಕಡಲಿಗಾಗಿ ಅವರಿಗೆ ಇನ್ನಿಲ್ಲದ ಸೆಳೆತ. ಅವರು ಅದೆಷ್ಟೋ ಬಾರಿ ಅದೂ ಇದೂ ಸಾಹಿತ್ಯದ ಕೆಲಸಗಳಿಗೆಂದು ಈ ಕಡಲ ಜಿಲ್ಲೆಗೆ ಬಂದಿದ್ದಾರೆ. ಊರು ಕೇರಿ ಸುತ್ತಿದ್ದಾರೆ.ಮೀನಘಾಟು ಕುಡಿದು ಕಡಲ ತೆರೆಗಳೊಡನೆ ಆಟವಾಡಿದ್ದಾರೆ. ಅರಳು ಮರುಳಿನ ವಯಸ್ಸಲ್ಲೂ ಮರಳಲ್ಲಿ ಗೂಡುಮನೆ ಕಟ್ಟಿದ್ದಾರೆ. ಕೆಡವಿದ್ದಾರೆ. ಆದರೂ ಅವರಿಗೆ ಮತ್ತೆ ಮತ್ತೆ ಕಡಲೂರಿಗೆ ಬರುವ ಆಸೆ. ಆಸೆ ಹುಟ್ಟಿತೆಂದು ಉಟ್ಟ ಬಟ್ಟೆಯಲ್ಲೇ ಎದ್ದು ಬರುವಂತ ಸಿರಿವಂತಿಗೆ ಅವರಲ್ಲಿಲ್ಲ. ಕಿತ್ತು ತಿನ್ನುವ ಬಡತನ.

ಒಮ್ಮೆ ಏನಾಯ್ತಂದ್ರೆ, ಕೃಷ್ಣ ಮಠದಲ್ಲಿ ಆಗ ಪರ್ಯಾಯದ ಸಂಭ್ರಮ. ಆ ಸಂಭ್ರಮ ಗದ್ದಲದ ನಡುವೆ ಇನ್ನಷ್ಟು ಗೌಜಿ ಗಮ್ಮತ್ತು ಸೇರ್ಪಡೆಯಾಗಲಿ ಎಂಬ ಕಾರಣಕ್ಕೂ ಏನೋ...ಉಡುಪಿ ಸೀಮೆಯ ಹಿರಿ–ಕಿರಿ ಸಾಹಿತಿಗಳೆಲ್ಲ ಸೇರಿ ಬಿಟ್ಟು, ಸಾಹಿತ್ಯಗೋಷ್ಠಿ ಏರ್ಪಡಿಸುವ ನಿರ್ಣಯ ಕೈಗೊಂಡಿದ್ದರು. ಅದರಲ್ಲೊಂದು ದಿನ ಕಾವ್ಯಗೋಷ್ಠಿಯೂ ಏರ್ಪಾಡಾಗಿತ್ತು. ಈ ಕಾವ್ಯಗೋಷ್ಠಿಯ ಮುಖ್ಯಸ್ಥಿಕೆಗೆ ಗಟ್ಟದ ಮೇಲಿನ ಗಾರುಡಿಗ ಕವಿಯನ್ನು ಎಳೆದು ತರುವ ಆಸೆ ಆತುರ ಅಲ್ಲಿನ ಎಲ್ಲರಿಗೂ ಸರಿ, ಅವರನ್ನೇ ಕರೆತರುವುದೆಂದು ತೀರ್ಮಾನವಾದೊಡನೆ ಕವಿಗಳ ಒಪ್ಪಿಗೆ ಪಡೆಯಲು ಪರ್ಯಾಯದ ಸ್ವಾಮಿಗಳ ಒದ್ದೆ ಲಂಗೋಟಿಯಂತಿದ್ದ ವಾಮನ ಪೈಗಳ ಮೋಟಾರು ಕಾರೊಂದು ಬಯಲು ಸೀಮೆಯನ್ನು ಹೊಕ್ಕಿಯೂ ಆಯ್ತು.

ಮುಂಜಾನೆ ಅಲ್ಲಿ ಬಯಲು ಸೀಮೆಯಲ್ಲಿ ಚುಮು ಚುಮು ಚಳಿ, ಕವಿಗಳನ್ನರಸಿ ಬಂದ ಕಾರು ಕವಿಯ ಬಡ ಕುಟೀರದ ಎದುರಿಗೆ ನಿಂತಿತು.

ಕವಿಗಳು ಅಡುಗೆ ಮನೆಯಲ್ಲಿ ರೊಟ್ಟಿ, ಬಡಿಯುತ್ತಿದ್ದ ಮಡದಿಯ ಪಕ್ಕ ಆತುಕೂತು ಚೌಳಿಕಾಯಿಯ ತೊಟ್ಟು ತೆಗೆಯುತ್ತಿದ್ದರು. ಇದೀಗ ಅಚಾನಕ್ಕಾಗಿ ಕಡಲಕರೆಯಿಂದ ಬಂದ ನೆಂಟರನ್ನು ಕಂಡೊಡನೆ ಕವಿಗಳ ಮುಖ ಮೊರವಾಗಿ ನಗುವಿನ ಅಲೆಯೇ ಅಲ್ಲಿಂದ ಹಾರಿಕೆಯಾಯಿತು. 'ಬರ್ರಿ... ಬರ್ರಿ... ಏನ್ ಎಲ್ಲಾ ಆರಾಮ್‌ರಾ... ಏನ್ ಎಲ್ಲ ಅಪರೂಪ ಆಗ ಬಿಟ್ರಲಾss ಮತ್ತೆನಾss ಸಮಾಚಾರ, ಮನೆ ಕಡಿ ಎಲ್ಲಾ ಆರಾಂ ಇದ್ದಾರಾss ಹೌದಿಲ್ಲಾ...' ಎಂಬ ಕುಶಲೋಪರಿ ಮಾತುಕತೆಯಾಡುತ್ತ ದೂರದಿಂದ ಬಂದ ನೆಂಟರನ್ನು ಕವಿಗಳು ಒಳಗೆ ಕರೆತಂದು ಕುಶಲೋಪರಿ ನಡೆಸುತ್ತಿರುವಾಗ ರೊಟ್ಟಿ ಸುಡುತ್ತಿದ್ದ ಕವಿಪತ್ನಿಯ ಕಿವಿಯೆಲ್ಲ ಗಂಡನ ಮಾತುಕತೆಯತ್ತಲೆ. ತಮ್ಮಲ್ಲಿ ಇಂತಿಂಥ ಕಾರ್ಯಕ್ರಮ.... ಇಂತಿಂಥ ಹೊತ್ತು... ತಾವು ಅತಿಥಿಯಾಗಿ ಬರಲೇಬೇಕು... ಕರೆದೊಯ್ಯಲು ಕಾರು ಬರುತ್ತೆ... ಆರಾಮವಾಗಿ ಬರಬಹುದು... ಹೀಗೆ ಅದೂ ಇದೂ ಮಾತು ಹೊರಗಡೆ ಚಾವಡಿಯಲ್ಲಿ ಹೊರಳಾಡುತ್ತಲೇ ಇತ್ತು. ಕಡಲತೀರದ ಕಾರ್ಯಕ್ರಮವದು. ಕವಿಗಳು ಆರು ಮೂರು ಯೋಚಿಸದೆ ತಟ್ಟನೆ ಒಪ್ಪಿಗೆ ನೀಡಿದ್ದರು.

ಅರೆ ಗಂಡನ ಒಪ್ಪಿಗೆ! ಒಳಗಡೆ ಒಲೆಯ ಮುಂದೆ ಕೂತು ಮೈಯೆಲ್ಲಾ ಕಿವಿಯಾಗಿರಿಸಿ ಮಾತುಕತೆ ಕೇಳಿಸಿಕೊಳ್ಳುತ್ತಿದ್ದ ಪತ್ನಿಯ ಎದೆ ತುಂಬಾ ಸಂತಸದ ಹೊನಲು! ಉಡುಪಿಯಲ್ಲಿ ಕಾರ್ಯಕ್ರಮವಂತೆ, ಕಾರು–ಗೀರು ಬರುವ ಮಾತು, ಗಂಡನ ಒಪ್ಪಿಗೆ! ಕವಿಪತ್ನಿಯ ಎದೆಯಾಳದಿಂದ ಆಸೆಯ ಬುಗ್ಗೆಯೊಂದು ನೀರಲ್ಲಿ ಅದುಮಿಟ್ಟ ಮರದ ದಿಮ್ಮಿಯಂತೆ ದಿಮ್ಮೆಂದು ದಿಗಿಣ ತೆಗೆದು ಮೇಲೆದ್ದು ಬಂದು, ಅವರಿದ್ದ ಖುಷಿಯ ಜತೆಯೇ ಕುಣಿಯಲಾರಂಭಿಸಿದಾಗ ಆಕೆ ಕೂತಲ್ಲಿಂದ ಎದ್ದು ನಿಂತಿದ್ದರು. ಬಂದವರಿಗೆ ಬಾಯಾರಿಕೆ ನೀಡುವುದು ಕೂಡಾ ಮರೆತು ಹೋಗಿತ್ತಾಕೆಗೆ.

ಬಂದ ನೆಂಟರಿಗೆಂದು ಕಂಚಿನ ಲೋಟದಲ್ಲಿ ಕರಿಕಾಫಿ ಸುರಿಯುತ್ತಿದ್ದಂತೆ ಆಕೆಯ ಮನದಲ್ಲಿಡಿ, ಉಡುಪಿಯ ಶ್ರೀ ಕೃಷ್ಣನೇ ಕುಣಿಯಲಾರಂಭಿಸಿದ್ದ. ಗಂಡನಿಗೆ ಮತ್ತೊಮ್ಮೆ ಕನ್ನಡ ಜಿಲ್ಲೆಯಿಂದ ಆಹ್ವಾನ ಬಂದಿದೆ. ಕರೆದೊಯ್ಯಲು ಕಾರು ಬೇರೆ ಬರುತ್ತಿದೆ. ಈ ಬಾರಿಯಾದರೂ ಇವರು ನನ್ನನ್ನು ಜೊತೆಯಲ್ಲಿ ಕರೆದೊಯ್ದರೆ ಜೀವನದ ಈ ಸಂಧ್ಯಾಕಾಲದಲ್ಲಾದರೂ ಶ್ರೀಕೃಷ್ಣನ ದರ್ಶನ ಮಾಡುತ್ತಿದ್ದೆ..., ಈ ಹಾಳು ಬದುಕಲ್ಲಿ ಬಡತನದ ಬೇಗೆಯಲ್ಲಿ ಒಮ್ಮೆಯಾದರೂ ನನ್ನತ್ತ ಈ ಭಾಗ್ಯ ಸುಳಿಯಲಿಲ್ಲ. ಇದೀಗ ಕೃಷ್ಣದರ್ಶನ ಮಾಡಬಹುದಾದ ಅವಕಾಶವೊಂದು ತನ್ನ ಕಾಲಬುಡಕ್ಕೆ ಬಂದು ಬಿದ್ದಿದೆ...

ಕವಿಯವರ ಪತ್ನಿ ಉಡುಪಿಯ ಶ್ರೀಕೃಷ್ಣನನ್ನು ಸ್ಮರಿಸುತ್ತಾ ನೆಂಟರಿಗೆ ಬಾಯಾರಿಕೆ ಕೊಟ್ಟು ಬಂದವರೇ ಬಾಗಿಲ ಬಳಿ ನಿಂತು ತನ್ನೊಳಗಿನ ಆಸೆಗೆ ಮತ್ತಷ್ಟು ಜೀವ ತುಂಬ ತೊಡಗಿದ್ದರು.

ಕಿತ್ತು ತಿನ್ನುವ ಬಡತನ ಉಡುಪಿಯ ಕೃಷ್ಣನ ದರ್ಶನವನ್ನೊಮ್ಮೆ ಮಾಡಬೇಕೆನ್ನುವ ಆಕೆಯ ಜೀವಮಾನದ ಆಸೆಯೊಂದು ಬಹುಕಾಲದಿಂದ ಆಸೆಯಾಗೇ ಉಳಿದಿತ್ತು. ಬಡಕವಿಗಳು ಉದ್ಯೋಗಪರ್ವದಿಂದ ವಿಶ್ರಾಂತಿಪರ್ವಕ್ಕೆ ಬಂದು ಆಗಲೇ ಹತ್ತು ವರ್ಷಗಳು ಸಂದಿವೆ. ಇದೀಗ ಕೂತು ತಿನ್ನುವ ಕಾಲಕ್ಕೆ ಕೈಲಿದ್ದ ಮೂರು ಕಾಸನ್ನು ದೇವದರ್ಶನ – ಭೂತದರ್ಶನ ಎಂದು ಖರ್ಚುಮಾಡುವ ತಾಕತ್ತು ಕವಿಗಳಲ್ಲಿಲ್ಲ. ಮಡದಿಯ ಮನದೊಳಗೆ ಸುಪ್ತವಾಗಿದ್ದ ಆಸೆ ಅವರಿಗೇನು ತಿಳಿಯದ್ದೂ ಅಲ್ಲ. ತನ್ನ ಜೀವನದುದ್ದಕ್ಕೂ ಬಡತನದಲ್ಲಿಯೇ ಕೈತೊಳೆದುಕೊಂಡು ಬಂದು, ಪ್ರೀತಿ ಒಂದನ್ನು ಬಿಟ್ಟು ಗಂಡನಿಂದ ಬೇರೆಂತಹ ಸಂಪತ್ತನ್ನೂ ಬಯಸದ ತನ್ನ ಸಂಗಾತಿಯ ಒಂದೇ ಒಂದು ಚಿಕ್ಕ ಆಸೆಯನ್ನು ತಳ್ಳಿಹಾಕಲಾಗದೆ ನಾಳೆ...ನಾಡಿದ್ದು ಎನ್ನುತ್ತಾ ಉಡುಪಿಯ ಕೃಷ್ಣನ ದರ್ಶನವನ್ನು ವರ್ಷಗಟ್ಟಲೆಯಿಂದ ಮುಂದೂಡಿಕೊಂಡೇ ಬಂದಿದ್ದಾರೆ ಈ ಕವಿಗಳು.

ಇದೀಗ ಮನೆ ಬಾಗಿಲಿಗೆ ಬಂದ ನೆಂಟರು ಹೊಸಿಲು ದಾಟುವವರೆಗೂ ತನ್ನೊಳಗಿನ ಆಸೆಯನ್ನು ಬಲವಾಗಿ ಅದುಮಿಟ್ಟು ಕೊಂಡಿದ್ದ ಕವಿಯವರ ಪತ್ನಿ, ಬಂದವರ ಬೆನ್ನು ಮರೆಯಾದೊಡನೆ ನೇರ ಗಂಡನೆದುರು ಬಂದು ತನ್ನಾಸೆಯನ್ನು ತೋಡಿಕೊಂಡಿದ್ದರು. ಕವಿಯವರು ಬಾಗಿಲ ಚೌಕಟ್ಟಿಗೆ ಒರಗಿ ನಿಂತು ಮಡದಿಯ ಆಸೆಯನ್ನು ನಗುನಗುತ್ತಲೇ ಕೇಳಿಸಿಕೊಂಡಿದ್ದರು.

'... ನಮಗಂತೂ ಈಗಿನ ಕೈಕಟ್ಟಿದ ಸ್ಥಿತ್ಯಾಗ, ಕೃಷ್ಣನ ದರ್ಶನ ಆಗೋದು ಕನಸಿನ ಮಾತೇ ಅದ. ನೀವೇ ದುಡಿಯೋ ಕಾಲದಾಗಂತೂ ಅದನ್ನ ನೆನಸ್ಕೊಳೋ ಹಾಗಿಲ್ಲ. ಈಗs ಮತ್ತೆs ಉಡುಪಿಗೆ ಹೊಂಟಿರಿ.....ಹ್ಯಾಂಗೂ ಕಾರದ, ನನ್ನೂ ಈಸರೆ ಕರ್ಕೊಂಡು ಹೋಗಿ ಕೃಷ್ಣನ ದರ್ಶನ ಮಾಡಸಬಾರ್ದ! ಮುಂದ ನನಗ ಈ ಭಾಗ್ಯ ಸಿಗುತ್ತೋ ಇಲ್ಲೋ...'

ಒಲೆಯಲ್ಲಿ ಒಗ್ಗರಣೆಯೊಳಗೆ ಬಾಡುತ್ತಿದ್ದ ಚೌಳಿಕಾಯಿಯ ಪರಿಮಳವನ್ನು ಆಘ್ರಾಣಿಸುತ್ತಿದ್ದ ಕವಿಯವರನ್ನು ಇದೀಗ ಮಡದಿಯ ಮನದಾಳದಿಂದ ಎದ್ದ ಮಾತು ಇಡಿಯಾಗಿ ಕಲಕ್ಕಿತ್ತು.ಯಾವತ್ತೂ ಮುಗುಳು ನಗೆಯೊಳಗೇ ಬದುಕಿನ ಸವಾಲುಗಳನ್ನು ಎದುರಿಸುತ್ತಿದ್ದ ಕವಿಯವರು ಮಡದಿಯ ಅಂಗಲಾಚುವ ಮಾತಿಗೆ ಬಾಯ್ತುಂಬಾ ನಗುತ್ತಾ, ಹ್ಞೂss... ಈ ಬಾರಿ ಹೋಗೋಣುss...

ಹೋಗೋಣುss, ಹ್ಯಾಂಗೂ ಹೋಗಿ ಬರಲಿಕ್ಕೆ ಕಾರದ, ನಿನ್ನೂ ಜೋಡಿಲೆ ಕರ್ಕೊಂಡು ಹೋದ್ರಾತು...' ಕವಿಗಳು ಹೆಂಡತಿಯ ಬೆನ್ನು ತಡವಿ ಸಮಾಧಾನಿಸಿದ್ದರು.

ಈ ಬಡಪಾಯಿ ಬದುಕಿನಲ್ಲಿ ಅಳು ನುಂಗಿ ನಗುತ್ತಲೇ ತನ್ನನ್ನು ಅನುಸರಿಸಿ ಬಂದ ಆಕೆಯನ್ನು ಸಿರಿವಂತಿಗೆಯ ಸುಪ್ಪತ್ತಿಗೆಯಲ್ಲಿ ಇರಿಸಲಾಗಲಿಲ್ಲ. ತನ್ನಿಂದ ಬರೀ ತಾಪತ್ರಯವನ್ನಲ್ಲದೇ ಬೇರೇನನ್ನೂ ಆಕೆಗೆ ಕೊಡಲಾಗಲಿಲ್ಲ. ಇದೀಗ ಆಕೆಯ ಬದುಕಿನ ಬಹುದೊಡ್ಡ ಆಸೆಯೊಂದನ್ನು ಈಡೇರಿಸುವ ಅವಕಾಶ, ಕವಿಯವರು ಆಗ ತಾನ ಮೀಸೆ ಚಿಗುರಿದ ಹುಡುಗನಂತೆ ಬಹಳ ಉತ್ಸಾಹದಿಂದ ಓಡಾಡುತ್ತಾ ತುಳುವ ಜಿಲ್ಲೆಗೆ ಮಡದಿಯನ್ನು ಕರೆದೊಯ್ಯುವ ಸಿದ್ಧತೆಯಲ್ಲಿ ತೊಡಗಿದ್ದರು.

ಬಡಕವಿಗಳು ತಮ್ಮ ಮಡದಿಯ ಬಲುದಿನಗಳ ಆಸೆಯನ್ನು ಈಡೇರಿಸುವ ಸಲುವಾಗಿ ಉಡುಪಿಗೆ ಹೊರಡುವ ಆ ಸಿದ್ಧತೆಯ ಪರಿಯನ್ನು ಗೌಡಮಾಸ್ಟ ಇನ್ನೇನು ಸಿರಿದೇವಿಗೆ ವರ್ಣಿಸಬೇಕೆನ್ನುವಷ್ಟರಲ್ಲಿ ಇದೇ ಪ್ರಶಸ್ತ ಸಮಯವೆಂಬಂತೆ ಆಕೆ ತನ್ನ ಗಂಡನೆದುರು ಬಲುದಿನಗಳ ಆಸೆಯೊಂದನ್ನು ತೆರೆದಿಟ್ಟಿದ್ದಳು.

'ನೋಡಿ... ನಂಗೂ ಆ ಕವಿ ಹೆಂಡ್ತಿಗಿರುವಂತೆಯೇ ಒಂದು ಪುಟ್ಟ ಆಸೆ ಮಾರಯ್ರೆ ಮುಂದಿನ ಪರ್ಯಾಯದೊಳಗೆ ಈ ಮುಷ್ಟಿಮಾಲೆಯ ನಡು ನಡುವೆ ಒಂದು ಮುತ್ತು, ಒಂದು ಹವಳ ಕಟ್ಟಿಸಬೇಕೂಂತ. ಅದಕ್ಕೊಂದು ಕಿವಿದ್ದೂ ಜೊತೆ ಇರಬೇಕು...' ಕೊರಳೊಳಗಿನ ಚಿನ್ನದ ಮುಷ್ಟಿಮಾಲೆಯನ್ನೆತ್ತಿ ಗಂಡನತ್ತ ತೋರಿಸುವಾಗ ಮಾಸ್ಟನ ಸಿಟ್ಟು ಕಾಲ ಉಂಗುಷ್ಠದಿಂದ ಮೇಲೇರಿತ್ತು. ತಾನು ಕತೆಯೊಳಗೇ ಮುಳುಗಿ ಅಷ್ಟೊಂದು ತನ್ಮಯವಾಗಿ ಕತೆ ಹೇಳುತ್ತಿರಬೇಕಾದರೆ ಈಕೆ ನಡು ನಡುವೆ ಬಾಯಿ ಹಾಕಿ ಅದ್ಯಾವುದೋ ಮುತ್ತು ಹವಳದ ಪೀಠಿಕೆ ಹಾಕಿ ಕತೆಯ ದಾರಿ ತಪ್ಪಿಸುತ್ತಿದ್ದಾಳೆ! ಮಾಸ್ಟ ಸಿಟ್ಟಿನಿಂದಲೇ ಸಿರಿದೇವಿಯ ಮೂತಿ ದಿಟ್ಟಿಸಿದ್ದ! ಕೊರಳ ಸರವನ್ನು ಕೈಯಲ್ಲಿ ಎತ್ತಿ ಹಿಡಿದು ಗಂಡನಿಂದ 'ಮುತ್ತಿನಂತಹ ಪ್ರತಿಕ್ರಿಯೆ ನಿರೀಕ್ಷಿಸಿದ್ದ ಸಿರಿದೇವಿ ಆತನ ಮುಖದಲ್ಲಿ ಅವುಚಿದ್ದ ಅಸಹನೆ, ಸಿಟ್ಟು ಕಂಡು ಅರೆಕ್ಷಣ ಬೆಪ್ಪಾಗಿ ತೆಪ್ಪಗಾದಳು.

ಮಾಸ್ಟ ಕ್ಷಣಕಾಲ ಬಾನು ನೋಡುತ್ತಾ ತನ್ನ ಕೈತಪ್ಪಿ ಹೋದ ಕತೆಯ ಎಳೆಯನ್ನು ಮತ್ತೆ ಹಿಡಿದೆಳೆಯಲು ಪ್ರಯತ್ನಿಸಿದ್ದ. ಕತಾಸೂತ್ರ ಮತ್ತೆ ತನ್ನ ಕೈಯೊಳಗೆ ಬಂದೊಡನೆ ಕತೆ ಆರಂಭಿಸಿದ್ದ. ಸಿರಿದೇವಿಯ ಕೆನ್ನೆಯನ್ನು

ನಯವಾಗಿ ಹಿಂಡುತ್ತ.

.....ಕವಿದಂಪತಿಗಳಿಗೆ ಉಡುಪಿಗೆ ಹೊರಡುವ ಗಡಿಬಿಡಿ ಸಂಭ್ರಮ. ಹಾಗೆ ಪೂರ್ವ ಸಿದ್ಧತೆಗಳೆಲ್ಲಾ ಮುಂದರಿದಿತ್ತು. ಮಕ್ಕಳೆಲ್ಲಾ ಬೆಳೆದು ಬಿಟ್ಟಿದ್ದರಿಂದ ಮನೆಯ ಯೋಚನೆಯಿಲ್ಲ. ಮಕ್ಕಳ ರಂಪವಿಲ್ಲ. ಕಡಲೂರಿನಿಂದ ಕಾರು ಬರಲು ಇನ್ನು ಎರಡೇ ಎರಡು ದಿನವಿದೆ ಎನ್ನುವಾಗಲೇ, ಎರಡು ಬಟ್ಟೆಚೀಲಗಳಲ್ಲಿ ಇಬ್ಬರ ಬಟ್ಟೆಬರೆಗಳನ್ನು ಒಪ್ಪವಾಗಿ ಜೋಡಿಸಿಟ್ಟಾಗಿತ್ತು. ಕವಿಗಳ ಕಪ್ಪು ಟೋಪಿಯೂ ಆ ಚೀಲ ಸೇರಿತ್ತು. ಆಗಷ್ಟೇ ಅವರು ಹೊಸದಾಗಿ ಹೆಣೆದಿದ್ದ ಕಾವ್ಯಮಾಲೆಯೂ ಆ ಟೋಪಿಯೊಳಗಡೆ ಸುರುಳಿಯಾಗಿ ಮಲಗಿತ್ತು. ರೊಟ್ಟಿ, ಖಾರದಪುಡಿ, ಚಟ್ನಿಪುಡಿಯೂ ಟೋಪಿಯ ಪಕ್ಕದಲ್ಲೇ ಆ ಚೀಲದಲ್ಲಿತ್ತು. ಆ ತುಳುವ ಜಿಲ್ಲೆಯ ಕುಚ್ಚಿಲಕ್ಕಿಯ ಅನ್ನವೆಂದರೆ ಕವಿಗಳಿಗಂತೂ ಮಾರು ದೂರ. ಅದು ತಿಂದರೆ ಹೊಟ್ಟೆಗೆ ಪುಟ್ಟ ಪುಟ್ಟ ಕಲ್ಲು ತುಂಬಿ ಬಿಟ್ಟಂತೆ ಎಂದು ಅವರು ಅಗಾಗ್ಗೆ ಹೇಳುವುದಿತ್ತು. ಅಂತೂ ಎಲ್ಲ ಸಿದ್ಧತೆಯೂ ಮುಗಿದುಬಿಟ್ಟು ಇನ್ನು ಬಾಕಿ ಉಳಿದದ್ದು ಹೊರಡುವ ಕ್ಷಣ ಮಾತ್ರ.

ಅಂತೂ ಉಡುಪಿಗೆ ಹೊರಡುವ ಸುದಿನ ಬಂದೇ ಬಿಟ್ಟಿತ್ತು. ಮುದಿ ಸೂರ್ಯ ಪಡುವಣದ ಚಡಾವು ಇಳಿಯುವ ಹೊತ್ತದು. ದಂಪತಿಗಳಿಬ್ಬರು ಹೊರಡಲು ಸನ್ನದರಾಗಿ ಮನೆಯ ಮುಂಬಾಗಿಲಲ್ಲಿ ನಿಂತು; ಬರಲಿರುವ ಕಾರಿಗಾಗಿ ಗೋಣುದ್ದ ಮಾಡಿ ಕಣ್ಣಾಡಿಸುತ್ತಿದ್ದರು. ಕವಿಯವರ ಮಡದಿಗಂತೂ ಮನದೊಳಗೆ ವಿಪರೀತ ಸಡಗರ, ಪುಟ್ಟ ಮಕ್ಕಳಂತೆ ಮನೆಯ ಒಳಗೊಮ್ಮೆ ಹೊರಗೊಮ್ಮೆ ಅಡ್ಡಾಡುತ್ತಾ ತಮ್ಮ ಸಡಗರವನ್ನು ಆದಷ್ಟು ಹೊರ ಚೆಲ್ಲುತ್ತಿದ್ದರು. ಹೆಂಡತಿಯ ಮುಖದಲ್ಲಿ ಮಾತ್ರವಲ್ಲ ದೇಹದಿಂದಿಡೀ ಹೊರಸೂಸುತ್ತಿದ್ದ ಸಂಭ್ರಮವನ್ನು ಕಂಡು ಆ ಇಳಿವಯಸ್ಸಿನಲ್ಲೂ ಕವಿಯವರ ಎದೆ ತುಂಬಾ ಎಂತೆಂಥದ್ದೋ ನಾನಾ ನಮೂನೆಯ ಭಾವನೆಗಳು, ರಂಗು ರಂಗಿನ ರಾಗಗಳು. ಕವಿಯವರು ಭಾವವನ್ನು ಹತ್ತಿಕ್ಕಿಕೊಳ್ಳಲಾಗದೆ ಕೊಂಡಾಟದಿಂದ ಮಡದಿಯ ತಲೆ ನೇವರಿಸಿದ್ದರು. ಅಪರೂಪಕ್ಕೆ ತನ್ನ ಪತ್ನಿ ಸಂಭ್ರಮದಿಂದ ಕಂಪಿಸುತ್ತಿದ್ದಾಳೆ: ಹದಿನಾರರ ಯುವತಿಯಂತೆ ಸಡಗರದಿಂದ ಓಡಾಡುತ್ತಿದ್ದಾಳೆ. ಕವಿಯ ಮನದಲ್ಲೂ ಸಂಭ್ರಮ ಉಕ್ಕೇರತೊಡಗಿತ್ತು. ತಮಗಿಬ್ಬರಿಗೂ ಜತೆಯಾಗಿ ಕಾರಲ್ಲಿ ಹೋಗುವ ಅವಕಾಶ ಅದೂ ಎಷ್ಟೊಂದು ದೂರಕ್ಕೆ! ಮುದಿ ವಯಸ್ಸಲ್ಲೂ ತಮ್ಮದೊಂದು ರೀತಿಯ ಪ್ರೇಮಪಯಣವೆಂದು ಕಲ್ಪಿಸಿಕೊಂಡು ಮನಸೊಳಗೇ ನಕ್ಕಿದ್ದರು – ಕವಿಗಳು.

ಹೊತ್ತು ಜಾರುತ್ತಿತ್ತು. ಹೊಂಬಣ್ಣದಲ್ಲಿ ಹೊಳೆಯುತ್ತಿದ್ದ ಪಡುವಣ

ಬಾನಾಗಲೆ ಕೆಂಬಣ್ಣದಲ್ಲಿ ಓಕುಳಿಯಾಡತೊಡಗಿದ್ದರೂ ಇನ್ನೂ ಕಡಲೂರಿನ ಕಾರಿನ ಪತ್ತೆಯಿಲ್ಲ! ಕವಿಪತ್ನಿಯವರಲ್ಲಿ ನಿಧಾನಕ್ಕೆ ಆತಂಕ ಸುಳಿಯತೊಡಗಿತ್ತು. ದೇಹವಿಡೀ ಸಂಭ್ರಮ ತುಳುಕಿಸಿಕೊಂಡಿದ್ದ ಮಡದಿ ಇದ್ದಕ್ಕಿದ್ದಂತೆ ಹಿಂಡಿದ ಕಬ್ಬಿನ ಜಲ್ಲೆಯಂತೆ ಸಪ್ಪಗಾಗಿ ಮುಖವಿಡೀ ಆತಂಕ ಹೊದ್ದುಕೊಂಡಿದ್ದನ್ನು ಕವಿಯವರಿಂದ ಸಹಿಸಲಾಗದೇ ಮಡದಿಯನ್ನು ಪರಿಪರಿಯಾಗಿ ಸಮಾಧಾನಿಸತೊಡಗಿದ್ದರು. ಆಕೆಯ ಬೆನ್ನು ತಡವುತ್ತಾ ಇನ್ನೇನು ಅಂಗಳದಿಂದ ಮನೆಚಾವಡಿಯೊಳಗೆ ಕಾಲಿರಿಸಬೇಕೆನ್ನುವಷ್ಟರಲ್ಲಿ ಕಾರೊಂದು ಬರ್ರನೆ ಧೂಳೆಬ್ಬಿಸುತ್ತಾ ದಂಪತಿಗಳು ನಿಂತಿದ್ದ ಅಂಗಳದತ್ತಲೇ ನುಗ್ಗಿ ಬಂದಿತ್ತು.

ಕತೆಯಲ್ಲಿ ತನ್ಮಯಳಾಗಿದ್ದ ಸಿರಿದೇವಿ, 'ಅಬ್ಬಾ ಕೊರಗಜ್ಜ...ಕಡೆಗೂ ಕವಿಗಳ ಅಂಗಳಕ್ಕೆ ಕಾರು ಬಂತಲ್ಲವಾ' ಎಂದು ತನ್ನ ಪ್ರಿಯ ದೈವ ಕೊರಗಜ್ಜನನ್ನು ನೆನಪಿಸಿಕೊಂಡು ನಿಡಿದಾದ ನಿಟ್ಟುಸಿರು ಬಿಟ್ಟಿದ್ದಳು. "ನಾನೆಣಿಸಿದ್ದೆ; ನಮ್ಮವರು ಕವಿಗಳಿಗೆ ಮೂರು ನಾಮ ಹಾಕಿದ್ರಂತ", ಸಿರಿದೇವಿ ಕತೆಯಲ್ಲೇ ತನ್ಮಯಳಾಗಿ, ಮುಂದೇನಾಗುತ್ತೋ ಎನ್ನುವ ಆತಂಕದಿಂದ ಕುದಿಯುತ್ತಿದ್ದವಳು ತನಗಾದ ನೆಮ್ಮದಿಯನ್ನು ಗಂಡನೆದುರು ಬಿಚ್ಚಿಟ್ಟಿದ್ದಳು. ಮಾಸ್ಟ ಸಿರಿದೇವಿಯಿಂದ ಇದೇ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದ್ದ. ನಸುನಗುತ್ತಾ ಹೆಂಡತಿಯ ಕೆಳತುಟಿಯನ್ನು ಹಿಂಡುತ್ತಾ ಮತ್ತೆ ಕತೆ ಮುಂದರಿಸಿದ್ದ.

ಬರ್ರೆಂದು... ಬಂದ ಕಾರಿನ ಸುತ್ತಲಿದ್ದ ಕರಿಧೂಳ ರಾಶಿ ಒಂದು ಹಂತಕ್ಕೆ ಬರುವಷ್ಟರಲ್ಲಿ ಕವಿಯವರು ನಾಕುದಿಕ್ಕಿಗೂ ಸಡಗರದಿಂದ ಹಾರುತ್ತಿದ್ದ ತನ್ನೆದೆಯನ್ನು ಅದುಮಿಡುತ್ತಾ, ಪಕ್ಕದಲ್ಲಿ ನಿಂತಿದ್ದ ಪತ್ನಿಯೆಡೆ ಕಣ್ಣು ಮಿಟುಕಿಸಿ ನಸುನಗುತ್ತಾ ಕಾರಿನತ್ತ ದಿಟ್ಟಿಸಿದ್ದರು... ಮತ್ತೆ ಮತ್ತೆ ದಿಟ್ಟಿಸಿದ್ದರು! ಕವಿಯವರ ಮುಖದ ಸುಕ್ಕುಗಳ ಮೇಲಿನ ನಗುವಿನ ಲೇಪನ 'ಸುಯ್ಯೆಂದು' ಹಾರಿ ಎಲ್ಲೋ ಹೋಗಿತ್ತು. ಎದೆಯೊಳಗೆ ಆ ಕೇರಿ ಮಂದಿಯಲ್ಲ ನುಗ್ಗಿ ಬಂದು ಒದ್ದಂತಹ ಅನುಭವ ಅವರದ್ದಾಗಿತ್ತು! ಬರ್ರೆಂದು ಬಂದ ಆ ಕಾರೊಳಗೆ ಒಂದು ರಾಶಿ ಜನರಿದ್ದಾರೆ! ಹಿಂದಕ್ಕೆ ಮುಂದಕ್ಕೆ ಕೂತು ಕವಿಗಳ ಹಲ್ಲಿಯಂತಿರುವ ಆ ಬಡದೇಹಕ್ಕಾಗುವಷ್ಟು ಜಾಗವಿರಿಸಿದ್ದಾರಷ್ಟೆ! ಕವಿಯ ಎದೆಯಾಳದಿಂದೆದ್ದ ನೋವು – ನಿರಾಸೆಯ ಅಲೆಗಳು ಅವರ ಕಣ್ಣಾಲಿಗಳನ್ನು ತೇವಗೊಳಿಸಿದ್ದವು. ತನ್ನ ಕೈಯಲ್ಲಿದ್ದ ಬಟ್ಟೆಯ ಚೀಲವನ್ನು ಎದೆಗಾನಿಸಿಕೊಂಡು ಅಲ್ಲೇ ನಿಂತಿದ್ದ ಮಡದಿಯತ್ತ ಅದೇನೋ ಪಿಸುರಬೇಕೆಂದು ತಿರುಗಿದ್ದಾರಷ್ಟೆ, ಅಷ್ಟರೊಳಗೆ ಆಕೆ ಕಣ್ಣಿಗೆ ಸೆರಗೊತ್ತಿ ಹಿಡಿದು ಕೈಯ ಚೀಲವನ್ನು ಎದೆಗಮುಕಿಕೊಂಡು ಅಡುಗೆ ಮನೆ ಸೇರಿಯಾಗಿತ್ತು. ಕವಿಯವರಿಗೆ ಈಗ ಪತ್ನಿಯನ್ನು ಮನಸ್ಸಿಚ್ಛೆ

ಸಮಾಧಾನಿಸುವ ಸಮಯಾವಕಾಶವಿಲ್ಲ. ತನ್ನ ಪ್ರಾಣವನ್ನೊಯ್ಯಲು ಬಂದ ಯಮಕಿಂಕರರಂತೆ ಕಾರೊಳಗೆ ಕಾರ್ಯಕ್ರಮ ಸಂಘಟಕರಿದ್ದಾರೆ! ತಾನು ಮಡದಿಯನ್ನು ಬಿಟ್ಟು ಕಾರೇರಲೇಬೇಕು. ತಾನೂ ಹೋಗಲಾರೆ ಎಂದು ಕುಳಿತರೆ ಕೊಟ್ಟ ಮಾತು ತಪ್ಪಿದಂತಾಗುತ್ತದೆ ಎಂದು ಕವಿಗಳು ತೀರಾ ಅಸಹಾಯಕರಾಗಿ ಜೀವಂತ ಶವದಂತೆ ಅಂಗಳದಲ್ಲಿ ನಿಂತು ಮತ್ತೆ ಮತ್ತೆ ಆ ಕಾರನ್ನು ದಿಟ್ಟಿಸಿದ್ದರು. ಆಗಲೇ ಕತ್ತಲಾಗಿದೆ ಬಾನು ತುಂಬಾ ಚುಕ್ಕೆಗಳೆದ್ದಿವೆ. ತಾನು ಕಾರೇರಲೇ ಬೇಕು; ಆಕೆಯನ್ನು ಇಲ್ಲೇ ಬಿಟ್ಟು, ಕವಿಯವರ ಎದೆ ಕರಗಿ ಕಣ್ಣಲ್ಲಿ ನೀರು ಹನಿ ಹನಿಯಾಗಿ ಜಿನುಗತೊಡಗಿತ್ತು.

ಆಕೆಯನ್ನು ತಾನ್ಹೇಗೆ ಸಮಧಾನಿಸಲಿ, ನಿರಾಸೆಯ ಪ್ರಪಾತಕ್ಕೆ ಬಿದ್ದು, ಹೊರಳಾಡುತ್ತಿರುವವಳನ್ನು ಸಂತೈಸದೇ ಅದ್ಹೇಗೆ ಬಿಟ್ಟು ಹೊರಡಲಿ? ಒಟ್ಟಿನಲ್ಲಿ ಕವಿಯವರು ಸಂದಿಗ್ಧತೆ ಅಸಹಾಯಕತೆಯಿಂದ ಬೇಯತೊಡಗಿದ್ದರು. ಕವಿಗಳು ತಮ್ಮ ಕ್ಷಣಗಳನ್ನು ನುಂಗ ತೊಡಗಿದ್ದನ್ನು ಸಹಿಸಿಕೊಳ್ಳಲಾಗದ ಸಂಘಟಕರೊಬ್ಬರು ಕಾರೊಳಗಿನಿಂದ ಇಳಿದು ಬಂದು ಕವಿಯವರ ಕೈಯಲ್ಲಿದ್ದ ಚೀಲವನ್ನು ಎತ್ತಿಕೊಳ್ಳ ಬರುವಷ್ಟರಲ್ಲಿ ಕವಿಯವರು ಚೀಲ ಸಮೇತರಾಗಿ ಅಡುಗೆ ಮನೆಗೆ ನುಗ್ಗಿ; ಮಂಡಿಯೊಳಗೆ ಮುಖ ಮುಚ್ಚಿ ಅಳುತ್ತಿದ್ದ ಪತ್ನಿಯೆದುರು ಕುಕ್ಕರಗಾಲಲ್ಲಿ ಕೂತು ಆಕೆಯ ಕಣ್ಣೊರೆಸಿ ಸಾಂತ್ವನದ ಮಾತಿಗೆ ಇಳಿದು ಬಿಟ್ಟಿದ್ದರು.

ಬೆಟ್ಟದಷ್ಟು ನಿರಾಸೆ ಹೊತ್ತು ಕಣ್ಣೀರಿಡುತ್ತಿದ್ದ ಪತ್ನಿಯ ಮುಖವನ್ನು ತನ್ನೆಡೆಗೆ ತಿರುಗಿಸಿಕೊಳ್ಳುತ್ತಾ 'ನೋಡವ್ವ ಜೀವನದಾಗ ಇದಕ್ಕಿಂತ ಎಷ್ಟೋ ದೊಡ್ಡ ತ್ರಾಸ ಸೈಸ್‌ಕೊಂಡಿ. ಇದನ್ನೂ ಹಾಂಗ ಸೈಸ್‌ಗೊಂಡುಬಿಡ್ಲಾ... ಹ್ಯಾಂಗೂ ಒಪ್ಪಿಗೊಂಡೀನಿ... ಮಾತಿಗೆ ತಪ್ಪಾಂಗಿಲ್ಲ. ನನ್ನ ಜೀವಾನ ಇಲೇ ಬಿಟ್ಟು ಹೊಂಟಿನಿ. ನನಗೊತ್ತದ ನನ್ನ ಕೈಹಿಡ್ದು ಬಾಳ ತ್ರಾಸ್ ಅನುಭವಿಸಿದೀss ಅಂತ.... ನಿನಗಾದ ಬ್ಯಾಸರಾನ ಈ ಒಂದು ಸಾರೇ ಒಳಗಾಕೋ, ನಾ ಬಂದ ಮೇಲೆ ಇಬ್ರೂ ಮತ್ತೆ ಉಡುಪಿಗೆ ಹೋಗುಣಾ...' ಅಂತಾ ಮಡದಿಯನ್ನು ಸಮಧಾನಿಸುತ್ತಾ ಆಕೆಯ ನಡುನೆತ್ತಿಯನ್ನು ನವಿರಾಗಿ ಪೂಸುತ್ತಾ "ನನ್ನ ನಗನಗತ ಕಳಿಸಿಬಿಡು'...ಎಂದು ತಲೆತಗ್ಗಿಸಿ ಕೂತಿದ್ದ ಆಕೆಯನ್ನು ರಟ್ಟೆಹಿಡಿದು ಎಬ್ಬಿಸಿದ್ದರು. ಕಣ್ಣೊರೆಸುತ್ತಾ ಮಡದಿ ಬಾಗಿಲಿಗೆ ಬಂದೊಡನೆ ಅಂಗಳದಿಂದ ಕವಿಯವರು ಹನಿಗಣ್ಣಾಗಿಯೇ ಕಾರನ್ನೇರಿ ತನಗಿರಿಸಿದ್ದ ಇಲಿ ಬೋನಿನಷ್ಟಗಲದ ಜಾಗದಲ್ಲಿ ಕೂತು ಮಡದಿಯನ್ನೇ ದಿಟ್ಟಿಸಿದ್ದರು.

ಗಂಡ ಹೇಳುವ ಕತೆಯನ್ನು ಉಸಿರು ಬಿಗಿ ಹಿಡಿದು ತನ್ಮಯಳಾಗಿ ಕೇಳಿಸಿಕೊಳ್ಳುತ್ತಿದ್ದ ಸಿರಿದೇವಿಗೆ, ಕವಿಪತ್ನಿಗಾದ ನಿರಾಸೆಯನ್ನು ಕೇಳಿ ಕಣ್ಣು

ತೇವಗೊಳ್ಳತೊಡಗಿತ್ತು. ಆಕೆಗೆ ಕಣ್ಣೀರು ಯಾವತ್ತೂ ಒಂದು ಗೇಣು ಮುಂದೆಯೇ, ಇದೀಗ ಕವಿಪತ್ನಿಯ ನೋವಿನ ಕತೆ ಕೇಳಿ ಆಕೆಯ ಮೆಲ್ಲೆದೆ ಕರಗಿ ಕಣ್ಣಲ್ಲಿ ಹನಿಯತೊಡಗಿತ್ತು.

ಹೆಂಡತಿಯ ಕಣ್ಣಾಲಿ ತುಂಬುತ್ತಿರುವುದನ್ನು ಕಂಡು ಗೌಡಮಾಸ್ಟ ತನ್ನ ಕತೆ ಹೇಳುವ ತಂತ್ರವನ್ನು ತಾನೇ ಮೆಚ್ಚುತ್ತಾ; ಮತ್ತಷ್ಟು ಉಮೇದಿನಿಂದ ಕತೆ ಮುಂದುವರಿಸಿದ್ದ. ಉಡುಪಿಯ ಸಾಹಿತ್ಯಹಬ್ಬವನ್ನು ಭಾರವಾದ ಎದೆ ಹೊತ್ತು ಹಾಗೂ ಹೀಗೂ ಮುಗಿಸಿ ಹಿಂದಿರುಗಿದ್ದ ಕವಿಗಳಿಗೆ, ಮಡದಿಯನ್ನೊಮ್ಮೆ ಕೃಷ್ಣದರ್ಶನಕ್ಕೆ ಕರೆದೊಯ್ಯಲು ಬೇಕಾಗುವಷ್ಟು ಹಣವನ್ನು ಜೋಡಿಸುವುದೇ ಒಂದು ಗೀಳಾಗಿ ಬಿಟ್ಟಿತ್ತು. ಆ ಗೀಳಿಗೆ ಬಿದ್ದು ಕವಿಗಳು ಹೊರಳಾಡುತ್ತಿರುವಷ್ಟರಲ್ಲಿ, ಈ ಭರತನಾಡಿನ ಭಾರೀ ದೊಡ್ಡ ಪುರಸ್ಕಾರವೊಂದು ಅವರ ಕಾವ್ಯಮಾಲೆಗೆ ಒಲಿದು ಬಂದು, ಸಿರಿಯ ಜತೆಗೆ ಹಿರಿಮೆಯ ಗರಿಯನ್ನು ಜೋಡಿಸಿ ಬಿಟ್ಟಿತ್ತು. ಕೈಗೆ ಸಿಗದ ಕಾಂಚಾಣವನ್ನು ಹಿಡಿದಿಡಲು ಇನ್ನಿಲ್ಲದ ಪಾಡುಪಟ್ಟಿದ್ದ ಕವಿಗಳತ್ತ ಸದ್ದಿಲ್ಲದೆ ಕಾಂಚಾಣವೇ ಹುಡುಕಿ ಬಂದಿತ್ತು. ಇನ್ನೇನು...ಹಣಕ್ಕೇನು ಕೊರತೆಯಿಲ್ಲ..., ಕವಿಯವರು ಪತ್ನಿ ಸಮೇತರಾಗಿ ಉಡುಪಿಗೆ ಹೊರಡುವ ದಿನವನ್ನಷ್ಟೇ ಗುಣಿಸಿ ಭಾಗಿಸಿ ನಿರ್ಧರಿಸುವಷ್ಟರಲ್ಲಿ ಕವಿಪತ್ನಿಯವರಿಗೆ ಇದ್ದಕ್ಕಿದ್ದಂತೆ ಬಡತನದ ಕೊಡುಗೆಯೆಂಬಂತೆ ಲಕ್ವ ಬಡಿದು ಬಿಟ್ಟಿತ್ತು. ಹಾಗೇ ಹಾಸಿಗೆ ಹಿಡಿದ ಕವಿಪತ್ನಿ ಮತ್ತೆ ಮೇಲೆದ್ದಿದ್ದು ಹೆಣವಾಗಿ.

ಪತ್ನಿಯು ಮಣ್ಣಾದರೂ, ಆಕೆಯ ಕೊನೆಯಾಸೆಯ ನೆನಪು ಮಾತ್ರ ಕವಿಯವರಲ್ಲಿ ಹಸಿರಾಗಿತ್ತು. ಆಕೆಯ ಮರಣವಾಗಿ ವರುಷ ಉರುಳುವಷ್ಟರಲ್ಲಿ ಮತ್ತೆ ಮರಳಿ ಬಂದಿತ್ತು. ಉಡುಪಿಯ ಪರ್ಯಾಯ ಸಂಭ್ರಮ. ಆ ಬಾರಿಯಂತೆ ಈ ಬಾರಿಯೂ ಉಡುಪಿಯ ಕಾವ್ಯಪ್ರಿಯರು ಪರ್ಯಾಯದ ಗೌಜಿಯ ನಡುವೆಯೇ ಕಾವ್ಯಗೋಷ್ಠಿಯೊಂದನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದ್ದರು. ಆ ಗೋಷ್ಠಿಯಲ್ಲಿ, ನಾಡಿನ ಬಲುಮಾನ್ಯರಾದ ಈ ಗಾರುಡಿಗ ಕವಿಯವರನ್ನು ಸನ್ಮಾನಿಸಲು ತೀರ್ಮಾನಿಸಿ ಮರುದಿನವೇ ಕಾರೊಂದನ್ನು ಬಯಲು ಸೀಮೆಯತ್ತ ಅಟ್ಟಿ... ಕವಿಯವರನ್ನು ಕಡಲೂರಿಗೆ ಬರುವಂತೆ ಒಪ್ಪಿಸಿಯೂ ಆಯ್ತು. ಕವಿಗಳು ಉಡುಪಿಗೆ ಹೊರಡುವ ದಿನ ಹತ್ತಿರ ಬಂದು...ಇನ್ನೇನು ನಾಳೆಯೇ ತಾನು ಉಡುಪಿಗೆ ಹೊರಡುತ್ತಿದ್ದೇನೆ ಎಂದರೂ ಕವಿಗಳಿಗೆ ಎದೆಯಲ್ಲಿ ಎಳ್ಳಷ್ಟೂ ಸಂತಸವಿಲ್ಲ. ಮಣ್ಣಾದ ಪತ್ನಿಯನ್ನು... ಆಕೆಯಾಸೆಯನ್ನು ಕ್ಷಣ ಕ್ಷಣಕ್ಕೂ ಕವಿಗಳು ಚಿತ್ತಕ್ಕೆತ್ತಿ ತಂದು ತನ್ನ ಮುದಿ ಕಣ್ಣಲ್ಲಿ ಸಾಕಷ್ಟು ನೀರಮುತ್ತುಗಳನ್ನು ಉರುಳಿಸಿದರು. ಇನ್ನೇನು...ಅಂದು ಸಂಜೆಗೇ ತುಳುನಾಡಿಗೆ ಹೊರಡುವ

ಕಾರು ಬರುತ್ತಿದೆ – ಎಂದರೂ ಕವಿಗಳಿನ್ನೂ ಸಿದ್ಧರಾಗಿಲ್ಲ. ಅವರು ಅದೇನೋ ಮಹತ್ತರವಾದ ಹತಾರಿನ (ವಸ್ತುವಿನ) ಹುಡುಕಾಟದಲ್ಲಿದ್ದರು. ಕೌದಿಯ ಕೆಳಗೆ ತಡಕಾಡಿದರೂ ಅದರ ಪತ್ತೆಯಿಲ್ಲ...ಟ್ರಂಕಿನಡಿ ಹುಡುಕಾಡಿದರೂ ಪತ್ತೆಯಿಲ್ಲ. ಅಡುಗೆಮನೆಯಲ್ಲಿ ಡಬ್ಬ ಡಬ್ಬ ಶೋಧನೆಯಾಯ್ತು. ಅಲ್ಲೂ ಪತ್ತೆಯಿಲ್ಲ! ಮತ್ತೆಲ್ಲಿದೆ...ಮತ್ತೆಲ್ಲಿದೆ? ಕವಿಗಳು ಕಂಗೆಡತೊಡಗಿದರು. ಅದನ್ನು ಹುಡುಕಿ ಕೊಡಬೇಕಾದ ಮೂರು ಮಕ್ಕಳೂ ತಾಯಿಗೂಡು ಬಿಟ್ಟು, ಪ್ರತ್ಯೇಕ ಗೂಡು ಕಟ್ಟಿ ಹಾರಿಹೋಗಿದ್ದಾರೆ! ಕವಿಗಳು ಮಾನಸಿಕವಾಗಿ ಹಣ್ಣಾಗಿ...ತಣ್ಣಗಾಗ ತೊಡಗಿದ್ದರು. ಅನೇಕ ಯುಗಾದಿಗಳಿಂದ ತಮ್ಮ ಮಡದಿಗೆ ಸಂಗಾತಿಯಾಗಿದ್ದ ಆಕೆಯ ಕಪ್ಪು ಚಾಳೀಸಿನ ಹುಡುಕಾಟದಲ್ಲಿದ್ದ ಕವಿಗಳು ಇದೀಗ ಅದನ್ನು ಹುಡುಕಿ...ಹುಡುಕಿ...ಬಳಲಿ ಬೆಂಡಾಗುತ್ತಿದ್ದಂತೆ ಧೂಳೆಬ್ಬಿಸುತ್ತ ಆ ಕಾರು ಬಂದೇ ಬಿಟ್ಟಿತ್ತು.

ಕವಿಗಳ ಕಣ್ಣಲ್ಲಿ ಧಾರಾಕಾರವಾಗಿ ನೀರಿಳಿಯತೊಡಗಿತ್ತು. ಈ ಬಾರಿ ಕಡಲ ಜಿಲ್ಲೆಗೆ ಹೊರಡುವಾಗ ಪತ್ನಿ ಜತೆಗಿಲ್ಲದಿದ್ದರೂ ಆಕೆಯಷ್ಟೆ...ಆಕೆಯ ಮೊಗದಷ್ಟೇ ಪ್ರಿಯವಾಗಿದ್ದ ಆಕೆಯ ಚಾಳೀಸನ್ನು ತುಳುವ ಜಿಲ್ಲೆಗೆ ಕೊಂಡೊಯ್ದು ಅದಕ್ಕೆ ಕೃಷ್ಣದರ್ಶನ ಮಾಡಿಸುವ ಮೂಲಕ, ಆಕೆಗೇ ಕೃಷ್ಣದರ್ಶನ ಮಾಡಿಸಿದೆನೆಂಬ ಆತ್ಮತೃಪ್ತಿ ಪಟ್ಟುಕೊಳ್ಳಲು ಭಾವುಕ ಕವಿಗಳು ನಿರ್ಧರಿಸಿದ್ದರು.

ಕಾರು ಬಂದು ಅಂಗಳದಲ್ಲಿ ನಿಂತರೂ ಕವಿಗಳಿನ್ನೂ ಹನಿಗಣ್ಣಾಗಿಯೇ ಚಾಳೀಸಿನ ಹುಡುಕಾಟದಲ್ಲಿದ್ದರು. ಕವಿಗಳು 'ಹಣದ ಗಂಟಿನ ಹುಡುಕಾಟದಲ್ಲಿದ್ದಾರೆ' ಎಂದು ಕಡಲೂರಿನವರು ತಿಳಿಯುತ್ತಿದ್ದಂತೆ ಕವಿಗಳ ಕೈಗೇ ಪತ್ನಿಯ ಚಾಳೀಸು ಸಿಕ್ಕೇ ಬಿಟ್ಟಿತ್ತು. ಕವಿಯವರು ದೂರದೂರಿಗೆ ಹೋಗುವಾಗ ತೊಟ್ಟುಕೊಳ್ಳುತ್ತಿದ್ದ ಕಪ್ಪು ಕೋಟಿನ ಬಲಭಾಗದ ಜೇಬಲ್ಲದು ಭದ್ರವಾಗಿ ಕೂತಿತ್ತು. ಕವಿಗಳ ಕೈಗಂತೂ ಸ್ವರ್ಗವೇ ಬಂದಂತಾಗಿತ್ತು. ಮಳೆ ಬಂದು ನಿಂತೊಡನೆ ಕಾಣುವ ಶುಭ್ರ ಆಕಾಶದಂತೆ ಕವಿಗಳ ಮುಖಭಾವನೆ ಸಂಪೂರ್ಣ ಬದಲಾಗಿತ್ತು.

ಕಾರು ನಿಧಾನಕ್ಕೆ ಕಡಲೂರತ್ತ ಸಾಗಿತ್ತು. ಪಯಣದುದ್ದಕ್ಕೂ ಕವಿಗಳ ಕರಿಕೋಟಿನ ಬಲಜೇಬಿನ ಕತ್ತಲಲ್ಲೇ ಅಡಗಿ ಕೂತು ದಾರಿ ಸವೆಸುತ್ತಿದ್ದ ಆ ಚಾಳೀಸು ಬೆಳಕು ಕಂಡಿದ್ದು ಕಾರು ಅಷ್ಟಮಠಗಳ ಹೊರ ಆವರಣ ಹೊಕ್ಕ ನಂತರವಷ್ಟೆ, ಉಡುಪಿ ದೇವಳದ ಪ್ರಾಂಗಣವೇರಿದ ಕವಿಗಳು ತನ್ನ ಚಾಳೀಸನ್ನು ಕೋಟಿನ ಎಡಜೇಬಿಗಿಳಿಸಿ, ಬಲಜೇಬಲ್ಲಿದ್ದ ಪತ್ನಿಯ ಚಾಳೀಸನ್ನು ಹಾಕಿಕೊಂಡು ಕನಕನ ಕಿಂಡಿಯಲ್ಲಿ ಇಣುಕು ಹಾಕಿದರು – ಮತ್ತೆ ಮತ್ತೆ ಇಣುಕಿ

ಹಾಕಿ ಶ್ರೀಕೃಷ್ಣನನ್ನು ಸಾಕಷ್ಟು ದಿಟ್ಟಿಸಿದರು; ಕಣ್ಣು ಸೋಲುವಷ್ಟು ದಿಟ್ಟಿಸಿದರು. ಕಡಲೂರ ಕಾರು ಅವರಿಗಾಗಿ ಸಾಕಷ್ಟು ಹೊತ್ತು ಹೊರಗಡೆ ಕಾದಿತ್ತು...

ಗೌಡಮಾಸ್ಟ ತನ್ನ ಕತೆಮುಗಿಸುವಷ್ಟರಲ್ಲಿ ಮೂಡಿದ್ದ ತಿಂಗಳು ಸಾಕಷ್ಟು ಮೇಲೇರಿಯಾಗಿತ್ತು. ಕಡಲಂತೂ ಆ ಚಂದ್ರನ ಮೋಡಿಗೆ ಸಿಲುಕಿ ಮೊರೆಯುತ್ತಾ... ಅಬ್ಬರಿಸುತ್ತ ಹಿಗ್ಗ ತೊಡಗಿತ್ತು. ಸಿರಿದೇವಿ ಹಾಗೆಯೇ ಗಂಡನನ್ನು ಅಪ್ಪುತ್ತ ಆ ಕವಿಯನ್ನೂ ಕವಿಪತ್ನಿಯ ಚಾಳೀಸನ್ನೂ ನೆನಪಿಸಿಕೊಳ್ಳ ತೊಡಗಿದ್ದಳು.

ಮೇ 1998

~ * ~ * ~ * ~

***ಆಕರ : 'ಮೀಯುವ ಆಟ' ಕಥಾಸಂಕಲನ – ಎಚ್. ನಾಗವೇಣಿ***

~ * ~ * ~ * ~

## 3.3 ಕುಟುಂಬದಲ್ಲಿ ಪಾತ್ರ ನಿರೀಕ್ಷೆ ಮತ್ತು ಕೌಟುಂಬಿಕ ಹಿಂಸೆ

– ಡಾ. ರೇಣುಕಾ ಎಸ್. ಮಂದ್ರೂಪ

ಸಮಾಜದಲ್ಲಿ ರೂಢಿಯಲ್ಲಿರುವ ಜೀವನಕ್ರಮಕ್ಕೆ ಒಗ್ಗಿಸುವ ಕ್ರಿಯೆ ಸಾಮಾಜೀಕರಣ. ಸಾಮಾನ್ಯವಾಗಿ ಸ್ತ್ರೀ–ಪುರುಷರನ್ನು ಸಾಮಾಜೀಕರಣಕ್ಕೆ ಒಳಪಡಿಸುವ ಸಂಸ್ಥೆಗಳಾಗಿ ಕುಟುಂಬ ಬಹುಮುಖ್ಯ ಪಾತ್ರ ವಹಿಸುತ್ತದೆ. ಸಾಮಾಜೀಕರಣದ ಮೂಲಕ ನಿರ್ಮಾಣಗೊಂಡ ಕುಟುಂಬ ವ್ಯವಸ್ಥೆಯಲ್ಲಿ 'ಹೆಣ್ಣು–ಗಂಡು' ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಪಾತ್ರಗಳ ಹಂಚಿಕೆಯು ಕೂಡಾ ಲಿಂಗಾಧಾರಿತವಾಗಿರುತ್ತದೆ.

ಕುಟುಂಬ ವ್ಯವಸ್ಥೆಯಿಂದಲೇ ಪ್ರಾರಂಭಗೊಳ್ಳುವ ಸಾಮಾಜೀಕರಣ ಪ್ರಕ್ರಿಯೆ ಮಗು ಹುಟ್ಟಿನಿಂದಲೇ ಅಲ್ಲ, ಭ್ರೂಣಾವಸ್ಥೆಯಿಂದಲೇ ಶುರುವಾಗಿ ಸಾವಿನಂಚಿನವರೆಗೂ ಹಂತ ಹಂತವಾಗಿ ಗಂಡು–ಹೆಣ್ಣಿಗೆ ಭಿನ್ನ ಕಾರ್ಯಗಳನ್ನು ಮತ್ತು ಪಾತ್ರಗಳನ್ನು ನಿಗದಿಗೊಳಿಸುವ ಮೂಲಕ ಲಿಂಗಭೇದ ನೀತಿ ಸಮಾಜದಲ್ಲಿ ಇರುವಂತೆ ಮಾಡಲಾಗಿದೆ. ಆಧುನಿಕ ಕುಟುಂಬಗಳು ಸಾಂಪ್ರದಾಯಿಕತೆಯನ್ನು ಬಿಡದೇ ಆಧುನಿಕತೆಗೆ ಒಗ್ಗಿಕೊಂಡೆ ಪರ್ಯಾಯ ಸ್ವರೂಪದ ನಿರೀಕ್ಷೆಗಳನ್ನು ಬಯಸುತ್ತವೆ.

ಆಧುನಿಕ ಕುಟುಂಬ ಅವಿಭಕ್ತ ಕುಟುಂಬದಿಂದ ಬೇರ್ಪಟ್ಟು ಬಂದ ವ್ಯಕ್ತಿಗಳಿಂದಾದ ಸಣ್ಣ ಕುಟುಂಬವಾಗಿದೆ. ವಿಭಕ್ತ ಕುಟುಂಬ ಆಧುನಿಕ ಸಮಾಜದಲ್ಲಿ ಅದರಲ್ಲಿಯೂ ಔದ್ಯೋಗಿಕ ಸಮಾಜದಲ್ಲಿ ಅಧಿಕವಾಗಿ ಇರುವ ಕುಟುಂಬ ವ್ಯವಸ್ಥೆ, ವೈಯಕ್ತಿಕತೆ, ವ್ಯಕ್ತಿಗತ ಸುಖ, ಸ್ವಯಂ ತೃಪ್ತಿ, ಆಸ್ತಿಯ ಹಕ್ಕು, ಬದಲಾದ ಸಾಮಾಜಿಕ ಮೌಲ್ಯಗಳು, ಭೌಗೋಳಿಕ ಹಾಗೂ ಸಾಮಾಜಿಕ ಸಂರಚನೆ ಮೊದಲಾದವುಗಳ ಹೆಚ್ಚಳ ವಿಭಕ್ತ ಕುಟುಂಬಗಳು ದಿನೇ–ದಿನೇ ಹೆಚ್ಚಾಗಲು ಕಾರಣವಾಗಿವೆ.

**ಎಂ.ಎಫ್. ನಿಕಾಫ್** ಅವರ ಪ್ರಕಾರ, **"**ಗಂಡ–ಹೆಂಡತಿ ಮಕ್ಕಳನ್ನೊಳಗೊಂಡಿದ್ದು ಅಥವಾ ಮಕ್ಕಳನ್ನೊಳಗೊಳ್ಳದೆಯೂ ಹೆಚ್ಚು ಕಡಿಮೆ ಸ್ಥಿರವಾಗಿರುವ ಸಂಘವೇ ಆಧುನಿಕ ಕುಟುಂಬ**"**, ಇಲ್ಲಿ ತಂದೆ–ತಾಯಿ ಇರಬಹುದು; ಇಲ್ಲದಿರಬಹುದು.

ಸಾಮಾಜೀಕರಣದ ಮೂಲಕ ಹೆಣ್ಣುಮಕ್ಕಳನ್ನು ಮಹಿಳೆಯನ್ನಾಗಿ ರೂಪಿಸುವ ಕ್ರಿಯೆ ಕುಟುಂಬದಲ್ಲಿ ಮಾಡಲಾಗಿದೆ. 7ನೆಯ ವಯಸ್ಸಿಗೆ ಕುಟುಂಬದ ಸಣ್ಣ–ಪುಟ್ಟ ಕೆಲಸಗಳನ್ನು ಮಾಡಿಸುತ್ತಲೇ ಜವಾಬ್ದಾರಿಯನ್ನು ಹೊರುವಂತೆ ಪ್ರೇರೇಪಿಸಲಾಗುತ್ತದೆ. ವಯಸ್ಸಿಗೂ ಮೀರಿದ ಬಿಂದಿಗೆ

ಹೊತ್ತು ನೀರು ತರುವುದು, ಕಟ್ಟಿಗೆ ಹೊರೆ, ದನಗಳಿಗೆ ಮೇವು ತರುವುದು ಗ್ರಾಮೀಣ ಕೃಷಿ ಕುಟುಂಬಗಳಲ್ಲಿ ಸಾಮಾನ್ಯ. ಇನ್ನು 12ನೆಯ ವಯಸ್ಸಿಗೆಲ್ಲ ಅಡಿಗೆ ಕೆಲಸಕ್ಕೆ ಅಣಿಗೊಳಿಸಲಾಗುತ್ತದೆ. ನಗರಗಳಲ್ಲಾದರೆ ಶಿಕ್ಷಣದ ಜೊತೆ-ಜೊತೆಗೆ ಇಂಥ ಕೆಲಸಗಳನ್ನು ಮಾಡಿಸುವುದಿದೆ. ಕಲಿತಿರುವುಳೆಂಬ ಕಾರಣಕ್ಕೆ ಇಲ್ಲಿ ಯಾವುದೇ ರೀತಿಯಲ್ಲಿ ಸಡಿಲಿಕೆ ಇಲ್ಲದಿರುವುದು. ಮನೆಗೆಲಸಗಳನ್ನು ಮಾಡುತ್ತಾ ಹೆಣ್ಣುಮಕ್ಕಳು ಓದಬೇಕಾಗಿದೆ. ಎಲ್ಲವುಗಳನ್ನು ಕಲಿಯುತ್ತಲೇ ಹಿರಿಯರನ್ನು ಗೌರವಿಸುವುದು, ಅವರ ಆರೋಗ್ಯವನ್ನು ಲಕ್ಷಿಸುವುದು, ತನಗಿಂತ ಚಿಕ್ಕವರಾದ ತಮ್ಮ-ತಂಗಿಯರನ್ನು, ಅತಿಥಿ ಬಂದು ಬಳಗದವರನ್ನು ಆದರಗಳಿಂದ ನೋಡಿಕೊಳ್ಳುವುದನ್ನು ಕಲಿಸಿಕೊಡಲಾಗುತ್ತದೆ. ಇವೆಲ್ಲವನ್ನು ಹೆಣ್ಣುಮಕ್ಕಳು ಪಾಲಿಸಬೇಕೆಂಬ ನಿರೀಕ್ಷೆಗಳು ಇರುತ್ತವೆ. ತಪ್ಪಿದಾಗ ಹಿರಿಯರು ಅವರಿಗೆ ತಿಳಿಸಿ ಹೇಳುವ ತಮ್ಮ ಅನುಭವಗಳ ಮಾರ್ಗದರ್ಶನವನ್ನು ಮಾಡುತ್ತಾರೆ. ಹೆಣ್ಣುಮಗುವಿಗಿರುವ ಇಂತಹ ನಿರೀಕ್ಷೆಗಳು ಗಂಡುಮಗುವಿಗೆ ಇಲ್ಲದಿರುವುದು ಹಿರಿಯರ ಅನುಭವ-ಅನುಕರಣೆಗಳು ಇಂದಿನ ಆಧುನಿಕ ಸಂದರ್ಭದಲ್ಲೂ ವಯಸ್ಸಿಗೂ ಮೀರಿದ ಇಂತಹ ನಿರೀಕ್ಷೆ; ಪಾತ್ರಗಳ ನಿರ್ವಹಣೆಗೆ ಕಾರಣವಾಗಿಸಿರುವುದು ಅವಕಾಶ ವಂಚಿತರಾಗುಳಿಯುವುದು ಅವರ ಭಾವನೆಗಳನ್ನು ಹಿಂಸಿಸಿರುವಂತೆ ಮಾಡಿರುವುದು ಕಂಡುಬರುತ್ತದೆ.

ಹೆಣ್ಣು ಹೊರ ದುಡಿಮೆ ಮಾಡದಿದ್ದರೂ ಸರಿ, ಗಂಡನ ಮನೆಯನ್ನು ಜತನದಿಂದ ನೋಡಿಕೊಳ್ಳಬೇಕೆಂಬುದು ಹಿಂದಿನ ಭಾವನೆ. ಆದರೆ ಇಂದಿನ ಆಧುನಿಕ ಕುಟುಂಬಗಳಲ್ಲಿ ಕುಟುಂಬ ಜವಾಬ್ದಾರಿಯ ಜೊತೆ-ಜೊತೆ ಹೆಣ್ಣು ಹೊರ ದುಡಿಮೆಯನ್ನು ಮಾಡಬೇಕೆಂದು ಬಯಸುತ್ತಾರೆ. ಪಾತ್ರ ಬದಲಾವಣೆಯಾದರು, ಮಹಿಳೆಯ ಕಾರ್ಯಚಟುವಟಿಕೆಗಳು ಹಂಚಿಕೆಯಾಗದಿರುವುದು ಶೇ80ರಷ್ಟು ಕುಟುಂಬಗಳಲ್ಲಿ ಕಾಣುತ್ತೇವೆ. 'ದ್ವಿಮುಖ' ಮಹಿಳೆಯರಿಗೆ ಅನಿವಾರ್ಯವಾಗಿದ್ದು, ಪರಿಣಾಮ ಸಾಕಷ್ಟು ಆರೋಗ್ಯ ಸಮಸ್ಯೆಗಳನ್ನು ತುಟಿಪಿಟ್ಟೆನ್ನದೆ ಎದುರಿಸುತ್ತಿದ್ದಾರೆ. "ಲಲಿತಾಗೆ ಎರಡು ಕೆಲಸಗಳ ಅನಿವಾರ್ಯತೆಯ ಒತ್ತಡದಿಂದಾಗಿ 20-25ದಿನಗಳಿಂದ 'ರಕ್ತಸ್ರಾವ' ಆಗುತ್ತಿದ್ದರೂ ಉಪಚರಿಸಿಕೊಳ್ಳದೇ ಇದ್ದಳು. ಇಂತಹ ಸ್ಥಿತಿಯಲ್ಲೂ 'ಮನೆಗೆಲಸ-ದುಡಿಮೆ'ಗಳೆರಡರ ನಿರ್ವಹಣೆ ಆಕೆಯ ಪಾಲಿನವು, ವಿನಾಯಿತಿ ಎಂಬುದು ಇಲ್ಲ. ಇಂಥಾ ಅವಸ್ಥೆಯಲ್ಲಿ ಓಡಾಟ ಹೆಚ್ಚಾಗಿ ಹೆಚ್ಚಿಗೆ 'ರಕ್ತಸ್ರಾವ'ವಾಗಿರುವುದರಿಂದ ಸೊಂಟನೋವು, ಅಶಕ್ತತೆಗೆ ಒಳಗಾಗುತ್ತಿದ್ದಳು. ಆಸ್ಪತ್ರೆಗೆ ಹೋಗಿ ತೋರಿಸಿಕೊಂಡರೆ ಡಾಕ್ಟರ್ ಲಲಿತಗೆ 'ರೆಸ್ಟ್' ಹೇಳಿದರು. ಆಕೆ ಒಂದು ಗಂಟೆನೂ ರೆಸ್ಟ್ ತೆಗೆದುಕೊಳ್ಳಲಿಲ್ಲ. ಗಂಡನಾದರೂ ಅಷ್ಟೇ ತಾನುಂಟು, ತನ್ನ ಕೆಲಸವುಂಟು, ಆಕೆಗೆ ಸಹಾಯ

ಮಾಡಿದವನಲ್ಲ. ಹೆಚ್ಚಿದ ಅನಾರೋಗ್ಯದ ಕಾರಣ ಲಲಿತಾಳಿಗೆ ಗರ್ಭಚೀಲ ತೆಗೆಸಿಕೊಳ್ಳಲು ಸೂಚನೆ ನೀಡಿದರು ವೈದ್ಯರು. ಆಧುನಿಕ ಮಹಿಳೆಯರ ಕೆಲಸದ ಒತ್ತಡದಿಂದಾಗಿ ಲಲಿತಳಂತಹ ಹಲವಾರು ಹೆಣ್ಣುಮಕ್ಕಳು ಅನಾರೋಗ್ಯದಿಂದ ಬಳಲುತ್ತಿದ್ದು, ಮಧ್ಯ ವಯಸ್ಸಲ್ಲೇ 'ಗರ್ಭಚೀಲ' ತೆಗೆಸಿಕೊಳ್ಳುವುದರ ಪ್ರಮಾಣ ಹೆಚ್ಚಾಗಿರುವುದು ಕಂಡುಬರುತ್ತಿದೆ.

ಹಿರಿಯರಿಲ್ಲದ ಕುಟುಂಬಗಳಲ್ಲಿ ಮಕ್ಕಳ ಶಾಲಾ ರಜಾ ದಿನಗಳಲ್ಲಿ ಹಾಗೂ ಹಬ್ಬ ಹರಿದಿನ, ಯಾವುದೇ ಶುಭಕಾರ್ಯ ಸಮಾರಂಭಗಳಲ್ಲಿ ಸಂದರ್ಭಾನುಸಾರವಾಗಿ ಹೆಣ್ಣು ಮಕ್ಕಳಿಗೆ ಸಂಸ್ಕೃತಿ–ಸಂಸ್ಕಾರಗಳ ಕುರಿತು ತಿಳಿಸಿ ಕೊಡುವುದು ಇಂದಿನ ಆಧುನಿಕ ಕುಟುಂಬಗಳು ಹೊರತಾಗಿಲ್ಲ. ಎಲ್ಲವೂ ನಿರೀಕ್ಷೆಯೇ. ಗಂಡು ಮಕ್ಕಳಿಗಾದರೆ ಮನೆಗೆಲಸದಲ್ಲಿ ಭಾಗವಹಿಸುವಿಕೆಗೆ ನಿಷೇಧವಿದೆ. ಆತ 'ಗಂಡಸು', ಯಜಮಾನ, ಅಧಿಕಾರ, ಹಕ್ಕುಗಳನ್ನು ಹೊಂದುವವನು, ತಂದೆಯ ಅನುಕರಣೆಯಲ್ಲೇ ಬೆಳೆಯಬೇಕೆಂಬುದಿದೆ. ಗಂಡುಮಕ್ಕಳು ಮನೆಕೆಲಸ ಮಾಡಬಾರದು ಕಸಬರಿಗೆ ಹಿಡಿಯಬಾರದು, ಪಾತ್ರೆ–ಬಟ್ಟೆ ತೊಳೆಯಬಾರದು, ಊಟವಾದ ಮೇಲೆ ತನ್ನ ತಟ್ಟೆ ತೆಗೆಯಬಾರದು ಆ ಕೆಲಸ ಹೆಣ್ಣುಮಕ್ಕಳೆ ಮಾಡಬೇಕೆಂಬುದು ಚಿಕ್ಕಂದಿನಲ್ಲೇ ಕರಗತವಾಗಿಸಿಬಿಟ್ಟಿರುತ್ತವೆ. ಅದನ್ನು ಮುಂದುವರೆಸಿ ಕೊಂಡು ಹೋಗುವುದರ ಮೂಲಕ ಆಧುನಿಕ ಕುಟುಂಬಗಳಲ್ಲಿ ತಾಕಲಾಟಗಳಾಗಲು ಕಾರಣವಾಗಿವೆ.

ಇಂತಹ ಲಿಂಗಾಧಾರಿತ ಶ್ರಮವಿಭಜನೆಯು ಹೆಣ್ಣುಮಕ್ಕಳಲ್ಲಿ ಕೀಳುಭಾವನೆಯನ್ನು ಗಂಡಿನಲ್ಲಿ ಆತ್ಮವಿಶ್ವಾಸ ಹಾಗೂ ಮೇಲೆಂಬ ತರತಮ ಭಾವವನ್ನು ಪೋಷಿಸುತ್ತದೆ. ಇದೇ ಪಿತೃ ಪ್ರಧಾನತೆ, ಚಿಕ್ಕಂದಿನಿಂದಲೇ ಗಂಡುಮಕ್ಕಳು ಹೆಣ್ಣುಮಕ್ಕಳನ್ನು ಈ ರೀತಿಯಾಗಿ ನಡೆಸಿಕೊಳ್ಳುವುದರ ಮೂಲಕ ಅವಳ ಕೆಲಸಗಳೇನಿದ್ದರೂ ಮನೆಗೆ ಸೀಮಿತ, ಹೆಣ್ಣು ಎಂದರೆ ಇಷ್ಟೇ ಎಂಬ ಧೋರಣೆಯಿಂದಾಗಿ ಅವರು ಹೆಂಡತಿ, ಹೆಣ್ಣುಮಕ್ಕಳ ಮೇಲೆ ತಮ್ಮ ಅಧಿಕಾರ, ಹಕ್ಕನ್ನು ಸ್ಥಾಪಿಸುತ್ತಾರೆ. ಮುಂದುವರೆದು ಹಿಂಸಾ ಕೃತ್ಯಗಳಿಗೆ ಕಾರಣವಾಗಿರುವುದನ್ನು ಸಾಕಷ್ಟು ಉದಾಹರಣೆಗಳು ನಿರೂಪಿಸುತ್ತವೆ ಎಂಬುದನ್ನು ರೇಖಾಳ ನಿದರ್ಶನ ವ್ಯಕ್ತಪಡಿಸುತ್ತದೆ–ರೇಖಾ ಉನ್ನತ ಶಿಕ್ಷಣ ಪಡೆದ ಹೆಣ್ಣುಮಗಳು. ಕುಟುಂಬಕ್ಕಾಗಿ ತನ್ನ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ಒಂದಲ್ಲಾ ಒಂದು ಕೆಲಸದಲ್ಲಿ ತೊಡಗಿಕೊಂಡೇ, ಇರುವ ಸಂಬಳದಲ್ಲಿಯೇ ನೆಮ್ಮದಿ ಕಾಣುತ್ತ ಜೀವನ ಸಾಗುಮಾಡುವವಳು. ಇದ್ದವರಾದರೂ ಗಂಡ ಮಹಾ ಜಿಪುಣ. ತನ್ನ ಸುಖ, ಶಾಂತಿಗೂ ಲೆಕ್ಕ ಹಾಕುವ ಸ್ವಭಾವ ಆತನದು.

ಮದುವೆ ಅನಂತರದಲ್ಲಿ ಕುಟುಂಬವನ್ನು ಜತನವಾಗಿ ನೋಡಿಕೊಳ್ಳುತ್ತ ಉನ್ನತ ಪದವಿ ಪಡೆದು, ಕೆಲಸಕ್ಕೆ ಸೇರಿಕೊಂಡದ್ದು. ಮದುವೆ ಮುಂಚೆ ರೇಖಾಳಿಗೆ ಕಲಿಸುವ ಕರಾರು ಮಾತಾಗಿತ್ತು. ಆದರೆ ಮದುವೆಯ ಆನಂತರದಲ್ಲಿ ಕುಟುಂಬದವರೆಲ್ಲರೂ ಸೇರಿ ಕಲಿಯಬಾರದೆಂದು ಒತ್ತಡದ ಕುತಂತ್ರಗಳು ನಡೆದವು. ಒಂದು ಗಂಡು ಮಗುವಿನ ತಾಯಿಯೂ ಆದಳು. ಓದುವ ಹಸಿವು ಮಾತ್ರ ಇಂಗಿರಲಿಲ್ಲ. ಬಿಡದ ಛಲ ಆಕೆಯನ್ನು ಉನ್ನತ ಪದವಿ ಪಡೆಯುವಂತೆ ಮಾಡಿತ್ತು. ಸಂಸಾರ ಎನ್ನುವುದು ಗಂಡ–ಹೆಂಡತಿ ಇಬ್ಬರಿಗೂ ಸಂಬಂಧಿಸಿದ್ದು, ಆದರೆ ಪಿತೃಪ್ರಧಾನತೆ ರೂಪಿಸಿರುವುದು ಹೆಣ್ಣೊಬ್ಬಳೇ ಕಾರಣಿಕರ್ತಳೆಂದು. ಹೀಗಾಗಿ ಆಗಾಗ ಕುಟುಂಬದಲ್ಲಿ ಕ್ಷುಲ್ಲಕವೆನಿಸುವ ಜಗಳಗಳು ಸಂಭವಿಸಿ, ಇಬ್ಬರ ನಡುವೆ ಮನಸ್ತಾಪ–ಘರ್ಷಣೆಗಳು ತಲೆದೋರುತ್ತಿದ್ದವು. ಮಾನಸಿಕ ಹಿಂಸೆಯನ್ನು ಮೀರಿ ದೈಹಿಕ ಹಿಂಸೆಗೂ ತಲುಪುತ್ತಿತ್ತು. ಮಕ್ಕಳಿಗೆ ಪಾಠ ಮಾಡುವ, ಕೌಟುಂಬಿಕ ಸಮಸ್ಯೆಗಳೆಂದು ಹೇಳಿಕೊಂಡು ಬಂದವರಿಗೆ ಸಮಾಲೋಚನೆ ನಡೆಸುವ ರೇಖಾಳಿಗೆ ತನ್ನದೇ ಇಂಥ ಪರೀಕ್ಷೆ ಪಾಸು ಮಾಡುವುದು ಅಸಾಧ್ಯವೆನಿಸುತ್ತಿತ್ತು. ಪ್ರತಿ ಬಾರಿ ಆಕೆಯೇ ಹಿಂಜರಿಯುತ್ತಿದ್ದಳು ಕಾರಣವಿಷ್ಟೇ ಮಗನ ಮೇಲೆ ಇದಾವುದರ ಪರಿಣಾಮ ಬೀರದಿರಲಿ ಎಂಬುದು, ಗಂಡನಲ್ಲಿ "ನಾನು, ನನ್ನದು" ಎಂಬವು ಬೇರೂರಿದ್ದವು. ಕುಟುಂಬವೆನ್ನುವ ಸಂಸಾರದಲ್ಲಿ ಸಾಮರಸ್ಯ, ಸೌಹಾರ್ದತೆಗಳಿಗೆ ಜಾಗವಿಲ್ಲದಾಗ "ಅಹಂ, ಸಂಶಯಗಳು ಸುಲಭವಾಗಿ ತಮ್ಮ ಸ್ಥಾನವನ್ನು ಆಕ್ರಮಿಸಿಕೊಂಡುಬಿಡುತ್ತವೆ. ಬಿ.ಪಿ, ಶುಗರ್ ಥರಾ. ಇವುಗಳಿಂದ ಹೊರಬರುವುದು ಕಷ್ಟಸಾಧ್ಯ. ಸದಾ ಹೆಣ್ಣನ್ನು ಹೆದರಿಸಿ, ಬೆದರಿಸಿ ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಗಂಡಿನ ಪ್ರವೃತ್ತಿ, ಸಮಾಜ ರಚನೆಯೊಳಗೆ ಆಕೆಯನ್ನು 'ಅನ್ಯ' ಎಂದು ಪರಿಗಣಿಸಲಾಗಿದೆ. ಬರೀ ಹೆಣ್ಣಿನ ನಿರೀಕ್ಷೆ ಬಯಸುವ ಆಧುನಿಕ ಸಮಾಜ 'ನನ್ನ ಮನೆ, ನನ್ನ ಕುಟುಂಬ'ವೆಂದು ದುಡಿಯುವ ಹೆಣ್ಣಿನ ಮನಸ್ಥಿತಿಯನ್ನು ಅರಿಯುವ ಭಾವ ಗಂಡಿನಲ್ಲಿ ಬದಲಾವಣೆ ಆಗದೇ ಯಾವುದೂ ಸಾಧ್ಯವಿಲ್ಲ. ಇದು ರೇಖಾಳದೊಂದೆ ಕಥೆಯಲ್ಲ, ಉನ್ನತ ಶಿಕ್ಷಣ, ಆರ್ಥಿಕ ಸಾಮರ್ಥ್ಯವಿರುವ ಅದೆಷ್ಟೋ ಹೆಣ್ಣುಮಕ್ಕಳು ಇಂಥಾ ಇಕ್ಕಟ್ಟಿನ ಪರಿಸ್ಥಿತಿಗೆ ಸಿಲುಕಿ ನರಳುತ್ತಿದ್ದಾರೆ. ಸಮಾಧಾನಕ್ಕೆ ಹೇಳಿಕೊಂಡವರು ಬೆರಳೆಣಿಕೆಯಷ್ಟು ಕಂಡುಬಂದರೆ; ಮೌನವಾಗಿ ಸಂಕಟ ಅನುಭವಿಸುವವರು ಅದೆಷ್ಟೋ. ಸದಾ ನಗುತ್ತಿರುವವರನ್ನು ಕಂಡು ಅವರಿಗೇನು, ಯಾವ ಕಷ್ಟ, ನೋವು ಇಲ್ಲವೆಂದು ತಕ್ಷಣದಲ್ಲಿಯೇ ನಿರ್ಧರಿಸಿಬಿಡುವವರಿಗೆ ಅವರ ಹಿಂದೆ ಇರುವ ನೋವಿನ ಸಣ್ಣ ಗುರುತು ಕೂಡ ಸಿಗುವುದಿಲ್ಲ. ಕೆಲವರು "ಖಿನ್ನತೆ"ಯಂತಾ ಮಾನಸಿಕ ರೋಗಕ್ಕೆ ಒಳಗಾಗಿದ್ದಾರೆ, ಒಳಗಾಗುತ್ತಲೇ

ಇದ್ದಾರೆ. "ಹೆಣ್ಣಿನ ಪರಾಧೀನತೆಯ ಮತ್ತು 'ಪರಕೀಯ ಪ್ರಜ್ಞೆಯ' ಸಂಕೇತಗಳೇ ಕಾರಣ, ಸ್ತ್ರೀಶೋಷಣೆಯನ್ನು ಕೊನೆಗಾಣಿಸಲು ಮಾಡಬೇಕಾದ ಮೊದಲ ಯತ್ನವೆಂದರೆ ಆ ಶೋಷಣೆಗೆ ಕಾರಣವಾಗುವಂಥ ಎಲ್ಲ ಅಂಶಗಳನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದು. ಸ್ತ್ರೀಶೋಷಣೆಯ ಮೂಲಗಳು ಸ್ತ್ರೀಯ ಮನಸ್ಸಿನಲ್ಲಿ, ಸಾಮಾಜಿಕ ಸಂಸ್ಥೆಗಳಲ್ಲಿ, ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಅಡಗಿವೆ. ಈ ಎಲ್ಲ ಮೂಲಗಳನ್ನು ಶೋಧಿಸಿ, ನಾಶಪಡಿಸುವ ಮೂಲಕಮಾತ್ರ ಸ್ತ್ರೀಶೋಷಣೆಯನ್ನು ಎದುರಿಸಲು ಸಾಧ್ಯವೆನ್ನುವುದು" ಸ್ತ್ರೀವಾದಿ ಚಿಂತಕಿ ಜ್ಯಾಗರಳ ಅಭಿಪ್ರಾಯ. ಇಂಥ ಸ್ಥಿತಿಯಿಂದ ಹೊರಬರುವ ಹೊಸತಂತ್ರಗಳನ್ನು ಹೆಣ್ಣು ರೂಪಿಸಿಕೊಳ್ಳುವ ಅಗತ್ಯತೆಯೂ ಪ್ರಸ್ತುತಕ್ಕೆ ತುಂಬಾ ಮುಖ್ಯ

'ತಾಯಿಯಂತೆ ಮಗಳು, ನೂಲಿನಂತೆ ಸೀರೆ' ಎಂಬ ನಾಣ್ನುಡಿಯಂತೆ ಹೆಣ್ಣನ್ನು ಪಿತೃಸಂಸ್ಕೃತಿಗೆ ತಕ್ಕಂತೆ ಸಿದ್ಧಗೊಳಿಸುವ ಜವಾಬ್ದಾರಿ ತಾಯಿಯದು. ತಾಯಿ ಮಗಳನ್ನು ಸಮಾಜದ ನಿಯಮಗಳಿಗೆ ತಕ್ಕಂತೆ ನಡೆದುಕೊಳ್ಳುವಂತೆ ಮಾಡುವಲ್ಲಿ ಆ ಪಾತ್ರಕ್ಕೆ ಗೌರವ ದಕ್ಕುತ್ತದೆ. ಸಮಾಜದಲ್ಲಿ ಮಾನ್ಯವಾಗುತ್ತಾಳೆ. ಪುರುಷಪ್ರಧಾನ ವ್ಯವಸ್ಥೆ ಹೆಣ್ಣನ್ನು ಎರಡು ಬಗೆಯಲ್ಲಿ ನೋಡುತ್ತಿದೆ. ಒಂದೆಡೆ ವೈಭವೀಕರಸಿ, ಇನ್ನೊಂದೆಡೆ ಕಡೆಗಣಿಸಲಾಗುತ್ತಿದೆ. ತಾಯಿಯನ್ನು ವೈಭವೀಕರಿಸುವ ಮತ್ತು ಹೆಂಡತಿ ಪಾತ್ರವನ್ನು ಮಾಯೆಯಾಗಿ ಕಾಣಿಸುವ ಮೂಲಕ ಹೆಣ್ಣನ್ನು ಹೆಣ್ಣಿಂದ ವಿಭಾಗಿಸುವ ಕ್ರಮವಾಗಿ ಕಾಣಿಸುವಂತೆ ಮಾಡುತ್ತದೆ.

ಕುಟುಂಬವೆಂಬ ಖಾಸಗಿ ವಲಯದಲ್ಲಿ ಸ್ತ್ರೀಯರ ನಡುವಿನ ಸಂಬಂಧಗಳನ್ನು ಸಾಂಪ್ರದಾಯಿಕ ನೆಲೆಯಲ್ಲಿಯೇ ನೋಡಲಾಗುತ್ತದೆ. ಅತ್ತೆ–ಸೊಸೆ' ಸಂಬಂಧಗಳಲ್ಲಿ 'ಹೆಣ್ಣಿಗೆ ಹೆಣ್ಣೆ ಶತ್ರು'ವೆಂದು ಹೇಳುತ್ತಾ 'ಶತೃತ್ವ' ದೃಷ್ಟಿಯಿಂದಲೇ ಸಂಬಂಧಗಳಿರುವಂತೆ ಮಾಡಲಾಗಿದೆ. ಸಣ್ಣ ವಯಸ್ಸಿನಿಂದಲೇ 'ಅತ್ತೆ' ಎಂಬುವವಳು 'ವೈರಿ' ಎಂಬಂತೆ ಬಿಂಬಿಸಲಾಗುತ್ತದೆ. 'ಅತ್ತೆ' ಸ್ಥಾನಕ್ಕೆ ಮಹಿಳೆ ಬಂದಾಕ್ಷಣ ಅವಳಲ್ಲಿರುವ ತಾಯಿ ಮಾಯವಾಗುತ್ತಾಳೆಯೇ? ಇಂಥ ಮಿಥ್ಯೆಗಳು ಹೆಣ್ಣನ್ನು ಕೀಳಾಗಿಸುತ್ತದೆ. ಹೀಗಾಗಿ ಅತ್ತೆ–ಸೊಸೆ; ತಾಯಿ–ಮಗಳಂತೆ ಇದ್ದರೂ ಅದನ್ನು ಕಲ್ಪಿಸಿಕೊಳ್ಳದ ಮನಸ್ಸುಗಳೇ ಹೆಚ್ಚು. ಅನ್ಯೋನ್ಯತೆಗೆ ಅವಕಾಶವೇ ನೀಡುವುದಿಲ್ಲ. ಹೀಗಾಗಿ ಬದಲಾದ ಸಮಾಜ ವ್ಯವಸ್ಥೆಯಲ್ಲಿಯೂ ಬದಲಾವಣೆಯಾದಂತೆ ಕಂಡರೂ ಕೌಟುಂಬಿಕ ಚೌಕಟ್ಟಿಗೆ ಮಾತ್ರ ಸೀಮಿತವಾಗಿರುತ್ತದೆ.

ತನ್ನೆಲ್ಲಾ ಆಸೆ, ಆಕಾಂಕ್ಷೆಗಳನ್ನು ಬದಿಗಿಟ್ಟು ಕುಟುಂಬವೇ ತನ್ನ ಸರ್ವಸ್ವವೆಂದು ನಂಬಿ ಗಂಡ ಕುಡುಕ, ಲಂಪಟ, ಕಿರುಕುಳ ನೀಡುತ್ತಿದ್ದರೂ

ದುಶ್ಚಟವುಳ್ಳವನಾಗಿದ್ದರೂ ಪತಿಯೇ ಪರದೈವವೆಂದು ಆತನಿಗೆ ವಿಧೇಯಳಾಗಿರಬೇಕೆಂದು ನಿರೀಕ್ಷಿಸುವುದಿದೆ. ಆಕೆಯೋ ದುಡಿದು ಕುಟುಂಬಕ್ಕೆ ಅನ್ನದಾತಳಾಗಿದ್ದರೂ ಆತನೊಂದಿಗೆ ಬದುಕು ನಡೆಸುವುದೇ ಸುಖ ಸಂಸಾರದ ಮಾದರಿ, ಯಾವುದೇ ಕಾರಣಕ್ಕೂ ಗಂಡನಮನೆಯ ಹೊಸಿಲು ದಾಟಬಾರದೆನ್ನುವ ನಿಯಮ ಹೆಣ್ಣಿಗೆ ಮಾತ್ರ ಹಾಕಿಕೊಟ್ಟಿದೆ. ಆದರೆ ಆಧುನಿಕ ಶಿಕ್ಷಣ, ಉದ್ಯೋಗ ಪಡೆದ ಮಹಿಳೆಯರು ಲಂಪಟ, ಕುಡುಕ ಗಂಡನೊಂದಿಗೆ ಬಾಳ್ವೆ ಮಾಡುವುದು ಅಸಾಧ್ಯವೆಂದು ಮನದಟ್ಟಾದಾಗ ವಿಚ್ಛೇದನಕ್ಕೆ ಮುಂದಾಗುತ್ತಿದ್ದಾರೆ. ಇದಕ್ಕೊಂದು ನಿದರ್ಶನವಾಗಿ ಭಾವನಾ ಪ್ರಸಂಗ ಹೀಗಿದೆ: 34ರ ಭಾವನಾ, ಪಾಲಕರ ವಿರೋಧದೊಂದಿಗೆ ನರೇಶನನ್ನು ಪ್ರೀತಿಸಿ ಅಂತರಜಾತಿ ವಿವಾಹವಾಗಿದ್ದಳು. ನರೇಶ; ಓದು ತಲೆಗೆ ಹತ್ತಲಿಲ್ಲವೆಂದು ಮುಂದೆ ಓದಿನ ಗೋಜಿಗೆ ಹೋಗಲಿಲ್ಲ. ಆಕೆ ಓದಿನಲ್ಲಿ ಮುಂದು, ಉನ್ನತ ಶಿಕ್ಷಣ ಪಡೆದು ತನ್ನ ಅರ್ಹತೆಗೆ ತಕ್ಕಂತಾ ಕೆಲಸವನ್ನು ಪಡೆದುಕೊಂಡಳು. ಮನೆ ಖರ್ಚು ಆಕೆಯೇ ನಿಭಾಯಿಸುತ್ತಿದ್ದಳು. ಆತನ ದುಡಿಮೆ ಆತನ ಓಡಾಟಕ್ಕೆ ಸಾಕಾಗುತ್ತಿರಲಿಲ್ಲ. ಆತನ ದುಡಿಮೆಯ ಮೇಲೆ ಭಾವನಾ ಯಾವತ್ತಿಗೂ ಅವಲಂಬಿತಳಾಗಿರಲಿಲ್ಲ. ಇಡೀ ಕುಟುಂಬವನ್ನೇ ಆಕೆ ಸಲುಹುತ್ತಿದ್ದಳು. ಭಾವನಾಳ ಪ್ರತಿ ಹೆಜ್ಜೆಗೂ ಅತ್ತೆಯ ಸಾಥ್ ಸದಾ ಇರುತ್ತಿತ್ತು. ಹೀಗಾಗಿ ಭಾವನಾ ಗಂಡನ ಚಟಗಳ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ. ಆಕೆಗೆ ಸಾಮಾಜಿಕ ಕಾರ್ಯದಲ್ಲಿ ಅತೀವ ಆಸಕ್ತಿ, ಹೀಗಾಗಿ ತನ್ನ ಕೆಲಸಗಳ ಜೊತೆಗೆ ಇತರರಿಗೂ ಸಹಾಯ ಮಾಡುತ್ತಿದ್ದಳು. ಅವಳ ಕಾರ್ಯ ಚಟುವಟಿಕೆಗಳು ಗಂಡನಿಗೆ ಆಕೆಯ ಬಗ್ಗೆ ಸಂಶಯಪಡುವಂತೆ ಮಾಡಿದವು, "ನಾನು ನಿನ್ನ ಜೊತೆ ಬಾಳ್ವೆ ಮಾಡಬೇಕೆಂದರೆ; ಗಂಡಸರ ಜೊತೆ ಮಾತಾಡಕೂಡದು, ಫೋನಿನಲ್ಲಿ ಮಾತಾಡಕೂಡದು, ಭೇಟಿಯಾಗ ಕೂಡದು" ಎಂಬಂತಹ ಷರತ್ತುಗಳನ್ನು ಹಾಕಿದ್ದ. ಇದರಿಂದಾಗಿ ಇಬ್ಬರ ನಡುವೆ ಮನಸ್ತಾಪ, ಘರ್ಷಣೆಗಳು ಸೃಷ್ಟಿಯಾಗಿ ಕುಟುಂಬದಲ್ಲಿ ಅಶಾಂತಿ ಮೂಡಿತು. ಆತನೊಂದಿಗೆ ಬಾಳ್ವೆ ನಡೆಸುವುದು ಕಷ್ಟವಾಗಿ ಆತನಿಂದ ದೂರವಾಗಿ ತವರಿನಲ್ಲಿ ಮಗಳೊಂದಿಗೆ ಬದುಕು ಕಂಡುಕೊಂಡಿದ್ದಾಳೆ. ಮಹಿಳೆ ಪುರುಷರ ಇಂಥ ನಿರೀಕ್ಷೆಗಳನ್ನು ಮೀರಿ ನಿಲ್ಲುವುದಷ್ಟೇ ಅಲ್ಲ ತಮ್ಮ ಬದುಕನ್ನು ದೌರ್ಜನ್ಯದಿಂದ ಮುಕ್ತಗೊಳಿಸಿಕೊಳ್ಳಬೇಕಾಗಿದೆ.

ಮನೆಯ ಒಳಗೂ ಹೆಣ್ಣು ಎಲ್ಲಿ, ಹೇಗೆ ಕುಳಿತುಕೊಳ್ಳಬೇಕು, ಗಟ್ಟಿ ಧ್ವನಿಯಲ್ಲಿ ಮಾತಾಡಬಾರದು, ನಗಬಾರದು. ನಡೆಯುವಾಗಲೂ ಸದ್ದಾಗದಂತೆ ನಡೆಯಬೇಕು. ಪರಪುರುಷರೊಂದಿಗೆ ಸಲಿಗೆಯಿಂದ ಇರಬಾರದು, ಹೀಗೆ ಇರುವವರನ್ನು 'ಬಜಾರಿ' ಹೆಣ್ಣು ಎಂಬ ಅಪವಾದಕ್ಕೆ ಗುರಿಮಾಡುವುದು ಇದೆ.

ಮನೆಯ ಪಡಸಾಲೆ(ಹಾಲ್)ಯಲ್ಲಿ ಮಲಗಬಾರದು, ಯಾರಾದರೂ ಮನೆಗೆ ಬಂದರೆ ಒಳಗಡೆ ಹೋಗಬೇಕೆಂದು 'ಕತ್ತನ್ನು ತಿರುಗಿಸಿ' ಸೂಚಿಸುವುದನ್ನು ಹೆಣ್ಣುಮಕ್ಕಳು ಸಂಜ್ಞೆಯಿಂದ ಅರಿಯಬೇಕು. ಇದನ್ನು ಪಾಲಿಸದಿದ್ದಾಗ "ಸೂಕ್ಷ್ಮವಾಗಿ ಹೇಳಿದರೆ ತಿಳಿಯುವುದಿಲ್ಲಾ" ಎನ್ನುವ ಮೂಲಕ ಬಂದವರೆದುರಿಗೆ ಅಪಮಾನಗೊಳಿಸುವ ಪ್ರಸಂಗಗಳುಂಟು, "ಅಳುಮಾರಿ ಗಂಡಸಿರಬಾರದು; ನಗೆಮಾರಿ ಹೆಂಗಸಿರಬಾರದು" ಎಂಬ ಗಾದೆ ಮೂಲಕ ಹೆಣ್ಣುಮಕ್ಕಳನ್ನು ನಿರ್ಬಂಧಿಸುವ ಕಾರ್ಯ ಪುರುಷ ನಿರ್ಮಿತ ಸಮಾಜದಲ್ಲಿ ಪೂರ್ವನಿಯೋಜಿತ ವಿಧಾನಗಳ ಮೂಲಕ ಹೆಣ್ಣಿನ ಜೀವನವನ್ನು ಮಿತಿಗೊಳಿಸುವುದನ್ನು ಕಾಣುತ್ತೇವೆ.

ಜೀವನದುದ್ದಕ್ಕೂ ತನ್ನ ಕುಟುಂಬಕ್ಕಾಗಿ ಶ್ರಮಿಸುತ್ತಿರುವ ಹೆಣ್ಣು ಹಿಂಸೆ–ದೌರ್ಜನ್ಯಗಳನ್ನು ಸಹಿಸಿಕೊಂಡು ಬದುಕಬೇಕೆಂಬ ಒತ್ತಡ ಅವಳ ಮೇಲಿದೆ. ಸಮಾಜದ ನಿರೀಕ್ಷೆಯೂ ಇದನ್ನೇ ಬಯಸುತ್ತದೆ. ಕಷ್ಟ ಬಂದಾಗ ತವರಿಗೆ ಬಾರದಂತೆ ಮಾಡುವ ಮನಸ್ಥಿತಿ ರೂಪಿಸುವ ಅನೇಕ ತ್ರಿಪದಿ ಗಾದೆಗಳನ್ನು ಕಟ್ಟಿ ಮೌಖಿಕವಾಗಿ ಪ್ರಸರಣಗೊಳಿಸುವ ಕ್ರಿಯೆಯು ಕೂಡ ಪಿತೃಪ್ರಧಾನ ಸಂಸ್ಕೃತಿಯನ್ನು ಯಥಾಸ್ಥಿತಿಯಲ್ಲಿ ಮುಂದುವರೆಯುವಂತೆ ಮಾಡುವುದಾಗಿದೆ. ಆಕೆಯ ಹಕ್ಕುಗಳೇನಿದ್ದರೂ ಮೆಟ್ಟಿದ ಮನೆಯಲೆಂಬುದು ರೂಢಿಯಲ್ಲಿದೆ. ಹೀಗಾಗಿಯೇ ಕಷ್ಟ ಬಂದಾಗ ಸಹಾಯವಾಗಲೆಂದು ಸಂವಿಧಾನದ ಪ್ರಕಾರ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ನೀಡಿದರೂ ಅದನ್ನು ಪಡೆದುಕೊಳ್ಳಲಾಗದ ಸಾಮಾಜಿಕತೆ ರೂಢಿಯಲ್ಲಿದೆ. ಆಕೆಯನ್ನು ಭಾವನಾತ್ಮಕವಾಗಿಯೇ ಬದುಕುವಂತೆ ಮಾಡಿದೆ. ಪೋಷಕರು ಸ್ವ ಇಚ್ಛೆಯಿಂದ ಹೆಣ್ಣುಮಕ್ಕಳಿಗೆ ಆಸ್ತಿ ನೀಡಲು ಎಂದು ಮುಂದಾಗುತ್ತಾರೋ ಅಂದೇ ಮಹಿಳೆಯರ ಮೇಲೆ ನಡೆಯುತ್ತಿರುವ ಸಾಮಾಜಿಕ ಪಿಡುಗು 'ವರದಕ್ಷಿಣೆ'ಯನ್ನು ಬೇರು ಸಮೇತ ಕಿತ್ತೊಗೆಯಲು ಸಾಧ್ಯವಾಗುವುದು, ಯಾಕೆಂದರೆ ಪೋಷಕರ ಒಪ್ಪಿಗೆ ಮೇರೆಗೆ 'ವರದಕ್ಷಿಣೆ' ರೂಢಿಯಲ್ಲಿದೆ. ಅವರು ನಿರ್ಧಾರ ಮಾಡದೆ ವರದಕ್ಷಿಣೆ ಪದ್ಧತಿ ಹೋಗಲಾರದು. ವರದಕ್ಷಿಣೆ ಮತ್ತು ವೈವಾಹಿಕ ಹಿಂಸೆಗಳನ್ನು ತಡೆಯಬೇಕಾದರೆ ಮಹಿಳೆಯರಿಗೆ ಆಸ್ತಿ ಹಕ್ಕಿನ ಅಗತ್ಯವಿದೆ. ಅತಂತ್ರತೆಯನ್ನು ಹೋಗಲಾಡಿಸಿ ಅವರಲ್ಲಿ ಭಯವನ್ನು ಮೀರಿಕೊಳ್ಳುವ ಹಾಗೂ ಬದುಕು ಕಟ್ಟಿಕೊಳ್ಳುವ ಆತ್ಮವಿಶ್ವಾಸವನ್ನು ನೀಡುತ್ತದೆ. 'ಅನುಮಾನ' ಇದೊಂದು ಮಾನಸಿಕ ಸಮಸ್ಯೆ. ಇದಕ್ಕೆ ಮೂಲ ಕಾರಣ ಪರಸ್ಪರ ಅರಿವಿನ ಕೊರತೆ, ಅಪನಂಬಿಕೆ ಮತ್ತು ಕೌಟುಂಬಿಕ ಹಿನ್ನೆಲೆ. ಹೆಣ್ಣು ಭೋಗಕ್ಕೆ ಇರುವವಳು ಯಾರಾದರೂ ಸರಿ ಎಂಬ ಸನಾತನ ಸಂಪ್ರದಾಯ ಮನಸ್ಥಿತಿ, ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳದಿರುವುದು.

ಆಧುನಿಕ ಸಮಾಜದಲ್ಲಿ ನಾಲ್ಕು ಗೋಡೆಗಳ ಮಧ್ಯೆ 'ಪಾತ್ರ ನಿರೀಕ್ಷೆ ಮೂಲಕ ಹೆಣ್ಣಿನ ಮೇಲೆ ದೌರ್ಜನ್ಯ ನಡೆಯುತ್ತಿರುವಾಗಲು, ಹೊರ ಜಗತ್ತಿಗೆ ಅವು ಮರ್ಯಾದೆ ಪ್ರಶ್ನೆಗಳಾಗುಳಿದಿವೆ. ಮರ್ಯಾದೆ ಪ್ರಶ್ನೆಗಳು ಗಂಡಿಗೂ ದಕ್ಕಬೇಕೆಂದರೆ, ತಿಳಿವಳಿಕೆ ಹಂತದಲ್ಲಿಯೇ 'ಲಿಂಗ ಸೂಕ್ಷ್ಮತೆ' ಅರಿವು ಗಂಡುಮಕ್ಕಳಿಗೆ ಮೂಡಿಸುವ ಕೆಲಸ ತುರ್ತಾಗಿ ಆಗಬೇಕು. ಆಗಲೇ 'ಹಿಂಸೆ ಮುಕ್ತ ಸಮಾಜ' ನಿರ್ಮಾಣ ಮಾಡಲು ಸಾಧ್ಯವಾಗುವುದು.

~ * ~ * ~ * ~

*ಆಕರ : ಅರುಹು ಕುರುಹು, ಸಂಚಿಕೆ–34, ಕನ್ನಡ ತ್ರೈಮಾಸಿಕ,*
*ಸಂಪಾದಕರು : ಎಚ್.ಎಸ್. ಉಮೇಶ*

~ * ~ * ~ * ~

## ಓದುಪಠ್ಯ : 3.4 ನನ್ನ ತಾಯಿ

**– ಎ.ಪಿ.ಜೆ. ಅಬ್ದುಲ್ ಕಲಾಂ**
**ಅನುವಾದ: ಜಿ.ಕೆ. ಮಧ್ಯಸ್ಥ**

ಅನೇಕ ವರ್ಷಗಳ ಹಿಂದೆ ನಾನು 'ನನ್ನ ತಾಯಿ' ಎಂಬ ಶೀರ್ಷಿಕೆಯ ಒಂದು ಪದ್ಯವನ್ನು ಬರೆದೆ. ಅದರ ಮೊದಲ ಸಾಲುಗಳು ಹೀಗಿವೆ:

ಸಮುದ್ರದ ತೆರೆಗಳು, ಬಂಗಾರದ ಮರಳು,
ಯಾತ್ರಿಕರ ಭಕ್ತಿ, ರಾಮೇಶ್ವರದ ಮಸೀದಿ ರಸ್ತೆ,
ಇವೆಲ್ಲವೂ ವಿಲೀನವಾದರೆ, ನನ್ನ ತಾಯಿ!

ನನ್ನ ಬಾಲ್ಯಕಾಲದ ವರ್ಷಗಳು ರಾಮೇಶ್ವರದ ಮತ್ತು ನನ್ನ ತಂದೆ ಹಾಗೂ ತಾಯಿಯ ನೆನಪುಗಳಲ್ಲಿ ಬೆರೆತುಕೊಂಡು ಬಿಟ್ಟಿವೆ. ತಂದೆ ತಾಯಂದಿರೇ ಅಂದು ನನ್ನ ಜಗತ್ತಿನ ಕೇಂದ್ರವಾಗಿದ್ದರು. ನಮ್ಮದು ಮಧ್ಯಮ ವರ್ಗದ ಒಂದು ಕುಟುಂಬ. ನಮ್ಮ ತಂದೆಯವರಿಗೆ ಒಂದು ಸಣ್ಣ ವ್ಯವಹಾರ ಇತ್ತು; ಜತೆಗೆ ಅವರು ಮಸೀದಿಯ ಇಮಾಮ್ ಸಹಾ ಆಗಿದ್ದರು. ನನ್ನ ತಾಯಿ ಆಶ್ಯಮ್ಮ ಜನಿಸಿದ ಕುಟುಂಬದಲ್ಲಿ ಹಿಂದೆ ಯಾರೋ ಒಬ್ಬರಿಗೆ ಬ್ರಿಟಿಷ್ ಸರಕಾರ 'ಬಹಾದುರ್' ಎಂಬ ಬಿರುದು ಕೊಟ್ಟಿತ್ತಂತೆ.

ನನ್ನ ತಾಯಿ ಸೌಮ್ಯ ಸ್ವಭಾವದ, ಲೋಕಾನುಭವವಿದ್ದ, ಧಾರ್ಮಿಕ ಮನೋವೃತ್ತಿಯ ಮಹಿಳೆಯಾಗಿದ್ದರು. ತಂದೆಯಂತೆ ಅವರೂ ಇಸ್ಲಾಂನ ನಿಯಮಗಳನ್ನು ಚಾಚೂ ತಪ್ಪದೆ ಅನುಸರಿಸುವವರಾಗಿದ್ದರು. ಅವರು ದಿನಕ್ಕೆ ಐದು ಬಾರಿ ನೆಲದಲ್ಲಿ ಮೊಣಕಾಲೂರಿ ಕುಳಿತು ನಮಾಜುಮಾಡಿ ಅಲ್ಲಾನನ್ನು ಪ್ರಾರ್ಥಿಸುವಾಗ ಅವರ ಮುಖದಲ್ಲಿ ಅತ್ಯಂತ ಉತ್ಕಟ ಭಕ್ತಿಯೂ ಶಾಂತಿಯೂ ಅಲ್ಲದೆ ಬೇರೇನೂ ಇರುತ್ತಿರಲಿಲ್ಲ. ಅವರು ಒಂದು ದೊಡ್ಡ ಕುಟುಂಬದ ಬೇಕು–ಬೇಡಗಳನ್ನು ನೋಡಿಕೊಳ್ಳಬೇಕಾಗಿದ್ದುದರಿಂದ ಶಕ್ತಿಯೆಲ್ಲ ಅದಕ್ಕೇ ವ್ಯಯವಾಗುತ್ತಿತ್ತು. ನಮ್ಮ ಕುಟುಂಬದಲ್ಲಿ ನಾನು ಹಾಗೂ ನನ್ನ ಅಣ್ಣ–ತಮ್ಮಂದಿರು, ಅಕ್ಕ ಹಾಗೂ ನಮ್ಮ ಬಂಧುಗಳು – ಅಂದರೆ ತಾತ ಮತ್ತು ಅಜ್ಜಿ, ನನ್ನ ಚಿಕ್ಕಪ್ಪಂದಿರು, ಅವರ ಮಕ್ಕಳು ಇದ್ದೆವು. ನಾವೆಲ್ಲ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದೆವು. ಎಲ್ಲರಿಗೂ ಅವರವರ ಅಗತ್ಯಗಳನ್ನು ಪೂರೈಸುವುದು ತ್ರಾಸದಾಯಕವೇ. ಅಂದು ಎಲ್ಲರಿಗೂ ಕಷ್ಟಕರವಾದ ದಿನಗಳೇ ಆಗಿದ್ದವು. ಹೀಗಿರುವಲ್ಲಿ ನಮ್ಮ ಪಾಡು ಏನಾಗಿರಬೇಡ? ನನ್ನ ತಂದೆಯವರಿಗೆ ಉತ್ತಮವಾದ ವ್ಯವಹಾರವಿತ್ತು – ಅದು ಪ್ರಯಾಣಿಕರ ದೋಣಿ ಸಾರಿಗೆ ಹಾಗೂ

ಒಂದು ತೆಂಗಿನ ತೋಟದ ಉತ್ಪನ್ನ, ಇವೆರಡರಿಂದ ಬರುತ್ತಿದ್ದ ವರಮಾನ ಇಡೀ ಕುಟುಂಬದ ಖರ್ಚು–ವೆಚ್ಚಗಳಿಗೆ ಸಾಕಾಗುತ್ತಿತ್ತು, ಆದರೆ ಅಲ್ಲಿ ವಿಲಾಸಿ ಖರ್ಚುಗಳಿಗೆ ಅವಕಾಶ ಇರಲಿಲ್ಲ.

ಇಂತಹ ಸನ್ನಿವೇಶದಲ್ಲಿ ನನ್ನ ತಾಯಿ ನನ್ನ ತಂದೆಯವರ ಆದರ್ಶ ಸತಿ ಎನಿಸಿದರು. ಅವರು ಉಳಿತಾಯ ಮಾಡುತ್ತಿದ್ದರು; ಮಿತವ್ಯಯವೆಂದರೇನೆಂದು ಅವರಿಗೆ ತಿಳಿದಿತ್ತು; ಆದರೂ ನಮ್ಮ ಜೀವನ ವಿಧಾನದ ಬಗ್ಗೆ ಒಂದಿನಿತೂ ಬೇಸರವಾಗಲಿ, ಕಿರಿಕಿರಿ ಭಾವನೆಯಾಗಲಿ, ಕೋಪವಾಗಲಿ ಅವರ ಮುಖದಲ್ಲಿ ಕಾಣಿಸುತ್ತಿರಲಿಲ್ಲ. ಕುಟುಂಬದ ಎಲ್ಲಾ ಸದಸ್ಯರಿಗೂ ಅಡುಗೆಮಾಡಿ ಉಣ ಬಡಿಸಬೇಕಿತ್ತು. ಅದರ ಜತೆಗೆ ಮನೆಗೆ ಭೇಟಿನೀಡುವ ಅನೇಕ ಮಂದಿ ಇರುತ್ತಿದ್ದರು. ಅವರನ್ನೆಲ್ಲ 'ಊಟ ಮಾಡಿ ಹೋಗಿ' ಎಂದು ಆದರಿಸಲಾಗುತ್ತಿತ್ತು. ಅವರಲ್ಲಿ ಕೆಲವರಾದರೂ ಊಟಕ್ಕಿರುತ್ತಿದ್ದರು. ಮನೆಯಲ್ಲಿ ಎಷ್ಟು ಮಂದಿ ಇರುತ್ತಿದ್ದರೋ ಹೊರಗಿನವರೂ ಸುಮಾರಾಗಿ ಅಷ್ಟೇ ಮಂದಿ ಮಧ್ಯಾಹ್ನ ನಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದರು ಎಂದು ಈಗ ನನಗೆ ಅಂದಾಜು ಮಾಡಿದಾಗ ಗೋಚರವಾಗುತ್ತದೆ. ಇವರೆಲ್ಲರಿಗೂ ಅಡುಗೆಮಾಡಿ ಉಣ ಬಡಿಸುವ ಹೊಣೆಗಾರಿಕೆ ಅಮ್ಮನದ್ದಾಗಿತ್ತು. ಇದೆಲ್ಲವೂ ಸಹಜ ಎಂದೇ ಎಲ್ಲರ ಅನಿಸಿಕೆಯಾಗಿತ್ತು; ಅದೊಂದು ವಿಶೇಷವೆಂದೋ ಅಸಹಜವೆಂದೋ ಯಾರ ಮನಸ್ಸಿಗೂ ಬಂದಿರಲಿಲ್ಲ. ನಮ್ಮ ಭಾರತೀಯ ಪರಂಪರೆಯಲ್ಲಿ ಅತಿಥಿ ಸತ್ಕಾರ ವೆಂಬ ಹಳೆಯ ಪರಿಕಲ್ಪನೆಯಿದೆಯಲ್ಲ – ಅದರ ಪ್ರತಿಮೂರ್ತಿಯಾಗಿ ನನ್ನ ತಾಯಿ ಇದ್ದರು ಎಂದರೆ ತಪ್ಪಲ್ಲ.

ನನ್ನ ಬಾಲ್ಯವು ಸಂತೋಷದಾಯಕವಾಗಿ ಹಾಗೂ ಸುರಕ್ಷಿತವಾಗಿ ಕಳೆಯಿತು. ನನ್ನ ಅತ್ಯಂತ ಎಳವೆಯ ನೆನಪೆಂದರೆ ಅಡುಗೆ ಮನೆಯಲ್ಲಿ ತಾಯಿಯೊಡನೆ ಕುಳಿತು ಊಟ ಮಾಡುತ್ತಿದ್ದುದು. ನಾವು ಊಟಮಾಡುತ್ತಿದ್ದುದು ಬಾಳೆಲೆ – ಯಲ್ಲಿ, ಅನ್ನ, ಮನೆಯಲ್ಲೇ ಮಸಾಲೆ ರುಬ್ಬಿ ತಯಾರಿಸಿದ ಸಾಂಬಾರು, ಮನೆಯಲ್ಲೇ ತಯಾರಿಸಿದ ಉಪ್ಪಿನಕಾಯಿ ಹಾಗೂ ತೆಂಗಿನ ಕಾಯಿ ಚಟ್ನಿ ಊಟಕ್ಕೆ, ನನ್ನ ತಾಯಿಯ ಅಡುಗೆ ವಿಧಾನ ತುಂಬಾ ಸರಳ, ಒಗರು ರುಚಿಯನ್ನೂ ಮಸಾಲೆಗಳನ್ನೂ ತೂಕತಪ್ಪದಂತೆ ಬೆರೆಸಿ ಮಾಡುತ್ತಿದ್ದ ಆ ಸಾಂಬಾರಿನ ರುಚಿಗೆ ಸರಿಗಟ್ಟುವ ರುಚಿಯನ್ನು ಬೇರೆಲ್ಲೂ ಈವರೆಗೆ ನಾನು ಕಂಡಿಲ್ಲ. ಅದು ಅವರು ಅನುಭವದಿಂದ ಪಡೆದಂತಹ ಪರಿಣತಿ, ಆಹಾರದ ವಿಷಯ ಹೇಳುವಾಗ ನನಗೆ ಬಾಲ್ಯದ ಇನ್ನೊಂದು ಘಟನೆ ನೆನಪಾಗುತ್ತದೆ.

ಎರಡನೇ ಜಾಗತಿಕ ಯುದ್ಧದ ಕಾಲದಲ್ಲಿ ಆಹಾರ ಧಾನ್ಯಗಳನ್ನು ಪಡಿತರ ಪದ್ಧತಿಯಲ್ಲಿ ವಿತರಿಸಲಾಗುತ್ತಿತ್ತು. ಬೇರೆಲ್ಲಾ ದಿನಬಳಕೆ ವಸ್ತುಗಳೂ ಕೂಡ

ಸುಲಭವಾಗಿ ಸಿಗುತ್ತಿರಲಿಲ್ಲ. ಅದು ಭಾರೀ ಅಭಾವದ ಕಾಲ. ನನ್ನ ತಾಯಿಯೂ ಅಜ್ಜಿಯೂ ಧಾನ್ಯಗಳನ್ನೂ ಇತರ ಸಾಮಗ್ರಿಗಳನ್ನೂ ಮಿತವ್ಯಯ ಮಾಡುತ್ತ, ಪೋಲಾಗದಂತೆ ನೋಡಿಕೊಂಡು, ತಮ್ಮ ಎಲೆಗೆ ಬಡಿಸಿಕೊಳ್ಳುವ ಆಹಾರದ ಪ್ರಮಾಣ ಕಡಿಮೆ ಮಾಡಿಕೊಂಡು, ಮಕ್ಕಳಿಗೆ ಕಡಿಮೆಯಾಗದಂತೆ ಬಲು ಜತನದಿಂದ ನಿಭಾಯಿಸುತ್ತಿದ್ದರು. ಒಂದು ದಿನ ನನ್ನ ತಾಯಿ ಅನ್ನದ ಬದಲು ಚಪಾತಿ ತಯಾರಿಸಿದ್ದರು. ಅವರು ಕಾವಲಿಯಲ್ಲಿ ಚಪಾತಿ ಬೇಯಿಸುತ್ತಿದ್ದಂತೆ ನಾನು ಪಕ್ಕದಲ್ಲಿ ಕುಳಿತು ಬಿಸಿ ಬಿಸಿ ಚಪಾತಿಗಳನ್ನು ಒಂದರ ನಂತರ ಒಂದರಂತೆ ಹೊಡೆದೆ. ಚಪಾತಿಗಳು ಬರುತ್ತಿದ್ದವು, ನಾನು ತಿನ್ನುತ್ತಿದ್ದೆ. ನಾನು ಇಡೀ ದಿನ ಚಟುವಟಿಕೆಯಲ್ಲಿದ್ದು ರಾತ್ರಿಯ ವೇಳೆಗೆ ಹೊಟ್ಟೆ ಬಲು ಹಸಿದಿತ್ತು, ಅಲ್ಲದೆ ಬೆಳೆಯುವ ಶರೀರವಲ್ಲವೇ? ಅಂತೂ ಹೊಟ್ಟೆ ತುಂಬಿದಾಗ ಎಲೆಯನ್ನು ಮುದುರಿ ಎತ್ತಿಕೊಂಡು ಕೈತೊಳೆಯಲು ಹೋದೆ. ಸ್ವಲ್ಪ ಸಮಯದ ನಂತರ ನನ್ನ ದೊಡ್ಡಣ್ಣ ನನ್ನನ್ನು ಹೊರಗೆ ಕರೆದೊಯ್ದು ಬೈದ. ಅವನು ನನ್ನನ್ನು ಬೈದುದು ಅದೇ ಮೊದಲು. 'ಅಬ್ದುಲ್, ನೀನು ಅಷ್ಟೂ ಕುರುಡನಾಗಿಬಿಟ್ಟೆಯಾ?'

ಅಣ್ಣ ನನ್ನನ್ನು ಯಾಕೆ ಬಯ್ಯುತ್ತಿದ್ದಾನೆ? ಎಂದು ಮೊದಲು ನನಗೆ ಗೊತ್ತಾಗಲಿಲ್ಲ. ಏನೂ ಅರ್ಥವಾಗದೆ ನಾನು ಕಣ್ಣು ಪಿಳಿಕಿಸುತ್ತ ಅಣ್ಣನ ಮುಖ ನೋಡಿದೆ. ಅಷ್ಟರಲ್ಲಿ ಅವನು ಮೆತ್ತಗಾಗಿ ವಿಷಯ ವಿವರಿಸಿ ಹೇಳಿದ: 'ಚಪಾತಿ ಒಬ್ಬೊಬ್ಬರಿಗೆ ಎರಡೋ ಮೂರೋ ಬರುವಷ್ಟು ಮಾತ್ರ ಇತ್ತು, ನೀನು ಗಮನಿಸಲಿಲ್ಲವೇ? ಅಮ್ಮ ನಿನಗೆ ಎಂದೂ ಇಲ್ಲವೆಂದು ಹೇಳಲಾರರು; ನೀನು ತಿನ್ನುತ್ತಲೇ ಇದ್ದೆ, ಅಮ್ಮ ಬಡಿಸುತ್ತಲೇ ಇದ್ದರು. ಈ ರಾತ್ರಿ ಅವರು ಉಪವಾಸ ಮಲಗಬೇಕು, ಅವರಿಗೆ ಚಪಾತಿಯೇ ಉಳಿದಿಲ್ಲ, ನೋಡಿದೆಯಾ?

ಬಡಕಲು ಶರೀರದ, ಆದರೆ ನನಗೆ ತಿಳಿದಿರುವವರಲ್ಲೆಲ್ಲಾ ಅತ್ಯಂತ ಧೈರ್ಯಸ್ಥೆಯಾದ ನನ್ನ ತಾಯಿಗೆ ಈ ಅವಸ್ಥೆಯನ್ನು ತಂದಿತ್ತ ನನಗೆ ಆದ ನಾಚಿಕೆಯೂ ದುಃಖವೂ ನನ್ನ ಎದೆಯನ್ನೇ ಒಡೆಯುವಂತೆ ಮಾಡಿತು. ನಾನು ಒಬ್ಬನೇ ಅತ್ತೆ. ಯಾರ ಮುಖಕ್ಕೂ ಮುಖ ಕೊಟ್ಟು ನೋಡಲೂ ನನಗೆ ಧೈರ್ಯ ಬರಲಿಲ್ಲ. ತಾಯಿಯ ಮುಖಕ್ಕೆ ಮುಖ ಕೊಟ್ಟು ನೋಡಲು ನನಗೆ ಸಾಧ್ಯವಾದದ್ದು ಎಷ್ಟೋ ದಿನಗಳ ನಂತರ. ಸುತ್ತಲಿನವರ ಬೇಕು–ಬೇಡಗಳ ಬಗ್ಗೆ ಗಮನವಿರಬೇಕು, ಎಂಬ ವಿಷಯದಲ್ಲಿ ನಾನು ಕಲಿತ ಪಾಠ ಎಂಥದು? ನನ್ನ ಮೇಲಿನ ಪ್ರೀತಿಯಿಂದಾಗಿ ತಾಯಿ ತಮಗೆ ಏನನ್ನೂ ಇಟ್ಟುಕೊಳ್ಳದೆ ನನ್ನ ಹೊಟ್ಟೆ ತುಂಬುವಷ್ಟು ಚಪಾತಿ ಕೊಟ್ಟರು. ಅಣ್ಣ ನನಗೆ ಈ ಸತ್ಯವನ್ನು ತೋರಿಸಿದ ಮೇಲೆ ಮನೆಯಲ್ಲಿ ಬೇರೆಯವರಿಗೆಲ್ಲ, ಮುಖ್ಯವಾಗಿ ತಾಯಿಗೂ ಅಜ್ಜಿಗೂ ಸಾಕಷ್ಟು ಅನ್ನ

ಇದೆಯೇ ಎಂದು ನೋಡಿಕೊಂಡೇ ಊಟಮಾಡುವ ರೂಢಿಯನ್ನು ಬೆಳೆಸಿಕೊಂಡೆ.

ನಾನು ಎಳವೆಯಲ್ಲೇ ಮನೆಯಿಂದ ದೂರವಾದೆ; ವಿದ್ಯಾಭ್ಯಾಸಕ್ಕಾಗಿ ನಾನು ದೊಡ್ಡ ಪಟ್ಟಣಕ್ಕೆ ಹೋಗಬೇಕಾಯಿತು. ನನ್ನ ಇತರ ಕೆಲವು ಸ್ನೇಹಿತರಂತೆ ನಾನು ಬಹುಕಾಲ ಅಮ್ಮನ ಕೈತುತ್ತು ತಿನ್ನುವ ಪುಟ್ಟ ಬಾಲಕನಾಗಿ ಇರುವುದು ಸಾಧ್ಯವಾಗಲಿಲ್ಲ. ಆದರೆ ನನ್ನ ಅಮ್ಮನ ಪ್ರೀತಿಯೂ ಔದಾರ್ಯವೂ ನನ್ನ ಹೃದಯದಲ್ಲಿ ಸದಾ ನೆಲೆ ನಿಂತಿತು.

ಎರಡನೇ ಜಾಗತಿಕ ಯುದ್ಧದ ಕಾಲದಲ್ಲಿ ನಾನು ಸುಮಾರು ಎಂಟು ವರ್ಷದವನಾಗಿದ್ದಾಗ ವೃತ್ತಪತ್ರಿಕೆ ವಿತರಣೆ ಮಾಡುವ ಹುಡುಗನಾಗಿ ಕೆಲಸ ಮಾಡಿದ್ದನ್ನು ವಿವರಿಸಿದ್ದೇನೆ. ಆಗ ನನ್ನ ದಿನ ಶುರುವಾಗುತ್ತಿದ್ದದ್ದು ಮುಂಜಾನೆ ಕೋಳಿ ಕೂಗುವ ಮೊದಲೇ, ಮೊದಲು ಟ್ಯೂಶನ್, ಆಮೇಲೆ ಕುರಾನ್ ಕಲಿಕೆ, ಆಮೇಲೆ ವೃತ್ತಪತ್ರಿಕೆ ವಿತರಣೆ. ನಂತರ ಮನೆಗೆ ಬಂದು ಊಟಮಾಡಿ ಶಾಲೆಗೆ ಪಯಣ. ಸಾಯಂಕಾಲ ವಾಪಸು ಬಂದು ಹೋಂ ವರ್ಕ್ ಮಾಡಬೇಕು. ಇದೆಲ್ಲಕ್ಕೂ ನನಗೆ ಬಂಡೆಯಂತೆ ಬೆಂಬಲವಾಗಿ ನಿಂತವರು ನನ್ನ ತಾಯಿ. ಮುಂಜಾನೆ ನಾನು ಏಳಬೇಕಾದ ಸಮಯಕ್ಕೆ ಮೊದಲೇ ಅಮ್ಮ ಎದ್ದು ನನ್ನ ಸ್ನಾನಕ್ಕೆಂದು ಹಂಡೆಗೆ ನೀರು ತುಂಬಿ ಬಿಸಿ ಮಾಡಿಟ್ಟಿರುತ್ತಿದ್ದರು. ಆಮೇಲೆ ನನ್ನನ್ನು ಎಬ್ಬಿಸುತ್ತಿದ್ದರು. ಎಬ್ಬಿಸಿ ಸ್ನಾನ ಮಾಡಿಸಿ ನನ್ನನ್ನು ಟ್ಯೂಶನ್‌ಗೆ ಕಳಿಸಿ ನಂತರ ನಾನು ಬರುವವರೆಗೆ ಒಂದೆರಡು ತಾಸು ನನಗಾಗಿ ಕಾಯುತ್ತಿದ್ದರು. ನಾನು ಬಂದ ಮೇಲೆ ನನ್ನ ತಂದೆಯವರು ನನ್ನನ್ನು ಅರೇಬಿಕ್ ಪಾಠಕ್ಕೆಂದು ಕರೆದೊಯ್ಯುತ್ತಿದ್ದರು. ಹೀಗೆ ದಿನವಿಡೀ ಸ್ಥಳದಿಂದ ಸ್ಥಳಕ್ಕೆ ಓಡಾಡುತ್ತಿದ್ದುದರ ಮಧ್ಯೆ ನನಗೆ ಸಿಗುತ್ತಿದ್ದ ಸಮಯವೆಂದರೆ ತಾಯಿ ನನಗೆಂದು ಎಲೆ ಹಾಕಿ ಬಡಿಸುತ್ತಿದ್ದ ಊಟವನ್ನು ಮಾಡುತ್ತಿದ್ದಾಗ ಮಾತ್ರ. ಅನೇಕ ಬಾರಿ ತಾಯಿ ತನ್ನ ಪಾಲಿನ ಊಟ ಕಡಿಮೆಮಾಡಿ ಆ ಪಾಲನ್ನು ನನಗೆ ಕೊಡುತ್ತಿದ್ದರು. ಒಮ್ಮೆ ನಾನು ಈ ವಿಷಯವನ್ನು ಕೇಳಿದಾಗ ಅವರು ಮುಗುಳ್ನಕ್ಕು ನೀನು ಬೆಳೆಯುತ್ತಿರುವ ಹುಡುಗ. ನೀನು ಎಷ್ಟು ಕೆಲಸ ಮಾಡುತ್ತೀಯಾ ತಾಯಂದಿರಿಗೂ ಮಕ್ಕಳು ಹೀಗಿದ್ದರೇನೇ ಚೆನ್ನ. ನನ್ನ ಬಗ್ಗೆ ಚಿಂತೆ ಮಾಡಬೇಡ' ಎಂದುಬಿಟ್ಟರು. ಸಾಯಂಕಾಲ ನಾನು ಬಳಲಿ, ಹಸಿದು ಬಂದಾಗಲೂ ಅಮ್ಮ ನನ್ನ ಕೈಕಾಲು ತೊಳೆದು ಊಟ ಬಡಿಸಿ ನನ್ನ ಬೇಕು-ಬೇಡಗಳನ್ನು ನೋಡಿ ಕೊಂಡು ನಾಳೆಯ ದಿನಕ್ಕೆ ನನ್ನನ್ನು ತಯಾರು ಮಾಡುತ್ತಿದ್ದರು.

ನನ್ನ ಅಣ್ಣ-ತಮ್ಮಂದಿರಲ್ಲಿ ಅಮ್ಮನ ಬಳಿಯಿರಲು ನನಗೇ ಆದ್ಯತೆ. ಒಮ್ಮೆ ನಾನು ಅವರ ಮಡಿಲಲ್ಲಿ ತಲೆಯಿಟ್ಟು ಮಲಗಿದವನು ಹಾಗೇ ನಿದ್ದೆಮಾಡಿಬಿಟ್ಟೆ.

ತಾಯಿ ಅಲ್ಲಾಡದೆ ಕುಳಿತಿದ್ದರು. ಅವರ ಬೆರಳುಗಳು ನನ್ನ ತಲೆ, ಕೆನ್ನೆಗಳ ಮೇಲೆ ಮೆತ್ತಗೆ ಹರಿದಾಡುತ್ತಿತ್ತು. ಅದು ನನ್ನ ಬಳಲಿದ ಜೀವಕ್ಕೆ ಸಾಂತ್ವನ ನೀಡುತ್ತಿತ್ತು. ನನಗೇ ತಿಳಿಯದೆ ಎಲ್ಲೋ ಹೃದಯದಾಳದಿಂದ ಬಂದ ನೀರು ಕಣ್ಣುಗಳನ್ನು ತುಂಬಿಕೊಂಡವು. ನನಗೆ ಅದರ ಅರಿವಾಗಿ ಇನ್ನೇನು ತಡೆದು ಕೊಳ್ಳಬೇಕು ಎಂಬಷ್ಟರಲ್ಲಿ ಅವು ಕೆನ್ನೆಯ ಮೇಲೆ ಹರಿಯತೊಡಗಿದವು. ಕಣ್ಣುಗಳು ಮುಚ್ಚಿದ್ದವಾದರೂ ಅವುಗಳಿಂದ ನೀರು ಹರಿಯುತ್ತಿತ್ತು. ಮಡಚಿದ ನನ್ನ ಮೊಣಕಾಲುಗಳ ಮೇಲೆ ಬಿದ್ದ ಕಣ್ಣೀರು ನಂತರ ತಾಯಿಯ ಸೀರೆಯನ್ನು ಒದ್ದೆಮಾಡಿತು. ಅವರು ನನ್ನನ್ನು ತಬ್ಬಿಕೊಂಡರು; ಈ ಅಪ್ಪುಗೆ ಸಡಿಲವಾಗಲಿಲ್ಲ. ಆ ಕಣ್ಣೀರು ಹಠಾತ್ತನೆ ಯುವಕನಾಗಲು ತುಡಿಯುತ್ತಿರುವ ಒಬ್ಬ ಬಾಲಕನ ತೀರಾ ದಣಿದ ದೇಹದಿಂದ ಬಂದದ್ದು ಎಂಬುದು ಅವರಿಗೆ ತಿಳಿದಿತ್ತು. ಅವರ ಬೆರಳುಗಳು ನನ್ನ ತಲೆಗೂದಲನ್ನು ಮೃದುವಾಗಿ ನೇವರಿಸಿದವು. ಅವುಗಳಲ್ಲಿ ಸಾಂತ್ವನವೂ, ಮಗ ಬೆಳೆಯುತ್ತಿದ್ದಾನೆಂಬ ತೃಪ್ತಿಯೂ ತುಂಬಿತ್ತು.

ದಕ್ಷಿಣ ಭಾರತದ ಒಂದು ಸಣ್ಣ ಪಟ್ಟಣದಲ್ಲಿ ಹುಟ್ಟಿ ಬೆಳೆದ ಈ ಸರಳವಾದ ಮಹಿಳೆ ಬಹುಶಃ ನಮ್ಮ ದೇಶದ ಹಾಗೂ ಪ್ರಪಂಚದ ಬೇರೆ ದೇಶಗಳಲ್ಲಿನ ಎಲ್ಲಾ ಮಹಿಳೆಯರಂತೆಯೇ ಇದ್ದಳು. ಅವರು ಮನೆಯಿಂದ ಹೊರಬಿದ್ದು ಪಟ್ಟಣದ, ಸಮಾಜದ ವ್ಯವಹಾರಗಳಲ್ಲಿ ಭಾಗವಹಿಸುವವರಲ್ಲ. ಈಗ ನಾವು ಉದ್ಯೋಗಸ್ಥ ಮಹಿಳೆಯರು ಎಂದರೇನು ಎಂಬ ಸ್ಪಷ್ಟ ಕಲ್ಪನೆ ಹೊಂದಿದ್ದೇವೆ. ನನ್ನ ತಾಯಿ ಅಂಥ ಮಹಿಳೆಯಲ್ಲ. ಅವರ ಜಗತ್ತು ಮನೆ, ಮಕ್ಕಳು, ಸಂಸಾರದ ಶ್ರೇಯಸ್ಸು – ಅಷ್ಟಕ್ಕೆ ಸೀಮಿತ, ಆ ಮಿತಿಯೊಳಗೇ ಅವರು ಎಲ್ಲರ ಸೇವೆ ಮಾಡಿದರು, ದೇವರನ್ನೂ ನಂಬಿ ಆರಾಧಿಸಿದರು. ಅದರಲ್ಲಿ ತ್ಯಾಗವಿತ್ತು, ಭಕ್ತಿಯಿತ್ತು, ನಿಷ್ಠೆಯಿತ್ತು. ನಿಮ್ಮ ಚಟುವಟಿಕೆಯ ಕಾರ್ಯಕ್ಷೇತ್ರ ಎಷ್ಟು ದೊಡ್ಡದಾಗಿರಲಿ, ಸಣ್ಣದಾಗಿರಲಿ ಬದುಕು ನಿಮಗೆ ಕೊಟ್ಟಿರುವಂತಹ ಕರ್ತವ್ಯದಲ್ಲಿ ಗಣನೆಗೆ ಬರುವುದು ನೀವು ಅದರಲ್ಲಿ ತೋರಿಸುವ ಬದ್ಧತೆಯೇ ಆಗಿದೆ. ಇದೇ ನಾನು ನನ್ನ ತಾಯಿಯ ವ್ಯಕ್ತಿತ್ವದಿಂದ ಕಲಿತ ಪಾಠ.

ನನ್ನ ತಂದೆ 102 ವರ್ಷ ಬದುಕಿದರು. ಅವರು ಕಾಲವಾದಾಗ ಅವರಿಗೆ 15 ಮಂದಿ ಮೊಮ್ಮಕ್ಕಳಿದ್ದರು. ಅವರ ಸಾವು ನನ್ನಲ್ಲಿ ತೀವ್ರತರ ಪರಿಣಾಮಗಳನ್ನು ಉಂಟು ಮಾಡಿತು. ಸುದ್ದಿ ತಿಳಿದ ನಾನು 'ತುಂಬಾ'ದಿಂದ ವಾಪಸು ಬಂದು ನನ್ನ ತಾಯಿಯ ಬಳಿ ತುಂಬಾ ಹೊತ್ತು ಮೌನವಾಗಿ ಕುಳಿತೆ. ನಾನು ವಾಪಸು ಹೊರಟಾಗ ಅವರು ಗದ್ಗದ ಕಂಠದಿಂದ ನನಗೆ ಆಶೀರ್ವಾದ ಮಾಡಿದರು. ಆಗ ನಾನು ಎಸ್.ಎಲ್.ವಿ.–3 ರಾಕೆಟ್ ನಿರ್ಮಾಣದ ಭರಾಟೆಯಲ್ಲಿದ್ದೆ; ಕರ್ತವ್ಯ

ನನ್ನನ್ನು ಕರೆಯುತ್ತಿತ್ತು. ಸ್ವಲ್ಪ ಕಾಲ ಇರು ಎಂದು ತಾಯಿ ನನ್ನನ್ನು ಕೇಳಲಿಲ್ಲ. ನಾನು ಹಾಗೆ ಮಾಡಬೇಕಿತ್ತೇ? ಕೆಲಸವಿದೆಯೆಂದು ಎದ್ದು ಹೊರಡುವ ಬದಲು ಈ ವೃದ್ಧ ತಾಯಿಯೊಡನೆ ಕೆಲಕಾಲ ಕುಳಿತಿರಬೇಕಾಗಿತ್ತೇ? ಆಮೇಲೆ ನಾನು ತಾಯಿಯನ್ನು ನೋಡಲಿಲ್ಲ. ಇದರ ಕುರಿತು ನಾನು ನನಗೇ ಅನೇಕ ಬಾರಿ ಕೇಳಿಕೊಂಡಿದ್ದೇನೆ, ಅದಕ್ಕೆ ನನಗೆ ಉತ್ತರ ಸಿಕ್ಕಿಲ್ಲ. ನನ್ನ ತಂದೆಯವರು ಸತ್ತ ಕೆಲವೇ ದಿನಗಳಲ್ಲಿ ತಾಯಿಯೂ ತೀರಿಕೊಂಡರು. ಎಂಭತ್ತು ವರ್ಷಗಳಿಗೂ ಹೆಚ್ಚು ಕಾಲ ಯಾರ ಬಳಿ ಇದ್ದು ಜೀವನ ಮಾಡಿದರೋ ಅವರ ಅಗಲಿಕೆಯನ್ನು ತಾಳಲಾರದೆ; ಏಕಾಂಗಿಯಾಗಿಯೂ ಇರಲಾರದೆ, ಹೋಗಿ ಬಿಟ್ಟದ್ದು ಬಹುಶಃ ಸಹಜವೇ ಆಗಿತ್ತು.

ತಾಯಿಯ ಸಾವಿನ ಸುದ್ದಿ ದೊರೆತು ಊರಿಗೆ ಪಯಣಿಸುತ್ತಿದ್ದಾಗ ಅವರ ನೆನಪು ಕಾಡತೊಡಗಿತು. ನನ್ನ ಜನ್ಮಕ್ಕೆ ಕಾರಣರಾದ ಹಾಗೂ ಒಂದು ಮಗುವಾಗಿ ಮಾತ್ರವಲ್ಲ, ನನ್ನ ವಿಚಾರಗಳನ್ನೂ ಆಲೋಚನೆಗಳನ್ನೂ ವ್ಯಕ್ತಿತ್ವವನ್ನೂ ರೂಪಿಸಿದ ಇಬ್ಬರು ವ್ಯಕ್ತಿಗಳು ಈಗ ಇಲ್ಲವಾದರು. ಈಗ ಅವರ ಮಾರ್ಗದರ್ಶನವಿಲ್ಲದೆ, ನಾನು ಇನ್ನುಳಿದ ಬದುಕನ್ನು ಬಾಳಬೇಕಿದೆ. ಆದರೆ ಅವರಲ್ಲಿ ಯಾರೇ ಒಬ್ಬರು ಇನ್ನೊಬ್ಬರಿಲ್ಲದೆ ಹೆಚ್ಚು ಕಾಲ ಬದುಕಲಾರರು ಎಂಬ ಸತ್ಯ ನನ್ನನ್ನು ಸದಾ ನನ್ನ ತಂದೆಯವರು ಕರೆದೊಯ್ಯುತ್ತಿದ್ದ ಮಸೀದಿಗೆ ಪ್ರಾರ್ಥನೆಗಾಗಿ ಹೋಗುತ್ತಿದ್ದಾಗ ನನ್ನ ಮುಂದೆ ನಿಂತಿತು. ಈಗ ನನ್ನ ತಂದೆ ತಾಯಿಗಳಿಬ್ಬರೂ ಕಾಲವಾಗಿ ನನಗೆ ಸುಂದರವಾದ ಬಾಲ್ಯದ ನೆನಪುಗಳು ಮಾತ್ರ ಉಳಿದವು. ತಮ್ಮ ಮಗನ ಎದೆಯಾಳದ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತಿದ್ದ ತಾಯಿಯ ನೆನಪು ನನ್ನ ಹೃದಯದೊಳಗೆ ಭದ್ರವಾಗಿದೆ.

~ * ~ * ~ * ~

*ಆಕರ : 'ನನ್ನ ಪಯಣ' ಕನಸು ನನಸಾಗುವ ಹಾದಿಯಲ್ಲಿ*
*–ಎ.ಪಿ.ಜೆ. ಅಬ್ದುಲ್ ಕಲಾಂ*
*ಅನುವಾದ: ಜಿ.ಕೆ. ಮಧ್ಯಸ್ಥ*

~ * ~ * ~ * ~

# 4. ಸಂಕೀರ್ಣ / ಸೃಜನ :


| | | | |
|---|---|---|---|
| 4.1 | ಹೂವಾದ ಹುಡುಗಿ | – ಜನಪದ ಕಥೆ | 096 |
| 4.2 | ಕೆ.ಕೆ. ಹೆಬ್ಬಾರ | – ಎಂ. ಮರಿಶಾಮಾಚಾರ್ | 106 |
| 4.3 | ನೀವು ಬರಹಗಾರರಾಗಬೇಕೇ? | – ವೈ.ಜಿ. ಮುರಳೀಧರ | 115 |
| 4.4 | ಚಟುವಟಿಕೆ | | 124 |


**ಆಶಯ :**

**ಕವಿತೆ**

ಒಮ್ಮೊಮ್ಮೆ ಏನೂ ಹೊಳೆಯುವುದಿಲ್ಲ

ಸಂಕಲ್ಪವೊಂದೇ ಮೋಡ; ಶಾಖ ಮರೆ,
ಬರೆದರೆ ಬರೀ ಅಕ್ಷರಗಳ ಹೊರೆ,
ಕಾಡುವೊಂದರ ಮೈಲಿಗಳ ಯಾಂತ್ರಿಕತನ.
ಕೂತರೆ ಅಡ್ಡಾಡಿಸಿ ಅಡ್ಡಾಡಿದರೆ ಒರಗಿಸಿ
ಒರಗಿದರೆ ಬರೆಯಿಸುವ ಅದೃಢತೆ ;
ಹೊರಗಾಗುವುದು ಕವಿತೆ,

ಒಮ್ಮೊಮ್ಮೆ ಏನೆಲ್ಲಾ ಹೊಳೆಯುವುದು

ಬೆಳೆಯುವುದು ನನ್ನ ಬೀಜಗೊಳಿಸಿ ಅಳಿಸಿ
ಬಿಳಲನ್ನೊತ್ತಿ ಪದ್ಯ;
ಆಗ ಋತುಗಳ ನಡುವಿನ ನದಿಯ ವೈವಿಧ್ಯ.
ಕೂತರೆ ಅಲ್ಲಾಡಿಸದ ಬರೀ ಭಾವಗಳ ಅವಶತೆ;
ನೀರೆರೆದುಕೊಂಡು ಸೀರೆಯುಡುವುದು ಕವಿತೆ.

ಬರೆಯುವುದೇ ಬೇಡವೆನ್ನಿಸುವ ಅತೃಪ್ತತೆಯ

ಬೇಸರಿನ ಒಂದೇತನದ ತಂತಿಯ ಮಧ್ಯೆ
ಆಗೀಗ ದೀಪಗಂಬದ ಬೆಳಕ ಏಕಾಗ್ರಕ್ಷಣ.
ಮೌನವನೆ ಮುತ್ತಿಕ್ಕಿ ಲಜ್ಜೆಗೆಂಪಾದ ಮಾತು
ಔಚಿತ್ಯ ಸೂಚ್ಯತೆ
ಹುಣ್ಣಿಮೆಯ ಅಸ್ಪಷ್ಟತೆಯಲ್ಲಿ ತಾವಾಗಿ
ನಗ್ನ ನಿಲುವುದು ಕವಿತೆ,

**–ಕೆ.ಎಸ್. ನಿಸಾರ್ ಅಹಮದ್**

## 4.1 ಹೂವಾದ ಹುಡುಗಿ

**– ಜನಪದ ಕಥೆ**

ಒಂದು ಪಟ್ಟಣ, ಅಲ್ಲೊಬ್ಬ ದೊರೆಯಿದ್ದ. ಆತನಿಗೆ ಇಬ್ಬರು ಹೆಣ್ಣುಮಕ್ಕಳು, ಮತ್ತೆ ಒಬ್ಬ ಮಗ, ದೊರೆಯ ಮೊದಲನೆ ಹೆಣ್ಣುಮಗಳಿಗೆ ಲಗ್ನವಾಗಿತ್ತು.

ಅದೇ ಊರಿನಲ್ಲಿ ಒಬ್ಬ ಮುದುಕಿಯಿದ್ದಳು. ಅವಳಿಗೆ ಇಬ್ಬರು ಹೆಣ್ಣುಮಕ್ಕಳು, ಆ ಮುದುಕಿ ಕೂಲಿಮಾಡಿ ತನ್ನ ಮಕ್ಕಳನ್ನು ಸಾಕುತ್ತಿದ್ದಳು. ಒಂದು ದಿನ ತಂಗಿ, "ಅಕ್ಕಯ್ಯ ಹೋದಷ್ಟು ದಿನಕ್ಕೆ ಅಮ್ಮ ಕೂಲಿಮಾಡಿ ನಮ್ಮನ್ನು ಸಾಕಬೇಕು ಅಂದ್ರೆ ಕಷ್ಟ. ಆದ್ದರಿಂದ ನಾನು ಹೂವಿನ ಗಿಡ ಆಗ್ತೀನಿ. ನೀನು ಹೂ ತಗೊಂಡು ಹೋಗಿ ಮಾರ್ಕೊಂಡು ಬಾ" ಎಂದು ಅಕ್ಕನಿಗೆ ಹೇಳಿದಳು. ಅಕ್ಕನಿಗೆ ಕುತೂಹಲ ಕೆರಳಿ, "ಅದು ಹೇಗೆ ಹೂವಿನ ಗಿಡ ಆಗ್ತಿಯ?" ಎಂದು ತಂಗಿಯನ್ನು ಕೇಳಿದಳು, ಅದೆಲ್ಲ ನಾನು ಆಮೇಲೆ ಕಥೆ ಹೇಳ್ತೀನಿ, ಮೊದಲು ಮನೆಯನ್ನು ಸಾರಿಸಿಡು, ನೀನು ಸ್ನಾನ ಮಾಡಿ ಬಾವಿಯಿಂದ ಉಗುರು ಸೋಂಕದ ಹಾಗೆ ಎರಡು ತಂಬಿಗೆ ನೀರು ತಗೊಂಡು ಬಾ ಅಂದಳು, ಅಕ್ಕ ತಂಗಿಯ ಮಾತಿನಂತೆ ದೊಡ್ಡ ಸ್ನಾನ ಮಡಿಮಾಡಿ, ಉಗುರು ಸೋಂಕದ ಹಾಗೆ ಎರಡು ತಂಬಿಗೆ ನೀರು ತಂದಳು. ಇವರ ಮನೆ ಹತ್ತಿರ ಒಂದು ದೊಡ್ಡ ಮರವಿತ್ತು. ಅಲ್ಲೂ ಗುಡಿಸಿ ಸಾರಿಸಿದಳು. ಅಲ್ಲಿಗೆ ಇಬ್ಬರೂ ಹೋದರು. ತಂಗಿ ಅಕ್ಕನನ್ನು ಕರೆದು, "ನೋಡಕ್ಕಯ್ಯ, ನಾನಿಲ್ಲಿ ದೇವರನ ಧ್ಯಾನಮಾಡಿ ಕುಳಿತ್ಕೋತೀನಿ, ನೀನು ಈ ತಂಬಿಗೆ ನೀರನ್ನೆಲ್ಲ ನನ್ನ ಮೈಮೇಲೆ ಸುರಿದುಬಿಡು. ನಾನು ಹೂವಿನ ಗಿಡ ಆಗ್ತಿನಿ. ಸುಳಿ ಮುರಿಯದ ಹಾಗೆ, ಮುರಿಯದ ಹಾಗೆ ಬೇಕಾದಷ್ಟು ಹೂವು ಕಿತ್ತಿಕೊ, ನಿನಗೆ ಸಾಕಾದ ಮೇಲೆ – ತಂಬಿಗೆ ನೀರು ನನ್ನ ಮೇಲೆ ಸುರಿದುಬಿಡು. ಪುನಃ ನಾನು ಮನುಷ್ಯ ಆಗ್ತೀನಿ, ಅಂದಳು. ತಂಗಿ ದೇವರನ್ನು ನೆನೆದು ಕುಳಿತುಕೊಂಡಳು. ದೊಡ್ಡವಳು ಒಂದು ತಂಬಿಗೆ ನೀರನ್ನು ಅವಳ ಮೇಲೆ ಸುರಿದಳು. ಸರಿ, ಭೂಮಿಗೂ ಆಕಾಶಕ್ಕೂ ಏಕವಾದ ಹಾಗೆ, ತಂಗಿ ಹೂವಿನ ಗಿಡವಾದಳು. ಆಗ ಅಕ್ಕ, ಸುಳಿ, ಎಲೆ, ತೊಟ್ಟು ಮುರಿಯದ ಹಾಗೆ ಹೂವನ್ನು ಬಿಡಿಸಿಕೊಂಡಳು. ಬೇಕಾದಷ್ಟು ಹೂವು ಕಿತ್ತುಕೊಂಡ ಮೇಲೆ ಮತ್ತೊಂದು ತಂಬಿಗೆ ನೀರನ್ನು ಗಿಡದಮೇಲೆ ಸುರಿದಳು. ಯಥಾಸ್ಥಿತಿಯಂತೆ ತಂಗಿ ಲಕ್ಷಣವಾಗಿ ಮನುಷ್ಯಳಾದಳು. ಮಂಡೆ ಒದರಿಕೊಂಡು ಎದ್ದು ನಿಂತಳು. ಅನಂತರ ಇಬ್ಬರೂ ಆ ಹೂವನ್ನೆಲ್ಲ ಬುಟ್ಟಿಗೆ ತುಂಬಿ ಮನೆಗೆ ತಂದರು. ಹೂವು ಗಮಗಮ ಅನ್ನುತ್ತಿತ್ತು. ಇಬ್ಬರೂ ಸೇರಿ ಹೂವು ಕಟ್ಟಿದರು. "ಎಲ್ಲಿಗೆ ತಗೊಂಡು

ಹೋಗಿ ಮಾರಲಿ" ಅಂದಳು ದೊಡ್ಡವಳು, "ಆಕೆಯು, ದೊರೆಮನೆಗೆ ತಗೊಂಡು ಹೋಗು. ಅವರು ಹೆಚ್ಚಿಗೆ ಹಣ ಕೊಡುತ್ತಾರೆ. ಅವ್ವ ನಮಗೋಸ್ಕರ ಯಾವಾಗಲೂ ಕೂಲಿ ಮಾಡುತ್ತಿರುತ್ತಾಳೆ. ಹೆಚ್ಚುಹಣ ಕೂಡಿಹಾಕಿ ಅಮ್ಮನಿಗೆ ತೋರಿಸೋಣ" ಅಂದಳು ಚಿಕ್ಕವಳು.

ಅಕ್ಕ ಒಂದು ಬುಟ್ಟಿಯಲ್ಲಿ ಹೂವನ್ನೆಲ್ಲ ಇಟ್ಟುಕೊಂಡು, "ಹೂವು ಬೇಕೇನ ಹೂವು" ಅಂತ ಕೂಗಿಕೊಂಡು ದೊರೆಯ ಮನೆಮುಂದೆ ಬಂದಳು, ದೊರೆ ಚಿಕ್ಕಮಗಳು "ಅಮ್ಮ, ಅಮ್ಮ, ಹೂವು ಗಮಗಮ ಅಂತಾವೆ ಕೊಡಿಸಿಕೊಡು ಅಂತ ತನ್ನ ತಾಯಿಯನ್ನು ಕೇಳಿದಳು. "ಸರಿ ಕೂಗಮ್ಮ" ಅಂದಳು, ದೊರೆಮಗಳು ಕೂಗಿದಳು. ದೊರೆ ಹೆಂಡತಿ ಹೂವನ್ನು ನೋಡಿದಳು. ಚೆನ್ನಾಗಿತ್ತು ಆದ್ದರಿಂದ, "ಎಷ್ಟಮ್ಮ ಬೆಲೆ?" ಅಂತ ಕೇಳಿದಳು. "ಎಷ್ಠಾನ ಕೊಡಿರಪ್ಪ: ನಾವು ಬಡವರು" ಅಂದಳು ಅಕ್ಕ. ದೊರೆ ಹೆಂಡತಿ ಹೂವು ತಗೊಂಡು ಒಂದು ಮೊಗೆ ಹಣ ಕೊಟ್ಟು ಕಳುಹಿಸಿದಳು, ಅಕ್ಕ ಮೊಗೆ ಹಣ ತಂದು ತಂಗಿಗೆ ತೋರಿಸಿದಳು.ತಂಗಿ, "ಅಕ್ಕಯ್ಯ ಅಮ್ಮನಿಗೆ ಹೇಳಬೇಡ, ಮುಚ್ಚಿಡು" ಅಂದಳು; ಹೀಗೆಯೆ ಕೆಲವು ದಿನ ಮಾಡಿದರು. ಒಟ್ಟು ಐದು ಮೊಗೆ ಹಣವಾಯಿತು. ಆಕ್ಕ "ಅಮ್ಮಗೆ ತೋ-ರಿಸೋಣ" ಅಂದಳು "ಬೇಡವೆ ತಂಗಿ, ಅಮ್ಮ ಹೊಡಿತಾಳೇ" ಅಂತ ಅವರವರೆ ಮಾತನಾಡಿಕೊಂಡರು, ಈ ಹುಡುಗಿಯರಿಗೆ ಸಂಪಾದನೆ ಮಾಡೋ ಆಶೆ.

ಈ ಹೂವು ದೊರೆಮಗನ ಕಣ್ಣಿಗೆ ಬಿತ್ತು. ಒಳ್ಳೆ ಗಮಗಮ ಅನ್ನುತ್ತಿತ್ತು. ಸೊಗಸಾದ ಹೂವನ್ನು ಅವನೆಂದೂ ನೋಡೇ ಇರಲಿಲ್ಲ. ಇದು ಯಾವ ಗಿಡದ್ದು. ಇದನ್ನು ಎಲ್ಲಿ ಬೆಳೀತಾರೆ, ಅರಮನೆಗೆ ಯಾರು ತಂದು ಕೊಡ್ತಾರೆ", ಎಂದೆಲ್ಲ ಯೋಚನೆ ಮಾಡಿದ, ಆ ದೊಡ್ಡ ಹುಡುಗಿ ತಂದು ಕೊಡುವುದನ್ನು ನೋಡಿ, ಅವಳನ್ನೇ ಹಿಂಬಾಲಿಸಿದ. ಅವಳ ಮನೆ ಹತ್ತಿರ ವೇಷಮರೆಸಿಕೊಂಡು ಹೋಗಿ ನೋಡಿದ. ಆ ಮುದುಕಿ ಮನೆಯ ಒಳಗಡೆಯೇ ಆಗಲಿ, ಈ ಮನೆಯ ಸುತ್ತಮುತ್ತಲೇ ಆಗಲಿ ಒಂದು ಹೂವಿನ ಗಿಡವಿರಲಿಲ್ಲ. ಅವನಿಗೆ ಆಶ್ಚರ್ಯವಾಯಿತು. ಇಂಥ ಹೂವು ಇವರಿಗೆಲ್ಲಿಂದ ಬರುತ್ತದೆ ಎಂದು ಯೋಚನೆ ಮಾಡಿ ಅರಮನೆಗೆ ಬಂದ. ಮಾರನೆಯ ದಿನ ಬೆಳಿಗ್ಗೆ ಸೂರ್ಯ ಹುಟ್ಟುವ ಮೊದಲೇ ಹೋಗಿ ಹುಡುಗಿಯರ ಮನೆ ಮುಂದಿದ್ದ ದೊಡ್ಡ ಮರದ ಮೇಲೆ ಕುಳಿತುಕೊಂಡ.

ಅಂದೂ ಸಹ ಹುಡುಗಿಯರು. ಆ ಮರದಡಿ ಸಾರಿಸಿ ಗುಡಿಸಿದರು. ತಂಗಿ ಯಥಾಪ್ರಕಾರ ಹೂವಿನ ಗಿಡವಾದಳು. ಅಕ್ಕ ಎಚ್ಚರಿಕೆಯಿಂದ ಹೂ ಬಿಡಿಸಿಕೊಂಡಳು. ಆನಂತರ ಪುನಃ ಹೂವಿನ ಗಿಡವಾಗಿದ್ದ ತಂಗಿ ಮನುಷ್ಯಳಾದಳು.

ಇದೆಲ್ಲವನ್ನೂ ಮರದ ಮೇಲಿದ್ದ ದೊರೆಮಗ ನೋಡಿಕೊಂಡ ಆಮೇಲೆ ಸೀದಾ ಅರಮನೆಗೆ ಹೋಗಿ ಮಂಚದ ಮೇಲೆ ಮಕಾಡೆ ಮಲಗಿಕೊಂಡ. ತಂದೆ–ತಾಯಿ ಬಂದು ಅವನನ್ನು ವಿಚಾರಿಸಿದರು. ಏನೂ ಮಾತಾಡದೆ ಸುಮ್ಮನೆ ಮಲಗಿದ್ದ. ಆಗ ಮಂತ್ರಿಮಗ ಬಂದು, "ಏನಾಯಿತು? ಯಾರಾದರೂ ಏನಾದರೂ ಅಂದರಾ? ಈಗ ಏನಾಗಬೇಕು" ಅಂತ ಕೇಳಿದ. ಆಗ ದೊರೆಮಗ ಮೆಲ್ಲಗೆ ಹೂವು ಆಗೋ ಹುಡುಗಿ ವಿಚಾರವೆಲ್ಲ ಹೇಳಿದ. "ಇಷ್ಟೇತಾನೆ" ಎಂದು ಮಂತ್ರಿಮಗ ದೊರೆ ಹತ್ತಿರ ಹೋಗಿ ಹೇಳಿದ. ದೊರೆ ಮಂತ್ರೀನ ಕಳುಹಿಸಿ, ಮುದುಕಿಯನ್ನು ಅರಮನೆಗೆ ಕರೆಸಿಕೊಂಡ ಆಕೆ ಗಾಬರಿಯಲ್ಲಿ ನಡುಗುತ್ತಾ ಬಂದಳು. ಹರಿದ ಹಳೆ ಬಟ್ಟೆಯಲ್ಲಿ ಬಂದಿದ್ದಳು, ಬಾಗಿಲ ಹತ್ತಿರ ಕುಳಿತುಕೊಂಡಳು. ದೊರೆ ಅವಳನ್ನು ಒಳಗೆ ಕರೆದು, ಮೃದುವಾಗಿ, "ಏನಮ್ಮ ನಿನ್ನ ಮನೆಯಲ್ಲಿ ಎರಡು ಹೆಣ್ಣುಮಕ್ಕಳು ಇದೆಯಲ್ಲ, ಅದರಲ್ಲಿ ಒಬ್ಬಳನ್ನು ನಮ್ಮ ಮನೆಗೆ ಕೊಡ್ತೀಯಾ?" ಅಂತ ಕೇಳಿದ. "ನನ್ನ ಮನೆ ಹೆಣ್ಣುಮಕ್ಕಳ ವಿಚಾರ ದೊರೆಗೆ ಹೇಗೆ ಗೊತ್ತಾಯಿತು" ಎಂದು ಮುದುಕಿ ಗಾಬರಿಗೊಂಡಳು. "ಆಗಲಿ ಸ್ವಾಮಿ, ನೀವು ಕೇಳುವುದು ಹೆಚ್ಚೋ, ನಾವು ಕೊಡುವುದು ಹೆಚ್ಚೋ" ಅಂದಳು ತಡವರಿಸುತ್ತಾ, ದೊರೆ ಬೆಳ್ಳಿ ತಟ್ಟೆಯಲ್ಲಿ ಅಡಿಕೆ–ಎಲೆ ತಾಂಬೂಲ ಕೊಡಿಸಿದ. ಮುದುಕಿ ಭಯದಿಂದ ಮುಟ್ಟಲೇ ಇಲ್ಲ. ಆದರೆ ದೊರೆ ಬಲವಂತವಾಗಿ ತಾಂಬೂಲಕೊಟ್ಟು ಮುದುಕಿಯನ್ನು ಕಳುಹಿಸಿದ.

ಮುದುಕಿ ಮನೆಗೆ ಬಂದಳು, ಕೈಗೆ ಪೊರಕೆ ತೆಗೆದು ಕೊಂಡು, ಏನೆ ಮುಂಡೇರಾ, ಎಲ್ಲಿಗೆ ಹೋಗಿದ್ದೀರಿ? ದೊರೆ ನಿಮ್ಮನ್ನು ಕೇಳಬೇಕಾದರೆ ಎಲ್ಲಿಗೆ ಹೋಗಿದ್ದೀರಿ?" ಅಂತ ಇಬ್ಬರನ್ನು ಬೈದು ಹೊಡೆದಳು. ಆ ಹೆಣ್ಣುಮಕ್ಕಳು ಗಾಬರಿಯಾಗಿ ವಿಷಯವೇನೆಂದು ತಿಳಿಯದೆ "ಅಮ್ಮ ನಮ್ಮನ್ನೇಕೆ ಹೊಡೀತ್ಯಾ" ಅಂತ ಅಳುತ್ತಾ ನಿಂತರು. "ನಿಮ್ಮನ್ನು ಹೊಡೆದಿದ್ರೆ ಇನ್ಯಾರನ್ನ ಹೊಡೀಲಿ, ಯಾರ ಮನೆಗೆ ಹೋಗಿದ್ರೇ, ಹೆಂಗೆ ನಿಮ್ಮ ವಿಷಯ ದೊರೆಗೆ ತಿಳೀತು" ಎಂದು ಗದರಿದಳು ಮುದುಕಿ. ಅವರಿಬ್ಬರೂ ಅಂಜುತ್ತಾ ಅಂಜುತ್ತಾ, ಹೂವಿನ ಗಿಡ ಆದದ್ದು, ಹೂ ಮಾರಿದ್ದು, ಹಣ ಕೂಡಿಸಿದ್ದು ಹೇಳಿ, ಐದು ಮೊಗೆ ಹಣ ತೋರಿಸಿದರು "ಮನೆಯಲ್ಲಿ ಹಿರಿಯಳು ನಾನಿರುವಾಗ, ಅದೆಂಗೆ ಮಾಡಿದ್ರೆ ಇದನ್ನೆಲ್ಲ, ಮನುಷ್ಯರು ಹೂವಿನಗಿಡ ಆಗ್ತಾರೇನೆ, ಸುಳ್ಳು–ಸುಳ್ಳೇ ಬೊಗಳ್ತೀರಾ? ಅದೆಂಗೆ ಹೂವಿನ ಗಿಡ ಆಗ್ತೀರ ತೋರಿಸ್ರೇ" ಎಂದು ಹೇಳುತ್ತಾ ಮತ್ತಷ್ಟು ಬಡಿದಳು. ಕಡೆಗೆ ಚಿಕ್ಕವಳು ಹೂವಿನ ಗಿಡವಾಗಿ, ಪುನಃ ಮನುಷ್ಯಳಾಗಿ, ತಾಯಿಯನ್ನು ಸಮಾಧಾನ ಪಡಿಸಿದಳು.

ಮಾರನೆದಿನ ಮುದುಕಿ ಮನೆಮುಂದೆ ಆಳುಗಳು ಬಂದು, "ದೊರೆ ಅಪ್ಪಣೆಯಾಗಿದೆ ಬಾರಮ್ಮ" ಅಂತ ಕರೆದರು. ಮುದುಕಿ ಅರಮನೆಗೆ ಹೋಗಿ, "ಏನು ಸ್ವಾಮಿ ಬರಹೇಳಿದ್ದು" ಎಂದು ಕೇಳಿದಳು. "ಏನಮ್ಮ ಈಗ ಲಗ್ನ ಕಟ್ಟಿಸಬೇಕು, ಏನು ಹೇಳಿ" ಎಂದು ದೊರೆ ಕೇಳಿದ, "ಹೇಳೋದೇನು ಬಂತು ಸ್ವಾಮಿ, ತಮ್ಮ ಇಚ್ಛೆಯಂತಾಗಲಿ" ಎಂದಳು ಮುದುಕಿ.

ಲಗ್ನದ ಸಿದ್ಧತೆಯಲ್ಲಾ ಪ್ರಾರಂಭವಾಯ್ತು, ಆಕಾಶದಗಲ ಹಸೆಬರೆದರು. ಭೂಮ್ತಾಯಗಲ ಚಪ್ಪರ ಹಾಕಿದರು. ನೆಂಟರಿಷ್ಟರೆಲ್ಲ ಬಂದರು. ಒಳ್ಳೆ ಮುಹೂರ್ತದಲ್ಲಿ, ಹೂವಿನ ಗಿಡವಾಗಿದ್ದ ಹುಡುಗಿ ಜೊತೆಯಲ್ಲಿ ರಾಜಕುಮಾರನ ಲಗ್ನವಾಯಿತು. ಅರಮನೆಯಲ್ಲಿ ಇವರಿಬ್ಬರನ್ನು ಏಕಾಂತದಲ್ಲಿ ಬಿಟ್ಟರು. ಇವನಷ್ಟಕ್ಕೆ ಇವನಿದ್ದಾನೆ. ಅವಳಷ್ಟಕ್ಕೆ ಅವಳಿದ್ದಾಳೆ. ಅವರೇ ಮಾತನಾಡಸಲಿ ಅಂತ ಇವಳು, ಅವಳೇ ಮಾತನಾಡಿಸಲಿ ಅಂತ ಅವನು. ಹೀಗೆ ಇಬ್ಬರೂ ಗುಮ್ಮಾಗಿ ಸುಮ್ಮನಿದ್ದರು. "ಏನು ಅವರು ಮಾತನಾಡಿಸಲೇ ಇಲ್ಲವಲ್ಲ, ಮತ್ತೇಕೆ ಮದುವೆಯಾದರು" ಅಂತ ಯೋಚನೆಮಾಡಿ, "ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?" ಅಂತ ರಾಜಕುಮಾರನನ್ನು ಕೇಳಿದಳು." "ನಾನು ಹೇಳಿದ ಹಾಗೆ ಕೇಳಿದ್ರೆ ಮಾತಾಡ್ತೀನಿ, ಇಲ್ದೆ ಇದ್ರೆ ಇಲ್ಲ" ಎಂದು ಒರಟಾಗಿ ಹೇಳಿದ ದೊರೆಮಗ. "ಪತಿಮಾತು ಕೇಳದೇ ಉಂಟೇ? ಅದೇನು ಹೇಳಿ" ಅಂದಳು. ಮತ್ತೆ ನೀನು ಹೂವಿನಗಿಡ ಆಗ್ತೀಯಲ್ಲ ಆಗು, ಹೂವ ಹಾಸಿಕೊಂಡು, ಹೊದ್ಕೊಂಡು ಮಲಿಕೋಬೇಕು" ಅಂದ. "ಸ್ವಾಮಿ, ನಾನು ದೇವರಲ್ಲ, ದೆವ್ವವಲ್ಲ, ಎಲ್ಲಾರ ಹಾಗೆ ನಾನೂ ನರಮನುಷ್ಯಳು. ನರಮನುಷ್ಯ ಹೂವಿನ ಗಿಡ ಆಗೋದುಂಟೇ?" ಎಂದಳು ದೈನ್ಯದಿಂದ. ಈ "ಕಳ್ಳಾಟವೆಲ್ಲ ಬೇಡ, ಆವತ್ತು ನೀನು ಹೂವಿನಗಿಡ ಆಗಿದ್ದನ್ನು ಕಣ್ಣಾರೆ ನಾನು ನೋಡಿದೆ.... ನನ್ನ ಮುಂದೆ ನೀನು ಹೂವಿನಗಿಡ ಆಗದಿದ್ದ ಮೇಲೆ ಇನ್ಯಾರ ಮುಂದೆ ಆಗ್ತಿಯಾ" ಎಂದು ಸಿಟ್ಟಾದ, ಕಣ್ಣೀರನ್ನು ಸೀರೆ ಸೆರಗಿನಿಂದ ಒರೆಸಿಕೊಂಡು, "ಸ್ವಾಮಿ ಸಿಟ್ಟು ಮಾಡಬೇಡಿ, ಇಷ್ಟು ಹಠ ಬಂದ ಮೇಲೆ ನೀವು ಹೇಳಿದಂತೆ ನಾನು ಕೇಳ್ತೀನಿ. "ಈಗ ಎರಡು ತಂಬಿಗೆ ನೀರು ತಂದುಕೊಡಿ" ಎಂದು ಕೇಳಿದಳು. ಅವನು ತಂದುಕೊಟ್ಟ, ಅವೆರಡನ್ನು ಮಂತ್ರಿಸಿದಳು. ಅಷ್ಟರಲ್ಲಿ ಇವನು ಕೊಠಡಿ ಕಿಟಕಿ ಬಾಗಿಲೆಲ್ಲ ಮುಚ್ಚಿದ "ನೋಡಿ ಗಿಡದ ತೊಟ್ಟು, ಎಲೆ, ಕೊಂಬೆ ಮುರಿಯದ ಹಾಗೆ ನಿಮಗೆ ಬೇಕಾದಷ್ಟು ಹೂವನ್ನೆಲ್ಲ ಬಿಡಿಸಿಕೊಳ್ಳಿ" ಎಂದು ಹೇಳಿದಳು. ಈ ತಂಬಿಗೆಯ ನೀರನ್ನು ಸುರಿಯುವ ವಿಧಾನವನ್ನು ಹೇಳಿ, ದೇವರನ್ನು ನೆನೆಯುತ್ತಾ, ಕುಳಿತಳು, ದೊರೆಮಗ ಒಂದು ತಂಬಿಗೆ ನೀರು ಸುರಿದ ಕೂಡಲೆ

ಹೂವಿನಗಿಡ ಆದಳು. ಹೂವಿನ ಪರಿಮಳ ಅರಮನೆ ತುಂಬೆಲ್ಲ ಹಬ್ಬಿತು. ಈತ ತನಗೆ ಬೇಕಾದಷ್ಟು ಹೂವು ಕಿತ್ತು. ಅನಂತರ ಮತ್ತೊಂದು ತಂಬಿಗೆಯ ನೀರನ್ನು ಗಿಡದ ಮೇಲೆ ಸುರಿದ, ಪುನಃ ಮನುಷ್ಯಳಾದಳು. ಮಂಡೆ ಒದರಿಕೊಂಡು ನಗುಮುಖದಿಂದ ಮೇಲೆದ್ದಳು. ಇಬ್ಬರೂ ಆನಂದದಿಂದ ಹೂವು ಹಾಸಿಕೊಂಡು ಹೊದ್ಕೊಂಡು ಮಲಗಿದರು.

ಹೀಗೆ ಕೆಲವುದಿನ ಮಾಡಿದರು. ಪ್ರತಿದಿನ ಬೆಳಿಗ್ಗೆ ಬಾಡಿದ ಹೂವನ್ನೆಲ್ಲ ತಮ್ಮ ಕೊಠಡಿಯ ಕಿಟಕಿಯಿಂದ ಆಚೆಗೆ ಹಾಕುತ್ತಿದ್ದರು. ಈ ಹೂವಿನ ರಾಶಿ ಬೆಟ್ಟದ ಹಾಗೆ ಬಿದ್ದಿತ್ತು.

ದೊರೆಯ ಚಿಕ್ಕಮಗಳು, ಈ ಬಾಡಿದ ಹೂವಿನ ರಾಶಿಯನ್ನು ಬಂದು ನೋಡಿ, "ನೋಡಮ್ಮ, ಅತ್ತಿಗೆ ಮುಡಿದು ಬಿಸಾಕಿದ ಬಾಡಿದ ಹೂವೇ ಒಂದು ಬೆಟ್ಟ ಬಿದ್ದ ಹಾಗೆ ಬಿದ್ದಿದೆ. ನನಗೊಂದು ದಿನ ಒಂದು ಹೂವು ಕೊಡ್ತಿಲ್ಲ" ಎಂದು ತನ್ನ ತಾಯಿಗೆ ದೂರು ಹೇಳಿದಳು. "ಹೂವು ಬೇಕಾದರೆ ಕೊಡಿಸಿ ಕೊಡ್ತೀನಿ, ಸುಮ್ಮನಿರಮ್ಮ" ಎಂದು ಸಮಾಧಾನ ಮಾಡಿದಳು ತಾಯಿ.

ಒಂದು ದಿನ ದೊರೆಮಗ ಎಲ್ಲೋ ಹೊರಗೆ ಹೋಗಿದ್ದ. ಈ ಹೂಗಳ ರಹಸ್ಯವನ್ನು ಕಂಡುಹಿಡಿದ ದೊರೆ ಮಗಳು ತನ್ನ ಸ್ನೇಹಿತೆಯರಿಗೆಲ್ಲ. "ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗೋಣ. ನಮ್ಮ ಅತ್ತಿಗೆ ಹೂವಿನಗಿಡ ಆಗ್ತಾಳೆ, ನೀವೆಲ್ಲರೂ ಬನ್ನಿ. ಗಮಗಮ ಅನ್ನೋ ಹೂವು ಬೇಕಾದಷ್ಟು ಕೊಡ್ತೀನಿ" ಎಂದು ಹೇಳಿ ಬಂದಳು. ಅನಂತರ ತಾಯಿಯಲ್ಲಿ ಅನುಮತಿ ಕೇಳಿದಳು. ಆಕೆ, "ಹೋಗಮ್ಮ ಯಾರು ಬೇಡ ಅಂತಾರೆ" ಅಂದಳು, ಆಗ "ಅದು ನಾನೊಬ್ಬಳೇ ಹೋಗಲಾ, ಅತ್ತಿಗೆಯನ್ನು ಕಳಿಸಮ್ಮ" ಅಂದಳು ತಾಯಿ. ಅಷ್ಟುಹೊತ್ತಿಗೆ ಅವಳ ಅಣ್ಣಯ್ಯನೂ ಅಲ್ಲಿಗೆ ಬಂದ. "ಅಣ್ಣಯ್ಯ, ಅಣ್ಣಯ್ಯ! ನಾವೆಲ್ಲ ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗ್ತೀವಿ, ಅತ್ತಿಗೇನೂ ಕಳಿಸು" ಅಂದಳು. ಆಗ ಅವಳ ಅಣ್ಣ, "ನನ್ನಿಷ್ಟ ಅಲ್ಲಮ್ಮ ಕಳ್ಸಕ್ಕೆ ಅವೆಲ್ಲ ತಾಯಿಯವರ ಇಷ್ಟ" ಅಂದ. ಆಗ ತನ್ನ ತಾಯಿಯಲ್ಲಿ ಹೋಗಿ, "ಅಮ್ಮ ಅಣ್ಣನನ್ನು ಕೇಳಿದರೆ, ಅಮ್ಮನನ್ನು ಕೇಳು ಅಂತಾನೆ ಕಳಿಸಲಾರದೆ ಯಾವುದೇ ನೆಪ ಹೇಳ್ತಿ, ನನಗಿಂತ ಹೆಚ್ಚಿನವಳಾ ನಿನ್ನ ಸೊಸೆ" ಅಂದಳು; ಬಿಂಕದಿಂದ. "ಹಾಗೆಲ್ಲ ಒರಟು ಮಾತಾಡಬೇಡ, ನಿನ್ನ ಅತ್ತಿಗೆಯನ್ನು ಕರಕೊಂಡು ಲಕ್ಷಣವಾಗಿ ಹೋಗಿ, ಸಂಜೆ ಹೊತ್ತಿಗೆ ಜೋಪಾನವಾಗಿ ಮನೆಗೆ ಬನ್ನಿ" ಎಂದು ತಾಯಿ ಹೇಳಿದಳು.

ಎಲ್ಲಾರು ಉಯ್ಯಾಲೆ ಆಡೋಕೆ ಸುರಹೊನ್ನೆ ತೋಟಕ್ಕೆ ಹೋದರು. ಅಲ್ಲೊಂದು ದೊಡ್ಡ ಮರಕ್ಕೆ ಉಯ್ಯಾಲೆ ಕಟ್ಟಿದರು. ಎಲ್ಲಾರು ಸಂತೋಷದಿಂದ ಉಯ್ಯಾಲೆ ಆಡ್ತಾ ಇದ್ದರು. ಆಗ ಇದ್ದಕ್ಕಿದ್ದಂತೆ ಈ ದೊರೆ ಚಿಕ್ಕಮಗಳು, ಎಲ್ಲಾರನ್ನು ಉಯ್ಯಾಲೆಯಿಂದ ಇಳಿಸಿದಳು. ತನ್ನ ಅಣ್ಣನ ಹೆಂಡತಿಯನ್ನು ಕುರಿತು, "ಅತ್ತಿಗೆ, ನೀನು ಹೂವಿನಗಿಡ ಆಗ್ತೀಯಲ್ಲ ಆಗು ಅತ್ತಿಗೆ, ಸ್ನೇಹಿತೆಯರೆಲ್ಲಾ ಬರೀ ತಲೇಲಿ ಬಂದವರೆ" ಎಂದಳು. "ಅಯ್ಯೋ ದೇವರೇ, ಇದ್ಯಾರು ನಿನಗೆ ಹೇಳಿದ್ದು ನಾನು ನಿಮ್ಮ ಹಾಗೆ ಮನುಷ್ಯಳೇ!... "ಅಲ್ಲ ಅತ್ತಿಗೆ ನನ್ನ ಸ್ನೇಹಿತೆಯರೆಲ್ಲ ಬರೀ ತಲೇಲಿ ಬಂದಿದ್ದಾರೆ, ಹೂವಿನಗಿಡ ಆಗು ಅತ್ತಿಗೆ ಅಂದ್ರೆ ಏನೆಲ್ಲ ಮಾತಾಡ್ತೀರಾ. ನಮ್ಮುಂದೆ ಆಗದೆ, ಇನ್ನಾರ ಮುಂದೆ ಹೂವಿನಗಿಡ ಆಗಾಕೆ ಹೋಗ್ತಿಯಾ ಎಂದು ನಿಷ್ಠುರವಾಗಿ ಮಾತಾಡಿದಳು.

"ಛೆ ಪಾಪಿ, ಎಂಥಾ ಕೆಲಸ ಆಯ್ತು ಇಲ್ಲಿಗೆ ನಾನು ಬಂದದ್ದೇ ತಪ್ಪಾಯಿತು" ಎಂದು ವ್ಯಥೆಪಟ್ಟು, ಎರಡು ತಂಬಿಗೆ ನೀರು ತರಿಸಿ, ಅದನ್ನು ಮಂತ್ರಿಸಿದಳು. ಅವುಗಳನ್ನು ಸುರಿಯುವ, ಹೂವನ್ನು ಕೀಳುವ ವಿಧಾನವನ್ನೆಲ್ಲ ವಿವರವಾಗಿ ಹೇಳಿ, ದೇವರನ್ನು ನೆನೆದು ಕುಳಿತಳು, ಈ ಹುಡುಗಿಯರು ಆ ವಿವರವನ್ನು ಸರಿಯಾಗಿ ಆಲಿಸದೆ, ನಿರ್ಲಕ್ಷ್ಯದಿಂದ, ಒಂದು ತಂಬಿಗೆ ನೀರನ್ನು ಅಡ್ಡಾದಿಡ್ಡಿ ಅವಳ ಮೇಲೆ ಸುರಿದರು. ಆಕೆ ಅರ್ಧಂಬರ್ಧ ಗಿಡ ಆದಳು. ಅಷ್ಟು ಹೊತ್ತಿಗೆ ಸಾಯಂಕಾಲವಾಗಿತ್ತು. ಇದ್ದಕ್ಕಿದಂತೆ ಗುಡುಗು ಸಿಡಿಲಿನಿಂದ ಕೂಡಿದ ಮಳೆ ಪ್ರಾರಂಭವಾಯಿತು. ಆಗ ಇವರು ಹೂವು ಕೀಳೋ ಸಂಭ್ರಮದಲ್ಲಿ ತೊಟ್ಟು, ಎಲೆ, ಸುಳಿ, ಕಿತ್ತು, ರೆಂಬೆನೆಲ್ಲ ತರದು ಬಿಟ್ಟಿದ್ದರು. ಈ ಮಳೆಗೆ ಹೆದರಿ ಮನೆಗೆ ಹೋಗೋ ಆತುರದಲ್ಲಿ, ಮತ್ತೊಂದು ತಂಬಿಗೆ ನೀರನ್ನು ಅಡ್ಡಾದಿಡ್ಡಿ ಅದರ ಮೇಲೆ ಸುರಿದು ಹೊರಟುಬಿಟ್ಟರು. ಆಕೆ ಪುನಃ ಮನುಷ್ಯಳಾಗುವಾಗ ಕೈಯಿಲ್ಲದ ಕಾಲಿಲ್ಲದ ಅರ್ಧಂಬರ್ಧ ದೇಹವಾಗಿದ್ದಳು. ಮೈಯ್ಯೆಲ್ಲ ಗಾಯವಾಗಿತ್ತು. ಆ ಮಳೆ ನೀರಲ್ಲಿ ತೇಲಿಕೊಂಡು, ಚರಂಡಿಯಲ್ಲಿ ಬಿದ್ದು ಬಹುದೂರ ಹೋಗಿ ಅಲ್ಲೊಂದು ಮೋರಿಯಲ್ಲಿ ಸಿಕ್ಕಿಕೊಂಡಳು.

ಮಾರನೆಯ ದಿನ ಬೆಳಿಗ್ಗೆ ಅತ್ತಕಡೆಯಿಂದ ಏಳೆಂಟು ಅರಳೆ ತುಂಬಿದ್ದ ಗಾಡಿಗಳು ಬರುತ್ತಿದವು, ಆಗ ಇದು, 'ಹ್ಞಾ... ಹ್ಞಾ...' ಅಂತ ಕೊರಗುತ್ತಿತ್ತು. ಮೊದಲ ಗಾಡಿಯವನು. "ಇದೇನು ನೋಡ್ರೋ" ಅಂದ. ಎರಡನೆಯವನು, "ಹೊಡೀರಲೇ ಗಾಡೀನ, ಗಾಳಿಯೋ ಪಿಶಾಚಿಯೋ ಏನೋ" ಅಂದ. ಆದರೆ ಕೊನೆ ಗಾಡಿಯವನು, ಗಾಡಿ ನಿಲ್ಲಿಸಿ ನೋಡ್ತಾನೆ, ಒಂದು ದೇಹದ ಮುದ್ದೆ!, ಮುಖ ಮಾತ್ರ ಚೆನ್ನಾಗಿತ್ತು. ಬಟ್ಟೆಯಿಲ್ಲ, ಬರೆಯಿಲ್ಲ. "ಅಯ್ಯೋ ಮನುಷ್ಯ

ಕಣಪ್ಪ" ಅಂತ ನೊಂದು, ಬೇರೆಯವರು ಅಸಹ್ಯದ ಮಾತಿಗೆ ಬೆಲೆ ಕೊಡದೆ, ತನ್ನ ತಲೆಮೇಲಿದ್ದ ವಸ್ತ್ರವನ್ನು ಅದರ ಮೇಲೆ ಹಾಕಿ ಕರತಂದು ಗಾಡಿಯಲ್ಲಿ ಕುಳ್ಳರಿಸಿದ. ಮುಂದೊಂದು ಊರು ಸಿಕ್ಕಿತು. ಅಲ್ಲೊಂದು ಹಾಳು ಮಂಟಪ, ಅಲ್ಲಿ, ಗಾಡಿ ನಿಲ್ಲಿಸಿ, 'ಇದನ್ನು' ಆ ಮಂಟಪದಲ್ಲಿಟ್ಟು, "ಯಾರಾದರು ಅನ್ನ ಕೊಟ್ಟರೆ ಜೀವ ಉಳಿಸಿಕೋ" ಅಂತ ಹೇಳಿ ಗಾಡಿ ಹೊಡೆದುಕೊಂಡು ಮುಂದೆ ಹೋದ.

ಇತ್ತ ದೊರೆಯ ಚಿಕ್ಕಮಗಳು ಅರಮನೆಗೆ ಬಂದಳು, ಇವಳೊಬ್ಬಳೇ ಬಂದದ್ದನ್ನು ತಾಯಿ ಕಂಡು, "ಎಲ್ಲಮ್ಮ ಅತ್ತಿಗೆ? ನಿಮ್ಮ ಅಣ್ಣಯ್ಯ ಕಂಡರೆ ಏನಂತಾನಮ್ಮ" ಎಂದು ಕೇಳಿದಳು. "ಅಯ್ಯೋ ಯಾರಿಗೆ ಗೊತ್ತು. ಈಗ ನಾವೆಲ್ಲ ಬರಲಿಲ್ವಾ, ಅವಳು ಎಲ್ಲಿ ಹೋದಳೋ?" ಅಂದಳು. "ಅಯ್ಯೋ ಹಂಗೆ ಅನ್ನಬಾರದಮ್ಮ. ನಿಮ್ಮ ಅಣ್ಣಯ್ಯ ಸುಮ್ಮನೆ ಬಿಟ್ಟಾನ, ವಿಚಾರ ತಿಳಿದುಕೊಳ್ಳಲು ಪ್ರಯತ್ನಿಸಿದಳು. ಆದರೆ ಮಗಳು ಬಾಯಿಗೆ ಬಂದ ಹಾಗೆ ಸುಳ್ಳನ್ನು ಹೇಳಿದಳು. ನಡೆದ ವಿಚಾರ ತಾಯಿಗೆ ತಿಳಿಯಲೇ ಇಲ್ಲ. ಇವಳೇನೋ ಮಾಡಿಬಂದಿದ್ದಾಳೆಂದು ತಾಯಿಗೆ ಅನುಮಾನ ಬಂತು. ಹೆಂಡತಿಯನ್ನು ಕಾಣದೆ ದೊರೆಮಗ ತಾಯಿಯನ್ನು ವಿಚಾರಿಸಿದ.

"ಅಮ್ಮ ಅಮ್ಮ"

"ಏನಪ್ಪ"

"ಅದೇನಮ್ಮ ಉಯ್ಯಾಲೆ ಆಡೋಕೆ ಹೋದವಳ ಸುಳಿವೇ ಇಲ್ವಲ್ಲ?"

"ಅಯ್ಯೋ ರಾಮ, ಮಲಗೋ ಮನೆಯಲ್ಲಿ ಇರಬಹುದೆಂದು ನಾ ತಿಳಿದಿದ್ದೆ, ನೀನು ನನ್ನೇ ಕೇಳ್ತಿಯಲ್ಲಪ್ಪ" ಅಂದಳು ತಾಯಿ.

"ಓ ಏನೋ ಆಗಬಾರದ್ದು ಆಗಿದೆ" ಅಂತ ತಿಳಿದ ದೊರೆಮಗ: ಮಂಚದ ಮೇಲೆ ಮಕಾಡೆ ಮಲಗಿಬಿಟ್ಟ, ಐದು ದಿನ ಆಯಿತು. ಆರು ದಿನ ಆಯಿತು. ಹದಿನೈದು ದಿನ ಆಯಿತು, ಹೆಂಡತಿ ಪತ್ತೆಯಿಲ್ಲ, "ಬಾವಿಗೆ ನೂಕಿದ್ರಾ! ಕೆರೆಗೆ ನೂಕಿದ್ರಾ!" ಅಂತ ತಂದೆ ತಾಯಿನ ಕೇಳಿದ, ಅವರೇನು ಹೇಳ್ತಾರೆ. ಅವರೂ ಚಿಂತೆ ಮಾಡ್ತಾ ಕೊರಗ್ತಾ ಇದ್ದರು. ಹೆಂಡತಿ ಇಲ್ಲದೆ ಅವನಿಗೆ ಬೇಜಾರಾಗಿ, ಗೋಸಾಯಿ ದಿರ್ಸು ಹಾಕಿಕೊಂಡು, ದೇಶಾಂತರ ಹೊರಟ.

ಇತ್ತ ಮೈಯೆಲ್ಲ ಗಾಯವಾಗಿ ಅರ್ಧಂಬರ್ಧ ದೇಹವಾಗಿದ್ದ 'ಇವಳು' ತನ್ನ ಗಂಡನ ದೊಡ್ಡಕ್ಕಳನ್ನು ಮದುವೆ ಮಾಡಿಕೊಟ್ಟಿದ್ದ ಪಟ್ಟಣದಲ್ಲಿ ಬಿದ್ದಿದ್ದಳು. ಆ ಪಟ್ಟಣದ ಅರಮನೆಯ ದಾದೇರು, ಗೌಡೇರು ದಿನವಹಿ ನೀರಿಗೆ ಹೋಗಿ ಬರುವಾಗ ಇವಳನ್ನು ನೋಡುತ್ತಿದ್ದರು. ನೋಡಿ "ಮಹಾರಾಜನ ಮಗಳಿದ್ದ ಹಾಗೆ

ಅವಳೆ" ಅಂದುಕೊಳ್ಳುತ್ತಿದ್ದರು. ಒಬ್ಬಳು ನೋಡಿ ತಾಳಲಾರದೆ, "ಅಮ್ಮಾವ್ರಿಗೆ ಹೇಳಬೇಕು" ಅಂದುಕೊಂಡು ಅರಮನೆಗೆ ಹೋಗಿ ಇವಳ ವಿಚಾರ ಹೇಳಿ, "ಅಮ್ಮ... ಅಮ್ಮ, ಅವಳು ನಿಮ್ಮ ತಮ್ಮನ ಹೆಂಡತಿ ಇದ್ದ ಹಾಗೆ ಇದ್ದಾಳೆ ಕಣಮ್ಮ ದುರಬಿನು ಹಾಕಿ ನೋಡಿ" ಎಂದಳು. ರಾಣಿ ನೋಡಿದಳು. ಒಂದು ತರವಾಗಿ ತಮ್ಮನ ಹೆಂಡತಿಯ ಹಾಗೆ ಕಾಣುತ್ತಿತ್ತು. ಅಮ್ಮ, ಅಮ್ಮ, ಕರೆದು ಅರಮನೆ ಮುಂದೆ ಕುಳ್ಳಿರಿಸಿದರೆ ಎಷ್ಟೋ ಕಳೇವಾಗಿರುತ್ತೆ, ಕರೆದುಕೊಂಡು ಬರಲಾ" ಅಂದಳು ಒಬ್ಬ ದಾದಿ, "ಹೋಗೆ, ಹೋಗೆ, ಹೋಗೆ, ಅವಳ ಸೇವೆಮಾಡಿ ಅನ್ನ ಹಾಕಬೇಕಾಗುತ್ತೆ" ಎಂದು ತಾತ್ಸಾರ ಮಾಡಿದಳು. ರಾಣಿ, ಮಾರನೆ ದಿನವು ಸಹ ದಾದೇರು, "ಅಪರೂಪದ ರೂಪವತಿ, ಅರಮನೆಗೆ ಬೆಳಕು ಆಗುತ್ತಾಳಮ್ಮ, ಕರೆದು ತರೋಣವೇ" ಅಂತ ಗೋಗರೆದರು. "ಹೋಗಲಿ, ಕರೆದು ತನ್ನಿ, ಅವಳ ಸೇವೆ ನೀವೇ ಮಾಡಬೇಕು," ಅಂದಳು ರಾಣಿ, "ಆಯಿತು ನಾವೇ ಮಾಡ್ತಿವಮ್ಮ" ಎಂದು ಒಪ್ಪಿಕೊಂಡು ಅವಳನ್ನು ಕರೆತಂದು, ನೀರು-ನಿಡಿ ಹೊಯಿದ್ರು, ಬಟ್ಟೆ ಉಡಿಸಿ, ಅರಮನೆ ಬಾಗಿಲಲ್ಲಿ ಕುಳ್ಳಿರಿಸಿದರು. ದಿನವಹಿ ಅವಳ ಮೈಮೇಲಿನ ಗಾಯಗಳಿಗೆ ಔಷಧಿ ಹಾಕಿ ವಾಸಿಮಾಡಿದರು.

ಇತ್ತ ದೊರೆಮಗ, ದೇಶದೇಶವೆಲ್ಲ ತಿರುಗಿ, ತನ್ನ ಅಕ್ಕನ ಪಟ್ಟಣಕ್ಕೆ ಬಂದ. ಬಂದು ಪಟ್ಟಣದ ಬಾಗಿಲಲ್ಲಿ ಕುಳಿತ, ತಿಕ್ಕಲು ಮನುಷ್ಯನ ಹಾಗೆ ಅವನಿಗೆ ಗಡ್ಡಮೀಸೆ ಬೆಳೆದಿತ್ತು. ನೀರಿಗೆ ಹೋಗಿ ಬರುತ್ತಿದ್ದ ದಾದೇರು ಇವನನ್ನು ನೋಡಿ ಅರಮನೆಗೆ ಹೊಗಿ, "ಅಮ್ಮಾವ್ರೆ, ಯಾರೋ ನಿಮ್ಮ ತಮ್ಮ ಕುಳಿತಂಗೆ ಕಾಣುತ್ತೆ. ದುರಬೀನು ಹಾಕಿ ನೋಡಿ" ಅಂತ ಗೋಗರೆದರು. ರಾಣಿ ಉದಾಸಿನವಾಗಿ ಮೇಲು ಮಹಡಿಗೆ ಹೋಗಿ ದುರಬೀನು ಹಾಕಿ ನೋಡಿದಳು. "ಏನೋ ಮುಖದ ಹೋಲಿಕೆ ಹಾಗೇನೇ ಕಾಣುತ್ತೆ. ನನತಮ್ಮ ಜೋಗಿ ಆಗೋದು ಎಂದರೇನು?" ಎಂದು ಬಹಳ ಯೋಚನೆ ಮಾಡಿದಳು ರಾಣಿ, ದಾದೇರ ಕೈಲಿ ಹೇಳಿಕಳುಹಿಸಿದಳು. ಅವರು, "ರಾಣಿ ಅಪ್ಪಣೆಯಾಗಿದೆ ಬನ್ನಿ" ಅಂತ ಅವನನ್ನು ಕರೆದರು. "ಹೋಗಿ, ಹೋಗಿ ಆಕೆ ನನ್ಯಾಕೆ ಕರೀತಾಳೆ" ಅಂದ "ಇಲ್ಲ ಸ್ವಾಮಿ ನಿಮ್ನೇ ಕರೀತಾರೆ ಬನ್ನಿ" ಎಂದು ಬಹಳ ಮೆಹನತ್ತು ಮಾಡಿ ಕರೆದು ತಂದರು. ರಾಣಿ ಅವನನ್ನು ಚೆನ್ನಾಗಿ ನೋಡಿದಳು, ನನ್ನ ತಮ್ಮನೇ ಇರಬೇಕೆಂದುಕೊಂಡಳು.

ಕೂಪ ಕೊಪ್ಪರಿಗೆ ಎಣ್ಣೆ ಕಾಯಿಸಿ, ನೆತ್ತಿಗೆ ಒತ್ತಿಸಿ, ಹಂಡೆ-ಹಂಡೆ ನೀರು ಹಾಕಿ, ನನ್ನ ತಮ್ಮನೇ ಹೊರತು ಬೇರಲ್ಲವೆಂದು ತಿಳಿದುಕೊಂಡಳು. ಚೆನ್ನಾಗಿ ಅವನಿಗೆ ಉಪಚಾರ ಮಾಡಿದಳು. ದಿನಕ್ಕೊಂದೊಂದು ಅಡಿಗೆ, ದಿನಕ್ಕೊಂದೊಂದು

ದಿರಿಸು ಕೊಡುತ್ತಿದ್ದಳು. ಆದರೆ ಈತ ಏನು ಮಾಡಿದರೂ ಅಕ್ಕನ ಕೈಲಿ ಮಾತಾಡಲಿಲ್ಲ. 'ನಾನ್ಯಾರು, ನೀನ್ಯಾರು' ಅಂತಲೂ ಸಹ ಮಾತಾಡಲಿಲ್ಲ. ಅಷ್ಟು ಹೊತ್ತಿಗೆ ಇಬ್ಬರಿಗೂ ತಾವು ಅಕ್ಕ–ತಮ್ಮ ಅನ್ನೋದು ಚೆನ್ನಾಗಿ ಗೊತ್ತಾಗಿತ್ತು.

"ನಾನಿಷ್ಟು ಉಪಚಾರ ಮಾಡಿದರೂ ನನ್ನ ತಮ್ಮ ಮಾತಾಡಲಿಲ್ಲ. ಏನು ಕಾರಣ? ಯಾವುದಾದರೂ ಮೋಹಿನಿ ಕೆಲ್ಸ ಇರಬಹುದಾ?" ಎಂದು ಆಲೋಚನೆ ಮಾಡಿ, ದಿನಾ ಒಬ್ಬೊಬ್ಬರು ಚೆಲುವೆ ದಾದಿಯರನ್ನು ಅವನು ಮಲಗೋ ಮನೆಗೆ ಕಳುಹಿಸಿದಳು, ಏಳುಜನ ದಾದಿಯರನ್ನು ಏಳುದಿನ ಕಳುಹಿಸಿದಳು. ಆ ಎಲ್ಲ ದಾದೇರು ಇವನ ಕೈಮುಟ್ಟಿ, ಎಚ್ಚರ ಮಾಡಿ ನೋಡಿದರು. ಆದರೆ ಇವನು ಯಾರೊಂದಿಗೂ ಮಾತಾಡಲಿಲ್ಲ.

ಆಗ ಮಾರನೆಯ ದಿನ ರಾತ್ರಿ ದಾದೇರೆಲ್ಲ ಸೇರಿ, ಅರಮನೆ ಮುಂದಿದ್ದ ಇವಳಿಗೆ ಶೃಂಗಾರಮಾಡಿ, ರಾಣಿಯಿಂದ ಅಪ್ಪಣೆ ಪಡೆದು ಇವನ ರೂಮಿನಲ್ಲಿ ಮಂಚದ ಮೇಲೆ ತಂದು ಕೂರಿಸಿದರು. ಇವರು ದಾದೇರ್ನ, ನೋಡಲೂ ಇಲ್ಲ. ಮಾತಾನಾಡಿಸಲೂ ಇಲ್ಲ. ಆದರೆ ಆ ರಾತ್ರಿ 'ಇದೂ' ಮೋಟುಗೈಯಲ್ಲಿ ಇವನ ಕಾಲನ್ನು ಒತ್ತುತ್ತ.. 'ಹೂ... ಹೂ...' ಅಂತ ಕೊರಗುತ್ತಿತ್ತು. ಆಗ ಇವನು ಎದ್ದು ನೋಡಿದ. 'ಇದು' ಕೂಡ ಅವನನ್ನು ಸ್ವಲ್ಪ ಹೊತ್ತು ಹಾಗೇ ನೋಡಿತು. ಇವಳೇ ನನ್ನ ಹೆಂಡತಿಯೆಂದು ತಿಳಿದುಕೊಂಡ. ಆಗ "ಏನು? ಎತ್ತ? ಎಂದು ಅವಳನ್ನು ವಿಚಾರಿಸಿದ, ಆಗ ಆಕೆಗೆ ಅಷ್ಟು ದಿನ ನಿಂತಿದ್ದ ಮಾತು ಬಂತು. ಆಗ ಅವಳು. ನಿಮ್ಮ ತಂಗಿಯಿಂದಾಗಿ ಹೀಗಾಯ್ತು" ಎಂದು ಎಲ್ಲವನ್ನೂ ಹೇಳಿದಳು. "ಅದಕ್ಕೆ ಈಗೇನು ಮಾಡಬೇಕು?" ಅಂತ ಕೇಳಿದ. "ಹೆಚ್ಚಿಗೇನೂ ಮಾಡಬೇಡಿ, ಚಿಳ್ಳುಗರು ಸೋಕದ ಹಾಗೆ ಎರಡು ತಂಬಿಗೆ ನೀರು ತನ್ನಿ" ಎಂದು ಕೇಳಿಕೊಂಡಳು. ಆತ ಯಾರಿಗೂ ಗೊತ್ತಾಗದ ಹಾಗೆ ತಂದುಕೊಟ್ಟ ಆ ಎರಡು ತಂಬಿಗೆ ನೀರನ್ನು ಮಂತ್ರಿಸಿ ಕೊಟ್ಟು, "ಮೊದಲು ಈ ತಂಬಿಗೆ ನೀರು ಹೊಯ್ದುಬಿಡಿ, ಹೂವಿನ ಗಿಡ ಆಗ್ತೀನಿ, ಆಗ ಎಲ್ಲಿ ಎಲೆ ಹೋಗಿದೆಯೋ ಅಲ್ಲಿ ಎಲೆ ಜೋಡಿಸಿ, ಎಲ್ಲಿ ರೆಂಬೆ ಹೋಗಿದೆಯೋ ಅಲ್ಲಿ ರೆಂಬೆ ಜೋಡಿಸಿ, ಆನಂತರ ಈ ಇನ್ನೊಂದು ತಂಬಿಗೆ ನೀರನ್ನು ಸುರಿಯಿರಿ" ಎಂದು ಹೇಳಿ, ದೇವರನ್ನು ನೆನೆದು ಕುಳಿತುಕೊಂಡಳು. ಸರಿ ಈತ ಒಂದು ತಂಬಿಗೆ ನೀರು ಹೊಯ್ದ, ಹೂವಿನಗಿಡ ಆದಳು, ನೋಡ್ತಾನೆ ಕೊಂಬೆ ರೆಂಬೆನೆಲ್ಲ ತರದುಬಿಟ್ಟಿದ್ದಾರೆ. ಅವನ್ನೆಲ್ಲ ಸರಿಪಡಿಸಿ, ಗಿಡದ ಮೈಮೇಲೆಲ್ಲ ಬೀಳುವ ಹಾಗೆ ಇನ್ನೊಂದು ತಂಬಿಗೆ ನೀರು ಸುರಿದ. ಆಗ ಪುನಃ ಮನುಷ್ಯಳಾದಳು. ಮಂಡೆ ಒದರಿಕೊಂಡೆದ್ದು, ಗಂಡನ ಕಾಲಿಗೆ ನಮಸ್ಕಾರ ಮಾಡಿದಳು, ನಾದನಿಯಾದ ರಾಣಿಯನ್ನು ಎಬ್ಬಿಸಿ, ಆಕೆಯ ಕಾಲಿಗೂ

ನಮಸ್ಕಾರ ಮಾಡಿದಳು. ನಡೆದ ಸಂಗತಿಯನ್ನೆಲ್ಲ ತಿಳಿಸಿದಳು. ರಾಣಿ ಈಕೆಯನ್ನು ಅಪ್ಪಿ ಮುದ್ದಾಡಿ ಅತ್ತಳು. ಕಡೆಗೆ ರಾಣಿ ಇಬ್ಬರನ್ನೂ ಚೆನ್ನಾಗಿ ಉಪಚರಿಸಿದಳು. ತಮ್ಮನನ್ನು, ತಮ್ಮನ ಹೆಂಡತಿಯನ್ನು ಕುಳ್ಳಿರಿಸಿ, ಹಸೆ ಎತ್ತಿಸಿ, ನಾಲ್ಕಾರು ವಾರ ತನ್ನ ಮನೆಯಲ್ಲಿ ಇಟ್ಟುಕೊಂಡಿದ್ದಳು. ಅವರಿಬ್ಬರನ್ನೂ ತನ್ನ ತಂದೆ ಪಟ್ಟಣಕ್ಕೆ ಹೋಗುವಾಗ ಬೇಕಾದಷ್ಟು ಐಸಿರಿ ಕೊಟ್ಟು, ಉಡುಗೊರೆ ಕೊಟ್ಟು ಕಳುಹಿಸಿದಳು.

ಅಲ್ಲಿ, ಆ ಪಟ್ಟಣದ ದೊರೆ, ಕಾಣೆಯಾಗಿದ್ದ ತಮ್ಮ ಮಗ ಸೊಸೆ ಬಂದರೆಂದು, ವೈಭವದಿಂದ ಅವರಿಬ್ಬರನ್ನೂ ಆನೆ ಅಂಬಾರಿ ಮೇಲೆ ಕುಳ್ಳಿರಿಸಿ, ಊರೆಲ್ಲ ಮೆರವಣಿಗೆ ಮಾಡಿ ಅರಮನೆಗೆ ಕರೆದುಕೊಂಡು ಹೋದ. ಅಲ್ಲಿ ದೊರೆಗೂ, ಮಹಾರಾಣಿಗೂ ನಡೆದ ಸಂಗತಿಯನ್ನೆಲ್ಲ ಇವರಿಬ್ಬರೂ ಹೇಳಿದರು. ಆಗ ದೊರೆ, ಒಂದು ಅಗೇವು ತೆಗೆಸಿ, ಅದಕ್ಕೆ ಏಳು ಖಂಡುಗ ಸುಣ್ಣ ಬಿರೆಹೋಯ್ಸಿ, ಅದರೊಳಗೆ ತನ್ನ ಚಿಕ್ಕಮಗಳನ್ನು ನೂಕಿಸಿದ. ಇದನ್ನು ನೋಡಿದ ಜನರೆಲ್ಲ "ತಪ್ಪಿಗೆ ಶಿಕ್ಷೆ ಉಂಟೇ ಉಂಟು" ಎಂದುಕೊಂಡರು.

ಎಲ್ಲರೂ ಸುಖವಾಗಿದ್ದರು.

~ * ~ * ~ * ~

# 4.2 ಕೆ.ಕೆ. ಹೆಬ್ಬಾರ್

**– ಎಂ. ಮರಿಶಾಮಾಚಾರ್**

ಭಾರತದ ಕಲಾಪ್ರಪಂಚದಲ್ಲಿ ವಿಚಾರವಂತರೂ, ಸೂಕ್ಷ್ಮಸಂವೇದನಾಶೀಲರೂ, ಶ್ರೇಷ್ಠ ಕಲಾವಿದರು ಎಂದು ಪ್ರಖ್ಯಾತಿಗೊಂಡವರಲ್ಲಿ ಕೆ.ಕೆ. ಹೆಬ್ಬಾರರು ಒಬ್ಬರು. ಹೆಬ್ಬಾರರ ಕಲಾಭ್ಯಾಸವು ಮುಂಬಯಿಯಲ್ಲಿ ಪಾಶ್ಚಿಮಾತ್ಯ ಪದ್ಧತಿಯಲ್ಲಿ ನಡೆದಿತ್ತು. ಅವರು ಅಷ್ಟರಲ್ಲಿ ತೃಪ್ತರಾಗಲಿಲ್ಲ. ಅವರಲ್ಲಿ ತನ್ನ ದೇಶದ ಪ್ರಾಚೀನ ಕಲಾವೈಭವದ ಬೆಡಗೂ, ನಮ್ಮೀ ಶತಮಾನದ ಪ್ರಾರಂಭದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ, ಮುಖ್ಯವಾಗಿ ಪ್ಯಾರಿಸ್ಸಿನಲ್ಲಿ ಹುಟ್ಟಿ, ಕಲಾಜಗತ್ತಿನಲ್ಲಿ ಕ್ರಾಂತಿ ಎಬ್ಬಿಸಿದ ಆಧುನಿಕ ಕಲೆಯಲ್ಲೂ ಅಭಿಮಾನ ಮೂಡಿತು ಮತ್ತು ಬೆಳೆಯಿತು. ಮುಖ್ಯವಾಗಿ 1938ರಲ್ಲಿ ಸಹ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ನಿಂದ ಡಿಪ್ಲಮೊ ಪಡೆದು ಹೊರಬಂದನಂತರ ಸ್ವತಂತ್ರ ಕಲೆಯ ಸಾಧನೆಗೆ ಪಣತೊಟ್ಟು ಪ್ರಯತ್ನಿಸಲಾರಂಭಿಸಿದರು.

**ಜನನ ಮತ್ತು ಬಾಲ್ಯಜೀವನ**

ದಕ್ಷಿಣ ಕನ್ನಡ ಜಿಲ್ಲೆಯ ಕಟ್ಟಂಗೇರಿ ಗ್ರಾಮದ ನಾರಾಯಣ ಹೆಬ್ಬಾರ್ ಮತ್ತು ಸೀತಮ್ಮ ಇವರಿಗೆ ಮೂರು ಜನ ಗಂಡುಮಕ್ಕಳು. ಇವರ ಕೊನೆಯ ಮಗ ಕಟ್ಟಿಂಗೇರಿ ಕೃಷ್ಣ ಹೆಬ್ಬಾರ, 15ನೇ ಜೂನ್ 1911ರಲ್ಲಿ (ಮುಂದೆ ದಾಖಲೆಯಲ್ಲಿ, ಜನನ 1912 ಎಂದು ಆಗಿಹೋದುದರಿಂದ ಆ ದಾಖಲೆಯನ್ನೇ ಖಾಯಂ ಆಗಿ ಬಳಸಿಕೊಂಡು ಬರಬೇಕಾಯಿತು) ಜನಿಸಿದರು. ಅವರಿಗೆ ಕಲೆ ರಕ್ತಗತವಾಗಿಯೇ ಬಂದಿದೆ. "ನಾನು ತುಂಬ ಚಿಕ್ಕವನಿದ್ದಾಗ ನಮ್ಮ ತಂದೆ ಗಣೇಶನ ಹಬ್ಬದಲ್ಲಿ ಗಣೇಶನನ್ನು ಮಾಡುತ್ತಿದ್ದರು. ಊರಿನಲ್ಲೆಲ್ಲಾ ನಮ್ಮ ಮನೆಯಲ್ಲಿ ಮಾತ್ರ ಗಣೇಶನ ಪೂಜೆ ಮಾಡುತ್ತಿದ್ದರು. ನಮ್ಮ ತಂದೆ ಮಾಡುತ್ತಿದ್ದ ಗಣೇಶ, ನನ್ನ ಮೇಲೆ ತುಂಬಾ ಪ್ರಭಾವ ಬೀರಿತು. ಅವರು ಗಣೇಶ ಮಾಡಿದರೆ, ನಾನು ಇಲಿ ಮಾಡುತ್ತಿದ್ದೆ. ನಮ್ಮ ತಂದೆ ನಿಧನರಾದನಂತರ ನಾನೇ ಗಣೇಶನನ್ನು ಮಾಡುತ್ತಿದ್ದೆ" ಎಂದು ತಾವು ಕಲಾವಿದರಾಗಲು ಮನೆಯ ವಾತಾವರಣ ಕಾರಣವೆನ್ನುತ್ತಾರೆ.

ಹೆಬ್ಬಾರರ ಗ್ರಾಮದ ಪರಿಸರ, ಅಲ್ಲಿನ ದೇಗುಲಗಳು ಮತ್ತು ಉಡುಪಿಯ ಶ್ರೀಕೃಷ್ಣನ ದೇಗುಲ, ಧರ್ಮ ಶ್ರದ್ಧೆಯ ಕೇಂದ್ರವಾದ ಇಲ್ಲಿ ಶ್ರದ್ಧಾಭಕ್ತಿಯಿಂದ ನಡೆಯುವ ಹಬ್ಬಗಳು ಹೆಬ್ಬಾರರಿಗೆ ವರ್ಣಮಯವಾಗಿ ಕಂಡವು. ಆ ಜಿಲ್ಲೆಯ ಯಕ್ಷಗಾನ ಬಯಲಾಟಗಳು ಇವರ ಮೇಲೆ ಗಾಢವಾಗಿ ಪ್ರಭಾವ

ಬೀರಿದವು. ಹಳ್ಳಿಯ ಸುಂದರ ಬದುಕು, ಕೆಂಪುಭೂಮಿ, ಹಚ್ಚಹಸರಿನ ನಿಸರ್ಗ, ಬೂದುಬಣ್ಣದ ಕಲ್ಲು ಬಂಡೆಗಳು, ತಿಳಿನೀಲಿಯ ಸಮುದ್ರದ ಬಳಿ ನಿಂತಾಗ ಆಗುವ ವಿಶೇಷ ಅನುಭವಗಳೊಂದಿಗೆ ಕಲಾಜೀವನ ಪ್ರಾರಂಭಿಸಿದರು.

ಮಳೆಗಾಲದಲ್ಲಿ ಕಾಣುವ ಮೋಡಗಳು, ಕ್ಷಣಮಾತ್ರದಲ್ಲಿ ಅದೃಶ್ಯವಾಗುವ ಸುಂದರ ದೃಶ್ಯಗಳನ್ನು ಚಿತ್ರದಲ್ಲಿ ಅಭಿವ್ಯಕ್ತಿಗೊಳಿಸಲು ಅವರ ಹೃದಯ ತವಕಿಸುತ್ತಿತ್ತು. ಅವರು ಬಣ್ಣಗಳೊಡನೆ ಚಿತ್ರಿಸುತ್ತಿದ್ದ ವಾಸ್ತವಿಕ ದೃಶ್ಯಗಳನ್ನು ಕಂಡು ಅವರ ತಾಯಿ ಸೀತಮ್ಮನವರಿಗೆ ಆಗುತ್ತಿದ್ದ ಸಂತೋಷ ಹೇಳಲಾಗದು. ಆಕೆಯೇ ಮೊದಲು ಹೆಬ್ಬಾರರ ಚಿತ್ರಗಳ ಬಗ್ಗೆ ಮೆಚ್ಚುಗೆಯನ್ನು ಸೂಚಿಸಿ, ತಮ್ಮ ಮಗನ ಆಸಕ್ತಿಗೆ ಮತ್ತು ಪ್ರತಿಭೆಗೆ ಪ್ರೋತ್ಸಾಹ ನೀಡಿದರು. "ನನ್ನ ಬಾಲ್ಯದ ದಿನಗಳಲ್ಲಿ ಆವೆ ಮಣ್ಣಿನಿಂದ ಅನೇಕ ಬಗೆಯ ಗೊಂಬೆಗಳನ್ನು ಮಾಡುತ್ತಿದ್ದು, ನನ್ನ ಊರಿನ ನಿಸರ್ಗ ಚಿತ್ರಗಳನ್ನು ಪೆನ್ಸಿಲ್‌ನಿಂದ ಚಿತ್ರಿಸುತ್ತಿದ್ದೆ. ರವಿವರ್ಮನ ಜಟಾಯುವಧೆ ಚಿತ್ರವನ್ನು ಉಡುಪಿಯ ಕೃಷ್ಣ ಮಠದಲ್ಲಿ ಒಬ್ಬ ಕಲಾವಿದರು ಚಿತ್ರಿಸುತ್ತಿದ್ದರು. ಅವರು ಚಿತ್ರ ರಚಿಸುತ್ತಿದ್ದ ರೀತಿ, ಹಾಗೂ ರವಿವರ್ಮನ ಚಿತ್ರಗಳ ಮೇಲೆ ಆಸಕ್ತಿ ಹೊಂದಿ ನಾನು ಸಹ ರವಿವರ್ಮನ ಚಿತ್ರಗಳನ್ನು ನಕಲು ಮಾಡಲು ಪ್ರಾರಂಭಿಸಿದೆ. ಮೊದಲಿಗೆ ಸರಸ್ವತಿ ಚಿತ್ರವನ್ನು ಮನೆಯ ಗೋಡೆಯ ಮೇಲೆ ಚಿತ್ರಿಸಿದೆ. ಅದನ್ನು ನಾನು ದೀಪದ ಕರಿಬಣ್ಣದಿಂದ ಹಾಗೂ ವಿವಿಧ ವರ್ಣಗಳನ್ನು ಅಂಟಿನಲ್ಲಿ ಮಿಶ್ರಮಾಡಿ ಚಿತ್ರ ರಚಿಸಿದೆ. ನಾನು ಚಿತ್ರಿಸಿದ ಚಿತ್ರಗಳನ್ನು ನನ್ನ ಊರಿನ ಜನರೆಲ್ಲಾ ನೋಡಿ ಮೆಚ್ಚುಗೆ ಸೂಚಿಸಿ, ಹಳ್ಳಿಯ ಮುಗ್ಧಜನ ನನ್ನನ್ನು 'ದೈವದತ್ತ ಕಲಾವಿದ' ಎಂದು ಕರೆದರು" ಎಂದು; ತಮಗೆ ಹೇಗೆ ಕಲಾಸಕ್ತಿ ಬಂದಿತು ಎಂದು ತಮ್ಮ ಕಲೆಯ ಬಗ್ಗೆ ಹೇಳಿಕೊಂಡಿದ್ದಾರೆ.

1953ರಲ್ಲಿ ಮುಂಬಯಿಗೆ ಪ್ರಯಾಣ ಬೆಳೆಸಿದರು, ಮುಂಬಯಿಯಲ್ಲಿ ತಮ್ಮ ಜೀವನಕ್ಕಾಗಿ ಒಬ್ಬ ಫೋಟೋಗ್ರಾಫರನ ಬಳಿ ಫೋಟೋ ತಿದ್ದುವ ಕೆಲಸಕ್ಕೆ ಸೇರಿದರು. ಈ ದಿನಗಳಲ್ಲಿ ಜಿ.ಎಸ್. ದಂಡಾವತಿ ಮಠ ಅವರ ಪರಿಚಯ ವಾಯಿತು, ದಂಡಾವತಿಯವರ ಮಾರ್ಗದರ್ಶನದಲ್ಲಿ ವಸ್ತುಚಿತ್ರಣ, ಪ್ರಕೃತಿ ಚಿತ್ರಣ, ಗ್ರೀಕ್ ರೋಮನ್ ಚಿತ್ರಗಳನ್ನು ಚಿತ್ರಿಸುವುದು ಹಾಗೂ ಹೊರಗಡೆ ಹೋಗಿ ಸ್ಕೆಚ್‌ಗಳನ್ನು ಮಾಡಿಕೊಂಡು ಬಂದು, ಚಿತ್ರರಚನೆಗೆ ಸಂಯೋಜನೆ ಮಾಡುವುದು. ಆಗ ಪೌರಾಣಿಕ ವಸ್ತುಗಳನ್ನು ಬಹಳ ಇಷ್ಟಪಡುತ್ತಿದ್ದ ಹೆಬ್ಬಾರರು ಚಿತ್ರದ ಸಂಯೋಜನೆಗೆ ಅನುಕೂಲವಾಗುವಂತೆ ರೂಪದರ್ಶಿಗಳ ಸಹಾಯ ಪಡೆಯುತ್ತಿದ್ದರು.

ಆನಂತರ ಮುಂಬಯಿಯ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ನಲ್ಲಿ

ಅಂತಿಮ ಡಿಪ್ಲಮೊ ತರಗತಿಗೆ ಸೇರಿದರು. ಅಲ್ಲಿನ ಪ್ರಿನ್ಸಿಪಾಲ ಚಾರ್ಲಸ್ ಜೆರಾರ್ಡ್ ಅವರು ಕಲಾವಿದ್ಯಾರ್ಥಿಗಳ ದೃಷ್ಟಿಯನ್ನು ಅರ್ಥ ಮಾಡಿಕೊಳ್ಳುವ ಸ್ವಭಾವದವರು. ವಿದ್ಯಾರ್ಥಿಗಳು ಸೃಜನಶೀಲತೆ ಮತ್ತು ಸ್ವಂತಿಕೆಯನ್ನು ರೂಢಿಸಿಕೊಂಡು ಆಧುನಿಕ ಕಲೆಯ ತಂತ್ರ ಮತ್ತು ಕಲಾಪಂಥದ ಅರಿವನ್ನು ತಿಳಿದುಕೊಳ್ಳುವಂತೆ ಬೋಧಿಸುತ್ತಿದ್ದರು. ಜೆರಾರ್ಡ್ "ಹೆಬ್ಬಾರರು, ಅಚ್ಚುಮೆಚ್ಚಿನ ಮತ್ತು ಭರವಸೆ ಕೊಡುವ ಕಲಾವಿದನೆಂದು" ತಿಳಿದಿದ್ದರು. ಇದು ಅವರ ಜೀವನ ಮಾರ್ಗವನ್ನೇ ಬದಲಾಯಿಸಿತು.

ಸರ್ ಜೆ. ಜೆ. ಕಲಾಶಾಲೆಯಲ್ಲಿ 1939ರಲ್ಲಿ ಅಧ್ಯಾಪಕರಾಗಿ ಸೇರಿದ ಹೆಬ್ಬಾರರು. ಅಂದಿನಿಂದ ಕಲೆಯ ಬಗ್ಗೆ ಹೆಚ್ಚು, ಹೆಚ್ಚು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡರು. ಡಾ. ಆನಂದಕುಮಾರ ಸ್ವಾಮಿಯವರ "ಭಾರತೀಯ ಕಲೆಯ ತತ್ವಗಳು' ಪುಸ್ತಕ ಅವರಿಗೆ ತುಂಬಾ ಇಷ್ಟವಾಗಿ, ಅದರಿಂದ ಅನೇಕ ವಿಷಯಗಳನ್ನು ತಿಳಿದುಕೊಂಡರು. ಬಾಗ್, ಅಜಂತಾ ಮತ್ತು ಭಾರತದ ಚಿಕಣಿ ಚಿತ್ರಗಳಲ್ಲಿರುವ ರೇಖಾ ಲಾಲಿತ್ಯ, ಜೈನರ ಚಿಕಣಿ ಚಿತ್ರಗಳಲ್ಲಿರುವ ಅಲಂಕರಣದ ಆಕಾರಗಳು ಮತ್ತು ಉಜ್ವಲವರ್ಣ ಇವರನ್ನು ಹೆಚ್ಚು ಆಕರ್ಷಿಸಿತು.

1946ರಲ್ಲಿ ಅವರು ದಕ್ಷಿಣ ಭಾರತದಲ್ಲಿ ಪ್ರವಾಸಮಾಡಿ, ಕೇರಳದ ಹಸಿರು ಬಯಲುಗಳು, ಬಿಳಿಯ ಬಟ್ಟೆಗಳನ್ನು ಧರಿಸಿರುವ ಕಂದು ಬಣ್ಣದ ವ್ಯಕ್ತಿಗಳು, ಕೇರಳದ ವರ್ಣಮಯ ಕಥಕ್ಕಳಿ ನೃತ್ಯ ಅವರ ಬಾಲ್ಯದಲ್ಲಿ ನೋಡಿದ ಯಕ್ಷಗಾನದ ನೆನಪು ತಂದು, ಪೂರಂ ಹಬ್ಬ ಹಾಗೂ ಆನೆಗಳಿಗೆ ಅಲಂಕಾರ ಮಾಡಿರುವ ಉಡುಗೆ ತೊಡುಗೆಗಳು ಮತ್ತು ಅಲ್ಲಿನ ದೀಪೋತ್ಸವ ಮುಂತಾದುವು ಅವರಿಗೆ ಚಿತ್ರ ರಚಿಸಲು ಪ್ರೇರೇಪಿಸಿದುವು.

ಕಲಾವಿದನಿಗೆ ಸಾಮಾಜಿಕ ಕಳಕಳಿ ಇರುತ್ತದೆ ಎನ್ನುವುದಕ್ಕೆ ಹೆಬ್ಬಾರರು ರಚಿಸಿರುವ ಅನೇಕ ಚಿತ್ರಗಳು ಸಾಕ್ಷಿ, ವಿಯಟ್ನಾಂ ಯುದ್ಧದಲ್ಲಿ ಅಮೆರಿಕನ್ ಸೈನಿಕರು ಅತ್ಯಾಚಾರ ನಡೆಸಿದ ಸನ್ನಿವೇಶ ಅವರ ಮನಸ್ಸನ್ನು ನೋಯಿಸಿ, ಯುದ್ಧದ ಭೀಕರತೆ ಜನರ ಮೇಲೆ ಯಾವ ರೀತಿಯ ಪರಿಣಾಮ ಬೀರುವುದು ಎಂಬುದನ್ನು 'ಮೈಲೆ' ಚಿತ್ರದಲ್ಲಿ ಚಿತ್ರಿಸಿದ್ದಾರೆ.

ಹೆಬ್ಬಾರರಿಗೆ ಬೇರೆ ಕಲೆಗಳ ಬಗ್ಗೆಯೂ ಬಹು ಆಸಕ್ತಿ. ಇತರ ಕಲೆಗಳ ಬಗ್ಗೆ ಪರಿಚಯವಿರಬೇಕು ಎನ್ನುವ ಅವರು "ನನಗೆ ಭಾರತೀಯ ನೃತ್ಯ ಮತ್ತು ಸಂಗೀತವೆಂದರೆ ಬಹಳ ಹುಚ್ಚು. ನಾನು ನನ್ನ ಮೂವತ್ತನೇ ವಯಸ್ಸಿನಲ್ಲಿ ಕಥಕ್ ನೃತ್ಯವನ್ನು ಎರಡು ವರ್ಷಗಳ ಕಾಲ ಕಲಿತೆ, ಈ ತರಬೇತಿಯು ನನ್ನ ಕಲಾಕೃತಿಗಳಲ್ಲಿ ಲಯದ ಗುಣಮಟ್ಟದ ಸೊಬಗನ್ನು ಸೇರಿಸಲು ತುಂಬಾ

ನೆರವಾಯಿತು. 1970ರಲ್ಲಿ ಯಹೂದಿ ಮೆನುಹನ್‌ರ ವಾದ್ಯಗೋಷ್ಠಿಯನ್ನು ಆಲಿಸುತ್ತಿದ್ದಾಗ, ಬಣ್ಣದಲ್ಲಿ ಧ್ವನಿಯನ್ನು ಅಭಿವ್ಯಕ್ತಿಸಲು ಅದರಿಂದ ಸ್ಫೂರ್ತಿ ಪಡೆದೆ ಎನ್ನುತ್ತಾರೆ.

ಹೆಬ್ಬಾರರ ಅನನ್ಯ ಕಲಾಪ್ರತಿಭೆಯು ಮೊದ ಮೊದಲು ಚಿತ್ರಗಳ ರಚನೆಯಿಂದ ಪ್ರಾರಂಭವಾಗಿ ಆ ತರುವಾಯ ಈಗಿನ ಅಭಿವ್ಯಕ್ತಿ ಮತ್ತು ಸಂಕೇತ ಶೈಲಿಗಳ ಕಲಾ ರಚನೆಯಲ್ಲಿ ವಿಕಾಸಗೊಳ್ಳುತ್ತಾ ನಡೆಯಿತು. ಆದರೂ ಈ ಎಲ್ಲ ಹಂತಗಳಲ್ಲೂ ಅವರ ಕಲಾದೃಷ್ಟಿಗೆ ಮಾನವನ ಬದುಕು ಮತ್ತು ಅವನ ಸಾಮಾಜಿಕ ಪರಿಸರಗಳೇ ನಿರಂತರ ಪ್ರೇರಣೆ, ಉದಾಹರಣೆಗೆ 'ಭಿಕ್ಷುಕರು' ಎಂಬ ಕಲಾಕೃತಿಯು ವೀಕ್ಷಕರ ಮನಸ್ಸಿನ ಮೇಲೆ ಪ್ರಭಾವ ಬೀರುವಂಥ ಕಲಾಕೃತಿ.

**ರೇಖಾಚಿತ್ರಗಳು**

ಭಾರತೀಯ ಕಲಾ ಪ್ರಪಂಚದಲ್ಲಿ ಹೆಬ್ಬಾರರ ರೇಖಾಚಿತ್ರಗಳು ಒಂದು ವಿಶಿಷ್ಟ ಸ್ಥಾನವನ್ನು ಪಡೆದಿವೆ. ಅವರ ರೇಖಾಚಿತ್ರಗಳಲ್ಲಿ ಲಯ ಮತ್ತು ರೇಖೆಗಳಿಗೆ ಪ್ರಾಮುಖ್ಯತೆ ಕೊಟ್ಟಿರುವುದನ್ನು ಕಾಣಬಹುದು. ಅವರ ಕಣ್ಣು ಅತಿ ಸೂಕ್ಷ್ಮವಾದುದು. ಎಷ್ಟೇ ವೇಗದಲ್ಲಿ ಚಲಿಸುವ ರೇಖೆಗಳಿದ್ದರು ಅದನ್ನು ಮನಸ್ಸಿನಲ್ಲಿ ಗ್ರಹಿಸಿ., ರೇಖಾಚಿತ್ರ ರಚಿಸುವರು. ಅವರ ರೇಖಾಚಿತ್ರಗಳು ರೇಖಾತ್ಮಕ ಮತ್ತು ಪೂರ್ಣ ಚಲನೆಯಿಂದ ಕೂಡಿರುತ್ತದೆ. ಹಾಗೂ ಅವುಗಳಲ್ಲಿ ಕಲಾ ಶ್ರೀಮಂತಿಕೆಯ ಜೊತೆಗೆ ಚಲನ ಸತ್ವ, ಅನುಭವದ ಅಭಿವ್ಯಕ್ತಿಯಿಂದ ಕೂಡಿರುತ್ತದೆ.

**ವಿಚಾರಗಳು : ಅಭಿಪ್ರಾಯಗಳು**

ಹೆಬ್ಬಾರರು ಕಲೆ, ಕಲಾಶಿಕ್ಷಣದ ಬಗ್ಗೆ ಕೆಲವು ಲೇಖನಗಳನ್ನು, ಭಾಷಣಗಳನ್ನು ಮಾಡಿದ್ದಾರೆ. ಅವರು ವ್ಯಕ್ತಪಡಿಸಿರುವ ಕೆಲವು ಮುಖ್ಯ ವಿಚಾರಗಳು ಕೆಳಕಂಡಂತಿದೆ.

ನಾನು ಅಸ್ತಿತ್ವದಲ್ಲಿರುವ ಕಲಾರಂಗವನ್ನು ಸಕ್ರಿಯ ಭಾಗಿಯಾಗಿ ಅವಲೋಕಿಸುತ್ತಿದ್ದೇನೆ. 40ರ ಮತ್ತು 50ರ ದಶಕದಲ್ಲಿ, ಅದುವರೆಗಾಗಲೀ, ಕಲೆಯ ಒಂದು ಪರಿಕಲ್ಪನೆಯನ್ನು ಮೂಲಭೂತವಾಗಿ ಬದಲಾಯಿಸಿದ್ದ ಪಶ್ಚಿಮದಲ್ಲಿನ ಸಮಕಾಲೀನ ಕಲಾ ಚಟುವಟಿಕೆಗಳಿಂದಾಗಿ ನಾವು ದಿಗ್ಭ್ರಮೆಗೊಂಡದ್ದುಂಟು. ಪಾರಂಪರಿಕ ಮೌಲ್ಯಗಳು ಸಂಪೂರ್ಣವಾಗಿ ಅಳಿದುಹೋಗಿದ್ದುವು. ಕಲೆಯ ರೂಪಾತ್ಮಕ ಅಂಶಗಳಿಗೆ ಒತ್ತನ್ನು ನೀಡುವ ವ್ಯಕ್ತಿನಿಷ್ಠೆ ಅಭಿವ್ಯಕ್ತಿ ವಿಧಾನವು ರೂಪುಗೊಂಡಿತು. ನಾವು ಭಾರತದಲ್ಲಿ

ಅಂತರರಾಷ್ಟ್ರೀಯ ಕಲಾರಂಗದ ಸರಿಜೋಡಿಯಾಗಲು ಉತ್ಸಾಹದಿಂದ ರೂಪಾತ್ಮಕ ಅಂಶಗಳನ್ನು ಅಣಕವೆನ್ನುವಷ್ಟು ಅನುಕರಿಸಿದವು.

ನಮ್ಮದು ಅತ್ಯಂತ ಪ್ರಾಚೀನ ನಾಗರಿಕತೆಗಳಲ್ಲಿ ಒಂದಾಗಿದ್ದು, ಆಯಾ ಕಾಲದಲ್ಲಿ ಅದರ ಪರಕಾಷ್ಠತೆಯನ್ನು ಮುಟ್ಟಿದ್ದೇವೆ. ನಮ್ಮ ನರನಾಡಿಗಳಲ್ಲಿ ಹರಿಯುತ್ತಿರುವ ಶ್ರೀಮಂತ ಪ್ರಾಚೀನ ರಕ್ತವೂ ನಮ್ಮ ಕಲಾವಿದರನ್ನು ಮತ್ತೊಮ್ಮೆ ಪ್ರೇರೇಪಿಸಿದೆ. ಹಾಗೂ ನಾವು ರೂಪಾತ್ಮಕ ಅಂಶಗಳ ಮೇಲೆ ನಿಪುಣತೆಯನ್ನು ಸಾಧಿಸುವುದರ ಜೊತೆಗೆ, ನಮ್ಮ ಸೃಜನಶೀಲ ಪ್ರಯತ್ನಗಳಿಗೆ ತಾಳಿಕೆ ಗುಣಗಳನ್ನು ತುಂಬುವ ಸಲುವಾಗಿ ಸಂಪರ್ಕಾತ್ಮಕ ಅಂಶಗಳನ್ನು ಬಲಗೊಳ್ಳುವಂತೆ ಮಾಡಬೇಕಾದುದನ್ನು ನಾವು ನಿಧಾನವಾಗಿ ಮನವರಿಕೆ ಮಾಡಿಕೊಳ್ಳಲು ಆರಂಭಿಸಿದ್ದೇವೆ.

ಇಂದು ನಮ್ಮ ಕಲಾವಿದರು ನಿರಂತರವಾಗಿ ಬದಲಾವಣೆ ಹೊಂದುತ್ತಿರುವ ಈ ಜಗತ್ತಿನಲ್ಲಿ, ಚಿಂತನೆಯಿಂದ ಶಾಶ್ವತ ಮೌಲ್ಯಗಳನ್ನು ಗ್ರಹಿಸುವುದು ತಂತ್ರದಲ್ಲಿ ಪರಿಣಿತಿಯನ್ನು ಸಾಧಿಸುವಷ್ಟೇ ಮುಖ್ಯವಾದುದೆಂಬುದನ್ನು ಮನದಟ್ಟು ಮಾಡಿಕೊಂಡಿದ್ದಾರೆ. ಆಧುನಿಕ ಕಲಾವಿದನ ಅನುಭವ ವ್ಯಾಪ್ತಿಯು ಹೊರ ಜಗತ್ತಿಗಷ್ಟೇ ಸೀಮಿತವಾಗಿಲ್ಲ. ನಮ್ಮ ಶಿಕ್ಷಿತ ಪ್ರೇಕ್ಷಕರು ಕೂಡ ಈಗಲೂ ಕಲೆಯನ್ನು ವಿಲಾಸವೆಂದೂ ಮತ್ತು ಮಾನವ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಲ್ಲವೆಂದೂ ತಿಳಿದಿರುವಾಗ, ಕಲಾವಿದನ ಅಂತರ ದೃಷ್ಟಿಗೆ ಪ್ರಾಮಾಣಿಕ ಮತ್ತು ತಕ್ಕ ತಿಳುವಳಿಕೆಯುಳ್ಳ ಪ್ರೇಕ್ಷಕನಿಂದಾಗಿ ಅನುಭವ ಸಿಗುವಂತೆ ಮಾಡುವುದು, ಇಂದು ಕಲಾವಿದನು ಎದುರಿಸುತ್ತಿರುವ ಒಂದು ಬಿಡಿಸಲಾರದ ಸಮಸ್ಯೆಯಾಗಿದೆ. ಸ್ವಲ್ಪಮಟ್ಟಿಗೆ ಇಂದಿನ ಕಲಾವಿದ ತನ್ನ ಪ್ರೇಕ್ಷಕರ ಬಗೆಗೆ ಯಾವುದೇ ಸಹಾನುಭೂತಿಯಿಲ್ಲದಿರುವುದಕ್ಕೆ ತಾನೂ ಹೊಣೆಗಾರನಾಗಿದ್ದಾನೆ. ಅದೇ ಸಮಯದಲ್ಲಿ, ಕಲಾವಿದನ ವಾಸ್ತವತೆಯ ವೈಶಿಷ್ಟ್ಯಪೂರ್ಣ ದೃಷ್ಟಿಕೋನವನ್ನು ಪ್ರೇಕ್ಷಕರು ತಾವೇ ಅನುಭವಿಸಬೇಕೆ ಹೊರತು; ಅವರಿಗೆ ವಿವರಿಸಬಾರದು ಎಂಬುದು ಸತ್ಯ. ಇದಕ್ಕಾಗಿ ಪ್ರೇಕ್ಷಕರನ್ನು ಶಿಕ್ಷಿತರನ್ನಾಗಿ ಮಾಡಬೇಕು ಮತ್ತು ಅವರಲ್ಲಿ ತಿಳುವಳಿಕೆ ಮೂಡಿಸಬೇಕು.

ಒಂದು ಕಲಾಕೃತಿ ಚಿಂತನೆ ಮಾಡುವಷ್ಟು ಯೋಗ್ಯವಾಗಿದ್ದರೆ ಅದು ಮಾನವಕುಲವನ್ನು ಉನ್ನತಿಗೊಳಿಸಲು ಶಕ್ತವಾಗುತ್ತದೆ. ಇಂದಿನ ಭಾರತೀಯ ಕಲಾವಿದರು ಮುಂದಿನ ವರ್ಷಗಳಲ್ಲಿ, ತಮ್ಮ ಹಿಂದಿನವರಿಗಿಂತ ಪ್ರತಿಭೆ ಮತ್ತು ಅಭಿವ್ಯಕ್ತಿ ಗುಣಗಳಲ್ಲಿ ಮತ್ತಷ್ಟು ಶ್ರೀಮಂತವಾದ ತಮ್ಮದೇ ಆದ ಪರಂಪರೆಯನ್ನು ನಿರ್ಮಿಸುತ್ತೇವೆಂಬ ಭರವಸೆಯನ್ನು ಹೊಂದಿದ್ದಾರೆ.

**ಸಮಕಾಲೀನ ಕಲೆ**

ಇದು ಮನುಷ್ಯನ ಪ್ರವೃತ್ತಿ ಮತ್ತು ಸುತ್ತಮುತ್ತಲಿನ ಜನಜೀವನದಿಂದ ಬದಲಾಗುತ್ತಾ ಹೋಗುತ್ತದೆ. ಕಲಾವಿದ ತನ್ನ ಪರಿಸರಕ್ಕೆ ಸ್ಪಂದಿಸುತ್ತಾನೆ. ಹಿಂದಿನ ಕಾಲದ ಕಲೆಯಲ್ಲಿ ಹೆಚ್ಚಾಗಿ ಪ್ರಕೃತಿಯ ಅಥವಾ ಜನಜೀವನದ ಬಾಹ್ಯ ರೂಪವನ್ನು ಹೆಚ್ಚಾಗಿ ಚಿತ್ರಿಸುತ್ತಿದ್ದರು. ಈಗ ಸಮಕಾಲೀನ ಕಲೆಯಲ್ಲಿ ಬಾಹ್ಯರೂಪಕ್ಕೆ ಅಷ್ಟೊಂದು ಮಹತ್ವವನ್ನು ಕೊಡುವುದಿಲ್ಲ. ಬಾಹ್ಯ ರೂಪವನ್ನು ತೋರಿಸುವುದಕ್ಕೆ ಕ್ಯಾಮರಾ ಇದೆ. ಅದಕ್ಕಿಂಕ ಹೆಚ್ಚಿನ ಪರಿಣಾಮಕಾರಿಯಾಗಿ ತೋರಿಸುವುದನ್ನು ಈ ಕಾಲದ ಕಲಾವಿದ ಪ್ರಯತ್ನಿಸುತ್ತಾನೆ.

ಕಲಾವಿದನಾಗಲೀ ಬೇರೆ ಯಾರೇ ಆಗಲಿ, ಅವನು ಒಂದು ಸಮಾಜದಲ್ಲಿ ಬೆಳೆಯಬೇಕು. ಕಲಾವಿದನು ಯಾವ ಸಮಾಜದಲ್ಲಿ ಬೆಳೆಯುತ್ತಾನೋ ಆ ಸಮಾಜದಿಂದ ಆತ ಸಾಕಷ್ಟು ಪ್ರಭಾವಿತನಾಗಿರುತ್ತಾನೆ ಹಾಗೂ ತನ್ನ ಕೃತಿಯ ಮೂಲಕ ಅದನ್ನು ವ್ಯಕ್ತಪಡಿಸುತ್ತಾನೆ. ಕಲಾವಿದನ ವಿಚಾರಾತ್ಮಕ ದೃಷ್ಟಿ ಎಷ್ಟು ಬೆಳೆಯುತ್ತದೋ, ಅಷ್ಟೇ ಗಾಢವಾದ ಚಿತ್ರ ರಚಿಸುತ್ತಾನೆ.

**ಕಲೆ ಮತ್ತು ಸಮಾಜ**

ಮಾನವ ಮಣ್ಣಿನ ಪಾತ್ರೆಗಳನ್ನು ಎಂದು ಮಾಡಿದನೋ ಅಂದಿನಿಂದ ಕಲೆ ಹುಟ್ಟಿತು. ಅವನು ಒಂದು ಪಾತ್ರೆಯನ್ನು ಮಾಡಿದ. ಅವನಲ್ಲಿ ಕಲಾವಂತಿಕೆ ಇರುವುದನ್ನು ಜನರು ತಿಳಿದುಕೊಂಡು, ಅವನನ್ನು ಅಲಂಕಾರಗೊಂಡ ಮಣ್ಣಿನ ಪಾತ್ರೆ ಉಪಯೋಗಕ್ಕೆ ಮಾತ್ರವಲ್ಲದೆ; ನೋಡಲು ಸುಂದರವಾಗಿ ಕಾಣತೊಡಗಿತು. ಈ ಸೌಂದರ್ಯದ ಅನುರಾಗ ಈತನನ್ನು ಭೂಮಿಯ ಮೇಲಿನ ಬಣ್ಣಗಳ ಅನ್ವೇಷಣೆಗೆ ಹಚ್ಚಿತು. ಇದರಿಂದ ಈತ ತನ್ನ ಉಪಯೋಗದ ವಸ್ತು, ತನ್ನ ವಾಸದ ಮನೆ ಮತ್ತು ತನ್ನ ಸ್ವಂತ ಜನರನ್ನು ಅಲಂಕರಿಸತೊಡಗಿದ. ಸೌಂದರ್ಯದ ಅನ್ವೇಷಣೆಯಿಂದಾಗಿ ಸಹಜವಾಗಿ ಈತ ತನ್ನನ್ನು ಸುತ್ತವರಿದಿದ್ದ ಪ್ರಾಣಿ ಜಗತ್ತಿನಿಂದ ಮೇಲೇರಿ ಜಿಂಕೆಯ ಸೌಂದರ್ಯ, ಕಾಡೆಮ್ಮೆಯ ಶಕ್ತಿ, ಸಿಂಹದ ಗಾಂಭೀರ್ಯವನ್ನು ಈಗ ಸಾಧಾರಣ ಬಣ್ಣಗಳಲ್ಲಿ ಶಕ್ತಿಯುತವಾದ ಗೆರೆಗಳ ಮೂಲಕ ಅಭಿವ್ಯಕ್ತಿಸಿದ. ಸಮಾಜದ ಜವಾಬ್ದಾರಿಯನ್ನು ತನ್ನದೇ ಆದ ರೀತಿಯಲ್ಲಿ ಗೌರವಿಸುತ್ತಿದ್ದ. ಅಲ್ಲಿಂದ ಮುಂದೆ ಆತನ ಸೌಂದರ್ಯ ಪ್ರಜ್ಞೆ ಮತ್ತು ಅದರ ಅಭಿವ್ಯಕ್ತಿಗಳು ಬೆಳೆದಂತೆ, ನಾಗರಿಕ ಮಾನವನಾಗಿ ಬದಲಾಯಿಸಿದ. ಪ್ರಕೃತಿಯ ಚಮತ್ಕಾರ ಮತ್ತು ಗೂಢ ಪ್ರಶ್ನೆಗಳಿಂದ ಹುಟ್ಟು ಮತ್ತು ಸಾವು ಇದರಿಂದ ಜನ್ಮತಾಳಿದ ಧರ್ಮದ ರಚನೆ ಕುರಿತು ಈತನ ಪ್ರಜ್ಞೆ ವಿಸ್ಮಯಗೊಂಡಿತು.

**ಆಧುನಿಕ ಕಲೆ**

ಈ ಶತಮಾನದಲ್ಲಿ ಯೂರೋಪಿನಲ್ಲಿ ಮುಂಬೆಳಕನ್ನು ಕಂಡ ಕಲೆಯ ಹೊಸ ಚಳವಳಿ ನಮ್ಮ ದೇಶಕ್ಕೆ ತಡವಾಗಿ ಬಂದಿತು. ಹೊಸಹೊಸ ಪದ್ಧತಿಯನ್ನು ಪಾಶ್ಚಿಮಾತ್ಯರು ಮೊದಲು ಆಚರಣೆಗೆ ತಂದಿದ್ದರಿಂದ ನಮ್ಮ ಕಲಾವಿದರಿಗೆ ಅದು ಎರಡನೆ ದರ್ಜೆಯ ಅನುಭವವಾಯಿತು. ಪೂರ್ವ ಮತ್ತು ಪಶ್ಚಿಮಗಳ ರಕ್ತಸಂಬಂಧದಿಂದ ಜನಿಸಿ, ಯೂರೋಪಿನಲ್ಲಿ ಕಲಾಶಿಕ್ಷಣ ಪಡೆದ ಅಮೃತಾ ಶೇರ್‌ಗಿಲ್ 1930ರಲ್ಲಿ ಭಾರತದ ಕಲಾದಿಗಂತದಲ್ಲಿ ಕ್ರಾಂತಿಕಾರಿಯಾಗಿ ಪ್ರವೇಶಿಸಿದಳು. ಆಕೆಯಲ್ಲಿ ಸಮೃದ್ಧವಾಗಿ ಬೆಳೆದ ಸೃಜನಾತ್ಮಕತೆಯ ಆಕರ್ಷಕ ರೂಪ ಈ ತಲೆಮಾರಿನ ಕಲಾವಿದರಿಗೆ ಹಿಂದಿನ ಅನುಕರಣೆಗಿಂತ ಪ್ರಸ್ತುತದಲ್ಲಿ ಬದುಕುವುದು ಮತ್ತು ಭವಿಷ್ಯವನ್ನು ನೋಡುವುದರ ಕಡೆಗೆ ಉತ್ತೇಜನ ನೀಡಿತು. ಈ ಕಾಲದ ಶ್ರೇಷ್ಠ ಕವಿ ರವೀಂದ್ರನಾಥ ಠಾಗೂರ್ ಒಬ್ಬನ ಭಾವನೆಗಳಿಂದ ಕಲಾಕೃತಿ ಹೊರಬರಬೇಕಲ್ಲದೆ ವರ್ಷಗಟ್ಟಲೆ ಕಲಾಶಾಲೆಯಲ್ಲಿ ತರಬೇತಿ ಪಡೆದ ವಸ್ತುವಾಗುವುದಿಲ್ಲವೆಂದು ಸಾಧಿಸಿ ತೋರಿಸಿದರು. ಲಯ ಮತ್ತು ಬಣ್ಣಗಳ ಆಳವಾದ ಜ್ಞಾನದಿಂದ ಹೃದಯ ಮತ್ತು ಬುದ್ಧಿಗಳಿಗೆ ತಟ್ಟುವಂತಹ ಕಲಾಕೃತಿಯನ್ನು ಅವರು ವೃದ್ಧಾಪ್ಯದಿಂದ ಪಕ್ವವಾಗಿದ್ದ ಕಾಲದಲ್ಲಿ ನಿರ್ಮಿಸಿದರು. ನಿರಂತರ ಮತ್ತು ಪ್ರತಿಭಾನ್ವಿತರಾದ ನಮ್ಮ ಕಲಾವಿದರು ಸ್ವಾತಂತ್ರಾನಂತರದಲ್ಲಿ ಮಾತ್ರ ವಿಶಾಲವಾದ ಸಮಕಾಲೀನ ಕಲೆಯಲ್ಲಿ ತಮ್ಮ ಸ್ವಂತಿಕೆಯನ್ನು ಸ್ಥಾಪಿಸಲು ಪೂರ್ಣವಾದ ಅವಕಾಶ ದೊರೆಯಿತು.

ಕಲಾವಿದ ಭಾರತೀಯನಾಗಬೇಕಾದರೆ ನಿಜವಾಗಿ ತನ್ನ ವಿಚಾರ ಮತ್ತು ಕೃತಿಯಲ್ಲಿ ಭಾರತೀಯನಾಗಿರಬೇಕು. ಭಾರತದ ಸಾವಿರಾರು ವರ್ಷಗಳ ನಾಗರಿಕತೆಯ ಬಗ್ಗೆ ಆಳವಾದ ಆಲೋಚನೆ ಅವನಲ್ಲಿದ್ದರೆ, ಅವನ ಸೃಷ್ಟಿಯಲ್ಲಿ ದೇಶೀಯ ಅಭಿರುಚಿ ಕೊನೆಯವರೆಗೂ ಇರುತ್ತದೆ. ನಮ್ಮ ಕಲಾವಿದರು ಈಗಾಗಲೇ ತಮ್ಮ ಕೊಡುಗೆಯ ಮಹತ್ವವನ್ನು ಸಾಧಿಸಿ ತೋರಿಸಿದ್ದಾರೆ.

ಬಡತನ, ಹಸಿವು, ನಿರ್ಗತಿಕತೆಯ ವಸ್ತುಗಳ ಅನೇಕ ಚಿತ್ರಗಳನ್ನು ಹೆಬ್ಬಾರರು ರಚಿಸಿದ್ದು, ಅವರ ಸುತ್ತಲಿನ ಸಾಮಾನ್ಯ ಜನರ ಮತ್ತು ಬಡವರ, ಗ್ರಾಮೀಣ ಜನಪದದೊಳಗೆ ಅಡಗಿರುವ ಕ್ರಿಯಾತ್ಮಕ ಜೀವನ ಸ್ಫೂರ್ತಿಯನ್ನು ಹೊರತರಲು ಪ್ರಯತ್ನಿಸಿದ್ದಾರೆ. ಆಂತರಿಕ ಚಿಂತನೆ ಮತ್ತು ಹುಡುಕುವಿಕೆಯ ಸಾಧ್ಯತೆಯನ್ನು ಬೆಳೆಸುವ ಪ್ರಶಾಂತತೆ ಹಾಗೂ ನಿರ್ಲಿಪ್ತತೆ ಮೇಲುಗೈ ಸಾಧಿಸುವ ಜೀವನ ಕಾಲ ಘಟ್ಟವನ್ನು ಅವರು ಬಿಂಬಿಸುವುದು ಅವರ ಧ್ಯೆಯವಾಗಿದ್ದು, ಶಾಂತತೆ ಮತ್ತು ಕ್ರಿಯಾಶೀಲತೆಗೆ ಸಹಾಯವಾಗಿದೆ.

ಮೈನವಿರೇಳಿಸುವಂಥ ಪ್ರಾಚೀನ ವೈಭವ ಮತ್ತು ಸುದೀರ್ಘವಾದ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಭಾರತದಂಥ ರಾಷ್ಟ್ರದಲ್ಲಿ ಹೆಬ್ಬಾರರು ನಡೆದು ಬಂದ ದಾರಿಯನ್ನು ಅವಲೋಕಿಸಿದಾಗ, ಅವರ ಸಾಧನೆ ಅಪಾರ. ಪ್ರಾಮಾಣಿಕ ಕಲಾವಿದರಾದ ಹೆಬ್ಬಾರರು ಸಮಾಜದಿಂದ ದೂರ ಸರಿದು ಒಂಟಿಯಾಗಿದ್ದುಕೊಂಡು ತಮ್ಮ ಕಲಾಲೋಕದಲ್ಲಿ ಮಗ್ನರಾಗಿರುವ ವ್ಯಕ್ತಿಯಲ್ಲ. ತಾವು ಹುಟ್ಟಿ ಬೆಳೆದ ಸಮಾಜದ ಆಗುಹೋಗುಗಳನ್ನು ನೋವು ನಲಿವುಗಳಲ್ಲಿ ಬೆರೆಯುವವರು ಹಾಗೂ ತಮ್ಮ ಸುತ್ತಮುತ್ತಲ ಪರಿಸರದೊಂದಿಗೆ ಸೌಹಾರ್ದಯುತವಾದ ನಿರಂತರ ಸಂಪರ್ಕವನ್ನು ಇಟ್ಟುಕೊಂಡಿರುವವರು.


~ * ~ * ~ * ~

*ಆಕರ : 'ಕೆ.ಕೆ. ಹೆಬ್ಬಾರ್' – ಎಂ. ಮರಿಶಾಮಾಚಾರ್*

*ಪ್ರಕಟನೆ : ಕರ್ನಾಟಕ ಲಲಿತಕಲಾ ಅಕಾಡೆಮಿ*

## ಹೆಬ್ಬಾರರು ರಚಿಸಿದ ರೇಖಾಚಿತ್ರಗಳು





ಕೆ.ಕೆ. ಹೆಬ್ಬಾರ = ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್

~ * ~ * ~ * ~

## 4.3 ನೀವು ಬರಹಗಾರರಾಗಬೇಕೇ?

**– ವೈ.ಜಿ. ಮುರಳೀಧರ**

ದಿನಪತ್ರಿಕೆಗಳು, ವಾರಪತ್ರಿಕೆಗಳು ಹಾಗೂ ಇತರ ನಿಯತಕಾಲಿಕೆಗಳನ್ನು ಗಮನವಿಟ್ಟು ಅಭ್ಯಾಸ ಮಾಡಿ ಪ್ರತಿಯೊಂದರಲ್ಲೂ ಕನಿಷ್ಠ ಐದಾರು ಬಿಡಿ ಲೇಖನ ಪ್ರಕಟವಾಗಿರುವುದನ್ನು ನೀವು ನೋಡಬಹುದು. ಈ ಲೇಖನಗಳನ್ನು ಬರೆದ ಬರಹಗಾರರ ಗುಟ್ಟೇನು? ಅವರು ಈ ಲೇಖನಗಳನ್ನು ಹೇಗೆ ಬರೆದರು? ಅವರು ಅನುಸರಿಸಿದ ರೀತಿ ಯಾವುದು? ಇಷ್ಟೊಂದು ಮಾಹಿತಿ, ಸಾಮಗ್ರಿ, ವಿಷಯ ಅವರಿಗೆ ಲಭ್ಯವಾದದ್ದು ಎಲ್ಲಿ? ಇಷ್ಟೊಂದು ಆಕರ್ಷಕವಾಗಿ ಬರೆಯಲು ಹೇಗೆ ಸಾಧ್ಯವಾಯಿತು? ಸಮಯ ಹೇಗೆ ನಿರ್ವಹಿಸಿದರು? ಇತ್ತೀಚೆಗೆ ನಡೆದ ಘಟನೆಯ ಬಗ್ಗೆ ಇಷ್ಟೊಂದು ಅಧಿಕಾರಯುಕ್ತವಾಗಿ ಬರೆದದ್ದು ಹೇಗೆ? ಈ ರೀತಿ ಪ್ರಶ್ನೆಗಳು ಉದಯೋನ್ಮುಖ ಬರಹಗಾರರನ್ನು ಕಾಡುವುದು ಸಹಜ. ಇದಕ್ಕೆಲ್ಲ ಉತ್ತರ ಹುಡುಕುತ್ತಾ ಹೋದಂತೆ ಒಬ್ಬ ಬರಹಗಾರನಿಗೆ ಇರಬೇಕಾದ ಗುಣ ಗೋಚರಿಸುತ್ತದೆ.

ಪ್ರಕಟವಾಗಿರುವ ಲೇಖನದ ಹಿಂದೆ ಸಾಕಷ್ಟು ಪರಿಶ್ರಮ ಹಾಗೂ ದುಡಿಮೆ ಇರುತ್ತದೆ. ಲೇಖನದ ಗುಣಮಟ್ಟ ಸಾಧಾರಣವಾಗಿದ್ದರೂ, ಅದರ ಹಿಂದೆ ಪ್ರಯತ್ನವಿರುತ್ತದೆ. ದೀರ್ಘವಾದ ಅಧ್ಯಯನ, ಓಡಾಟ, ವಿಷಯ ಸಂಗ್ರಹಣೆ ಎಲ್ಲಕ್ಕಿಂತ ಮಿಗಿಲಾಗಿ ಬರೆಯಬೇಕೆಂಬ ಛಲ ಇರುತ್ತದೆ. ಇವು ಬರಹಗಾರನಲ್ಲಿ ಅಗತ್ಯವಾಗಿ ಇರಬೇಕಾದ ಆಂತರಿಕ ಗುಣಗಳು ಇದನ್ನು ಯಾರೂ ಹೊರಗಿನಿಂದ ತುಂಬಲು ಸಾಧ್ಯವಿಲ್ಲ. ಬರಹಗಾರನೇ ವೃದ್ಧಿಪಡಿಸಿಕೊಳ್ಳಬೇಕು. ಇದರ ಜೊತೆಗೆ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ ಇರುವವರು ಕೆಲವು ಸಾಮಗ್ರಿಗಳನ್ನು ಸರಿಹೊಂದಿಸಿಕೊಳ್ಳಬೇಕು. ಉದಾಹರಣೆಗೆ, ನಾಲ್ಕಾರು ಪೆನ್, ವಿವಿಧ ಬಣ್ಣದ ಪೆನ್ಸಿಲ್, ಹೈಲೈಟರ್, ಸ್ಕೆಚ್‌ಪೆನ್, ಸಾಕಷ್ಟು ಬಿಳಿ ಹಾಳೆ, ರೈಟಿಂಗ್ ಪ್ಯಾಡ್, ಟಿಪ್ಪಣಿ ಬರೆದುಕೊಳ್ಳಲು ಕೆಲವು ಸ್ಕ್ರಾಪ್‌ಪುಸ್ತಕ (Scrap Book) ಇತ್ಯಾದಿ.

ಇತ್ತೀಚಿನ ವರ್ಷಗಳಲ್ಲಿ ಬರವಣಿಗೆಯ ಸಂಪ್ರದಾಯ ಹಿಂದೆ ಸರಿಯುತ್ತಿದ್ದು ಎಲ್ಲರೂ ಕಂಪ್ಯೂಟರ್ ಬಳಸುತ್ತಿದ್ದಾರೆ. ಜಗತ್ತು ಪೇಪರ್ ಲೆಸ್ (ಕಾಗದರಹಿತ) ಕಛೇರಿಯತ್ತ ಮುನ್ನುಗ್ಗುತ್ತಿದೆ. ಲೇಖನಗಳನ್ನು ಇ–ಮೇಲ್ ಮೂಲಕ ಕಳುಹಿಸುವುದು ಆರಂಭವಾಗಿದೆ. ಆದ್ದರಿಂದ ಸ್ವಂತ ಕಂಪ್ಯೂಟರ್, ಪ್ರಿಂಟರ್,

ಇಂಟರ್‌ನೆಟ್ ಸಂಪರ್ಕ ಅತ್ಯಗತ್ಯ. ನಿಮ್ಮದೇ ಆದ ಲೆಟರ್‌ಹೆಡ್ ಇರಬೇಕು. ಇದರಿಂದ ನಿಮ್ಮ ಬರವಣಿಗೆಗೆ ಒಂದು ರೀತಿಯ ವ್ಯಕ್ತಿಪರತೆ (professional-ism) ಬರುತ್ತದೆ. ಈ ಸಾಮಗ್ರಿಗಳು ಸಾಮಾನ್ಯವಾಗಿ ಇರುತ್ತದೆ ಎಂದು ನೀವು ಭಾವಿಸಿದರೆ ಅದು ನಿಮ್ಮ ತಪ್ಪು ಕಲ್ಪನೆ, ಯಾವುದಾದರೂ ದೂರವಾಣಿ ಕರೆ ಬಂದಾಗ ಅತ್ತಕಡೆ ಮಾತನಾಡುವವರು ನೀಡುವ ಮಾಹಿತಿಯನ್ನು ಗುರುತು ಹಾಕಿಕೊಳ್ಳಲು ಪೆನ್, ಪೆನ್ಸಿಲ್ ಹಾಗೂ ಖಾಲಿ ಹಾಳೆಗಾಗಿ ನೀವು ಎಷ್ಟುಸಲ ಪರದಾಡಿಲ್ಲ? ಸಾಮಾನ್ಯವಾಗಿ ಟೆಲಿಫೋನ್ ಬಳಿ ಪೆನ್ ಅಥವಾ ಪೆನ್ಸಿಲ್ ಇದ್ದರೂ ಅದರಿಂದ ಬರೆಯಲಾಗುವುದಿಲ್ಲ. ಇಂಕ್ ಮುಗಿದಿರುತ್ತದೆ, ಅಥವಾ (ಸೀಸ) ಲೆಡ್ ಮೊಂಡಾಗಿರುತ್ತದೆ. ಬರವಣಿಗೆಗೆ ಕುಳಿತಾಗ ಈ ರೀತಿಯ ಅಡಚಣೆಗಳಿರಬಾರದು.

ಕಂಪ್ಯೂಟರ್ ಸೌಲಭ್ಯವು ಇದ್ದರೂ ಒಂದು ಉತ್ತಮ ಪದಕೋಶ, ಡಿಕ್ಷನರಿ ಅಗತ್ಯ. ಕನ್ನಡದಲ್ಲಿ ಬರೆಯುವವರು ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿರುವ ಡಿಕ್ಷನರಿ ಖರೀದಿಸಬೇಕು. ಇದಲ್ಲದೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಆಡಳಿತ ಪದಕೋಶದ ಪ್ರತಿಯೊಂದು ಇರಬೇಕು. ಭಾರತದ ಸಂವಿಧಾನದ ಒಂದು ಪ್ರತಿ ವಾರ್ಷಿಕ ಅಂಕಿ– ಅಂಶಗಳು, ಕೆಲವು ಕಾಯ್ದೆಗಳ ಪ್ರತಿ ಇದ್ದರೆ ಒಳಿತು. ಈ ಸಲಕರಣೆಗಳಿಲ್ಲದೆ ಬರಹಗಾರನಾಗಬೇಕೆಂದು ಬಯಸುವವರು ಮೈಗೂಡಿಸಿಕೊಳ್ಳಬೇಕಾದ ಇತರೆ ಅಭ್ಯಾಸಗಳು ಇವು:

**1. ಬರವಣಿಗೆಯ ಅಭ್ಯಾಸ**

‘ನೀವು ಬರಹಗಾರರಾಗಬೇಕಾದರೆ ಅದರ ಬಗ್ಗೆ ಮಾತನಾಡಬೇಡಿ, ಅದನ್ನು ಮಾಡಿ ತೋರಿಸಿ’ ಎಂದು ಹೇಳುವ ಪರಿಪಾಠವಿದೆ, ಬರವಣಿಗೆಯ ಮೊದಲ ಹಂತ ಬರವಣಿಗೆ! ಬರವಣಿಗೆಯ ಬಗ್ಗೆ ಗಂಟೆಗಟ್ಟಲೆ ಮಾತನಾಡುವವರು ಬಹಳ ಮಂದಿ ಇದ್ದಾರೆ. ಆದರೆ ಅವರೆಲ್ಲರೂ ಬರಹಗಾರರಲ್ಲ. ಕೇವಲ ಮಾತುಗಾರಿಕೆಯಿಂದ ನೀವು ಬರಹಗಾರರಾಗಲು ಸಾಧ್ಯವಿಲ್ಲ, ಭಾಷಣಕಾರರಾಗಬಹುದು ಅಷ್ಟೇ. ಬರಹಗಾರರಾಗಬೇಕಾದರೆ ಬರವಣಿಗೆ ಮೊದಲು ಕ್ರಿಯಾಪದವಾಗಬೇಕು. ಆನಂತರ ನಾಮಪದ. ನೀವು ಬರಹಗಾರರು ಎಂದು ತಿಳಿಯುವುದೇ ನೀವು ಬರೆಯಲು ಆರಂಭ ಮಾಡಿದಾಗ, ಬರಹಗಾರನ ಶಕ್ತಿ ಸಾಮರ್ಥ್ಯಗಳು ಹಾಗೂ ಲೋಪದೋಷಗಳು ಗೋಚರಿಸುವುದೇ ಬರವಣಿಗೆಗೆ ಕುಳಿತಾಗ, ಒಬ್ಬ ಬರಹಗಾರ ಹೆಚ್ಚು ಕಾಲ ತನ್ನ ಕ್ಷೇತ್ರದಲ್ಲಿ ಉಳಿಯಬೇಕಾದರೆ ಆತ/ಆಕೆ ಸದಾ ಬರೆಯುತ್ತಲೇ ಇರಬೇಕು. ಪ್ರತಿದಿನ ಏನಾದರೊಂದು ವಿಷಯದ ಬಗ್ಗೆ ಕನಿಷ್ಠ ಐದಾರು ಹಾಳೆಯನ್ನು ಬರೆಯುವ ಅಭ್ಯಾಸ ಮಾಡಿಕೊಳ್ಳಬೇಕು, ಬರೆಯುವುದು, ಬರಹಗಾರನ ಅಗತ್ಯ ಚಟುವಟಿಕೆಯಾಗಬೇಕು. ಇದು ನಿತ್ಯದ

ನಿರಂತರ ಕಾಯಕವಾಗಬೇಕು. ಯಾವುದೇ ಹವ್ಯಾಸದಲ್ಲಿ ತೊಡಗಿರುವವರನ್ನು ನೋಡಿದರೂ ಇದು ಗೊತ್ತಾಗುತ್ತದೆ. ಸಂಗೀತಗಾರರು ತಿಂಡಿ, ಊಟ ಇಲ್ಲದಿದ್ದರೂ, ಕೆಲವು ಗಂಟೆಗಳ ಕಾಲ ಸಂಗೀತ ಅಭ್ಯಾಸ ತಪ್ಪಿಸುವುದಿಲ್ಲ. ಸಂಗೀತ ಕಲಿಯುತ್ತಿರುವವರು ಮಾತ್ರವಲ್ಲ, ಈಗಾಗಲೇ ಸಂಗೀತದ ಉತ್ತುಂಗಕ್ಕೇರಿರುವ ವಿದ್ವಾಂಸರೂ, ದಿನ ನಿತ್ಯ ಅಭ್ಯಾಸ ತಪ್ಪಿಸುವುದಿಲ್ಲ, ಪ್ರತಿದಿನ ಯೋಗಾಭ್ಯಾಸ ಮಾಡುವವರು, ಒಂದು ದಿನ ಯೋಗ ಮಾಡದಿದ್ದರೆ ಅವರಲ್ಲಿ ಲವಲವಿಕೆ ಇರುವುದಿಲ್ಲ. ಏನನ್ನೋ ಕಳೆದುಕೊಂಡವರಂತೆ ಖಿನ್ನರಾಗುತ್ತಾರೆ. ಇದು ಬರಹಗಾರನಿಗೂ ಅನ್ವಯಿಸುತ್ತದೆ. ನಿಮಗೆ ಅನುಕೂಲವಾದ ಸ್ಥಳ ಆರಿಸಿಕೊಳ್ಳಿ. ನಿಮಗಿಷ್ಟ ಬಂದ ವಿಷಯದ ಬಗ್ಗೆ ಬರೆಯಿರಿ. ಅದು ಉಪಯೋಗವಾಗುತ್ತದೋ ಇಲ್ಲವೋ ಅಥವಾ ಪ್ರಕಟವಾಗುತ್ತದೋ ಇಲ್ಲವೋ ಮುಖ್ಯವಲ್ಲ, ಪ್ರಕಟಣೆಗೆ ಕಳುಹಿಸಲು ಯೋಗ್ಯವಲ್ಲದಿದ್ದರೂ ಪರವಾಗಿಲ್ಲ. ಆದರೆ ಬರೆಯುವುದನ್ನು ಮರೆಯಬೇಡಿ.

ಆದರೆ ಪ್ರತಿದಿನ ಯಾವ ವಿಷಯದ ಬಗ್ಗೆ ಬರೆಯುವುದು? ಅಷ್ಟೊಂದು ವಿಷಯ, ಮಾಹಿತಿ ಹಾಗೂ ಸಾಮಗ್ರಿ ಎಲ್ಲಿರುತ್ತದೆ? ಈ ಪ್ರಶ್ನೆಗಳು ಸಹಜ. ವಿಶೇಷವಾಗಿ ಈಗಷ್ಟೇ ಬರವಣಿಗೆಗೆ ಕೈಹಾಕಿರುವವರಲ್ಲಿ ಈ ಅನುಮಾನ ಇರುತ್ತದೆ. ಈಗಾಗಲೇ ಹೇಳಿರುವಂತೆ ದಿನನಿತ್ಯದ ಬರವಣಿಗೆಯ ಉದ್ದೇಶ ಪ್ರಕಟಣೆಯಲ್ಲ. ಒಂದು ಶಿಸ್ತನ್ನು ಮೈಗೂಡಿಸಿಕೊಳ್ಳಲು ಇದು ಅಗತ್ಯ. ಸ್ನೇಹಿತ–ರಿಗೆ, ಸಂಬಂಧಿಕರಿಗೆ ಪತ್ರ ಬರೆಯುವುದೂ ಒಂದು ಬರವಣಿಗೆಯೇ, ಯಾರಿಗೆ ಗೊತ್ತು ಮುಂದೆ ಈ ಪತ್ರಗಳೇ ಒಂದು ಪುಸ್ತಕ ರೂಪದಲ್ಲಿ ಪ್ರಕಟವಾಗಬಹುದು. ಜವಾಹರಲಾಲ್ ನೆಹರೂ ತಮ್ಮ ಪುತ್ರಿ ಇಂದಿರಾ ಪ್ರಿಯದರ್ಶಿನಿಗೆ ಬರೆದ ಪತ್ರಗಳು ಒಂದು ಶ್ರೇಷ್ಠ ಪುಸ್ತಕವಾಗಲಿಲ್ಲವೇ? ಪತ್ರ ಸಾಹಿತ್ಯದ ಬಗ್ಗೆ ಪ್ರೌಢ ಪ್ರಬಂಧ ಬರೆದು ಡಾಕ್ಟರೇಟ್ ಪಡೆದವರಿದ್ದಾರೆ. ಪ್ರೊ॥ ಎ.ಎನ್. ಮೂರ್ತಿರಾವ್ ಅವರ 'ಚಿತ್ರಗಳು–ಪತ್ರಗಳು' ಎಂಬ ಪುಸ್ತಕ ಪ್ರಶಸ್ತಿ ಪಡೆದಿರುವುದನ್ನು ಇಲ್ಲಿ ಸ್ಮರಿಸಬಹುದು. ನಿತ್ಯ ನೋಡಿದ, ಕೇಳಿದ ವಿಷಯಗಳು, ಭೇಟಿಯಾದ ವ್ಯಕ್ತಿಗಳ ಬಗ್ಗೆ ನಿಮ್ಮ ಅನಿಸಿಕೆಗಳು, ನಿಮ್ಮ ಮನೆಯೊಳಗಿನ ಮಾತು, ಮಕ್ಕಳ ಮುದ್ದಾದ ಮಾತುಗಳು, ನೀವು ಓದಿದ ಪುಸ್ತಕದ ಬಗ್ಗೆ, ನೋಡಿದ ಚಲನಚಿತ್ರ, ಧಾರಾವಾಹಿಗಳ ಬಗ್ಗೆ ನಿಮ್ಮ ಅನಿಸಿಕೆ ಹೀಗೆ ಯಾವುದಾದರೂ ಒಂದು ವಿಷಯದ ಬಗ್ಗೆ ಬರೆಯಿರಿ.

**2. ಸ್ಫೂರ್ತಿಗಾಗಿ ಕಾಯಬೇಡಿ**

ಸ್ಫೂರ್ತಿ ಎಂಬುದು ಸಾಹಿತಿಗಳಿಗೆ ಹಾಗೂ ಕವಿಗಳಿಗೆ ಸಂಬಂಧಪಟ್ಟ

ವಿಷಯ. ಒಂದು ವೇಳೆ ಸುದ್ದಿ ಸಮಾಚಾರ ಬರೆಯುವವರು, ಅಂಕಣಕಾರರು ಹಾಗೂ ಲೇಖನ ಬರೆಯುವವರು ಸ್ಫೂರ್ತಿಗಾಗಿ ಕಾಯುತ್ತಾ ಕುಳಿತರೆ, ಬೆಳಗಿನ ದಿನಪತ್ರಿಕೆ ಪ್ರಕಟವಾಗುವುದಿಲ್ಲ. ಸೃಜನಶೀಲ ಬರಹಗಾರರಾಗಬೇಕಾದರೆ ನೀವು ಸ್ಫೂರ್ತಿಗಾಗಿ ಕಾಯಬಾರದು. ನೀವು ಉಸಿರಾಡಲು ಸೂರ್ತಿಗಾಗಿ ಕಾಯುತ್ತೀರಾ? ಉಸಿರಾಟ ಎಷ್ಟು ನೈಸರ್ಗಿಕವೋ ನಿಮ್ಮ ಬರವಣಿಗೆಯೂ ಅಷ್ಟೇ ನೈಸರ್ಗಿಕವಾಗಿರಬೇಕು. ಸ್ಫೂರ್ತಿ ಅಗತ್ಯ ನಿಜ. ಆದರೆ ಅದಕ್ಕೆ ಕಾಯುತ್ತಾ ಅದನ್ನೇ ಅವಲಂಬಿಸಬಾರದು.

ಬರವಣಿಗೆ ಎಂಬ ವಾಹನವನ್ನು "ಆನ್" ಸ್ಥಿತಿಯಲ್ಲಿ ಇರಿಸಿಕೊಂಡಿರಿ. ಬರೆಯಬೇಕು ಎಂಬ ಪ್ರಚೋದನೆ ಬಂದ ಕೂಡಲೇ ಅದನ್ನು ಡ್ರೈವ್ ಮಾಡಿಕೊಂಡು ಹೊರಡಿ, ನಿಮಗಿಷ್ಟ ಬಂದ ಕಡೆ ಸುತ್ತಾಡಿ, ಪ್ರಸಿದ್ಧ ಬರಹಗಾರ ಹಾಗೂ ಹಾಸ್ಯಗಾರ ಪೀಟರ್ ಡೇ ರೈಸ್ ಹೀಗೆ ಹೇಳುತ್ತಾನೆ "ನಾನು ಸ್ಫೂರ್ತಿ ಬಂದಾಗ ಬರೆಯುತ್ತೇನೆ. ಆದರೆ ಪ್ರತಿದಿನ ಬೆಳಿಗ್ಗೆ 9 ಗಂಟೆಗೆ ಸ್ಫೂರ್ತಿ ಬರುವುದನ್ನು ಖಚಿತಪಡಿಸಿಕೊಳ್ಳುತ್ತೇನೆ. ನೀವು ಬೇಕೆಂದಾಗ ಸ್ಫೂರ್ತಿ ನಿಮ್ಮ ಬಳಿ ಬರುವಂತೆ ಮಾಡಿಕೊಳ್ಳಬೇಕು. ಇದು ಅಸಾಧ್ಯವಾದದ್ದಲ್ಲ.

### 3. ಬರಹಗಾರನ ಅಡೆತಡೆಗಳು (Writers Block)

ಅದೆಷ್ಟೋ ವಿಷಯಗಳು ನಿಮ್ಮ ಮನಸ್ಸಿನಲ್ಲಿದ್ದರೂ, ಅದನ್ನು ಕೃತಿಗೆ ಇಳಿಸುವಾಗ ಅನೇಕ ಅಡಚಣೆಗಳು ಬಂದೊದಗುತ್ತವೆ. ಏನು ಬರೆಯಬೇಕು, ಹೇಗೆ ಆರಂಭಿಸಬೇಕು ಇತ್ಯಾದಿ ಪ್ರಶ್ನೆಗಳು ನಿಮ್ಮೆದುರು ನಿಲ್ಲುತ್ತವೆ. ಹೊಸಬರಿಗೆ ಈ ಅಡಚಣೆ ಗಾಬರಿ ಹುಟ್ಟಿಸಲೂಬಹುದು. ಆದರೆ ಬರಹಗಾರರು ಇದಕ್ಕಾಗಿ ಗಾಬರಿಪಡುವ ಅಗತ್ಯವಿಲ್ಲ. ಇದನ್ನು "ರೈಟರ್ ಬ್ಲಾಕ್' ಎಂದು ಕರೆಯುತ್ತಾರೆ. ನುರಿತ ಬರಹಗಾರರನ್ನೂ ಇದು ಬಿಡುವುದಿಲ್ಲ. ಕ್ರಮೇಣ ಇದನ್ನು ಎದುರಿಸುವ ಸಾಮರ್ಥ್ಯ ಬರುತ್ತದೆ. ಇದೊಂದು ಆಂತರಿಕ ಅಡಚಣೆ. ಕೆಲವು ಬಾಹ್ಯ ಜಗತ್ತಿನ ಅಡಚಣೆಗಳು ಬರಹಗಾರರನ್ನು ಕಾಡಬಹುದು. ಹಣಕಾಸಿನ ಸಮಸ್ಯೆ, ಅನಾರೋಗ್ಯ, ಅಪ್ತರ ಸಾವು, ಸಂಸಾರದಲ್ಲಿ ವೈಮನಸ್ಯ, ನಕಾರಾತ್ಮಕ ಭಾವನೆಗಳು ಹಳಸಿಕೊಂಡ ಸಂಬಂಧಗಳು ಇತ್ಯಾದಿ, ಬರಹಗಾರರು ಈ ಸಮಸ್ಯೆಗಳಿಂದ ಆದಷ್ಟೂ ಶೀಘ್ರವಾಗಿ ಹೊರಬರಲು ಪ್ರಯತ್ನಿಸಬೇಕು ಅಥವಾ ಸಮಸ್ಯೆ ಗಳೊಂದಿಗೆ ಬದುಕಲು ಕಲಿಯಬೇಕು.

ಆಂತರಿಕ ಅಡಚಣೆಗಳಿಂದ ಮುಕ್ತವಾಗುವ ಸಿದ್ಧಪಡಿಸಿದ ಸೂತ್ರ ಎಲ್ಲೆಡೆ ದೊರೆಯುವುದಿಲ್ಲ. ಬರಹಗಾರರೇ ಅದನ್ನು ಕಂಡುಕೊಳ್ಳಬೇಕು. ಉದಾಹರಣೆಗೆ,

ತಾನೊಬ್ಬ ಬರಹಗಾರ, ತನ್ನಲ್ಲಿ ಬರವಣಿಗೆಯ ಶಕ್ತಿ ಅಧಿಕ ವಾಗಿದೆ ಎಂದು ಆಗಾಗ ಹೇಳಿಕೊಳ್ಳುತ್ತಿದ್ದರೆ ಬರವಣಿಗೆಯ ಬಗ್ಗೆ ನಂಬಿಕೆ ಹುಟ್ಟುತ್ತದೆ. ಕೆಲವು ಬರಹಗಾರರು ಒಂದು ನಿರ್ದಿಷ್ಟ ವಿಷಯದ ಬಗ್ಗೆ ಬರೆಯಲಾಗದಿದ್ದಾಗ ತಮಗೆ ತೋಚಿದ್ದನ್ನು ಕಾಗದದ ಮೇಲೆ ಗೀಚುತ್ತಾರೆ. ಬರೆದ ನಂತರ ಅದನ್ನು ಕಸದ ಬುಟ್ಟಿಗೆ ಎಸೆಯುತ್ತೇನೆಂದು ತಿಳಿದಿದ್ದರೂ ಬರೆಯುತ್ತಾರೆ. ಅದನ್ನು ಎಸೆದ ಕೂಡಲೇ ಯಾವ ವಿಷಯ ಕುರಿತು ಬರೆಯಬೇಕಿತ್ತೋ ಅದನ್ನು ಬರೆಯಲಾರಂಭಿಸುತ್ತಾರೆ.

ಮನೋವಿಜ್ಞಾನದ ಪ್ರಕಾರ ರೈಟರ್ ಬ್ಲಾಕ್ ಅನ್ನು 'ಫ್ರೋಜನ್ ಬ್ರೈನ್ ಸಿಂಡ್ರೋಮ್' (frozen brain syndrome) ಎಂದು ಕರೆಯಲಾಗಿದೆ. ಇದಕ್ಕೆ ಕಾರಣ ವ್ಯಕ್ತಿಯಲ್ಲಿರುವ ಗುಣಗಳು. ಇದಕ್ಕೆ ಪರಿಹಾರವಾಗಿ ಕೆಲವು ಸೂಚನೆಗಳನ್ನು ನೀಡಬಹುದು

1. ನೀವು ಆಯ್ಕೆ ಮಾಡಿಕೊಂಡಿರುವ ವಿಷಯದಲ್ಲಿ ನಿಮಗೆ ಆಸಕ್ತಿ ಇದೆಯೇ? ಎಂದು ಪ್ರಶ್ನಿಸಿಕೊಳ್ಳಿ. ಈ ವಿಷಯ ನಿಮ್ಮಲ್ಲಿ ಯಾವ ರೀತಿ ಪ್ರತಿಕ್ರಿಯಿಸುತ್ತದೆ? ನಿಮ್ಮನ್ನು ಪ್ರಚೋದಿಸುತ್ತದೆಯೇ? ನಿಮ್ಮನ್ನು ಯೋಚಿಸುವಂತೆ ಮಾಡುತ್ತದೆಯೇ? ಆ ವಿಷಯದಲ್ಲಿ ನಿಮಗೆ ಕೋಪವಿದೆಯೇ? ಹಿಂಜರಿಕೆ ಇದೆಯೇ? ವಿಷಯದ ಬಗ್ಗೆ ಸಾಕಷ್ಟು ಮಾಹಿತಿ ಸಂಗ್ರಹಿಸಿದ್ದೀರಾ?

2 ಆರಿಸಿಕೊಂಡಿರುವ ವಿಷಯ ಪ್ರಕಟಣೆಗೆ ಯೋಗ್ಯ ಎಂದು ನೀವು ನಂಬಿದ್ದೀರಾ? ಅದಕ್ಕಿರುವ ಮಾರುಕಟ್ಟೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದೀರಾ? ಅಥವಾ ವಿಷಯದ ಆಕರ್ಷಣೆಯಿಂದ ಬರವಣಿಗೆಗೆ ತೊಡಗಿದ್ದೀರಾ? ಈ ಪ್ರಶ್ನೆಗಳಿಗೆ ಸೂಕ್ತ ಉತ್ತರ ನಿಮ್ಮಲ್ಲಿದ್ದರೆ ಬರವಣಿಗೆ ಸುಗಮವಾಗುತ್ತದೆ.

ಇದಲ್ಲದೆ, ಕೆಲವು ಸಾಮಾನ್ಯ ಪರಿಹಾರ ಸೂಚಿಸಬಹುದು. ಬರೆಯಲು ಏನೂ ತೋಚದಿದ್ದಾಗ ಒಂದು ಕಪ್ ಕಾಫಿ, ಟೀ ಅಥವಾ ಹಣ್ಣಿನ ರಸ ಕುಡಿಯಿರಿ. ಇಷ್ಟವಾದ ಸಿನೆಮಾ ಹಾಡು ಅಥವಾ ಸಂಗೀತ ಕೇಳಿ, ಹಾಡುವ ಅಭ್ಯಾಸವಿದ್ದರೆ ನೀವೇ ಒಂದು ಹಾಡು ಹೇಳಿ, ಒಂದೈದು ನಿಮಿಷ ವಾಕಿಂಗ್ ಮಾಡಿ ಬನ್ನಿ, ಆತ್ಮೀಯರಾದವರನ್ನು ಕಂಡು ಹರಟುವುದು, ಜೋಕ್ಸ್ ಪುಸ್ತಕ ಓದುವುದು ಇತ್ಯಾದಿ.

ಕುಳಿತು ಬರೆಯಲು ಆಯ್ಕೆ ಮಾಡಿಕೊಳ್ಳಲು ಸ್ಥಳ, ಅದರ ಸುತ್ತಮುತ್ತಲಿನ ವಾತಾವರಣ, ಅಲ್ಲಿರುವ ಸೌಲಭ್ಯಗಳು ನಿಮ್ಮ ಮೇಲೆ ಪರಿಣಾಮ ಉಂಟು ಮಾಡಬಹುದು. ಒಬ್ಬೊಬ್ಬರಿಗೆ ಒಂದೊಂದು ಜಾಗ ಇಷ್ಟವಾಗುತ್ತದೆ. ಕೆಲವರಿಗೆ

ಕಿಟಕಿಯ ಹತ್ತಿರ, ಮತ್ತೆ ಕೆಲವರಿಗೆ ಹಾಸಿಗೆಯ ಮೇಲೆ ಕುಳಿತಾಗ ಬರೆಯುವ ಹುಮ್ಮಸ್ಸು ಬರುತ್ತದೆ. ನಿಮ್ಮ ಬರವಣಿಗೆ ಸುಸೂತ್ರವಾಗಿ ನಡೆಯಬೇಕು. ಅದು ಮುಖ್ಯ. ಆದ್ದರಿಂದ ಯಾವ ಸ್ಥಳದಲ್ಲಿ ಕುಳಿತ ಕೂಡಲೇ 'ಬರೆಯಬೇಕು' ಎಂಬ ಮನೋಭಾವ ಉಂಟಾಗುತ್ತದೋ ಆ ಸ್ಥಳ ಆಯ್ಕೆ ಮಾಡಿಕೊಳ್ಳಿ.

ಸ್ಥಳದಷ್ಟೇ ಮುಖ್ಯ ಸಮಯ. ಯಾವ ಸಮಯ ನಿಮಗೆ ಅನುಕೂಲ ಎಂದು ತೋರುತ್ತದೋ ಅದಕ್ಕೆ ತಕ್ಕಂತೆ ನಿಮಗೆ ಇತರೆ ಕೆಲಸ ಕಾರ್ಯಗಳನ್ನು ಮುಂದಕ್ಕೆ ಹಾಕಿ, ಬರೆಯುವ ಸಮಯ ಕಾಯ್ದಿರಿಸಿಕೊಳ್ಳಿ. ಕೆಲವರಿಗೆ ಬೆಳಗ್ಗೆ 4ರಿಂದ 8ರವರೆಗೆ ಉತ್ತಮ ಸಮಯವಾದರೆ ಕೆಲವರು ರಾತ್ರಿ 10 ಗಂಟೆಯ ನಂತರ ಬರೆಯಲು ಆರಂಭಿಸುತ್ತಾರೆ. ಕೆಲವೊಮ್ಮೆ ಬರಹಗಾರರಿಗೆ ಸ್ಥಳ ಅಥವಾ ಸಮಯ ಎರಡನ್ನೂ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಇರುವುದಿಲ್ಲ, ಅದೇ ರೀತಿ ಇತರೆ ಕೆಲಸ ಕಾರ್ಯಗಳನ್ನು ಕಡೆಗಣಿಸುವಂತೆಯೂ ಇಲ್ಲ. ಉದಾಹರಣೆಗೆ, ಪ್ರಕಾಶಕರು 10–15 ದಿನಗಳಲ್ಲಿ ಪುಸ್ತಕ ಬರೆದುಕೊಡಿ ಎಂದರೆ ಆ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕಲ್ಲವೇ? ಆಗ ಸ್ಥಳ, ಸಮಯ ಸ್ಫೂರ್ತಿ ಯಾವುದೂ ಮುಖ್ಯವಾಗಬಾರದು, ಪುಸ್ತಕ ಬರೆಯುವುದೇ ನಿಮ್ಮ ಗುರಿಯಾಗಬೇಕು.

**4. ಸತತ ಅಧ್ಯಯನ**

ನೀವು ಪ್ರಕಟನಾಯೋಗ್ಯ ಲೇಖನ ಬರೆಯಬೇಕೇ? ಹಾಗಿದ್ದರೆ ನೀವು ಓದಬೇಕು. ಖಂಡಿತವಾಗಿಯೂ ಓದಬೇಕು. ಓದುವುದು ಎಂದಾಕ್ಷಣ ಮನೋರಂಜನೆಗೆ ಓದುವುದಲ್ಲ, ನಿಮಗಾಗಿ ನೀವು ಓದಬೇಕು, ಅಧ್ಯಯನ ಮಾಡಬೇಕು, ಬರಹಗಾರರ ದೃಷ್ಟಿಯಿಂದ ಹೇಳುವುದಾದರೆ ಓದುವಿಕೆ ಹಾಗೂ ಅಧ್ಯಯನ ಇಲ್ಲದಿದ್ದರೆ ಬರವಣಿಗೆ ಅಸಾಧ್ಯ. ಓದುವುದೆಂದರೆ ಕಿವಿಯಿಂದ ಮತ್ತು ಕಣ್ಣಿನಿಂದ ಬರೆಯುವುದು ಎಂದು ಹೇಳುತ್ತಾರೆ.

ಬರಹಗಾರನಾಗಬೇಕೆಂದು ಬಯಸುವವನ ಓದಿನ ಉದ್ದೇಶ, ರೀತಿ–ನೀತಿ ಇತ್ಯಾದಿ ವಿಭಿನ್ನವಾಗಿರಬೇಕು. ಸಾಮಾನ್ಯರಂತೆ ಸಂತೋಷಕ್ಕಾಗಲೀ ಅಥವಾ ಸಮಯ ಕಳೆಯಲಿಕ್ಕಾಗಲೀ ಓದಬಾರದು. ಒಬ್ಬ ಆರ್ಕಿಟೆಕ್ಟ್ ಒಂದು ಕಟ್ಟಡವನ್ನು ನೋಡುವುದಕ್ಕೂ ನಾವು ನೀವು ನೋಡುವುದಕ್ಕೂ ವ್ಯತ್ಯಾಸವಿದೆ. ನಾವು ಹೊರಗಿನ ಬಣ್ಣ, ಅಲಂಕಾರ ಇತ್ಯಾದಿ ನೋಡುತ್ತೇವೆ. ಆರ್ಕಿಟೆಕ್ಟ್ ಕಟ್ಟಡದ ನೀಲಿ ನಕ್ಷೆ, ಅದರ ಸೂಪರ್ ಸ್ಟ್ರಕ್ಚರ್, ಸಂರಚನೆ ನೋಡುತ್ತಾನೆ. ಬರವಣಿಗೆಯಲ್ಲಿ ತೊಡಗಿಸಿಕೊಳ್ಳಬೇಕಾದವರು ಆರ್ಕಿಟೆಕ್ಟ್‌ನಂತೆ ಓದಬೇಕು.

ಸತತ ಅಧ್ಯಯನ ಮಾಡಬೇಕು ಎಂದಾಕ್ಷಣ ಎದುರಾಗುವ ಪ್ರಶ್ನೆ: ಏನನ್ನು

ಓದುವುದು? ಯಾವ ಪುಸ್ತಕ? ಯಾವ ವಿಷಯ ಕುರಿತು ಓದುವುದು? ಲೇಖನ ಕಲೆಯನ್ನು ವೃದ್ಧಿಸಿಕೊಳ್ಳಬೇಕಾದರೆ ಕೇವಲ ಒಂದೆರಡು ವಿಷಯಗಳ ಬಗ್ಗೆ ಅಧ್ಯಯನ ನಡೆಸಿದರೆ ಸಾಲದು ಅಥವಾ ತನಗೆ ಇಷ್ಟವಿರುವ ವಿಷಯವನ್ನು ಮಾತ್ರ ಅಭ್ಯಾಸ ಮಾಡಿದರೆ ಸಾಲದು. ವಿಷಯದ ಆಯ್ಕೆ ವಿಸ್ತಾರವಾಗಿರಬೇಕು. ಕೆಲವು ವಿಷಯಗಳಲ್ಲಿ ಪರಿಣತಿ ಹೊಂದಿರಬೇಕು. ಯಾವ ವಿಷಯದಲ್ಲೇ ಆಗಲಿ ಲೇಖನ ಬರೆಯುವ ಅವಕಾಶ ದೊರೆತರೆ ಅದನ್ನು ಉಪಯೋಗಿಸಿಕೊಳ್ಳುವಷ್ಟು ಅಧ್ಯಯನ ಮಾಡಬೇಕು. ಬರಹಗಾರನಾದವನು ಜ್ಞಾನ ಸಂಪತ್ತಿನ ಕಡೆ ಗಮನ ಹರಿಸಿದಷ್ಟೇ ತನ್ನ ಮಾರುಕಟ್ಟೆಯ ವಿಸ್ತರಣೆಯ ಬಗ್ಗೆಯೂ ಗಮನಹರಿಸಬೇಕು. ಯಾವ ವಿಷಯ ನೀಡಿದರೂ, ಅದರ ಬಗ್ಗೆ 500–700 ಪದಗಳ ಲೇಖನ ಬರೆಯುವಷ್ಟು ಸಾಮರ್ಥ್ಯ ಹೊಂದಿರಬೇಕು.

ಬರಹಗಾರರು ಒಂದು ಪುಸ್ತಕವನ್ನೋ ಅಥವಾ ಗ್ರಂಥವನ್ನೋ ಎರಡು ಬಾರಿ ಓದಬೇಕೆಂದು ಹೇಳುತ್ತಾರೆ. ಪ್ರಥಮ ಬಾರಿ ಓದುವುದು ಆಸಕ್ತಿ ಇಲ್ಲವೇ ಸಂತೋಷಕ್ಕಾಗಿ ಎರಡನೇ ಬಾರಿ ಓದುವುದು ಅದರಲ್ಲಿರುವ ವಿಷಯ ಹಾಗೂ ಬಳಸಿರುವ ತಂತ್ರದ ವಿಶ್ಲೇಷಣೆಗಾಗಿ ಪುಸ್ತಕ ಓದಿದ ನಂತರ ಕೆಳಗೆ ಸೂಚಿಸಿರುವ ಪ್ರಶ್ನೆಗಳನ್ನು ಕೇಳಿಕೊಳ್ಳಿ.

(ಅ) ಪುಸ್ತಕದಲ್ಲಿ ನಿಮಗೆ ಅತ್ಯಂತ ಮೆಚ್ಚುಗೆಯಾದ ಅಂಶ ಯಾವುದು?
(ಆ) ಇಷ್ಟವಾಗದ ಅಂಶ ಯಾವುದು?
(ಇ) ಲೇಖಕರ ಬರವಣಿಗೆಯ ಶೈಲಿ, ಎಷಯ ಸಂಗ್ರಹಣೆ ನಿರೂಪಣೆ ಇತ್ಯಾದಿ ಬಗ್ಗೆ ನಿಮ್ಮ ಅನಿಸಿಕೆ ಏನು?
(ಈ) ಲೇಖಕರ ಉದ್ದೇಶ ಸಫಲವಾಗಿದೆಯೇ? ಓದುಗರನ್ನು ಯೋಚನೆ ಹಚ್ಚಲು ಶ್ರಮವಹಿಸಿದ್ದೀರಾ? ಅದರಲ್ಲಿ ಲೇಖಕರು ಯಶಸ್ವಿ ಯಾಗಿದ್ದಾರಾ?
(ಉ) ಪುಸ್ತಕ ನಿಮ್ಮನ್ನು ಗಾಢವಾಗಿ ಆವರಿಸಿದೆಯೇ? ಅದೇ ಗುಂಗಲ್ಲಿದ್ದೀರಾ? ಮತ್ತೊಮ್ಮೆ ಓದಬೇಕು ಎಂಬ ಪ್ರಚೋದನೆ ದೊರೆತಿದೆಯೇ?
(ಊ) ಪುಸ್ತಕ ಓದಿಸಿಕೊಂಡು ಹೋಗುವ ಗುಣ ಹೊಂದಿದೆಯೇ? ಎಷ್ಟರಮಟ್ಟಿಗೆ?

ಪುಸ್ತಕವನ್ನು ಓದಿದ ನಂತರ ಈ ರೀತಿ ಪ್ರಶ್ನೆಗಳನ್ನು ಕೇಳಿಕೊಂಡರೆ, ಪುಸ್ತಕವನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುವುದಲ್ಲದೆ, ನಿಮ್ಮ ಬರವಣಿಗೆಯ ಮೌಲ್ಯವನ್ನು ಹೆಚ್ಚಿಸುತ್ತದೆ.

**5. ಸತತ ಪ್ರಯತ್ನ**

ನಿಮ್ಮ ಬರವಣಿಗೆ ಪ್ರಕಟವಾಗಬೇಕೇ? ಹಾಗಿದ್ದರೆ ನಿಮ್ಮಲ್ಲಿ ತಾಳ್ಮೆ ಹಾಗೂ ಸತತವಾಗಿ ಪ್ರಯತ್ನ ಮಾಡುವ ಗುಣ ಅಗತ್ಯ. ಇತರ ಕ್ಷೇತ್ರದಲ್ಲಿರುವಂತೆ ಪತ್ರಿಕಾ ರಂಗದಲ್ಲೂ ಸ್ಪರ್ಧೆ ಇದೆ. ರಾಜಕೀಯವಿದೆ. ಗುಂಪುಗಾರಿಕೆ ಇದೆ. ಪಕ್ಷಪಾತ, ಒತ್ತಡ ಎಲ್ಲವೂ ಇದೆ. ಆದರೆ ಇವೆಲ್ಲಕ್ಕಿಂತ ಮಿಗಿಲಾಗಿ ಶ್ರೇಷ್ಠತೆಗೆ ಮಾನ್ಯತೆ ಇದೆ. ಈ ಶ್ರೇಷ್ಠತೆಯನ್ನು ಗುರುತಿಸಲು ಕಾಲ ಕೂಡಿಬರಬೇಕು. ಅದಕ್ಕಾಗಿ ನೀವು ಕಾಯಬೇಕು. ಅಂದಮಾತ್ರಕ್ಕೆ ನೀವು ಆ ಕಾಲ ಬರುವವರೆಗೂ ಕೈ ಕಟ್ಟಿ ಕುಳಿತ ಕೊಳ್ಳಬಾರದು. ನಿಮ್ಮ ಓದು, ಅಧ್ಯಯನ, ವಿಷಯ ಸಂಗ್ರಹಣೆ, ಭಾಷೆಯ ಗುಣಮಟ್ಟ ವೃದ್ಧಿಸಿಕೊಳ್ಳಲು ಸತತವಾಗಿ ಪ್ರಯತ್ನಿಸುತ್ತಿರಬೇಕು.

ಇಂದಿನ ಅನೇಕ ಪ್ರತಿಷ್ಠಿತ ಲೇಖಕರು ಹಾಗೂ ಬರಹಗಾರರು ಬೆಳೆದು ಬಂದ ರೀತಿಯನ್ನು ಗಮನಿಸಿದರೆ, ತಾಳ್ಮೆಯ ಅಗತ್ಯ ತಿಳಿಯುತ್ತದೆ. ಆರ್.ಕೆ. ನಾರಾಯಣ್ ಅವರ ಪ್ರಥಮ ಕಾದಂಬರಿ ಕನಿಷ್ಠ 10 ಬಾರಿ ತಿರಸ್ಕೃತಗೊಂಡಿತ್ತು, ಹೆಸರಾಂತ ಕತೆಗಾರ್ತಿ ಶ್ರೀಮತಿ ಎಂ.ಕೆ. ಇಂದಿರಾ ಅವರ ಪ್ರಥಮ ಕಾದಂಬ–ರಿಯ ಹಸ್ತಪ್ರತಿಯನ್ನು ಪ್ರಕಾಶಕರು ಕಳೆದುಹಾಕಿಬಿಟ್ಟರು. ಧೃತಿಗೆಡದ ಇಂದಿರಾ ಮತ್ತೊಮ್ಮೆ ಹಸ್ತಪ್ರತಿಯನ್ನು ತಯಾರಿಸಿದರು. ಕೆಲವು ವರ್ಷಗಳ ಹಿಂದೆ ನಾನು ಆನಂದ್ ಕೆಂಟಿಷ್ ಕುಮಾರಸ್ವಾಮಿ ಅವರ ಬಗ್ಗೆ ಲೇಖನವೊಂದನ್ನು ಬರೆದೆ. ಕನ್ನಡದ ನಾಲ್ಕು ಪತ್ರಿಕೆಗಳಿಗೆ ಕಳುಹಿಸಿದೆ. ಲೇಖನ ವಾಪಸ್ ಬಂದಿತು. ಬೇಸತ್ತು ಲೇಖನವನ್ನು ಕಡತಕ್ಕೆ ಸೇರಿಸಿದೆ. ಆದರೆ ಕುಮಾರಸ್ವಾಮಿ ಅವರ ಬಗ್ಗೆ ಮತ್ತಷ್ಟು ಮಾಹಿತಿ ಸಂಗ್ರಹಿಸಲು ಆರಂಭಿಸಿದೆ. ಮೂರು ವರ್ಷಗಳ ನಂತರ ನನ್ನ ಹಳೆಯ ಲೇಖನ ಓದಿದೆ. ಅದರಲ್ಲಿದ್ದ ಲೋಪದೋಷ ಕಂಡು ನಾಚಿಕೆಯಾಯಿತು. ಮತ್ತೊಮ್ಮೆ ಲೇಖನವನ್ನು ಸರಿಪಡಿಸಿ ಕಳುಹಿಸಿದೆ. 'ಪ್ರಜಾವಾಣಿ' ಯಲ್ಲಿ ಪ್ರಕಟವಾಯಿತಲ್ಲದೇ ಹತ್ತಾರು ಮೆಚ್ಚುಗೆ ಪತ್ರವೂ ಬಂದವು. ಇದಾದ ನಂತರ ನನ್ನ ಯಾವುದೇ ಲೇಖನ ಹಿಂದಕ್ಕೆ ಬಂದಿಲ್ಲ. ಎಲ್ಲವೂ ಪ್ರಕಟವಾಗಿವೆ.

**6. ಶಿಸ್ತು ಮತ್ತು ಶಕ್ತಿ**

ಈ ವಿಷಯದ ಬಗ್ಗೆ ಈಗಾಗಲೇ ಹೇಳಿದ್ದೇನೆ. ಬರಹಗಾರರಾಗ ಬೇಕೆನ್ನುವವರು ಶಿಸ್ತಿನಿಂದ ಬರೆಯುವುದನ್ನು ರೂಢಿಸಿಕೊಳ್ಳಬೇಕು. ಪ್ರತಿದಿನ ಒಂದೆರಡು ಗಂಟೆ ಬರೆಯುವುದಕ್ಕೂ ಮೀಸಲಿಡಬೇಕು. ಮಾನಸಿಕ ಶಕ್ತಿಯ ಜೊತೆಗೆ ದೈಹಿಕ ಶಕ್ತಿಯೂ ಅಗತ್ಯ. ಕುವೆಂಪು, ಶಿವರಾಮ ಕಾರಂತ, ಮಾಸ್ತಿ ಮುಂತಾದವರು ತಮ್ಮ ಇಳಿವಯಸ್ಸಿನಲ್ಲೂ ಎಷ್ಟೊಂದು ಶಕ್ತಿಶಾಲಿಯಾಗಿದ್ದರು

ಎಂಬುದು ಅವರ ಪುಟಗಟ್ಟಲೆ ಸಾಹಿತ್ಯದಿಂದ ತಿಳಿಯುವುದಿಲ್ಲವೇ ? ವಾರಕ್ಕೆ ಎರಡು ಅಥವಾ ಮೂರು ಅಂಕಣ ಲೇಖನ ಬರೆಯುತ್ತಿದ್ದ ಹಾ.ಮಾ. ನಾಯಕ ಅವರ ಶಕ್ತಿ ಕಡಿಮೆಯೇ? ಉದಯೋನ್ಮುಖ ಬರಹಗಾರರು ಇವರಿಂದ ಕಲಿಯಬೇಕಾದ ಪಾಠ ಸಾಕಷ್ಟಿದೆ.

**7. ಅಸಮಾಧಾನ**

ಯಾವುದೇ ಕಲಾವಿದನನ್ನು ಉದ್ದೇಶಿಸಿ ಅವರಿಗೆ ಸಮಾಧಾನ ತಂದುಕೊಟ್ಟ ಪಾತ್ರ ಯಾವುದೆಂದು ಕೇಳಿ, ಅವರಲ್ಲಿ ಉತ್ತರವಿರುವುದಿಲ್ಲ. ಇದು ಸಂಗೀತಗಾರರಿಗೆ, ಕಲೆಗಾರರಿಗೆ ಹಾಗೂ ಬರಹಗಾರರಿಗೂ ಅನ್ವಯಿಸುತ್ತದೆ. ಓದುಗರ ದೃಷ್ಟಿಯಲ್ಲಿ ಯಾವುದಾದರೂ ಕೃತಿ ಶ್ರೇಷ್ಠವಾಗಿರಬಹುದು ಜನಪ್ರಿಯ ವಾಗಿಯೂ ಇರಬಹುದು. ಆದರೆ ಅದನ್ನು ಬರೆದ ಲೇಖಕನಿಗೆ ಅದು 'ಶ್ರೇಷ್ಠ'ವಾಗಿರುವುದಿಲ್ಲ. ಮತ್ತಷ್ಟು ಚೆನ್ನಾಗಿ ಬರೆಯಬಹುದಿತ್ತು. ಇನ್ನೂ ಹೆಚ್ಚಿನ ಮಾಹಿತಿ ಸೇರಿಸಬಹುದಿತ್ತು. ಭಾಷೆ ಮತ್ತಷ್ಟು ಪರಿಣಾಮಕಾರಿಯಾಗಿ ಬಳಸಬಹುದಿತ್ತು. ಇತ್ಯಾದಿ ಯೋಚನೆಗಳು ಅವರನ್ನು ಕಾಡುತ್ತವೆ. ಪರಿಪೂರ್ಣತೆಗೆ ಇವು ಅಗತ್ಯ. ಈ ರೀತಿಯ ಅತೃಪ್ತತೆ ಹಾಗೂ ಅಸಮಾಧಾನ ಇದ್ದಾಗ ಮಾತ್ರ ಗುಣಮಟ್ಟ ವೃದ್ಧಿಪಡಿಸಿಕೊಳ್ಳಲು ಸಾಧ್ಯ.

~ * ~ * ~ * ~

*ಆಕರ : 'ಲೇಖನ ಕಲೆಯನ್ನು ವೃದ್ಧಿಪಡಿಸಿಕೊಳ್ಳುವುದು ಹೇಗೆ?'*
*– ವೈ.ಜಿ. ಮುರಳೀಧರ,*
*ಪ್ರಕಾಶಕರು: ನವಕರ್ನಾಟಕ ಪ್ರಕಾಶನ*

~ * ~ * ~ * ~

## 4.4 ಚಟುವಟಿಕೆ:

ವಿದ್ಯಾರ್ಥಿಗಳಿಂದ :

1. ಕಥೆ ಅಥವಾ ಕವಿತೆ ಬರೆಸುವುದು.
2. ಸುಲಭದ ರೇಖಾಚಿತ್ರಗಳನ್ನು ಬಿಡಿಸುವುದು.
3. ಕೈಗೊಂಡ ಪ್ರವಾಸ ಕುರಿತು ಲೇಖನವನ್ನು ಬರೆಸುವುದು.
4. ಕಾಲೇಜಿನಲ್ಲಿ ನಡೆಯುವ ಕಾರ್ಯಕ್ರಮಗಳ ವರದಿಗಳನ್ನು ಬರೆಸುವುದು.

ಇನ್ನಿತರೇ ಸೃಜನಶೀಲ ಚಟುಟಿಕೆಗಳಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುವುದು.